ಡಾ. ಆನಂದರಾಮ ಉಪಾಧ್ಯ

ಯಕ್ಷಗಾನ ರಾಮಾಯಣ ಪ್ರಸಂಗಗಳು



ಯಕ್ಷಗಾನ ರಾಮಾಯಣ ಪ್ರಸಂಗಗಳು

ಡಾ. ಆನಂದರಾಮ ಉಪಾಧ್ಯ

ಕೆ.ಬಿ. ಪ್ರಗತಿ

baraha publishing house

ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು

YAKSHAGANA RAYAMAYANA PRASANGAGALU:
Research work by Dr. ANANDARAMA UPADHYA,

Publisher: K.B. Pragati for BARAHA PUBLISHING HOUSE-BANGALORE
119, 3rd Cross 8th Main road, Hampinagara, Bangalore-560 104 Ph: 080-23409512

ISBN	:	978-93-81821-27-5
Pages	:	viii + 104
First Impression	:	1980
Revised 2nd impression	:	2015
Price	:	₹. 100/-
Paper	:	NS Maplitho 80 gsm
Size	:	Demy 1/8
ಪುಟಗಳು	:	viii + 104
ಮೊದಲ ಮುದ್ರಣ	:	1980
ಪರಿಷ್ಕೃತ ಮುದ್ರಣ	:	1915
ಕಾಗದ	:	ಎನ್.ಎಸ್. ಮ್ಯಾಪ್ಲಿಥೊ 80 ಜಿಎಸ್ಎಂ
ಬೆಲೆ	:	₹. 100/–
©	:	ಡಾ. ಆನಂದರಾಮ ಉಪಾಧ್ಯ
ಸೈಜ್	:	1/8 ಡೆಮಿ
ಪ್ರತಿಗಳು	:	1000
ಮುಖಪುಟ	:	ಅಜಿತ್ ಕೌಂಡಿನ್ಯ
ಮುದ್ರಕರು	:	**ಪೂರ್ಣಿಮಾ ಪ್ರಿಂಟರ್ಸ್** ವಿಜಯನಗರ, ಬೆಂಗಳೂರು ಫೋ: 080–2335 9588

ಅರ್ಪಣೆ

ತಂದೆ ದಿ॥ ನಾರಾಯಣ ಉಪಾಧ್ಯ

ತಾಯಿ ದಿ॥ ಕಾವೇರಮ್ಮ ಅವರಿಗೆ

ಅರಿಕೆ

ಬಾಲ್ಯದಿಂದಲೂ ಯಕ್ಷಗಾನದ ಬಗ್ಗೆ ನನ್ನ ಆಸಕ್ತಿ ಬೆಳೆಸಿದವರು ನನ್ನ ಅಣ್ಣ ಶ್ರೀ ನರಸಿಂಹ ಉಪಾಧ್ಯರು. ಕೆಲಕಾಲ ಭಾಗವಂತಿಕೆಯನ್ನು ಅಭ್ಯಾಸ ಮಾಡುತ್ತಿದ್ದ ಅವರ ಯಕ್ಷಗಾನ ಪ್ರಸಂಗಗಳ ಸಂಗ್ರಹ ಇತ್ತು. ಇದರಿಂದಾಗಿ ನನ್ನ ಆಸಕ್ತಿ 'ಆಟದ' ಜೊತೆಯಲ್ಲೇ ಅವುಗಳ ಸಾಹಿತ್ಯ ರೂಪದ ಬಗ್ಗೆ ಹರಿಯಿತು. ಯಕ್ಷಗಾನ ರಾಮಾಯಣ ಪ್ರಸಂಗಗಳು ಸಂಖ್ಯೆಯಲ್ಲಿ 68ಕ್ಕೂ ಅಧಿಕವಿದ್ದರೂ ಕರಾವಳಿಯಲ್ಲಿ ಪ್ರಚಲಿತವಿರುವ ಪ್ರಸಂಗಗಳನ್ನು ಮಾತ್ರ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿದೆ. ಅಧ್ಯಯನವನ್ನು ಒಂದು ನಿರ್ದಿಷ್ಟವಾದ ಸಾಂಸ್ಕೃತಿಕ, ಪ್ರಾದೇಶಿಕ, ಭಾಷಿಕ ನೆಲೆಯಲ್ಲಿ ನಡೆಸಬೇಕೆಂಬುದೇ ಇದರ ಉದ್ದೇಶ. ಇಂತಹ ಒಂದು ಅಧ್ಯಯನಕ್ಕೆ ನನಗೆ ಮಾರ್ಗದರ್ಶನ ನೀಡಿದವರು ನನ್ನ ವಿದ್ಯಾಗುರುಗಳಾದ ಡಾ॥ ಕೆ.ಎಂ.ಕೃಷ್ಣರಾವ್ ಅವರು ಇವರಿಬ್ಬರಿಗೂ ನನ್ನ ಗೌರವಪೂರ್ವಕ ಪ್ರಣಾಮಗಳು.

ನಿಬಂಧದ ರಚನೆಯ ಕಾಲಕ್ಕೆ ಹಿರಿಯರಾದ ಡಾ॥ ಶಿವರಾಮಕಾರಂತ, ಭಾಗವತ ಎಂ. ನಾರ್ಣಪ್ಪ ಉಪ್ಪರ, ರಾಮಚಂದ್ರ ನಾವಡ, ವಿ.ಎಂ.ಇನಾಂದಾರ್, ಸದಾನಂದ ಹೆಬ್ಬಾರ್, ಮುಳಿಯಕೇಶವಯ್ಯ, ಡಾ॥ ಬಿ.ರಾಮಚಂದ್ರರಾವ್ ಮುಂತಾದವರು ಸಲಹೆ ಸೂಚನೆ ನೀಡಿ ಸಹಕರಿಸಿದ್ದಾರೆ. ಇವರೆಲ್ಲರಿಗೂ ನಾನು ಅಭಾರಿ.

ಈ ಪ್ರಬಂಧವನ್ನು ಪುಸ್ತಕ ರೂಪಕ್ಕೆ ಅಳವಡಿಸುವಾಗ ಸಂಗ್ರಹಿಸಿ ಪುನರ್ರೂಪಿಸಬೇಕಾಯಿತು. ಆಗ ನನ್ನೊಂದಿಗೆ ಸಹಕರಿಸಿ, ಸಹಾಯ ಮಾಡಿದ ನನ್ನ ಆತ್ಮೀಯ ಗೆಳೆಯರಾದ ಡಾ॥ ಎಚ್.ಎಸ್.ವೆಂಕಟೇಶ್ ಮೂರ್ತಿ ಮತ್ತು ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ – ಇವರಿಬ್ಬರಿಗೂ ನಾನು ಋಣಿಯಾಗಿದ್ದೇನೆ. ಬರೆವಣಿಗೆಯ ಸಂದರ್ಭದಲ್ಲಿ ಜೊತೆಜೊತೆಯಾಗಿ ದುಡಿದ ನನ್ನ ಶ್ರೀಮತಿ ಪ್ರೇಮಾಗೆ ಆಕೆಗೆ ದುಡಿಯಲು ನೆರವಾದ ಮಗಳು ಬೆ.ಸೀಮಂತನಿಗೆ ನನ್ನ ಪ್ರೀತಿಯ ನೆನಕೆಗಳು.

ಈ ಕೃತಿಯ ಮೊದಲ ಆತ್ಮತೀಯನ್ನು ಪ್ರಕಟಿಸಿದ ಶೇಷಾದ್ರಿಪುರಂ ಕಾಲೇಜಿನ ಕನ್ನಡ ಸಂಘಕ್ಕೆ ನನ್ನ ಕೃತಜ್ಞತೆಗಳು ಈ ಎರಡನೇ ಆವೃತ್ತಿಗೆ.

* * * * *

ಮೊದಲ ಮುದ್ರಣದ ಮುನ್ನುಡಿ ಸೇಚನ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಲೂ ಜೀವಂತವಾಗಿರುವ ಯಕ್ಷಗಾನಗಳನ್ನು ಕುರಿತು ಚಿಕ್ಕಂದಿನಿಂದ ಅದರ ಪರಿಚಯವಿರುವ ಆನಂದರಾಮ ಉಪಾಧ್ಯರು ತಮ್ಮ ಎಂ.ಫಿಲ್ ಪದವಿಗೆ ಸಂಶೋಧನಾ ವಿಷಯವನ್ನಾಗಿ ಯಕ್ಷಗಾನ ರಾಮಾಯಣ ಪ್ರಸಂಗಗಳನ್ನು ಆರಿಸಿಕೊಂಡು ಅಭ್ಯಾಸ ಮಾಡಿ ಒಂದು ಪ್ರಬಂಧವನ್ನು ಬರೆದು ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು. ಅದು ವಿಶ್ವವಿದ್ಯಾಲಯದಿಂದ ಅಗೀಕೃತವಾಗಿ ಆನಂದರಾಮ ಉಪಾಧ್ಯರಿಗೆ ಈಗ ಕೆಲವು ತಿಂಗಳುಗಳ ಹಿಂದೆ ಎಂ.ಫಿಲ್ ಪದವಿ ದೊರೆಯಿತು.

* * *

ಈ ಪ್ರಬಂಧವನ್ನು ಈಗ ಅವರು ಪ್ರಕಟಿಸುವ ಕಾರ್ಯವನ್ನು ಕೈಗೊಂಡಿದ್ದಾರೆ. ಹಾಗೆ ಅದನ್ನು ಇಷ್ಟು ಬೇಗ ಪ್ರಕಟಿಸುವ ಅನುಕೂಲ ಒದಗಿದುದು ಸಂತೋಷದ ವಿಚಾರ.

* * *

ಯಕ್ಷಗಾನ ಪ್ರಸಂಗಗಳನ್ನು ಕುರಿತು ಉಪಾಧ್ಯರು ಚೆನ್ನಾಗಿ ಬರೆದಿದ್ದಾರೆ. ಪ್ರಸಂಗಗಳ ವಸ್ತು ವೈವಿಧ್ಯ, ಅವುಗಳಲ್ಲಿ ರಾಮಾಯಣದ ಸ್ಥಾನ, ರಾಮಾಯಣ ಕಥೆಯ ವಿವಿಧ ಸನ್ನಿವೇಶಗಳನ್ನು ಆಧರಿಸಿ ಯಕ್ಷಗಾನ ಕಲಾವಿದರು ಹೇಗೆ ಬಿಡಿಬಿಡಿಯಾದ ಕೃತಿಗಳನ್ನು ರಚಿಸಿದ್ದಾರೆ ಎಂಬುದನ್ನು ವಿವರವಾಗಿ ಸಮೀಕ್ಷಿಸಿದ್ದಾರೆ. ಅಲ್ಲದೆ ಅವುಗಳ ಸಾಹಿತ್ಯಿಕ, ತಾತ್ವಿಕ ಮೌಲ್ಯಗಳನ್ನು ಚರ್ಚಿಸಿದ್ದಾರೆ. ಅವುಗಳಲ್ಲಿನ ರಸಪ್ರತಿಪಾದನೆಯನ್ನು ವಿವೇಚಿಸಿದ್ದಾರೆ. ಅಲ್ಲದೆ ಅಲ್ಲಿನ ಸಾಮಾಜಿಕ ಅಂಶಗಳನ್ನು ವಿವರಿಸಿದ್ದಾರೆ. ಪಾತ್ರಗಳ ಚಿತ್ರಣವನ್ನು ಸಮಾಲೋಚಿಸಿದ್ದಾರೆ.

* * *

ಯಕ್ಷಗಾನ ಕವಿಗಳಿಗೆ ಆಕರಗಳು ಯಾವುವು ಎಂಬ ಪ್ರಶ್ನೆ, ಅವರು ಪಡೆದಿರುವ ಪ್ರಭಾವಗಳನ್ನು ವಿಚಾರ ಮಾಡಿದ್ದಾರೆ. ತೊರವೆ ರಾಮಾಯಣ ಹೇಗೆ ಅನೇಕ ಯಕ್ಷಗಾನ ಕೃತಿಕಾರರಿಗೆ ಆಕರವಾಗಿದೆ, ಅವರು ಅದನ್ನು ಹೇಗೆ ಬಳಸಿಕೊಂಡಿದ್ದಾರೆಂಬುದನ್ನು ತೋರಿಸಲು ಪ್ರಯತ್ನ ಪಟ್ಟಿದ್ದಾರೆ. ಕುಮಾರವ್ಯಾಸನ ಪ್ರಭಾವ ಯಕ್ಷಗಾನಗಳ ಮೇಲೆ ಆಗಿರುವುದನ್ನು ಗುರುತಿಸಿದ್ದಾರೆ.

* * *

ಯಕ್ಷಗಾನ ಕವಿಗಳು ಕಲಾದೃಷ್ಟಿಯಿಂದ ಜನಮನ ರಂಜನೆಗಳ ಗುರಿಯಿಂದ ಪ್ರೌಢಕಾವ್ಯಗಳಲ್ಲಿ ಉಕ್ತವಾದ ಕಥೆಗಳ ಸತ್ವವನ್ನು ತಮ್ಮದೇ ಆದ ರೀತಿಯಲ್ಲಿ ಪ್ರದರ್ಶಿಸಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ ಎಂಬ ಆವರ ನಿಲುವು ಸರಿಯಾಗಿದೆ.

* * *

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಯಕ್ಷಗಾನಕ್ಕೆ ವಿಶಿಷ್ಟವಾದ ಸ್ಥಾನವಿದೆ. ಗ್ರಾಮಾಂತರ ಪ್ರದೇಶಗಳ ಜನರಲ್ಲಿ ಹಿಂದೂಸಂಸ್ಕೃತಿ, ಧರ್ಮ, ನಿಷ್ಠೆ, ತಿಳುವಳಿಕೆ, ಆಚರಣೆಗಳು ಉಳಿದು ಬಂದಿರುವುದಕ್ಕೆ ಬಹುಮಟ್ಟಿಗೆ ಯಕ್ಷಗಾನ ಪ್ರಸಂಗಗಳು ಕಾರಣ ಎಂಬ ಪ್ರಬಂಧಕಾರರ ಅಭಿಪ್ರಾಯ ಅಂಗೀಕಾರಾರ್ಹವಾಗಿದೆ. ಆದ್ದರಿಂದ ಯಕ್ಷಗಾನ ಕೃತಿಗಳ ಪ್ರದರ್ಶನಗಳ ಮೌಲ್ಯ ಪ್ರಸಾರ ಕಾರ್ಯ ಪ್ರಯೋಜನ ವಿಶಿಷ್ಟವಾದುದೂ, ಬೆಲೆಯುಳ್ಳದ್ದೂ ಆಗಿದೆ. ಪಿತೃವಾಕ್ಯ ಪರಿಪಾಲನೆ ಹಿರಿಯರಲ್ಲಿ ಗೌರವ, ಆದರ, ವಿಧೇಯತೆ, ಮೈತ್ರಿ, ನೆರವು, ಪಾತಿವ್ರತ್ಯ, ಸೇವಾ ಮನೋಭಾವ, ವಿನಯ, ನಮ್ರತೆ, ಮುಂತಾದ ಸದ್ಗುಣಗಳು ಸಮಾಜದಲ್ಲಿ ಬೆಳೆಯಲು, ಬೇರೂರಲು, ಜನತೆಯ ಸಂಸ್ಕೃತಿ ಸಂವರ್ಧನೆ ಮಾಡಲು ಈ ಕೃತಿಗಳು ನೆರವಾಗಿವೆಯೆಂಬುದು ನಿಜ. ಆದ್ದರಿಂದ ಯಕ್ಷಗಾನ ರಾಮಾಯಣ ಪ್ರಸಂಗಗಳ ಸಾಂಸ್ಕೃತಿಕ ಮೌಲ್ಯ ಅಮೂಲ್ಯ.

* * *

ಹೀಗೆ ಆನಂದರಾಮ ಉಪಾಧ್ಯರು ಒಮ್ಮೆ ಕನ್ನಡ ಪ್ರೌಢ ವಿದ್ಯಾವ್ಯಾಸಂಗಕ್ಕಾಗಿ ಹಂಬಲಿಸಿ ತಮ್ಮೂರಿನಿಂದ ದೂರದ ಹೊರನಾಡಿಗೆ ಹೋಗಿಯಾದರೂ ಅಭ್ಯಾಸ ಮಾಡಬೇಕೆಂಬ ಆಕಾಂಕ್ಷೆಯಿಂದ ಬಂದು ತಮ್ಮ ಉದ್ದಿಷ್ಟ ಧ್ಯೇಯವನ್ನು ಸಾಧಿಸಿ, ಕನ್ನಡದಲ್ಲಿ ಪ್ರೌಢ ಪ್ರಬಂಧವೊಂದನ್ನು ಬರೆದು ಮನ್ನಣೆಯನ್ನು ಪಡೆದು ಅದನ್ನು ಈಗ ಎಲ್ಲರ ಅವಗಾಹನೆಗಾಗಿ ಬೆಳಕಿಗೆ ತರುವ ಕಾರ್ಯದಲ್ಲೂ ಯಶಸ್ವಿಯಾಗುತ್ತಿರುವುದು ತುಂಬಾ ಸಂತೋಷದಾಯಕ.

25.08.1980
ಹೈದರಾಬಾದ್

ಡಾ|| ಕೆ.ಎಂ. ಕೃಷ್ಣರಾವ್
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಕನ್ನಡ ವಿಭಾಗ, ಉಸ್ಮಾನಿಯಾ ವಿಶ್ವವಿದ್ಯಾಲಯ

ಒಳಪುಟಗಳಲ್ಲಿ...

ಭಾಗ – 1

ಯಕ್ಷಗಾನ

ಪ್ರವೇಶ :

ಸುಮಾರು ಸಾವಿರದೊಂಬೈನೂರು ಅರವತ್ತನೇ ಇಸವಿಯ ಒಂದು ಸಂಜೆ. ನಮ್ಮೂರಲ್ಲಿ ಒಂದು ಆಟ ನಡೆಯಿತು. ಹುಡುಗರಾದ ನಮಗೆ ಆ ದಿನ ಸಂತೋಷವೋ ಸಂತೋಷ. ಅಂದು ಬೆಳಿಗ್ಗೆ ಹತ್ತುಗಂಟೆಗಾಗಲೇ ಮೇಳದವರು ಬಂದು ತಾಳ, ಮದ್ದಲೆ, ಚಂಡೆಯನ್ನು ಬಾರಿಸಿ "ಚಿಕ್ಕತಾಳಮದ್ದಲೆ" ಸೇವೆಯನ್ನು ಮುಗಿಸಿದ್ದರು. ಸಂಜೆ ಆರು ಗಂಟೆಯ ಹೊತ್ತಿಗೆ ಊರ ಮುಂದಿನ ಬಯಲಿನಲ್ಲಿ ನಾಲ್ಕು ಕಂಬ ನೆಟ್ಟು ಸುತ್ತಲೂ ಮಾವಿನ ಸೊಪ್ಪಿನ ತೋರಣ ಕಟ್ಟಿ, ಹಿಂದೆ ಭಾಗವತರು ಕೂಡಲು ಹೊಡೆ ಮಂಚವನ್ನು ಹಾಕಿದ್ದರು. ಸಂಜೆ ನಾವೆಲ್ಲರು ಹೋಗಿ ಅದನ್ನು ಬೆರಗಿನಿಂದ ನೋಡಿಬಂದೆವು. ಅಮ್ಮನಿಗೆ ಗಡಿಬಿಡಿ ಮಾಡಿ ಆತುರಾತುರವಾಗಿ ತಿಂದು ಏಳುವರೆಗಾಗಲೇ ಗೆಳೆಯರೊಂದಿಗೆ ರಂಗಸ್ಥಳದ ಮುಂದೆಯೇ ನಮ್ಮ ನೆರಮನೆಯವರು ತಂದ ಚಾಪೆಯ ಮೇಲೆ ಮುಂದಿನ ಸಾಲಿನಲ್ಲೇ ಕುಳಿತೆವು.

ರಂಗಸ್ಥಳ ವಿಶಾಲವಾಗಿದ್ದು ಅದರ ಸುತ್ತಲೂ ನಾಲ್ಕು ಗಳುವನ್ನು ನೆಟ್ಟಿದ್ದರು. ಮಾವಿನ ತುಂಡಿಯಿಂದ ಮಾಡಿದ ತೋರಣವನ್ನು ಆ ಗಳುವಿಗೆ ಕಟ್ಟಿದ್ದರು. ಗಳುವನ್ನು ಕೂಡ ಮಾವಿನ ತುಂಡಿಯಿಂದಲೇ ಅಲಂಕಾರ ಮಾಡಿದ್ದರು. ಭಾಗವತರು ಕುಳಿತುಕೊಳ್ಳುವಲ್ಲಿಂದ ಸ್ವಲ್ಪ ಮುಂದೆ ಆ ಕಡೆ ಈ ಕಡೆ ದೀವಟಿಗೆಯನ್ನು ಕಟ್ಟಲು ಚಿಕ್ಕ ಕಂಬವನ್ನು ನೆಟ್ಟಿದ್ದರು. ಒಂದು ಸಣ್ಣಕಾಲುದೀಪ ಸಂಪ್ರದಾಯವೋ ಎಂಬಂತೆ ಆತ್ತ ನಂದದೇ ಇತ್ತ ಬೆಳಗದೇ ಉರಿಯುತ್ತಿತ್ತು. ನಾಲ್ಕು ಗಳುವಿಗೆ ಹೊಂದಿಕೊಂಡಂತೆ ನಾಲ್ಕು ಗ್ಯಾಸ್‌ಲೈಟುಗಳನ್ನು ತೂಗು ಹಾಕಿದ್ದರು. ಒಂದು ಗಂಟೆಯ ಕಾಲ ಆಟದ ವಿಚಾರ, ಪಾತ್ರಧಾರಿಗಳ ವಿಚಾರ, ಅವರ ಮುಂಡಾಸಿನ ವಿಚಾರ. ಕುಣಿತದ ಗತ್ತಿನ ವಿಚಾರಗಳ ಕುರಿತೆಲ್ಲಾ ಹಿರಿಯರು ಹೇಳಿದ್ದನ್ನು ನಾವು ಕೇಳಿದ್ದನ್ನು ನಮ್ಮದೇ ಮಾತೆಂಬಂತೆ ಕೊಚ್ಚಿಕೊಂಡೆವು. ಅಷ್ಟರಲ್ಲೇ ಸಾಕಷ್ಟು ಜನ ಹೆಂಗಸರು ಮಕ್ಕಳು ಸೇರಿದ್ದರು.

ಸುಮಾರು 9 ಗಂಟೆಯ ಹೊತ್ತಿಗೆ ಹಿಮ್ಮೇಳದವರು ಚೌಕಿಯಲ್ಲಿ ಗಣೇಶನ ಸ್ತುತಿ ಮಾಡಲು ಪ್ರಾರಂಭಿಸಿದರು. ನನ್ನ ಕೆಲವು ಗೆಳೆಯರು ಚೌಕಿಗೆ ಓಡಿದರು. ಮುಂದಿನ ಸಾಲಿನ ನನ್ನ ಪಟ್ಟಭದ್ರ ಹಕ್ಕನ್ನು ನಾನು ತಂದಿದ್ದ ಬಿಳಿ ಟವೆಲ್ಲಿಗೆ ವರ್ಗಾಯಿಸಿ

ನಾನೂ ಓಡಿದೆ. ಅಲ್ಲೇ ಸ್ವಲ್ಪ ಹಿಂಭಾಗದಲ್ಲಿ ಮಡಲಿನಿಂದ ಸುತ್ತುಗಟ್ಟಿ ಒಂದು ಕೋಣೆಯ ರೀತಿಯಲ್ಲಿರುವ ಚೌಕಿಯನ್ನು ನಿರ್ಮಿಸಿಕೊಂಡಿದ್ದರು. ತಾವು ಮುಂಚಿನ ದಿನ ಪ್ರದರ್ಶನ ಮಾಡಿದ ಊರಿನಿಂದ ಹೊತ್ತು ತಂದಿದ್ದ ದೊಡ್ಡ ದೊಡ್ಡ ಬಿಳಲಿನ ಪೆಟ್ಟಿಗೆಗಳನ್ನು ಸಾಲಾಗಿ ಜೋಡಿಸಿದ್ದರು. ಕೆಲವನ್ನು ಬಿಡಿಸಿ, ಅದರಲ್ಲಿನ ವಸ್ತುಗಳನ್ನು ಹೊರತೆಗೆದಿದ್ದರು. ಬಟ್ಟೆಗಳನ್ನು ಹೊರಕ್ಕೆ ನೇತುಹಾಕಿದ್ದರು. ಕೆಲವು ಆಯುಧಗಳು ಮೂಲೆಹಿಡಿದಿದ್ದವು. ಕೆಲವರು ಪಾತ್ರಧಾರಿಗಳಾಗಲೇ ಬಣ್ಣವನ್ನು ಬಳಿದುಕೊಳ್ಳುತ್ತಿದ್ದರು. ಮೇಳದ ಮುಖ್ಯದೇವರನ್ನು ಮತ್ತು ಬೆಳ್ಳಿಯ ಗಣಪತಿ ದೇವರ ಮುಖವಾಡವನ್ನು ಇಟ್ಟು ಪೂಜಿಸುತ್ತಿದ್ದರು. ಭಾಗವತರು ಹಾಡುತ್ತಿದ್ದರು. ಪೂಜೆ ಮುಗಿದ ನಂತರ ಹಿಮ್ಮೇಳದವರು ಹಾಗೇ ರಂಗಕ್ಕೆ ಬಂದರು. ಭಾಗವತರು (ಸಂಗೀತಗಾರರು) ಕೆಂಪು ಮುಂಡಾಸನ್ನು ಕಟ್ಟಿಕೊಂಡಿದ್ದರು. ಕನ್ನಡ ಅಧ್ಯಾಪಕರಾದ ನನ್ನ ಅಣ್ಣ ತೊಡುವಂತೆ ಬಿಳಿ ಪಂಚೆಯನ್ನು ನೀಟಾಗಿ ತೊಟ್ಟಿದ್ದರು. ಕೈಯಲ್ಲಿ ತಾಳಹಿಡಿದಿದ್ದರು. ಹೊಡೆಮಂಚದಲ್ಲಿ ಭಾಗವತರು ಕುಳಿತ ನಂತರ ಅವರ ಪಕ್ಕದಲ್ಲಿ ಮೃದಂಗ ಹಿಡಿದ ಮದ್ದಲೆಯವರು, ಇಬ್ಬರ ಹಿಂದೆ ಶ್ರುತಿಗಾರರು ಹಾರ್ಮೋನಿಯಂನೊಂದಿಗೆ ಕುಳಿತರು. ರಂಗದ ಬಲಭಾಗದಲ್ಲಿ ಕೆಳಗೆ ಚಂಡೆಯವರು ಕುಳಿತರು. ಇದಾದ ನಂತರ ಕೆಲವು ಹಾಡುಗಳನ್ನು ಹೇಳಿದರು. ಕೋಡಂಗಿ ಬಾಲಗೋಪಾಲ ಸ್ತ್ರೀವೇಷದವರ ಪ್ರವೇಶ ಅನುಕ್ರಮವಾಗಿ ಆಯಿತು. ಅಂದು ಅದನ್ನೆಲ್ಲಾ ಬಿಟ್ಟ ಕಣ್ಣಿನಿಂದಲೇ ನೋಡುತ್ತಿದ್ದೆ. ಇಂದಾಗಿದ್ದರೆ ಬಗೆ ಬಗೆಯ ಕಿರೀಟ ಮುಂಡಾಸು ತೊಟ್ಟ, ಬಣ್ಣಬಣ್ಣದ ಉಡುಪು ಉಟ್ಟ, ಕುಣಿದು ಕುಪ್ಪಳಿಸುವ ಪರಾಕ್ರಮವನ್ನು ನಾನಾಬಗೆಯಾಗಿ ಬಿತ್ತರಿಸುವ ಪುರುಷ ವೇಷ ಎರಡನೆಯ ವೇಷಗಳನ್ನು, ಮನರಂಜಕ ಕಥೆ ಅದರ ಓಟದೊಂದಿಗೆ ಸಾಗುವ ಕಲ್ಪನೆ, ಮೈನವಿರೇಳಿಸುವ ಭಂಗಿಗಳು, ಮನಸ್ಸನ್ನು ಬಡಿದೆಬ್ಬಿಸುವ ಪೌರುಷಪ್ರಧಾನ ಮಾತುಗಳನ್ನು ಆಶಿಸುವ ನಮಗೆ ಇದೆಲ್ಲಾ 'ಬೋರಾ'ಗುತ್ತಿತ್ತು. ಅಂತೂ ಸಾಕಷ್ಟು ಹಾಡುಗಳನ್ನು ಸಂಗೀತಗಾರರು ಹಾಡಿ ಮುಕ್ತಾಯ ಮಾಡಿದರು. ಅಷ್ಟರಲ್ಲೇ ವೀಳ್ಯಮೆದ್ದು ಕೆಂಪಾದ ಬಾಯಿಯನ್ನು ಆಡಿಸುತ್ತಾ ಮುಂಡಾಸನ್ನು ಸರಿಪಡಿಸಿಕೊಳ್ಳುತ್ತಾ ಕಚ್ಚೆ ಪಂಚೆಯುನ್ನು ಸರಿಮಾಡಿಕೊಳ್ಳುತ್ತಾ ಭಾಗವತರು ಸಂಗೀತಗಾರರಿಂದ ತಾಳವನ್ನು ಪಡೆದುಕೊಂಡು ಒಡ್ಡೋಲಗವನ್ನು ಪ್ರಾರಂಭಿಸಿದರು.

ಅಂದು 'ಅತಿಕಾಯ ಕಾಳಗ' ಮತ್ತು 'ಮೀನಾಕ್ಷಿ ಕಲ್ಯಾಣ'ವನ್ನು ಆಡಿದರು. ಮೊದಲಿನದು ಭಕ್ತಿರಸಭರಿತವಾದ ಪ್ರಸಂಗ. ಎರಡನೇ ಪ್ರಸಂಗ ನಡೆದಾಗ ಒಂದು ಸ್ವಾರಸ್ಯಕರ ಘಟನೆ ನಡೆಯಿತು. ನಂದೀ ಪಾತ್ರವನ್ನು ಧರಿಸಿದವನಿಗೆ ಮೈಮೇಲೆ ಬಂದು ಕುಣಿಯುತ್ತಾ ಜನರ ಮೇಲೆಲ್ಲಾ ಹಾರಿದನು. ಕೊನೆಗೆ ನಾಲ್ಕು ಜನ ಬಹಳ ಪ್ರಯತ್ನ ಪಟ್ಟು 'ನಂದಿಕೇಶ್ವರ ಸ್ವಾಮಿ'ಯನ್ನು ಹಿಡಿದುಕೊಂಡು ಚೌಕಿಗೆ ಕೊಂಡೊಯ್ದರು. ಆಗ ಜನರಲ್ಲಿ ಗುಸುಗುಸು ಪ್ರಾರಂಭವಾಯಿತು. ಕೆಲವರು ದೇವಸ್ಥಾನದ ಎದುರಿಗೆ ಆಟ ನಡೆದುದರಿಂದ ಹಾಗೆ ಆಯಿತು ಎಂದರೆ ಇನ್ನೂ ಕೆಲವರು ನಂದೀವೇಷ ಮಾಡಿದರೆ ಹಾಗೆಯೇ ಆಗುತ್ತೆ ಎಂದರು. ಒಬ್ಬರು ಆ ಪಾತ್ರಧಾರಿಗೆ ದೇವರು ಮೈಮೇಲೆ ಬರುತ್ತದೆ ಎಂದು ತೀರ್ಮಾನಿಸಿದರು. ಓದಿದ ನನ್ನ ಅಣ್ಣ ಬಣ್ಣದ ತೀಕ್ಷ್ಣತೆಗೆ ಹಾಗಾಯಿತು ಎಂದರೆ ಆತನ ಗೆಳೆಯ ಪಾತ್ರಧಾರಿ ಕುಡಿದು ಬಂದಿರುವುದನ್ನು ಸಾಕ್ಷ್ಯಾಧಾರದೊಂದಿಗೆ ಚರ್ಚಿಸಿದ. ನಿಜ ಸಂಗತಿ ನನಗೆ ಇಂದಿಗೂ ತಿಳಿದಿಲ್ಲ.

ಆಟ ಮುಗಿದೊಡನೆ ಇನ್ನೊಮ್ಮೆ ಚೌಕಿಗೆ ಗೆಳೆಯರೊಡನೆ ಮುತ್ತಿಗೆ ಹಾಕಿದೆ. ಭಾಗವತರು ರಂಗಸ್ಥಳದಿಂದ ಚೌಕಿಗೆ ಬಂದು ಹಾಡನ್ನು ಹಾಡಿ ಮುಗಿಸಿದರು. ಪಾತ್ರಧಾರಿಗಳು ತಾವು ತೊಟ್ಟ ವೇಷಗಳನ್ನು ಕಳಚಿಕೊಳ್ಳುತ್ತಿರುವುದನ್ನು ದಿಟ್ಟಿಸಿ ನೋಡಿದೆ. ಕೆಲವರಾಗಲೇ ತಮ್ಮ ವಸ್ತುಗಳನ್ನು ಪೆಟ್ಟಿಗೆಗೆ ತುಂಬಲು ಉದ್ಯುಕ್ತರಾಗಿದ್ದರು. ಅಲ್ಲಿರುವ ನಾನಾ ತರದ ಬಣ್ಣ ಬಣ್ಣದ ವಸ್ತುಗಳನ್ನು ಕಾಣುತ್ತಿರುವುದೇ ಒಂದು ಖುಷಿ. ಬೆಳ್ಳಿಯ ಗಣಪತಿಯ ಮುಖವಾಡ, ಬಿಲ್ಲುಗಳು, ಕೆಲವು ಮುಂಡಾಸುಗಳು, ನಾನಾ ಬಣ್ಣದ ಬಟ್ಟೆಗಳು, ಗೆಜ್ಜೆಗಳು, ಜರಿಯಿಂದ ಮಾಡಿದ ಸಾಕಷ್ಟು ವಸ್ತುಗಳು, ಥಳ ಥಳ ಹೊಳೆಯುವ ಆಭರಣಗಳು ಇವೆಲ್ಲಾ ನನ್ನ ಕುತೂಹಲದ ವಸ್ತುಗಳಾಗಿದ್ದವು. ಅರ್ಧ ನಿದ್ರೆ ಅರ್ಧ ಎಚ್ಚರದಿಂದ ಇರುವ ಪಾತ್ರಧಾರಿಗಳನ್ನು ಭಯದಿಂದಲೇ ನೋಡುತ್ತಿದ್ದೆ. ಅಣ್ಣ ಬಂದ ರಟ್ಟೆಗೆ ಕೈಹಾಕಿ ಮನೆಗೆ ಹೋಗುವಾ ಎಂದ. ಅವನ ಕಾಟ ತಾಳಲಾರದೇ ಹೊರ ಬಂದೆ. ಚೌಕಿಯನ್ನು ನೋಡಿ ಬರುವಷ್ಟರಲ್ಲೇ ಬಯಲಿನಲ್ಲಿ ಜನರೆಲ್ಲಾ ಖಾಲಿಯಾಗಿ ಕಸ, ನೆಲಗಡಲೆಸಿಪ್ಪೆ, ಕಾಗದ ಚೂರುಗಳಿಂದ ತುಂಬಿಕೊಂಡ ಬೋಳು ಮೈದಾನ ತಮಾಷೆಯಾಗಿ ಕಂಡು ಬರುತ್ತಿತ್ತು. ತಾಂಬೂಲದ ಶೇಷ, ಉಚ್ಚಿಷ್ಟದ ಮುದ್ರೆ, ಚಳಿ ಕಾಸಿದ್ದರ ಗುರುತಾದ ಬೂದಿಗುಪ್ಪೆ ಇವೆಲ್ಲವನ್ನು ಅಲ್ಲಿ ಕಾಣಬಹುದಾಗಿತ್ತು. ರಾತ್ರಿ ಕಾಫಿ, ಚಾ ಇಟ್ಟುಕೊಂಡ ಸಂಚಾರಿ ಹೋಟಲ್‌ನವರು, ಅಂಗಡಿಯವರು, ಜುಗಾರಿ ನಡೆಸುತ್ತಿದ್ದವರು ಸ್ಥಳ ಖಾಲಿ ಮಾಡಿದ್ದರು.

ಇದೆಲ್ಲಾ ನೋಡಿ ಮನೆಗೆ ಬರುವಷ್ಟರಲ್ಲಿ ಏಳು ಗಂಟೆಯಾಗಿತ್ತು. ಮುಖ ತೊಳೆದು ಕಾಫಿ ಕುಡಿಯಲು ಹೋದಾಗ ಇನ್ನೂ ಆಟದ ಗುಂಗು ಹಾಗೇ ಇತ್ತು. ಆ ಸಂಜೆ ನಾವೆಲ್ಲಾ ಶಾಲೆ ಬಿಟ್ಟೊಡನೇ ನಮ್ಮ ಆಟವನ್ನಾಡಲು ಪ್ರಾರಂಭಿಸಿದೆವು. ಒಬ್ಬ ತಪ್ಪು ತಪ್ಪಾಗಿ ಹಾಡನ್ನೇನೋ ಕೂಗುತ್ತಿದ್ದ. ಇನ್ನೊಬ್ಬ ತೂತಾದ ಡಬ್ಬವನ್ನು ನೆಲದ ಮೇಲಿಟ್ಟು ಚಂಡೆಯನ್ನಾಗಿ ಮಾಡಿಕೊಂಡು ಬಡಿಯುತ್ತಿದ್ದ. ನಮ್ಮ ನಮ್ಮಲ್ಲೆ ಒಬ್ಬೊಬ್ಬರು ಒಂದೊಂದು ವೇಷ ನಿರ್ಧಾರ ಮಾಡಿಕೊಂಡು ಕುಣಿದೆವು. ಈ ರೀತಿ ಆಟ ಸುಮಾರು ಒಂದು ವಾರದವರೆಗೆ ಸಾಗಿತು. ಹೀಗೆ ಬಾಲ್ಯದ ದಿನಗಳಲ್ಲಿ ಯಕ್ಷಗಾನವೆಂದರೆ ಖುಷಿಗೆ, ಮಾತಿಗೆ, ಆಟಕ್ಕೆ ಅದು ಸಾಧನವಾಗಿತ್ತು. ನಾನು ಬೆಳೆಯುತ್ತಾ ಹೋದಂತೆ ಆ ಯಕ್ಷಗಾನದ ವೈವಿಧ್ಯ, ಅದರ ನೀತಿ ಪ್ರಧಾನವಾದಂತ ಚರಿತ್ರೆ, ಅದು ವಿಕಾಸಗೊಂಡ ಬಗೆ ಇವನ್ನೆಲ್ಲಾ ಓದಿ, ಕೇಳಿ ಅಚ್ಚರಿಗೊಂಡೆನು. ಅದರ ಎರಡು ಮುಖಗಳಾದ ಸಾಹಿತ್ಯ ಮತ್ತು ಪ್ರಯೋಗಗಳು ನನ್ನ ಆಸಕ್ತಿಯನ್ನು ಸದಾ ಕೆರಳಿಸತಕ್ಕ ಅಂಶವಾದವು.

ಪ್ರಯೋಗ :

ಯಕ್ಷಗಾನ ಪ್ರಸಂಗ ಸಾಹಿತ್ಯದಷ್ಟೇ ಅದರ ಪ್ರಯೋಗವೂ ಮಹತ್ವ ಪೂರ್ಣವಾದುದು. ಪ್ರತಿಯೊಂದು ದೇವಸ್ಥಾನಕ್ಕೆ ಹೊಂದಿದಂತೆ, ಮೇಳಗಳಿದ್ದು ಮಳೆಗಾಲವನ್ನುಳಿದು ವರ್ಷದ ಉಳಿದ ತಿಂಗಳುಗಳಲ್ಲಿ ಎಲ್ಲೆಡೆಯೂ ಸಂಚರಿಸುತ್ತಾ ದೇವರ ಸೇವೆಯನ್ನು ಮಾಡುವುದೇ ಇವರ ಕಾರ್ಯವಾಗಿತ್ತು. ಜನರು ಜಡಜಾಪತ್ತು ಬಂದಾಗ ಹರಕೆ ಹೊತ್ತುಕೊಳ್ಳುತ್ತಿದ್ದರು. ಇಲ್ಲವೇ ವರ್ಷಕ್ಕೊಮ್ಮೆ ಊರ ಜನರೆಲ್ಲಾ ಸೇರಿ ತಮ್ಮಲ್ಲಿ ಆಟ ನಡೆಸಲು ವಂತಿಗೆ ಹಾಕಿ ದೇವರ ಸೇವೆ ನಡೆಸುತ್ತಿದ್ದರು. ಹೀಗೆ ಕನ್ನಡ ಜಿಲ್ಲೆಗಳಲ್ಲಿ ಹಾಗೂ ಮಲೆನಾಡಿನಲ್ಲಿ ಯಕ್ಷಗಾನವು ಪ್ರಯೋಗ ರೂಪದಲ್ಲಿ ಪ್ರಚಲಿತಗೊಂಡಿದೆ.

ಚೌಕಿಯನ್ನು ರಂಗಸ್ಥಳದಿಂದ ಸ್ವಲ್ಪ ದೂರದಲ್ಲಿ ವೇಷಗಳನ್ನು ಕಟ್ಟಿ ಕೊಳ್ಳಲು ಸುತ್ತಲೂ ತಡಿಕೆಯನ್ನು ಕಟ್ಟಿ ನಿರ್ಮಿಸುತ್ತಿದ್ದರು. ಮೇಳದ ಪೆಟ್ಟಿಗೆಗಳನ್ನೆಲ್ಲಾ ಸಾಲಾಗಿ ಜೋಡಿಸಿ ಮಧ್ಯದಲ್ಲಿ ಗಣೇಶನ ಮುಖವಾಡವನ್ನು ಹಾಗೂ ತಮ್ಮೊಂದಿಗೆ ತಂದ ಮೇಳ ದೇವಸ್ಥಾನದ ಒಂದು ಚಿಕ್ಕ ಮೂರ್ತಿಯನ್ನು ಇಡುತ್ತಿದ್ದರು. ಗಂಟೆ ಏಳರನಂತರ ಕ್ರಮವಾಗಿ ಪಾತ್ರಧಾರಿಗಳು ಬಂದು ವೇಷ ಕಟ್ಟಿಕೊಳ್ಳುತ್ತಿದ್ದರು. ಇದು ಒಂದು ಆಧುನಿಕ 'ಗ್ರೀನ್‌ರೂಮ್' ಅನ್ನು ಹೋಲುತ್ತದೆ. ಆಟಕ್ಕೆ ಹೋದವರೆಲ್ಲರೂ ಚೌಕಿಯನ್ನು ನೋಡುವುದು, ಅಲ್ಲಿ ಸಿದ್ಧವಾಗುತ್ತಿರುವ ಪಾತ್ರಗಳ ಕುರಿತಾಗಿ ಮಾತನಾಡಿಕೊಳ್ಳುವುದು ಸಾಮಾನ್ಯವಾಗಿದೆ.

ರಂಗಸ್ಥಳವು ಸುಮಾರು ಇಪ್ಪತ್ತಡಿ ಅಗಲ ಮೂವತ್ತಡಿ ಉದ್ದ ಇರುತ್ತದೆ. ನಾಲ್ಕು ಸುತ್ತಿನಲ್ಲಿ ಕಂಬ ಇದ್ದು, ಮಾವಿನ ತೋರಣ ಬಿಗಿದಿರುತ್ತಾರೆ. ರಂಗಸ್ಥಳದ ಹಿಂಭಾಗದಲ್ಲಿ ಹೊಡೆಮಂಚವಾಗಲೀ, ಮೇಜಾಗಲೀ ಜೋಡಿಸಿರುತ್ತಾರೆ. ಅದರ ಮೇಲೆ ಭಾಗವತರು, ಮದ್ದಲೆಯವರು, ಶ್ರುತಿಗಾರರು ಕುಳಿತುಕೊಳ್ಳಲು ಸ್ಥಳವಿರುತ್ತದೆ. ಎಡಬದಿಯಿಂದ ಪಾತ್ರ ರಂಗಸ್ಥಳಕ್ಕೆ ಬಂದು ಬಲಬದಿಯಿಂದ ಹೊರಟು ಹೋಗುತ್ತದೆ. ರಂಗಸ್ಥಳದ ಬಲಭಾಗದಲ್ಲಿ ಚಂಡೆ ಭಾರಿಸುವವನು ಕುಳಿತಿರುತ್ತಾನೆ. ಎರಡೂ ಕಡೆಗಳಲ್ಲಿ ದೀವಟಿಗೆಗಳು ಉರಿಯುತ್ತಿರುತ್ತವೆ. ಉಳಿದ ಮೂರು ಭಾಗದಲ್ಲಿ ಪ್ರೇಕ್ಷಕರು ಕಣ್ಣು ಬಿಟ್ಟೋ ಇಲ್ಲವೇ ತೂಕಡಿಸುತ್ತಲೋ ರಾತ್ರಿ ಎಲ್ಲಾ ಆಟ ನೋಡುತ್ತಿರುತ್ತಾರೆ.

ಯಕ್ಷಗಾನವೆಂಬುದು ಗಾಯನ, ಅಭಿನಯ, ನರ್ತನ, ಅರ್ಥಗಾರಿಕೆಯಿಂದ ಕೂಡಿದ ಒಂದು ಕಲಾರಾಧನೆ. ಯಕ್ಷಗಾನ ಆಟದಲ್ಲಿ ಮುಖ್ಯವಾಗಿ ಎರಡು ಭಾಗಗಳನ್ನು ಗುರುತಿಸಬಹುದು. ಮೊದಲನೆಯದು ಸಂಭಾವಂದನೆ ಅಥವಾ ಸಭಾಲಕ್ಷಣ ಎನ್ನುವಂತಹ ಪೀಠಿಕಾಭಾಗ; ಎರಡನೆಯದು ಅಂದು ಆಡಲಿರುವ ಕಥಾಪ್ರಸಂಗ. ಸಾಯಂಕಾಲ ಊಟವಾದೊಡನೆ ಎಲ್ಲರೂ 'ಚೌಕದ ಮನೆ' (ಚೌಕಿ)ಯನ್ನು ಸೇರುತ್ತಾರೆ. ಸಂಗೀತಗಾರರು, ಮದ್ದಲೆಯವರು, ಚಂಡೆಯವರು ಸೇರಿ 'ಅಬ್ಬರ ಬಡ್ತಿಗೆ' ಹಾಕುವರು. ನಂತರ ಒಂದೊಂದೇ ವೇಷಗಳು ಸಿದ್ಧವಾಗುತ್ತವೆ. ಮೊದಲಿಗೆ ಕೋಡಂಗಿ, ಬಾಲಗೋಪಾಲರು, ಸ್ತ್ರೀವೇಷ, ಒಡ್ಡೋಲಗದ ವೇಷಗಳನ್ನು ಕಟ್ಟಲು ಉಪಕ್ರಮಿಸುವರು. ಆಟ ಪ್ರಾರಂಭವಾಗುವ ಮುನ್ನವೇ ಚೌಕಿಯಲ್ಲಿ 'ಗಜಮುಖ ದವಗೆ ಗಣಪಗೇ' ಎಂಬ ನಾಟೀರಾಗದ ಮೇಲೆ ಗಣಪತಿ ಪೂಜೆ ಪ್ರಾರಂಭವಾಗುತ್ತದೆ. ಮಂಗಳಾರತಿ ಆದನಂತರ ಸಂಗೀತಗಾರರು 'ರಂಗಸ್ಥಳಕ್ಕೆ ಅಪ್ಪಣೆಯಾಗಲಿ' ಎಂದು ಗಣೇಶನನ್ನು ವಿನಂತಿಸುತ್ತಾರೆ. ಅರತಿ ಎತ್ತಿದವನು ಒಪ್ಪಿಗೆ ಕೊಟ್ಟೊಡನೆ ಚಂಡೆ, ಮದ್ದಲೆ, ತಾಳಗಳೊಂದಿಗೆ ಏಕತಾಳದ ಪೆಟ್ಟು ಬಾರಿಸುತ್ತಾ ರಂಗಸ್ಥಳಕ್ಕೆ ಪ್ರವೇಶಿಸುತ್ತಾರೆ. ರಂಗಸ್ಥಳದಲ್ಲಿ ಕುಳಿತ ನಂತರ

"ಮುದದಿಂದ ಕೊಂಡಾಡುವೆ ।
ಮುದದಿಂದ ಕೊಂಡಾಡುವೆನು ಅನವರತ ॥
ದೇವಾ ಜಗದೀಶಾ !"[1]

ಎಂಬ ಹಾಡಿನಿಂದ ದೇವರ ಸ್ತುತಿಗಳನ್ನು ಪ್ರಾರಂಭಿಸುತ್ತಾರೆ. ಅನಂತರ ಕೊಲ್ಲೂರಿನ

ಮೂಕಾಂಬಿಕೆ, ವಿಷ್ಣು, ಶಿವ ಮುಂತಾದ ದೇವತೆಗಳನ್ನು ಕುರಿತು ಹಾಡುತ್ತಾರೆ. ಕೋಡಂಗಿಯ ಪ್ರವೇಶ, ಬಾಲಗೋಪಾಲರ ಪ್ರವೇಶ ಒಂದೊಂದಾಗಿ ಜರಗುವುದು. ಪರದೆಯೊಂದಿಗೆ ಗಣಪತಿಯ ಮುಖವಾಡವನ್ನು ಎತ್ತರವಾಗಿ ಹಿಡಿದು ನಿಲ್ಲಿಸುವರು. ಬಾಲಗೋಪಾಲರು ಎರಡೂ ಕಡೆಯಿಂದ ಅರತಿ ಹಿಡಿದು ನಿಂತು ಕುಣಿಯುತ್ತಾ ನಾನಾ ಭಂಗಿಯನ್ನು ಪ್ರದರ್ಶಿಸುವರು. ಕೋಡಂಗಿ ಕುಣಿತದಲ್ಲಿ ಇನ್ನೂ ಅಭ್ಯಾಸವರಿಯದ ಎಳೆಯರಿದ್ದಾರೆ. ಈ ಬಾಲಕೃಷ್ಣ ವೇಷಧಾರಿಗಳು ಸ್ವಲ್ಪ ಮಟ್ಟಿಗೆ ಅಭ್ಯಾಸ ಹೊಂದಿದವರು. ಈ ಭಾಗದಲ್ಲಿ ಕಲಿಯದ, ಇನ್ನೂ ಅಭ್ಯಾಸಿಗಳಾದವರ ತರಬೇತಿಗೆ ಹೆಚ್ಚಿನ ಪ್ರಾಶಸ್ತ್ಯ. ಪ್ರದರ್ಶನದೊಂದಿಗೆ ಕ್ರಮವಾಗಿ ಕಲಾವಿದರ ಸೃಷ್ಟಿಯು ಇದರ ಉದ್ದೇಶ. ಬಾಲಗೋಪಾಲರು ಕುಣಿಯುವಾಗ ಬಳಸಲು ನಾನಾ ರಾಗಗಳಲ್ಲಿ ನಾನಾ ಪದ್ಯಗಳು ಬಳಕೆಯಲ್ಲಿವೆ. ರಂಗಸ್ಥಳದಲ್ಲೊಮ್ಮೆ ಗಣಪತಿಪೂಜೆ ಅಭಿನಯಿಸಲ್ಪಡುತ್ತದೆ. ಈ ಬಾಲಗೋಪಾಲರೆಂದರೆ, ಬಲರಾಮ ಕೃಷ್ಣರಿದ್ದಂತೆ. ಅವರ ಲೀಲೆಯೇ ಇಲ್ಲಿ ಪ್ರದರ್ಶಿತವಾಗುವುದು. ಆ ದೇವಾಧಿದೇವನೇ ಈ ಲೀಲಾನಾಟಕದ ಸೂತ್ರಧಾರ ಎನ್ನುವ ಕಲ್ಪನೆ ಇಲ್ಲಿ ಅಡಗಿದೆ.

ಅನಂತರ ಎರಡು ಸ್ತ್ರೀ ವೇಷಗಳು ರಂಗಸ್ಥಳವನ್ನು ಪ್ರವೇಶಿಸುತ್ತವೆ. ಈ ವೇಷಗಳು ತೆರೆಯಲ್ಲಿರುವಾಗ ಭಾಗವತರು –

ಚಂದಭಾಮಾ ಚಂದಭಾಮಾ । ಏ ಚಂದಭಾಮಾ ॥
ಚಂದಿರ ವದನೆ ಕೇಳ್ । ಏ ಚಂದ ಭಾಮಾ ॥
ಚಂದನ ಗಂಧಿ ಕೇಳೆ । ಚಂದ ಭಾಮಾ ॥
ಚಂದಿರ ವದನೆ ಕೇಳೇ । ಚಂದ ಭಾಮಾ ॥
ಚಂದನ ಸಾಗರೇ ಕೇಳೇ । ಚಂದ ಭಾಮಾ ॥
ಚಂದನ ಚರ್ಚಿತೆ । ಏ ಚಂದ ಭಾಮಾ ॥–

ಎಂಬ ಏಕತಾಳದ ಹಾಡನ್ನು ಹಾಡುತ್ತಾರೆ. ಮುಂದೆ ಅವರ ಲಾಸ್ಯಪ್ರಧಾನ ನೃತ್ಯ ನಡೆಯುತ್ತದೆ.

ಸ್ತ್ರೀವೇಷದವರ ಲಾಸ್ಯವೂ ಕೂಡ ಆಕರ್ಷಕವಾದದ್ದು. ಅವರು ಮೊದಲು ತೆರೆಯೊಳಗೆ ನರ್ತಿಸುತ್ತಾ ಅನಂತರ ರಂಗಸ್ಥಳಕ್ಕೆ ಬಂದು ನರ್ತಿಸುತ್ತಾರೆ. ಈ ಸ್ತ್ರೀವೇಷಗಳು ಗೋಪಿಕಾ ಸ್ತ್ರೀಯರಾಗಿರಬೇಕು ಎಂಬ ಕಲ್ಪನೆ ಇದೆ. ಶ್ರೀ ಕೃಷ್ಣನ ಕುರಿತಾದ ಪ್ರಾರ್ಥನಾ ಪದ್ಯಗಳನ್ನು ಇಲ್ಲಿ ಹಾಡುವುದನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ನಾನಾ ಭಂಗಿಗಳಲ್ಲಿ ಅವರು ತಮ್ಮ ಆಂಗಿಕ ಅಭಿನಯವನ್ನು ತೋರಿಸುತ್ತಾರೆ. ಹೀಗೆ ಭಾಗವತರು ಒಡ್ಡೋಲಗ ಆಗುವವರೆಗೆ ಈ ಮೂರು ಬಗೆಯ ಪಾತ್ರಗಳನ್ನು ಕುಣಿಸುತ್ತಾ ಹಲವು 'ಸಭಾವಂದನೆ'ಯ ಹಾಡುಗಳನ್ನು ಹಾಡುತ್ತಾರೆ. ರಂಗಸ್ಥಳದ ಸಂಪೂರ್ಣ ಸೂತ್ರ ಭಾಗವತರ ಕೈಯಲ್ಲೇ ಇರುತ್ತದೆ. ಭಾಗವತರೇ ರಂಗಕ್ಕೆ ಮುಖ್ಯ ಮಾರ್ಗದರ್ಶಕರೂ ಆಗಿರುತ್ತಾರೆ.

ಭಾಗವತರೆಂದರೆ 'ಭಗವಂತನ ಭಕ್ತ' ಎಂಬುವ ಅರ್ಥದಲ್ಲಿ ಬಂದಿದೆ. "ಯಕ್ಷಗಾನದಲ್ಲಿ ಭಾಗವತ ಪ್ರದರ್ಶನದ ದಿಗ್ದರ್ಶಕ, ಯಕ್ಷಗಾನದ ಪ್ರಧಾನ ವೇಷ."[2] ಆತನು ಹಿಮ್ಮೇಳದೊಡನೆ ಗಣೇಶ, ಸ್ಕಂದ, ದುರ್ಗೆ ಮೊದಲಾದ ದೇವತೆಗಳನ್ನು ಹೊಗಳುವ ಹಾಡನ್ನು ಹಾಡುತ್ತಾನೆ. ಮುಂದೆ ಕೋಡಂಗಿಗಳು ಬಂದು ಕುಣಿಯುವದರೊಂದಿಗೆ ಆಟವನ್ನು ಪ್ರಾರಂಭಿಸುತ್ತಾನೆ.

ಇಲ್ಲಿಂದ ಮುಂದೆ ಪ್ರಸಂಗ ಪ್ರಾರಂಭವಾಗುತ್ತದೆ. "ಪ್ರಸಂಗವೆಂದರೆ ನಾನಾ ಪುರಾಣಗಳಿಂದ ಆಯ್ದುಕೊಂಡ ರಾಗತಾಳಗಳಿಂದ ಹೊಂದಿಕಂಡು ಕನ್ನಡದಲ್ಲಿ ರಚಿತವಾದ ಪದ್ಯ ಕಾವ್ಯಗಳಾಗಿವೆ. ಇವುಗಳನ್ನು ಪದ್ಯನಾಟಕಗಳೆಂದೂ ಕರೆಯಬಹುದು."[3] ಮೊದಲಿಗೆ ಪ್ರಸಂಗಕ್ಕೆ ಸಂಬಂಧಿಸಿದಂತೆ ಒಡ್ಡೋಲಗ ನಡೆಯುವ ಸಂಪ್ರದಾಯವಿದೆ. ಕಥೆ ರಾಮಾಯಣದಿಂದ ತೆಗೆದುಕೊಂಡಿದ್ದಾದರೆ ರಾಮಲಕ್ಷ್ಮಣರದು, ಭಾರತದ್ದಾದರೆ ಪಾಂಡರವರದು ಒಡ್ಡೋಲಗ ನಡೆಯುತ್ತದೆ. ಇಬ್ಬರು ವ್ಯಕ್ತಿಗಳು ಒಂದು ಪರದೆಯನ್ನು ಭಾಗವತನ ಎಡಪಕ್ಕದಲ್ಲಿ ಹಿಡಿದು ನಿಲ್ಲುತ್ತಾರೆ. ಪಾತ್ರಧಾರಿಗಳು ಬಂದು ತೆರೆಯ ಹಿಂದಿದ್ದು ಒಬ್ಬೊಬ್ಬರಾಗಿ ನೆಲ ಮುಟ್ಟಿ, ದೇವರಿಗೆ, ಸಭೆಗೆ, ಭಾಗವತನಿಗೆ ನಮಸ್ಕರಿಸಿ ತೆರೆಗೆ ಬೆನ್ನು ಹಾಕಿ ಕುಣಿಯುತ್ತಾರೆ. ಕೊನೆಯಲ್ಲಿ ಎಲ್ಲಾ ಪಾತ್ರಗಳು ಒಟ್ಟಿಗೆ ನಿಂತು ದೇವತಾ ಸ್ತುತಿ ಹಾಡುತ್ತಾ, ಕುಣಿಯುತ್ತಾ ಪರದೆಯನ್ನು ಕೆಳಗೆ ಸರಿಸಿ, ನಾನಾ ಭಂಗಿಯಲ್ಲಿ ಕುಣಿದು ಮುಂದೆ ಮುಖತೋರಿ ಸುತ್ತಾ ಕುಣಿಯುತ್ತಾರೆ. ಕುಣಿತ ಮುಗಿದ ನಂತರ ಸಂಭಾಷಣೆ ಪ್ರಾರಂಭವಾಗುತ್ತದೆ. ಹನುಮ ನಾಯಕ ಬಂದು ತಮಾಷೆಯ ಮಾತನಾಡುತ್ತ ಒಡ್ಡೋಲಗದ ಉದ್ದಿಶ್ಯ ತಿಳಿಸುತ್ತಾನೆ. ರಾಮಾಯಣ ಕಥಾನಕದಲ್ಲಿ ರಾಮಲಕ್ಷ್ಮಣರ ಹಿನ್ನೆಲೆಯಾಗಿ 'ಆಡು ತಾಡುತ ಬಂದ ರಾಮ ಸಂತೋಷದಿ ಆಡುತಾಡುತ ಬಂದ ರಾಮ' ಎಂಬ ಸ್ತುತಿ ಪರವಾದ ಪದ್ಯದೊಂದಿಗೆ ಕೂಡಿರುತ್ತದೆ.

ಕೃಷ್ಣನ ಒಡ್ಡೋಲಗದಲ್ಲಿ ಆತ–ರಂಗಸ್ಥಳದ ಮಧ್ಯದಲ್ಲಿರುವ ಆಸನದ (ನಾಲ್ಕು ಗಾಲಿಗಳುಳ್ಳ ಕಿರುಮಂಚದ ಆಕಾರದ್ದು) ಮೇಲೆ ಕುಳಿತಿರುತ್ತಾನೆ. ಆತನ ಮುಂದೆ ತೆರೆಯನ್ನು ಹಿಡಿಯುತ್ತಾರೆ.

ಆ ಸಂದರ್ಭದಲ್ಲಿ

ದೇವಬಂದ । ದೇವರದೇವ ಬಂದ ॥ ಪ ॥
ಉರಗ ಶಯನ ಬಂದ । ಗರುಡ ವಾಹನ ಬಂದ ।
ನರಗೊಲಿದವ ಬಂದ । ನಾರಾಯಣ ಬಂದ ॥

ಎಂದು ಪ್ರಾರಂಭವಾಗುವ ಪದ್ಯವನ್ನು ಹಾಡಲಾಗುತ್ತದೆ. ರಾಕ್ಷಸ ಪಾತ್ರಗಳ ಒಡ್ಡೋಲಗವಂತೂ ಬಹಳ 'ಅಬ್ಬರ'ದಿಂದ ಕೂಡಿರುತ್ತದೆ. ಅವರು ಮುಖಮಾರ್ಜನೆ ಶಿವಪೂಜೆ ಮುಂತಾದವೆಲ್ಲವನ್ನು ಅಭಿವ್ಯಕ್ತಿಸುತ್ತಾರೆ.

ಪ್ರಸಂಗ ಮುಂದೆ ನಡೆಯುತ್ತಾ ಹೋದಂತೆ ನಾನಾ ರಾಗಗಳಲ್ಲಿ ಹಾಡುತ್ತಾ ಹೋಗುತ್ತಾರೆ. ಅದಕ್ಕೆ ತಕ್ಕಂತೆ ಪಾತ್ರಧಾರಿ ಕುಣಿಯುತ್ತಾನೆ, ಮಾತನಾಡುತ್ತಾನೆ. ಮಾತು

ಸಾಗಿದಂತೆ ಕಥೆ ಬೆಳೆಯುತ್ತದೆ. ಒಂದು ರಾತ್ರಿಗೆ ಎರಡು ಪ್ರಸಂಗಗಳನ್ನು ಹೆಚ್ಚಾಗಿ ಆಡುತ್ತಾರೆ. ಬೆಳಗಾದಂತೆ ಪ್ರಸಂಗ ಮುಗಿಯುತ್ತಾ ಬಂದು ಸೂರ್ಯೋದಯದ ಹೊತ್ತಿಗೆ ಕೊನೆಗೊಳ್ಳುತ್ತದೆ. ಕೊನೆಯಲ್ಲಿ ಆಟ ನಡೆಸಿದವರಿಗೂ, ಭಾಗವತನಿಗೂ ಸಂಪ್ರದಾಯದಂತೆ ಮಾತುಕತೆಯಾಗಿ ಹಣ ಮತ್ತು ವೀಳ್ಯವನ್ನು ಪಡೆದುಕೊಂಡು ಸನ್ನಿಧಾನದ ಪರವಾನೆಗೆಯನ್ನು ಭಾಗವತನು ಆಟ ಆಡಿಸಿದವರಿಗೆ ಕೊಡುತ್ತಾನೆ.

ಅಲ್ಲಿಂದ ಭಾಗವತ ಹಿಮ್ಮೇಳದವರು ಸ್ತ್ರೀವೇಷದವರು ಕೂಡಿ ದೇವತಾ ಸ್ತುತಿ ಮಾಡುತ್ತ ಜೊತೆಯಲ್ಲಿ ಚೌಕಿಗೆ ಬರುತ್ತಾರೆ. ಆ ಸಮಯದಲ್ಲಿ ಬಾಲಗೋಪಾಲರು ಇವರ ಜೊತೆಯಲ್ಲೇ ಇದ್ದರು ಎನ್ನುವ ಅರ್ಥ ಬರುವ 'ರಾಮಕೃಷ್ಣರು ಮನೆಗೆ ಬಂದರು ಬಾಗಿಲ ತೆರೆಯಿರೋ' ಎಂಬ ಪದ್ಯವನ್ನು ಹಾಡುತ್ತಾರೆ. ಚೌಕಿಯಲ್ಲಿ ಮತ್ತೊಮ್ಮೆ ಆರತಿ ಮಂಗಳ ಸ್ತುತಿಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುತ್ತದೆ. ಡಾಕ್ಟರ್ ಶಿವರಾಮ ಕಾರಂತರು ಈ ಅಂಶವನ್ನು ಪ್ರಧಾನವಾಗಿ ಗಣನೆಗೆ ತೆಗೆದುಕೊಂಡು "ನಮಗೆ ಈ ಯಕ್ಷಗಾನ ಬಯಲಾಟದ ಕಲ್ಪನೆ ಎಂಬುದು ಕೇವಲ ಜನರಂಜನೆಯಷ್ಟೇ ಹುಟ್ಟಿರದ, ಬದಲು ಜನರು ನಂಬಿ ಬಂದಿರುವ ದೇವರುಗಳ ಆರಾಧನೆಯ ಬಗೆಯನ್ನೂ ರೂಪುಗೊಂಡು ಬಂದ ಒಂದು ಕಲಾ ಸಂಪ್ರದಾಯ ಎಂಬುದಾಗಿ ಅನಿಸುತ್ತದೆ...."[4] ಎಂದಿದ್ದಾರೆ.

ವಿಕಾಸದ ಹಾದಿ :

ಪ್ರಾಯಶಃ ಯಕ್ಷಗಾನದ ಉಗಮ ಮತ್ತು ವಿಕಾಸದ ಬಗ್ಗೆ ನಡೆದಿರುವ ವಾದ ವಿವಾದಗಳು, ಬಂದಿರುವ ಭಿನ್ನಾಭಿಪ್ರಾಯಗಳು, ಎಡೆಮಾಡಿರುವ ವಿಚಾರಗಳು ಬೇರ್‍ಯಾವ ವಿಚಾರದಲ್ಲೂ ಬಂದಂತಿಲ್ಲ. ಕೆಲವರು ಶುದ್ಧ ಜನಪದವೆಂದರೆ ಕೆಲವರು ಶುದ್ಧ ಶಾಸ್ತ್ರವೆಂತಲೂ, ಕೆಲವರು ಇದೊಂದು ಗಾನ ಸಂಪ್ರದಾಯವೆಂದರೆ ಇನ್ನೂ ಕೆಲವರು ಆರಾಧನೆಯ ಅಂಗವೆಂತಲೂ ಭಿನ್ನ ದೃಷ್ಟಿ ಕೋನಗಳಿಂದ ಚರ್ಚಿಸಿದ್ದಾರೆ. ಇದರ ಹೆಸರಿನ ಬಗ್ಗೆ, ಇದರ ವಸ್ತುಸ್ಥಿತಿಯ ಬಗ್ಗೆ, ಇದು ಇಂದು ತಳೆದಿರುವ ರೂಪದ ಬಗ್ಗೆ ಬಿರುಸಿನ ಚರ್ಚೆ ನಡೆದಿದೆ. ಇಂತಹ ಸ್ಥಿತಿಯಲ್ಲಿ ನಿಜವನ್ನು ಪತ್ತೆ ಹಚ್ಚಬೇಕಾದರೆ ಈ ಬೃಹತ್ ಚರ್ಚೆಯ ಸ್ಥೂಲ ಹಿನ್ನೆಲೆಯನ್ನು ಸ್ವಲ್ಪ ಮಟ್ಟಿಗಾದರೂ ಪರಿಚಯಿಸಬೇಕಾಗಿದೆ.

ಶ್ರೀ ಮುಳಿಯ ತಿಮ್ಮಪ್ಪಯ್ಯನವರು ತಮ್ಮ 'ಪಾರ್ತಿಸುಬ್ಬ'ದಲ್ಲಿ ಯಕ್ಷಗಾನದ ಮೂಲ ಮತ್ತು ಬೆಳವಣಿಗೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಇದು ಒಂದು ಬಗೆಯ ಸಂಗೀತವೆಂತಲೂ ಗಂಧರ್ವಗಾನವಿದ್ದಂತೆ ಒಂದು ಗಾನ ಸಂಪ್ರದಾಯವೆಂತಲೂ ಅಭಿಪ್ರಾಯ ಪಟ್ಟು; ಯಕ್ಷ ಎಂಬುದು ಅತಿ ಪುರಾತನವಾದ ದಕ್ಷಿಣ ಪ್ರಾಂತದ ಜನವರ್ಗ ಎಂದು ಸೂಚಿಸಿದ್ದಾರೆ.[5] ದೇಶೀಯವಾದ ಗಾನ ಪದ್ಧತಿಯಾಗಿದ್ದ ಈ ಯಕ್ಷಗಾನವು ಯಕ್ಕಲಗಾನವೆಂದು ಅಗ್ಗಳನ ಚಂದ್ರಪ್ರಭಾ ಪುರಾಣದಲ್ಲಿ ಕರೆಯಲಾಗಿದೆ. ಯಕ್ಕಲ ಎಂಬುದು ಯಕ್ಷ ಎಂಬುದರ ಅಪಭ್ರಂಶ ರೂಪವಾಗಿರಬೇಕು. ಈ ಒಂದು ನಿಲುವು ಸಾಕಷ್ಟು ಚರ್ಚೆಗೆ ಎಡೆಮಾಡಿಕೊಟ್ಟಿದೆ. 'ಕವಿ ರಾಜಮಾರ್ಗ'ದಲ್ಲಿ ಉಕ್ತವಾಗಿರುವ 'ಚಿತ್ತಾಣ-ಬೆದಂಡೆ ಗಬ್ಬ' 'ಬಾಜನೆಗಬ್ಬ'

ಎಂಬ ಶಬ್ದಗಳು ಯಕ್ಷಗಾನದ ಹಾಡುಗಳಂತೆ ಇರುವ ಉಳಿದ ಜನಪದ ಸಾಹಿತ್ಯ ಪ್ರಕಾರಗಳಾಗಿರಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಯಕ್ಷಗಾನವು ಗಂಧರ್ವಗಾನದಂತಹ ಗಾನವೇ ಎನ್ನುವುದು ಸಮಸ್ಯೆ. 'ಯಕ್ಷ'ರು ಎಂದರೆ ಯಾರು ಎಂಬ ಪ್ರಶ್ನೆ ಇದಿರಾಗುತ್ತದೆ. 'ಯಕ್ಷ' 'ಯಕ್ಕ' ಶಬ್ದಗಳು ಸಮಾನ ಪದಗಳು ಎನ್ನುವುದನ್ನು ಒಪ್ಪುವಂತಿಲ್ಲ. ಇದರ ಉಗಮವನ್ನು ಭಾಷಾ ಶಾಸ್ತ್ರದ ಹಿನ್ನೆಲೆಯಲ್ಲಿ ಕಾಣಹೋಗುವುದು ಸರಿ ಎನಿಸುವುದಿಲ್ಲ.

ಡಾ. ಶಿವರಾಮ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ'ದಲ್ಲಿ ಮೊದಲಿಗೆ ಇದೊಂದು ಗಾನ ಸಂಪ್ರದಾಯವಾಗಿತ್ತು. ಮುಂದೆ ಇದರಲ್ಲಿ ಕುಣಿತ ಅಭಿನಯ ಗದ್ಯಗಳು ಸೇರಿಕೊಂಡವು ಎನ್ನುತ್ತಾರೆ. ಭರತನ ನಾಟ್ಯಶಾಸ್ತ್ರವು ನಾಟಕಗಳ ರಚನೆಗೆ ಒಂದು ಕಟ್ಟನ್ನು ಹಾಕಿಕೊಟ್ಟರೂ ಅವನಿಗಿಂತ ಪೂರ್ವದಲ್ಲೇ ಸಾಕಷ್ಟು ಬಗೆಯ ನಾಟ್ಯ ಪ್ರಕಾರಗಳು ಪ್ರಚಲಿತಗೊಂಡಿದ್ದವು. ಅದೇ ರೀತಿಯಲ್ಲಿ ಯಕ್ಷಗಾನವು ಹಾಗೇ ಪ್ರಚಲಿತವಿರುವ ಜಾನಪದ ಶೈಲಿಯ ನಾಟಕವಾಗಿರಬೇಕು. ಇದನ್ನು ಅವರು ಎಲ್ಲೆಡೆ ಸಮಾನವಾಗಿ ಕಂಡು ಬರುವ ಜಾನಪದ ನೃತ್ಯದೊಂದಿಗೆ ಹೋಲಿಸುತ್ತಾರೆ. ಇವರು ಯಕ್ಷಗಾನವನ್ನು ಜಾನಪದ ಪೋಷಣೆಯಿಂದ ಅದು ಬೆಳೆದು ಬಂತು...' ಎಂಬುದರಿಂದ ಯಕ್ಷಗಾನ ಎಂಬುದು ಹಿಂದೂಸ್ತಾನಿ ಕರ್ನಾಟಕಿ ಪದ್ಧತಿಗಳಂತೆ ಒಂದು ಗಾನ ಶೈಲಿಯಾಗಿದೆ. ಆಂಧ್ರ ಕರ್ನಾಟಕದಲ್ಲಿ ಹೆಚ್ಚಾಗಿ ಪ್ರಚಲಿತವಾಗಿ ಬಂದ ಈ ಯಕ್ಷಗಾನ ಹಾಡುಗಳು ಕಥಾ ರೂಪದಲ್ಲಿ ಬಂದಾಗ ಅದನ್ನೇ 'ಪ್ರಸಂಗ' ಎಂದು ಕರೆದರು. ಆ ಕಥಾನಕಗಳಿಗೆ ಹೊಂದಿಕೊಂಡಂತೆ ನಾನಾ ರಾಗಗಳಲ್ಲಿ ಹಾಡುಗಳನ್ನು ರಚನೆ ಮಾಡಿದರು. ಇಂತಹ ಗಾನ ಶೈಲಿಗೆ ಹೊಂದಿಕೊಂಡಂತೆ ಕುಣಿತವು ಬಂದಿತು. ಇದು ಭಾವನೆಯನ್ನು ಹೊರಹೊಮ್ಮಿಸಲು ಸಹಾಯಕವಾಯಿತು. ಪಾತ್ರಧಾರಿಗಳಾದವರು ಅಭಿನಯದ ಮೂಲಕ ಮಾತು ಹೊಮ್ಮಿಸಲಾರದ್ದನ್ನು ತಿಳಿಸಲು ಪ್ರಾರಂಭಿಸಿದರು. ಇವೆಲ್ಲಕ್ಕೆ ಸಾಹಿತ್ಯ ರೂಪವಾಗಿ ಸಂಸ್ಕೃತ ಮತ್ತು ಕನ್ನಡದಲ್ಲಿ ಬಂದ ಪುರಾಣ ಪುಣ್ಯಕಥೆಗಳ ಭಾಗಗಳನ್ನು ಆರಿಸಿಕೊಂಡು ಚಿಕ್ಕ ಚಿಕ್ಕ ಪ್ರಸಂಗಗಳಾಗಿ ನೇಯ್ದರು.

ಹೀಗೆ ಯಕ್ಷಗಾನ ಅಸ್ತಿತ್ವಕ್ಕೆ ಬಂತು ಎಂದು ಅಭಿಪ್ರಾಯಪಟ್ಟ ಕಾರಂತರು ಇದರ ಮೂಲ ಉದ್ದೇಶ ಭಕ್ತಿಯ ಪ್ರಸಾರ ಎನ್ನುತ್ತಾರೆ ಭಾಗವತ ಧರ್ಮದ ಹಿರಿಮೆಯನ್ನು ಯಕ್ಷಗಾನ ಪ್ರಸಂಗದ ಮೂಲಕ ಪ್ರಚುರಪಡಿಸಲು ಸಾಧ್ಯವಾಯಿತು. ಈ ಬದುಕು ಒಂದು ಲೀಲೆ. ದೇವರ ಒಂದು ರಂಗಭೂಮಿ. ಯಕ್ಷಗಾನ ಆಟ ಅದನ್ನು ಪ್ರತಿಬಿಂಬಿಸಲೆಂದೇ ನಿರೂಪಿತವಾಗಿದೆ. ಬಾಲಗೋಪಾಲರ ಪ್ರವೇಶವೂ ಅದೇ ಉದ್ದೇಶದಿಂದಲೇ ಇದೆ. ಕೊನೆಯಲ್ಲಿ "ರಾಮಕೃಷ್ಣರು ಬಂದರು ಬಾಗಿಲ ತೆರೆಯಿರೋ" ಎಂಬುದು ಇದೇ ಅರ್ಥದಲ್ಲಿ, ಯಕ್ಷಗಾನವೆಂಬುದು ಹಲವು ರಾಗ ಜಾತಿಗಳುಳ್ಳ ಒಂದು ವಿಸ್ತಾರವಾದ ಹೆಸರೆನಿಸುತ್ತದೆ. ಯಕ್ಷಗಾನದಲ್ಲಿ ಬರುವ ಗಾನ ಸಂಪೂರ್ಣ ಶಾಸ್ತ್ರೀಯವಾದದು. ಅದರ ಪ್ರಾಯೋಗಿಕ ರೂಪ ಜಾನಪದ ಪ್ರಭಾವದಿಂದ ಹೊರತಾಗಿಲ್ಲ ಎಂಬುದೇ ಕಾರಂತರ ಅಭಿಪ್ರಾಯ.

ಕುಕ್ಕಲ ಕೃಷ್ಣ ಭಟ್ಟರು ಯಕ್ಷಗಾನವನ್ನು ಆರಾಧನೆಯ ಒಂದು ಅಂಗ ಎಂದು ಕರೆದಿದ್ದಾರೆ. ದೇವಸ್ಥಾನಗಳಲ್ಲಿ ನಾಟ್ಯ ಸೇವೆ ನಡೆಯುತ್ತಿತ್ತು ದಶಾವತಾರ ಸ್ತುತಿ ಅದರೊಂದಿಗೆ ಬರುತ್ತಿತ್ತು. ಆಟಗಳಲ್ಲೂ ದಶಾವತಾರ ಸ್ತುತಿ ಇದ್ದು ಆ ದೇವನ ಅವತಾರ ಮಹಿಮೆಯನ್ನು ನಿರೂಪಿಸಲು ಇರುವುದರಿಂದ "ದಶಾವತಾರ ಆಟ" ಎಂದು ಕರೆದರು. ಬಯಲಿನಲ್ಲಿ ಆಡುವುದರಿಂದ ಬಯಲಾಟವಾಯಿತು. ಚಿಕ್ಕ ಚಿಕ್ಕ ಸ್ತುತಿಯಾದರೆ ದೇವರ ನಿತ್ಯ ಸೇವೆಯಲ್ಲಿ ಸೇರಿದ್ದು ಚಿಕ್ಕ ಆಟವಾಯಿತು. ರಾತ್ರಿ ಇಡೀ ಆಡಿದರೆ "ದೊಡ್ಡ ಆಟ" ಎಂದು ಕರೆದರು. ಮೂಡಲ ಭಾಗದಲ್ಲಿ ಪ್ರಚಲಿತವಿರುವ ಯಕ್ಷಗಾನವನ್ನು ಜನ 'ಮೂಡಲಪಾಯ' ಎಂದು ಕರೆದರು. 'ಯಕ್ಷ' ಶಬ್ದಕ್ಕೆ 'ಪೂಜೆ' ಅಥವಾ 'ಆರಾಧನೆ' ಎಂಬುದೇ ನಿಜವಾದ ಅರ್ಥ. (ಯಕ್ಷ– ಪೂಜಾಯಂ, ಪಾಣಿನಿ. ಯಕ್ಷ – to honour - worship-Apte) ಯಕ್ಷ ಗಾನವು ಶಾಸ್ತ್ರೀಯ ಸಂಗೀತದಲ್ಲೆ ಹಾಡತಕ್ಕದೆಂಬುದು ರಾಗತಾಳಗಳ ನಿರ್ದೇಶನದಿಂದಲೇ ತಿಳಿಯುತ್ತದೆ ಎಂದು ತಿಳಿಸಿದ್ದಾರೆ.

ಭೀಮರಾವ್ ಚಿಟಗುಪ್ಪಿಯವರು, ಯಕ್ಷಗಾನದ ಹೆಸರಿನ ಕುರಿತು ಇನ್ನೊಂದು ಅಭಿಪ್ರಾಯವನ್ನು ಕೊಡುತ್ತಾರೆ. ಸಂಸ್ಕೃತದ 'ಯತಿ'ಯೇ 'ಜತಿ'ಯಾಗಿ, 'ಜತಿಗಾಣ', ಜಾತಿಗ. 'ಜತಿಗುಡು' ಮೊದಲಾದ ಶಬ್ದಗಳಲ್ಲಿ ಬಳಕೆಯಾಗಿರಬೇಕು ಎಂದಿದ್ದಾರೆ. ಅದೇ ಯತಿಗೆ ಸಮಾನಾರ್ಥಕವಿರುವ ದೇಶೀ 'ಜಕ್ಕವು' ಸಂಸ್ಕೃತದಲ್ಲಿ 'ಯಕ್ಷ'ವಾಗಿ ಗಾನದೊಡನೆ ಸೇರಿ ಯಕ್ಷಗಾನವಾಗಿರಬೇಕೆಂಬುದು ಕಂಡು ಬರದಿರಲಾರದು[6] ಎಂದಿದ್ದಾರೆ.

ಯಕ್ಷಗಾನದ ಮೂಲದ ಬಗ್ಗೆ ನಾನಾ ರೀತಿಯ ಊಹೆಗಳಿವೆ. ಮೊದಲಿಗೆ ಬಳ್ಳಾರಿ ತಾಲ್ಲೂಕಿನ ಸೋಮ ಸಮುದ್ರ ಎಂಬಲ್ಲಿ ಇರುವ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ದೊರೆತ ಒಂದು ಶಾಸನವನ್ನು ಗಮನಿಸಬೇಕು. ಇದನ್ನು ಡಾ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ'ದ ಎರಡನೇ ಮುದ್ರಣದಲ್ಲಿ ಕೊಟ್ಟಿದ್ದಾರೆ. ಇಲ್ಲಿ 'ಲಕ್ಷೀನಾರಾಯಣ ದೇವರಿಗೆ ಏಕಾದಶಿ ಜಾಗರ ಪಲ್ಲಕಿ ಸೇವೆ, ತಾಳ ಮದ್ದಲೆ ಸೇವೆಗಾಗಿ ಸಮರ್ಪಿಸಿದ....' ಎಂಬ ಮಾತು ಬರುತ್ತದೆ. ಈ ತಾಳ ಮದ್ದಲೆ ಯಕ್ಷಗಾನದ ಒಂದು ಪ್ರಕಾರವಾದರೆ ಹದಿನೈದನೇ ಶತಮಾನಕ್ಕಾಗಲೇ ಪ್ರಚಲಿತ ಗೊಂಡಿರುವುದು ತಿಳಿದು ಬರುತ್ತದೆ. ಇದರಿಂದಲೇ ಕಾರಂತರು ಹದಿನೈದನೇ ಶತಮಾನದ ಹೊತ್ತಿಗೆ ಯಕ್ಷಗಾನ ಪರಂಪರ ಆಸ್ತಿತ್ವಕ್ಕೆ ಬಂದಿರಬೇಕು. ಎಂಬ ನಿಲುವಿಗೆ ಬರುತ್ತಾರೆ. ಇದಕ್ಕೆ ಪೂರಕವಾಗಿ ಅವರಿಗೆ ದೊರೆತ 'ವಿರಾಟಪರ್ವ' ಎಂಬ ಯಕ್ಷಗಾನ ಪ್ರಸಂಗವು ಆ ಕಾಲದಲ್ಲೇ ರಚಿತಗೊಂಡಿದ್ದಾಗಿದೆ. ಹೀಗೆ ಹದಿನೈದನೇ ಶತಮಾನದಲ್ಲಿ ಪಕ್ವಾವಸ್ಥೆಗೆ ಬಂದ ಯಕ್ಷಗಾನ ರೂಪದ ಉಗಮವನ್ನು ಇದಕ್ಕಿಂತ ನೂರು ವರ್ಷಗಳಷ್ಟು ಹಿಂದಕ್ಕೆ ಸರಿಸಬಹುದು.

ಭೀಮರಾವ್ ಚಿಟಗುಪ್ಪಿಯವರು ಯಕ್ಷಗಾನ ಉಗಮವನ್ನು ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ತಂದು ನಿಲ್ಲಿಸಿದ್ದಾರೆ. ಯಕ್ಷಗಾನ ಆಟದ ಉಗಮಕ್ಕೆ ಎರಡು ಗಡವನ್ನು ಮಾಡಿಕೊಂಡು ಚರ್ಚಿಸಿದ್ದಾರೆ. ಹನ್ನೆರಡನೇ ಶತಮಾನದ ಪಶ್ಚಿಮ ಚಾಲುಕ್ಯ ದೊರೆ ಸೋಮೇಶ್ವರನ ಕಾಲ ಪೂರ್ವದ ಗಡುವಾದರೆ ಹದಿನೆಂಟನೇ ಶತಮಾನದ

ಸಿಂಗರಾರ್ಯನ ಕಾಲ ಉತ್ತರದ ಗಡುವಾಗುತ್ತದೆ. ಯಕ್ಷಗಾನ ಪೂರ್ವ ರಂಗದಲ್ಲಿ ಗೊಂಡಲಿ ನೃತ್ಯದ ಅಂಶವನ್ನು ಗುರುತಿಸಿದ ಶ್ರೀಯುತರು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಸಾಂಸ್ಕೃತಿಕ ಪುನರುಜ್ಜೀವನದ ಸಂದರ್ಭದಲ್ಲಿ ಯಕ್ಷಗಾನದ ಪೂರ್ವಭಾಗ ಮೈದಾಳಿರಬೇಕು ಎನ್ನುತ್ತಾರೆ. ಸ್ವತಃ ವಿದ್ಯಾರಣ್ಯರೇ ಸಂಗೀತಗಾರರಾಗಿದ್ದು ಗ್ರಂಥ ರಚಿಸಿದವರು. ಅಲ್ಲದೇ ಕ್ರಿ.ಶ. 1614 ರಲ್ಲಿದ್ದ ರಘುನಾಥ ನಾಯಕನು ರುಕ್ಮಿಣಿ ವಿವಾಹವೆಂಬ ಯಕ್ಷಗಾನ ಪ್ರಸಂಗವನ್ನು ರಚಿಸಿರುವನೆಂಬ ಉಲ್ಲೇಖವಿದೆ. 'ಯಕ್ಷಗಾನ ಆಟದಲ್ಲಿ ಭಾಗವತನಿಗೆ ಇರುವ ಪ್ರಧಾನತೆಯನ್ನು ಲಕ್ಷಿಸಿದರೆ, ಭಕ್ತಿ ಪಂಥ ಅದರಲ್ಲೂ ಭಾಗವತ ಸಂಪ್ರದಾಯ ಮತ್ತು ದಾಸ ಸಾಹಿತ್ಯದ ಹುಟ್ಟು ಬೆಳವಣಿಗೆಯಲ್ಲಿ ಅದರ ಉಗಮವನ್ನು ಕಾಣಬಹುದಾಗಿದೆ...'[7] ಎಂದಿದ್ದಾರೆ.

ಭಾಗವತ ಧರ್ಮದ ಹಿರಿಮೆಯನ್ನು ಅನೇಕ ಯಕ್ಷಗಾನ ಪ್ರಸಂಗಗಳು ಸಾರಿವೆ. ಇಂದು ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಮಾತ್ರ ಪ್ರಚಲಿತವಿದ್ದರೂ ಹಿಂದೆ ಉತ್ತರ ಕರ್ನಾಟಕದಲ್ಲೂ 'ದೊಡ್ಡಟ', 'ಭಾಗವತರಾಟ', 'ಬಯಲಾಟ' ಎಂಬ ಹೆಸರಿನಿಂದ ಜನಮನವನ್ನು ರಂಜಿಸಿತ್ತು. ಇದು ಪ್ರಯೋಗದಲ್ಲಾದರೆ, ಹಾಡಿನ ರೂಪದಲ್ಲಿ ಎಷ್ಟೋ ಯಕ್ಷಗಾನ ಕೃತಿಗಳು ನಿರ್ಮಾಣವಾಗಿವೆ. ಕೀರ್ತನೆಯಂತಹ ಪ್ರಭಾವೀ ಮಾಧ್ಯಮವನ್ನು ಆರಿಸಿಕೊಂಡ ಹರಿದಾಸರೇ ಯಕ್ಷಗಾನದಂತಹ ಜನ ಮನಸ್ಸನ್ನು ತಟ್ಟುವ ಮಾಧ್ಯಮವನ್ನು ಬಳಸಿಕೊಂಡಿರಬೇಕು. ಆದರೆ ಅವು ಪ್ರಯೋಗದಲ್ಲಿ ಬಾರದೇ ಲುಪ್ತವಾಗಿರುವ ಸಾಧ್ಯತೆ ಇದೆ. ಇದರಿಂದಲೇ ಪುರಂದರ ದಾಸರು ಅನಸೂಯೆಯ ಕಥೆ ಮತ್ತು ಅವರ ಮಗ ಮಧ್ವಪತೀದಾಸರು ಅಭಿಮನ್ಯ ಕಾಳಗ, ಇಂದ್ರಜಿತು ಕಾಳಗ, ಉದ್ಧಾಳಿತನ ಕಥೆ, ಐರಾವತ, ಕಂಸವಧೆ ಎಂಬ ಯಕ್ಷಗಾನ ಪ್ರಬಂಧವನ್ನು ರಚಿಸಿರಬೇಕೆಂಬ ಊಹೆಗೆ ಅವಕಾಶವಿದೆ.[8] ಇದರಿಂದಾಗಿ ಹದಿನೈದನೇ ಶತಮಾನದ ಹೊತ್ತಿಗಾಗಲೇ ಯಕ್ಷಗಾನ ಸಾಹಿತ್ಯ ರೂಪುಗೊಂಡಿರಬೇಕು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯಕ್ಷಗಾನದ ಉಗಮ ವಿಕಾಸವನ್ನು ಅಧ್ಯಯನ ಮಾಡಬೇಕಾಗಿದೆ. ಪೂರ್ವದಲ್ಲಿ ಇದೂ ಕೂಡ ಒಂದು ಗಾನ ಸಂಪ್ರದಾಯವಾಗಿತ್ತು. ಜನ ತಮ್ಮ ವಿರಾಮ ಕಾಲವನ್ನು ಹಾಡು ಹಸೆಗಳಲ್ಲಿ ಪುರಾಣ ಶ್ರವಣಗಳಲ್ಲಿ ಕಳೆಯುತ್ತಿದ್ದರು. ಅದೇ ಸಂದರ್ಭದಲ್ಲಿ ಹುಟ್ಟಿಕೊಂಡ ಅನೇಕ ಜನಪದ ಗಾನ ಸಂಪ್ರದಾಯದಂತೆ ಯಕ್ಷಗಾನವೂ ಮೊದಲಿಗೆ ಜನ್ಮ ತಳೆಯಿತು. ಪುರಾಣ ಪುಣ್ಯ ಕಥೆಗಳನ್ನು ಯಕ್ಷಗಾನ ಶೈಲಿಯಲ್ಲಿ ಜನರು ಹಾಡುತ್ತಿದ್ದರು. ಈ ಹಾಡುಗಾರಿಕೆ ಹಿಂದೂಸ್ಥಾನಿ ಮತ್ತು ಕರ್ನಾಟಕಿಗಿಂತ ಸಂಪೂರ್ಣವಾಗಿ ಭಿನ್ನವಾಗಿದೆ ಎಂಬುದನ್ನು ಮರೆಯಬಾರದು. ಅದೇ ಸಂದರ್ಭದಲ್ಲಿ ನಾನಾ ಕಥೆಗಳು ರಾಮಾಯಣ ಮಹಾಭಾರತದ ಉತ್ತಮ ಭಾಗಗಳು ಕವಿ ಪ್ರತಿಭೆಯುಳ್ಳ ಕಲಾವಿದನಿಂದ ಪುನರ್ ನಿರ್ಮಾಣಗೊಂಡು ಹಾಡಿನೋಪಾದಿಯಲ್ಲಿ ಪ್ರಚಾರಗೊಂಡಿತು. ದಾಸಪಂಥ ಪ್ರಾಬಲ್ಯಕ್ಕೆ ಬರುತ್ತಿದ್ದ ಕಾಲದಲ್ಲಿ ಅವರು ತಮ್ಮ ವಿಚಾರವು ಅತಿ ಹೆಚ್ಚು ಜನರನ್ನು ಚೆನ್ನಾಗಿ ತಟ್ಟಬಲ್ಲ ಮಾಧ್ಯಮಗಳನ್ನು ಪ್ರಯೋಗಕ್ಕೆ ತಂದುಕೊಂಡರು. ಎಲ್ಲಾ ಸಾಧ್ಯತೆಗಳನ್ನು ದುಂಡಿಸಿಕೊಂಡರು. ಇದರ ಫಲವಾಗಿ ಕೀರ್ತನೆ, ಸುಳಾದಿ ಇತ್ಯಾದಿಗಳೆಲ್ಲಾ

ಪ್ರಚಾರಗೊಂಡವು. ಸರಳವಾದ ಭಾಷೆ. ನೇರ ನಿರೂಪಣೆ ತಾವು ಕಂಡದ್ದನ್ನೇ ಹೋಲಿಕೆಯಾಗಿ ಹೇಳುವ ಕಲೆ ಇವುಗಳನ್ನು ಹಾಡುಗಳಲ್ಲಿ ಅಳವಡಿಸಿದರು. ಜನರಿಗೆ ಪುರಾಣಾಂತರ್ಗತವಾದ ವಿಚಾರಗಳನ್ನು ಮುಟ್ಟಿಸಲು ಯಕ್ಷಗಾನ, ತಾಳಮದ್ದಲೆ ಮುಂತಾದವುಗಳನ್ನು ಅವರು ಆಶ್ರಯಿಸಿದರು ಎನಿಸುತ್ತದೆ. ತಾಳಮದ್ದಲೆ ಸೇವೆಗೆ ಉಂಬಳಿ ಬಿಟ್ಟ ವಿಚಾರ ನಮಗೆ ಹದಿನಾರನೇ ಶತಮಾನದ ಕುರುಗೋಡು ಶಾಸನದಿಂದ ತಿಳಿಯುತ್ತದೆ. ಈ ರೀತಿಯಾಗಿ ಗಾನ ಸಂಪ್ರದಾಯವಾಗಿದ್ದ ಯಕ್ಷಗಾನ ಕಲೆಗೆ ಉಳಿದ ಅಂಶಗಳಾದ ನೃತ್ಯ, ಅಭಿನಯ, ಮಾತುಗಳು ಸೇರಿಕೊಂಡು ಇಂದಿನ ರೂಪ ಬಂತು. ಇದಕ್ಕೆ ಸಾಕ್ಷಿಯಾಗಿ ತೆಲುಗು ಯಕ್ಷಗಾನ ಕೃತಿಗಳು ನಿಲ್ಲುತ್ತವೆ. ಹದಿನೈದು – ಹದಿನಾರನೆ ಶತಮಾನದಲ್ಲಿ ಕರ್ನಾಟಕ ಆಂಧ್ರಗಳೆರಡರಲ್ಲೂ ಯಕ್ಷಗಾನ ರಚನೆ ಪ್ರಾರಂಭಗೊಂಡಿರಬೇಕು ಕ್ರಿಶ.1624 ರಲ್ಲಿದ್ದ ಗೋಕುಲ ಪಾಟಿ ಕುರ್ಮನಾಥ ಕವಿಯ "ಮೃತ್ಯುಂಜಯ ವಿಲಾಸ" ಎಂಬ ಯಕ್ಷಗಾನ ಉಪಲಬ್ಧವಾಗಿರುವ ವಿಚಾರ ತಿಳಿಯುತ್ತದೆ. ಮೊದಲು ತೆಲುಗಿನಲ್ಲಿ ಯಕ್ಷಗಾನ ಪ್ರಸಂಗವನ್ನು ಬರೆದವನು ವಿಜಯನಗರದ ಕಾಲದಲ್ಲಿದ್ದ ಕಂದುಕೂರಿ ರುದ್ರಯ್ಯ. ಆತ ಬರೆದ ಪ್ರಸಂಗ 'ಸುಗ್ರೀವ ವಿಜಯ'. ಇವನು ಕ್ರಿ.ಶ. 1509 ರಿಂದ 1530 ರಲ್ಲಿ ಇದ್ದನೆಂದು 'ಶಿಷ್ಯ ರಾಮಕೃಷ್ಣ ಶಾಸ್ತ್ರಿಗಳು ನಿರ್ಧರಿಸುತ್ತಾರೆ.[9] ಮುಂದೆ ಕೂಚುಪುಡಿ ಎಂಬ ಊರೇ ಒಂದು ಬಗೆಯ ಯಕ್ಷಗಾನದ ಸಂಪ್ರದಾಯದ ತವರಾಯಿತು. 17ನೇ ಶತಮಾನದವರೆಗೆ ಸಾಂಸ್ಕೃತಿಕವಾಗಿ ತೆಲುಗು ಕನ್ನಡಗಳು ಒಟ್ಟಿಗೆ ಸಾಗಿದ್ದವು ಎಂಬುದನ್ನು ಗಣನೆಗೆ ತಂದುಕೊಂಡಾಗ ಕನ್ನಡದಲ್ಲೂ ಕೂಡ 15–16ನೇ ಶತಮಾನದ ಹೊತ್ತಿಗೆ ಯಕ್ಷಗಾನ ಸೃಷ್ಟಿಗೊಂಡವು ಎಂಬ ನಿಲುವಿಗೆ ಬರಬಹುದು.

ಆ ಕಾಲದಲ್ಲಿ ಸೃಷ್ಟಿಗೊಂಡ ಯಕ್ಷಗಾನ ಕೃತಿಗಳು ಜನರಂಜನೆ ಮತ್ತು ಭಕ್ತಿ ಪ್ರಸಾರದ ಮಾಧ್ಯಮವಾಗಿ ರೂಪುಗೊಂಡವು. ಕುಣಿತ, ಅಭಿನಯದಲ್ಲಿ ಹೊಸ ಹೊಸ ಸಾಧ್ಯತೆಗಳನ್ನು ಮೈಗೂಡಿಸಿಕೊಳ್ಳುತ್ತ ಒಂದು ಸಮಷ್ಟಿಕಲೆಯ ನಿರ್ಮಾಣ ಉಂಟಾಯಿತು. ದಕ್ಷಿಣ ಭಾರತದಲ್ಲಿದ್ದ ಹಲವು ಬಗೆಯ ಗಾನ ಹಾಗೂ ನೃತ್ಯ ಸಂಪ್ರದಾಯಗಳಲ್ಲಿ ಯಕ್ಷಗಾನವು ವೈಶಿಷ್ಟ್ಯವನ್ನು ಸಾಧಿಸಿತು. ವೀರರಸ ಪ್ರಧಾನವಾದುದ್ದೆ ಹೆಚ್ಚು ಸೃಷ್ಟಿಗೊಳ್ಳುತ್ತಾ ಹೋಯಿತು. ಆದರಿಂದಲೇ "ಯಕ್ಷಗಾನ ಪ್ರಬಂಧವು ನೃತ್ಯಗೀತ ಪ್ರಧಾನವಾದದ್ದು. ಇಲ್ಲಿಯ ನಾಟ್ಯ ವೀರರಸ ಪ್ರಧಾನವಾದ ತಾಂಡವ ಜಾತಿಯ ನೃತ್ಯವಾಗಿದೆ."[10] ಆದರೆ ಇದು ಬೆಳೆದು ನಿಂತ ಯಕ್ಷಗಾನಕ್ಕೆ ಅನ್ವಯಿಸುತ್ತದೆ. ಮೂಲದಲ್ಲಿ ಅದು ದೈವಾರಾಧನೆಯ ಅಂಗವಾಗಿಯೇ ಸೃಷ್ಟಿಗೊಂಡಿರಬೇಕು. ಕ್ರಮೇಣ ಉಳಿದ ಅಂಶಗಳೆಲ್ಲಾ ಸೇರಿ ಒಂದು ಜೀವಂತ ಕಲೆಯಾಗಿ ನಿರ್ಮಾಣಗೊಂಡಿತು.

ಯಕ್ಷಗಾನ ವಿಕಾಸವು ಒಂದು ಕುತೂಹಲಕಾರಿ ಅಧ್ಯಯನವಾಗಿದೆ. ಇದೊಂದು ಚತುರ್ಮುಖ ಕಲೆ. ಸಂಗೀತ, ಸಾಹಿತ್ಯ, ಅಭಿನಯ, ಕುಣಿತ ಇವುಗಳಿಂದ ಇದಕ್ಕೊಂದು ಸಮಷ್ಟಿ ರೂಪ ಬಂದಿದೆ. ಬರೆದ ಸಾಹಿತ್ಯವೆಲ್ಲವೂ ಪದ್ಯರೂಪದಲ್ಲಿದ್ದು ಹಾಡಲು ಅಗತ್ಯವಾದ ರಾಗ ತಾಳಗಳಲ್ಲಿ ನಿಯೋಜಿತವಾಗಿದೆ. ರಾಗಗಳಂತೂ ಸುಮಾರು ನೂರಕ್ಕೆ ಮಿಕ್ಕಿದ್ದು, ಇಂದು ಉಳಿದು ಬಂದದ್ದು ಸುಮಾರು 60ರಷ್ಟಿದೆ. ಇವುಗಳೆಲ್ಲಾ ಹಿಂದೂಸ್ಥಾನಿ

ಮತ್ತು ಕರ್ನಾಟಕಕಿಗಿಂತ ಭಿನ್ನವಾಗಿದ್ದು ರಸದೃಷ್ಟಿಯಿಂದ ಕೂಡಿದೆ. ಇದನ್ನೇ ಕಾರಂತರು 'ಯಕ್ಷಗಾನ ಸಂಗೀತವು ನಮ್ಮ ಬದುಕಿನ ಯಾವೊಂದೂ ಭಾವವನ್ನು ಕಡೆಗಣಿಸಿಲ್ಲ...'[11] ಎಂದು ಶಕ್ತಿಯುತವಾದ ಇಂದಿನ ಗೀತ ರೂಪವನ್ನು ಮತ್ತು ಅದರ ಸರಳತೆಯನ್ನು ಹೊಗಳಿದ್ದಾರೆ. ವ್ಯಕ್ತಿ ಶೀಲಗಳ ಸಂಘರ್ಷಣೆಗೂ ಪ್ರಸಂಗ ಸಾಹಿತ್ಯದಲ್ಲಿ ರಾಗ ಪೂರ್ವಕವಾದ ವಾದ ವಿವಾದವಿದ್ದು ಅವರ ಪ್ರಯೋಗ ಶೀಲತೆಗೆ ಸಾಕ್ಷಿಯಾಗಿದೆ. ನೃತ್ಯವು ಯಕ್ಷಗಾನ ಕಲೆಯ ಅಭಿನ್ನ ಅಂಶ. ಹಾಡಿನಲ್ಲಿದ್ದ ಭಾವನೆಗಳನ್ನು ಹೊರಹೊಮ್ಮಿಸಲು ಸಾಧ್ಯವಾಗುವ ಈ ವಿಧಾನವು ಯಕ್ಷಗಾನದ ವಿಕಾಸದೊಂದಿಗೆ ವಿಕಾಸಗೊಳ್ಳುತ್ತಾ ಬಂದಿರಬೇಕು. ಕನ್ನಡ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ ನಾಗನೃತ್ಯ ಹೋಲಿಕೆಯನ್ನು ಇಲ್ಲಿ ಗುರುತಿಸಬಹುದು. ಕುಣಿತಕ್ಕೆ ಹೆಚ್ಚಿನ ಅವಕಾಶವನ್ನು ಕೊಟ್ಟಂತೆ ವಿವಿಧ ಕ್ರಿಯೆಗಳು ಮತ್ತು ಭಾವಗಳು ಹೊರಹೊಮ್ಮಲು ಸಹಾಯಕವಾಗಿದೆ. ಸುಖ-ದುಃಖ ನೋವು-ನಲಿವು ಮುಂತಾದವುಗಳು ಅಭಿನಯದಲ್ಲಿ ಮಾತ್ರವಲ್ಲ ಚಲನೆಯಲ್ಲಿ, ಧ್ವನಿಯಲ್ಲಿ, ಹೆಜ್ಜೆ ಇಡುವುದರಲ್ಲಿ ವ್ಯಕ್ತವಾಗುತ್ತವೆ.

ಯಕ್ಷಗಾನದಲ್ಲಿ ಪ್ರದರ್ಶನಕ್ಕೆ ಆಶ್ರಯಿಸುವ ಸಾಹಿತ್ಯ ಭಾಗವನ್ನು ಪ್ರಸಂಗಗಳೆಂದು ಕರೆಯುತ್ತಾರೆ. 'ಪ್ರಸಂಗ' ಎಂದರೆ ಮೂಲಕಥೆಯಿಂದ ಆಯ್ದುಕೊಂಡ ಒಂದು ಸನ್ನಿವೇಶ, ಒಂದು ಕಥಾಭಾಗ ಅಥವಾ ಹರಿಕಥೆಯ ಮಧ್ಯೆ ಹಾಡಿನೊಂದಿಗೆ ಹೇಳುವ ಉಪಕತೆ ಎಂಬ ಅರ್ಥಗಳಿವೆ.[12] ಬಯಲಾಟದಲ್ಲಿ ಉಪಯೋಗವಾಗುವ ಒಂದು ಕಥಾಭಾಗವನ್ನು ಹಾಡುಗಳ ಮೂಲಕ ಸೃಷ್ಟಿಸಿ ಹಾಡುಗಬ್ಬವಾಗಿ ಪ್ರಸಂಗ ಪ್ರಚಾರಕ್ಕೆ ಬಂತು. ಈ ಬಗೆಯ ಉದ್ದೇಶದಿಂದಲೇ ಕವಿಗಳು ಇದನ್ನು ರಚಿಸಿದರು. ಪ್ರಸಂಗ ಸಾಹಿತ್ಯ ಇಂದು ಪ್ರತ್ಯೇಕ ಸಾಹಿತ್ಯ ಪ್ರಕಾರವಾಗಿ ಕಾಣಿಸಿಕೊಂಡಿದೆ. ಕನ್ನಡದ ಪ್ರಸಂಗ ಸಾಹಿತ್ಯದಲ್ಲಿ ಎರಡು ಟಿಸಿಲುಗಳನ್ನು ಕಾಣಬಹುದು. ಕರಾವಳಿ ಹಾಗೂ ಮಲೆನಾಡಿನಲ್ಲಿ ಬಳಕೆಯಲ್ಲಿರುವ ಪ್ರಸಂಗಗಳು ಒಂದು ಬಗೆಯಾದರೆ ಕರ್ನಾಟಕದ ಉಳಿದೆಡೆ ಕಾಣುವ ಪ್ರಸಂಗಗಳು ಇದಕ್ಕಿಂತ ಭಿನ್ನವಾಗಿದ್ದು ಪ್ರತ್ಯೇಕ ಧಾರೆಯಾಗಿ ಕಾಣಿಸಿಕೊಳ್ಳುತ್ತವೆ. ವಿದ್ವತ್ ವಲಯದಲ್ಲಿ ಪಡುವಲಪಾಯ ಯಕ್ಷಗಾನ ಪ್ರಸಂಗಗಳೆಂದು ಕರೆಸಿಕೊಳ್ಳುವ ಈ ಪ್ರಸಂಗಗಳಲ್ಲಿ ಪದ್ಯ ಮಾತ್ರವಿರುತ್ತದೆ. ಮೂಡಲಪಾಯದ ಪ್ರಸಂಗಗಳಲ್ಲಿ ಪದ್ಯದೊಂದಿಗೆ ಗದ್ಯದಲ್ಲಿ ಅರ್ಥ ಇದ್ದು ಪಾತ್ರಧಾರಿ ಅದನ್ನೇ ಪ್ರದರ್ಶನದಲ್ಲಿ ಬಳಸುತ್ತಾನೆ. ಕಥಾಬೆಳವಣಿಗೆ ಹಾಗೂ ಛಂದೋ ವೈವಿಧ್ಯಗಳಲ್ಲೂ ಭಿನ್ನತೆಗಳನ್ನು ಕಾಣಬಹುದು.

ಪ್ರಸಂಗಸಾಹಿತ್ಯದಲ್ಲಿ ಅಕ್ಷರ ಗಣ, ಮಾತ್ರಾಗಣ, ಅಂಶಗಣಗಳ ಛಂದಸ್ಸಿನಿಂದ ಕೂಡಿದ ಹಾಡುಗಳು ಚೆನ್ನಾಗಿ ಮೈಗೂಡಿಸಿ ಕೊಂಡುಬಂದಿವೆ. ಮುಕ್ತತಾಳದ ಛಂದಸ್ಸುಗಳಾದ ವರ್ಣಗಣದ ವೃತ್ತಗಳು, ಮಾತ್ರಾಗಣದ ಕಂದಪದ್ಯಗಳು, ಷಟ್ಪದಿಗಳು ಅಲ್ಲಲ್ಲಿ ಬಂದಿರುತ್ತವೆ. ಯಕ್ಷಗಾನ ನಾಟ್ಯಕ್ಕೆ ಹೆಚ್ಚು ಒತ್ತುಕೊಡುವುದರಿಂದ ಮುಕ್ತ ತಾಳದ ಛಂದಸ್ಸಿಗೆ ಅವಕಾಶ ಕಡಿಮೆ. ವೈವಿಧ್ಯಮಯವಾದ ರಾಗತಾಳಗಳುಳ್ಳ ಹಾಡುಗಳೇ ಪ್ರಸಂಗ ಸಾಹಿತ್ಯದ ಪ್ರಧಾನ ಅಂಶ. ಅಧ್ಯಯನದ ಅನುಕೂಲಕ್ಕೊಸ್ಕರ ಪಡುಮಪಾಯದ ಪ್ರಸಂಗಗಳನ್ನು ಅದರಲ್ಲೂ ಈಚಿನ 50 ವರ್ಷಗಳಲ್ಲಿ ಬಳಕೆಯಲ್ಲಿರುವ ರಾಮಾಯಣ ಪ್ರಸಂಗಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಅಡಿಟಿಪ್ಪಣಿಗಳು :

1. ಯಕ್ಷಗಾನ ಶಿಕ್ಷಕ ಅಥವಾ ಸ್ವಯಂಬೋಧಿನಿ - ಎಂ. ನಾರಾಯಣ ಉಪ್ಪೂರ. ಪು.14 ಪ್ರ. ಮೂಕಾಂಬಿಕಾ ಕೃಪಾಪೋಷಿತ ಯಕ್ಷಗಾನ ಸಂಘ, ನಿಟ್ಟೂರು.
2. ಯಕ್ಷಗಾನ ಪಿಶ್ವದರ್ಶನ - ಭಾಗವತರು -ಎ. ಸದಾನಂದ ಹೆಬ್ಬಾರ. ಪುಟ 3 ಪ್ರ. ಕಲಾಮಯೂರಿ, ಬೆಂಗಳೂರು.
3. ಯಕ್ಷಗಾನ ಪಿವೇಚನೆ - ಚೊಕ್ಕಾಡಿ ಎಂ. ಸೀತಾರಾಮಯ್ಯ. ಪುಟ 14 ಪ್ರ. ಕುರಿಯ ವಿಠಲ ಶಾಸ್ತ್ರಿ, ಕರ್ರೋಪಾಡಿ.
4. ಯಕ್ಷಗಾನ - ಡಾ. ಶಿವರಾಮ ಕಾರಂತ : ಪುಟ 37
   ಪ್ರ.ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 1974
5. 'ಪಾರ್ತಿಸುಬ್ಬ' - ಮುಳಿಯ ತಿಮಪ್ಪಯ್ಯ ಪುಟ 29
   ಪ್ರ. ಬಾಳಿಗ ಅಂಡ್ ಸನ್ಸ್, ಮಂಗಳೂರು, 1945
6. "ಸಂಶೋಧನಾ ಪಂಚದಶಿ" - ಯಕ್ಷಗಾನ ಆಟದ ಕಾಲ ನಿರ್ಣಯ -
   - ಭೀಮರಾವ್ ಚಿಟಗುಪ್ಪಿ
7. ಸಂಶೋಧನಾ ಪಂಚದಶಿ - ಯಕ್ಷಗಾನ ಆಟದ ಕಾಲ ನಿರ್ಣಯ -
   - ಭೀಮರಾವ್ ಚಟಿಗುಪ್ಪಿ, ಪುಟ 213
8. ಯಕ್ಷಗಾನ ಸಾಹಿತ್ಯ - ಡಾ.ಕೆ.ಎಂ. ಕೃಷ್ಣರಾವ್, ಪುಟ 90
9. ಭಾರತಿ - ಮಾರ್ಚ್ 1960 ಶಿಷ್ಯ ರಾಮಕೃಷ್ಣ ಶಾಸ್ತ್ರೀಯವರ ಲೇಖನ.
10. ಕನ್ನಡ ನಾಟಕಗಳು - ತ. ಸು.ಶ್ಯಾಮರಾವ್ - ಪುಟ 30
    ಪ್ರ. ಗೀತಾ ಬುಕ್ ಹೌಸ್, ಮೈಸುರು.
11. 'ಯಕ್ಷಗಾನ' - ಡಾ. ಶಿವರಾಮ ಕಾರಂತ ಪುಟ 66.
12. ದಕ್ಷಿಣ ಕರ್ನಾಟಕದ ಜನಪದರಂಗಭೂಮಿ - ಡಾ॥ ಡಿ.ಕೆ.ರಾಜೇಂದ್ರ ಪುಟ 72.

* * * * *

ಯಕ್ಷಗಾನ ಪ್ರಸಂಗಗಳ ವಸ್ತುವೈವಿಧ್ಯ

ಅಪಾರವಾಗಿ ಸೃಷ್ಟಿಕೊಂಡ ಯಕ್ಷಗಾನಗಳು ಸುಮಾರು ಸಾವಿರಕ್ಕೂ ಹೆಚ್ಚಿವೆ ಎಂದು ಒಂದು ಅಂದಾಜು. ಇವು ಹೆಚ್ಚಾಗಿ ಪೌರಾಣಿಕ ಪ್ರಸಂಗಗಳಾಗಿವೆ. ರಾಮಾಯಣವೋ, ಮಹಾಭಾರತವೋ, ಭಾಗವತವೋ ಮುಂತಾದ ಹಿರಿಯ ಕೃತಿಗಳನ್ನು ಇವರು ಆಕರವಾಗಿಟ್ಟು ಕೊಂಡಿದ್ದಾರೆ. ಇಂತಹವುಗಳ ವಸ್ತುವನ್ನೇ ಆಧಾರವಾಗಿ ಇಟ್ಟುಕೊಂಡು ವಿಭಜಿಸಿದರೆ ಏಳು ಧಾರೆಗಳನ್ನು ಗುರುತಿಸಬಹುದು. ಸುಮಾರು 500 ವರ್ಷಗಳಲ್ಲಿ ಇನ್ನೂರೈವತ್ತಕ್ಕೂ ಮಿಗಿಲಾದ ಕವಿಗಳು ಈ ಅಗಾಧ ಕಾಣಿಕೆಗೆ ಕಾರಣರಾಗಿದ್ದಾರೆ. ವಸ್ತುವನ್ನು ಆಯ್ದುಕೊಳ್ಳುವಲ್ಲಿ ಮೂಲಕ್ಕೆ ಋಣಿಯಾಗಿದ್ದರೂ ಸ್ವಂತಿಕೆಯನ್ನು ಪ್ರದರ್ಶಿಸದೇ ಬಿಟ್ಟಿಲ್ಲ. ಆ ದೃಷ್ಟಿಯಿಂದ ವಸ್ತುವಿನ ಆಧಾರದ ಮೇಲೆ ಈ ಕೆಳಕಂಡಂತೆ ಅಧ್ಯಯನದ ಅನುಕೂಲಕ್ಕೋಸ್ಕರ ವಿಭಜಿಸಿಕೊಳ್ಳಬಹುದು.

(ಅ) ರಾಮಾಯಣ ಪ್ರಸಂಗಗಳು
(ಆ) ಮಹಾಭಾರತ ಪ್ರಸಂಗಗಳು
(ಇ) ಭಾಗವತ ಕಥಾವಸ್ತುವುಳ್ಳ ಪ್ರಸಂಗಗಳು
(ಈ) ಪುರಾಣದ ಪ್ರಸಂಗಗಳು
(ಉ) ಐತಿಹಾಸಿಕ ಪ್ರಸಂಗಗಳು ಹಾಗೂ ಕ್ಷೇತ್ರ ಮಹಾತ್ಮೆಗಳು
(ಊ) ಕಾಲ್ಪನಿಕ ಪ್ರಸಂಗಗಳು ಹಾಗೂ ಕನ್ನಡ ಸಾಹಿತ್ಯ ಕಥಾವಸ್ತುವುಳ್ಳ ಪ್ರಸಂಗಗಳು
(ಎ) ಸಾಮಾಜಿಕ ಪ್ರಸಂಗಗಳು

ಇದು ಸ್ಥೂಲ ವಿಭಾಗ ಕ್ರಮವಾದರೂ ಬೇರೆಲ್ಲಕ್ಕಿಂತ ಹೆಚ್ಚು ಯೋಗ್ಯ ಹಾಗೂ ವೈಜ್ಞಾನಿಕವಾಗಬಲ್ಲದು.

ರಾಮಾಯಣ ಪ್ರಸಂಗಗಳು :

ನಮಗೆ ದೊರೆಯುವ ಸುಮಾರು 68 ರಾಮಾಯಣ ಪ್ರಸಂಗಗಳಲ್ಲಿ ಹೆಚ್ಚಿನವುಗಳು ಕುಮಾರ ವಾಲ್ಮೀಕಿ ಅನುಸರಿಸಿದಂತಹ ವಾಲ್ಮೀಕಿಯ ಶ್ರೀಮದ್ ರಾಮಾಯಣದ ಕಥಾವಸ್ತುವನ್ನು ಉಳ್ಳಂತಹವುಗಳಾಗಿವೆ. ಇಲ್ಲಿ ಪ್ರಸಂಗಗಳು 68 ಇದ್ದರೂ, ಕಥಾನಕ ಕೇವಲ 21 ಮಾತ್ರ. ಅಂದರೆ ಒಂದು ಘಟನೆಯೇ 3–4 ಪ್ರಸಂಗಗಳ ವಸ್ತುವಾಗಬಹುದು. ಇಲ್ಲವೇ ಎರಡು ಪ್ರಸಂಗಗಳು ಸೇರಿ ಇನ್ನೊಂದು ಹೊಸ ಪ್ರಸಂಗವಾಗಬಹುದು.

ಇವುಗಳಲ್ಲಿ ಇಂದು ಪ್ರಚಲಿತವಿರುವ ಪ್ರಸಂಗಗಳೆಂದರೆ ಸುಮಾರು 30. ಉಳಿದವುಗಳು ಹೆಸರಿಗೆ ದೊರೆಯುವ, ಇಂದು ಪ್ರಯೋಗದಲ್ಲಿಲ್ಲದ ಪ್ರಸಂಗಗಳಾಗಿವೆ.[1] ಅವುಗಳ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ. ಇಲ್ಲಿ ಅಧ್ಯಯನಕ್ಕೆ ಒಳಗಾದ ಪ್ರಸಂಗಗಳನ್ನು ಹೀಗೆ ಪಟ್ಟಿ ಮಾಡಬಹುದು.

1. ಪುತ್ರಕಾಮೇಷ್ಠಿ ಮತ್ತು ಸೀತಾ ಕಲ್ಯಾಣ – ಪಾರ್ತಿಸುಬ್ಬ
2. ಪುತ್ರಕಾಮೇಷ್ಟಿ – ಗೆರೆಸೊಪ್ಪೆ ಶಾಂತಪ್ಪಯ್ಯ
3. ಕೌಶಿಕ ಚರಿತ್ರೆ – ಹಲಸಿನಳ್ಳಿ ನರಸಿಂಹಶಾಸ್ತ್ರಿ
4. ಪಾದುಕಾಪಟ್ಟಾಭಿಷೇಕ – ಕಡುಂದಲೆ ರಾಮರಾವ್
5. ಪಂಚವಟಿ ಪಟ್ಟಾಭಿಷೇಕ – ಪಾರ್ತಿಸುಬ್ಬ
6. ಪಂಚವಟಿ ವಾಲಿ ಸುಗ್ರೀವ ಕಾಳಗ – ಪಾರ್ತಿಸುಬ್ಬ
7. ಯಕ್ಷಗಾನ ವಾಲಿಸುಗ್ರೀವ – ವೆಂಕಪ್ಪ ಶೆಟ್ಟಿ
8. ಚೂಡಾಮಣಿ ಅಥವಾ ಉಮಗುರಸಂಧಿ – ಪಾರ್ತಿಸುಬ್ಬ
9. ಸೇತುಬಂಧನ – ಪಾರ್ತಿಸುಬ್ಬ
10. ಅಂಗದ ಸಂಧಾನ – ಪಾರ್ತಿಸುಬ್ಬ
11. ಇಂದ್ರಜಿತು ಕಾಳಗ – ಹಟ್ಟಿಯಂಗಡಿ ರಾಮಭಟ್ಟ
12. ಅತಿಕಾಯ ಕಾಳಗ – ಹಟ್ಟಿಯಂಗಡಿ ರಾಮಭಟ್ಟ
13. ಮೈರಾವಣ ಕಾಳಗ – ವೆಂಕಟ ಕವಿ
14. ಕುಂಭಕರ್ಣಾದಿ ಕಾಳಗ – ಪಾರ್ತಿಸುಬ್ಬ
15. ಕಾಲನೇಮಿ ಕಾಳಗ – ಶ್ರೀಪತಿ
16. ರಾಮ ಪಟ್ಟಾಭಿಷೇಕ ಮತ್ತು ರಾವಣ ಸಂಹಾರ – ಪುತ್ತಿಗೆ ರಾಮಕೃಷ್ಣ ಭಾಗವತ
17. ರಾವಣೋದ್ಭವ – ಸುಬ್ಬಯ್ಯ
18. ಕುಶಲವರ ಕಾಳಗ – ಪಾರ್ತಿಸುಬ್ಬ
19. ಲವಕುಶರ ಕಾಳಗ – ಹಟ್ಟಿಯಂಗಡಿ ರಾಮಭಟ್ಟ
20. ಪ್ರಚಂಡ ಲಂಕೇಶ್ವರ – ಮೂರೂರು ದೇವರ ಹೆಗ್ಗಡೆ
21. ರಾವಣೇಶ್ವರ ಕಾಳಗ – ಕಾಸರಗೋಡು ಸುಬ್ಬರಾಯ
22. ರಾವಣಾಸುರ ಕಾಳಗ – ಕೊರ್ಡೆಲ ವೆಂಕಟರಾವ್
23. ಶ್ರೀರಾಮ ನಿಜಪಟ್ಟಾಬಿಷೇಕ – ಅಲೆಟ್ಟಿ ರಾಮಣ್ಣ ಶೆಗ್ರಿತ್ತಾಯ್
24. ಮಕರಾಕ್ಷ ಕಾಳಗ – ಅಲೆಟ್ಟಿ ರಾಮಣ್ಣ ಶೆಗ್ರಿತ್ತಾಯ್

25. ಮಾರೀಮುಖನ ಕಾಳಗ – ಸೋಮೇಶ್ವರನ ಭಕ್ತ

26. ಸಂಪೂರ್ಣ ರಾಮಾಯಣ – ಜಾನಕೈ ತಿಮ್ಮಪ್ಪ ಹೆಗಡೆ

ಈ ಮುಖ್ಯ ಪ್ರಸಂಗಗಳಲ್ಲಿ ರಾಮಾಯಣದ ಒಟ್ಟು ಕಥೆ ಬಂದಿದೆ. ಇವುಗಳ ವಸ್ತು ವಿವೇಚನೆ, ಸಾಹಿತ್ಯಕ ಹಾಗೂ ತಾತ್ವಿಕ ಮೌಲ್ಯಗಳು ರಸಪ್ರತಿಪಾದನೆ ಸಮಕಾಲೀನ ಅಂಶಗಳು, ಕನ್ನಡ ಸಾಹಿತ್ಯದ ಪ್ರಭಾವ ಮತ್ತು ಕವಿಗಳ ದೇಶ, ಕಾಲ, ವಿಚಾರವನ್ನು ಕುರಿತು ಅಭ್ಯಾಸ ಮಾಡಲಾಗಿದೆ. ಎಲ್ಲ ಕೃತಿಗಳು ದೊರೆಯದಿರುವುದರಿಂದ 68 ಪ್ರಸಂಗಗಳನ್ನೂ ಅವಲೋಕಿಸುವುದು ಅಸಾಧ್ಯವಾಗಿದ್ದು ಪ್ರಚಲಿತವಿರುವ ಪ್ರಸಂಗಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. ಈ ಮೇಲಿನವುಗಳು ಯಕ್ಷಗಾನ ಪ್ರಪಂಚದಲ್ಲಿ ತಮ್ಮದೇ ಆದ ಸ್ಥಾನಗಳಿಸಿದ್ದು ಯಕ್ಷಗಾನ ಪ್ರೇಮಿಗಳ ಗಣನೆಗೆ ಬಂದಂತವುಗಳು.

ಮಹಾಭಾರತ ಪ್ರಸಂಗಗಳು :

ಇವುಗಳು ಸಂಖ್ಯೆಯಲ್ಲಿ ರಾಮಾಯಣಕ್ಕಿಂತ ವಿಪುಲವಾಗಿವೆ. ಇದಕ್ಕೆ ಕಾರಣ ಭಾರತದ ಕಥಾವಸ್ತುವೇ ಆಗಿದೆ. ಆದಿಕಾವ್ಯವಾಗಿ ಶ್ರೀಮದ್ರಾಮಾಯಣವು ಗೌರವದ ಸ್ಥಾನಗಳಿಸಿದ್ದರೂ ಭಾರತೀಯರೆಲ್ಲರ ಮನಸ್ಸು ಮತ್ತು ಹೃದಯವನ್ನು ಗೆದ್ದುಕೊಂಡದ್ದು ಭಾರತದ ಕಥೆಯೇ. ಈ ಅಂಶ ಪ್ರಸಂಗಗಳಲ್ಲೂ ಸ್ಪಷ್ಟವಾಗಿದೆ. ಸಾಹಿತ್ಯಕವಾಗಿ ರಾಮಾಯಣ ಪ್ರಸಂಗಗಳಲ್ಲಿ ಕೆಲವು ಉತ್ಕೃಷ್ಟವಾಗಿದ್ದರೂ ಪ್ರಯೋಗದಲ್ಲಿ ಜಯಭೇರಿ ಬಾರಸಿದಂತವು ಭಾರತದ ಭೀಷ್ಮ ವಿಜಯ, ಕರ್ಣಾರ್ಜುನ ಕಾಳಗ ಮುಂತಾದವುಗಳು. ಇವುಗಳಿಗೆಲ್ಲಾ ಹಿನ್ನೆಲೆಯಾಗಿ ಮಹಾಕವಿ ಕುಮಾರವ್ಯಾಸ ಹಾಗೂ ಜನಪ್ರಿಯ ಕವಿ ಲಕ್ಷ್ಮೀಶ ನಿಂತಿರುವುದನ್ನು ಮರೆಯಬಾರದು. ಆ ಕವಿಗಳ ಎಷ್ಟೋ ವೀರರಸಪ್ರಚುರ ಪದ್ಯಗಳು ಭಾಮಿನಿ ಹಾಗೂ ವಾರ್ಧಕದಲ್ಲಿ ಹಾಗೇ ಭಟ್ಟಿ ಇಳಿದ ಪ್ರಸಂಗಗಳುಂಟು. ಸುಮಾರು 90ಕ್ಕೂ ಮಿಕ್ಕಿ ಇರುವ ಪ್ರಸಂಗಗಳಲ್ಲಿ ಕೆಲವನ್ನು ಹೆಸರಿಸಬಹುದು – ಭೀಷ್ಮ ವಿಜಯ, ಐರಾವತ, ಸುಭದ್ರಾ ಕಲ್ಯಾಣ, ಚಿತ್ರಸೇನ ಕಾಳಗ, ಅಭಿಮನ್ಯು ಕಾಳಗ, ಕರ್ಣಾರ್ಜುನ ಕಾಳಗ, ದೇವಯಾನಿ ಕಲ್ಯಾಣ, ಸುಧನ್ವ ಕಾಳಗ, ಕುಂತೀ ಸ್ವಯಂವರ, ರತಿಕಲ್ಯಾಣ, ಶಂಭರಾಸುರ ಕಾಳಗ, ಅನಂತ ವ್ರತ ಮಹಾತ್ಮೆ, ವಿರಾಟಪರ್ವ, ಬಭ್ರುವಾಹನ ಕಾಳಗ, ಕೃಷ್ಣಾರ್ಜುನರ ಕಾಳಗ ಇತ್ಯಾದಿ.

ಭಾಗವತದ ಕಥಾವಸ್ತುವುಳ್ಳ ಪ್ರಸಂಗಗಳು :

ಶ್ರೀ ಕೃಷ್ಣ ಮಹಿಮೆಯನ್ನು ಸಾರುವುದು ವೈಷ್ಣವಧರ್ಮ ಪ್ರಚುರ ಭಕ್ತಿಯುಗದ ಅಂದರೆ 16–17–18ನೇ ಶತಮಾನಗಳ ಹೆಚ್ಚಿನ ಸಾಹಿತ್ಯ ಕೃತಿಗಳ ಮುಖ್ಯ ಉದ್ದೇಶವಾಗಿತ್ತು. ವಿಷ್ಣುಪಾರಮ್ಯವೇ ಆಗಿನ ಭಕ್ತಿ ಸಾಹಿತ್ಯ ಕೃತಿಗಳ ಗುರಿಯಾಗಿತ್ತು. ಭಾಗವತವಂತೂ ವಿಷ್ಣುವಿನ ಮಹಿಮೆಯನ್ನು ಸ್ಥಾಪಿಸಲು ಹೊರಟ ಕೃತಿ. ಇದೇ ಆ ಕಾಲಕ್ಕೆ ಅನೇಕ ಕೃತಿಗಳಿಗೆ ಸುಲಭವಾಗಿ ಆಧಾರವಾಯಿತು. ಪ್ರಸಂಗ ಸಾಹಿತ್ಯದಲ್ಲಿ ಕೂಡಾ ಭಾಗವತದ ಅನೇಕ ಕಥೆಗಳು ಸುಂದರವಾಗಿ ಮೂಡಿ ಬಂದಿವೆ. ಯಕ್ಷಗಾನ ಪ್ರಸಂಗಗಳ ಹಿನ್ನೆಲೆಯಲ್ಲಿ ಪೂರಕ ಅಂಶವಾಗಿದ್ದ ದಾಸ ಸಾಹಿತ್ಯ ಪರಂಪರೆ ಮತ್ತು ಭಾಗವತ ಧರ್ಮ ಪ್ರಚಾರ

ಕಾರ್ಯವಿದ್ದುದನ್ನು ಮರೆಯುವಂತಿಲ್ಲ. ಈ ಬಗೆಯ ಭಾಗವತ ಪ್ರಸಂಗಗಳಲ್ಲಿ ಮುಖ್ಯವಾದವುಗಳೆಂದರೆ ಪಾರಿಜಾತ, ಸಮುದ್ರ ಮಥನ, ರುಕ್ಮಿಣಿ ಸ್ವಯಂವರ, ಬಿಲ್ಲ ಹಬ್ಬ, ಬಾಣಾಸುರ ಕಾಳಗ, ಪ್ರಹ್ಲಾದ ಚರಿತ್ರೆ, ಯಾದವಾಭ್ಯುದಯ, ಶ್ರೀಕೃಷ್ಣ ವಿವಾಹ, ರುಗ್ಮವತಿ ಕಲ್ಯಾಣ.

ಪೌರಾಣಿಕ ಪ್ರಸಂಗಗಳು :

ಪುರಾಣದಲ್ಲಿ ಉಕ್ತವಾದ ಘಟನೆಯನ್ನು ಆಧರಿಸಿ ಹಲವು ಕವಿಗಳು ಯಕ್ಷಗಾನ ಪ್ರಸಂಗ ನಿರ್ಮಾಣ ಮಾಡಿದ್ದಾರೆ. ಹಲವು ಪುರಾಣಗಳೇ ಇಂತಹ ಪ್ರಸಂಗಗಳಿಗೆ ಆಕರವಾಗಿದ್ದು ಅವುಗಳಲ್ಲಿನ ಕಥೆಯನ್ನು ಮನಮುಟ್ಟುವಂತೆ ನಿರೂಪಿಸಲಾಗಿದೆ. ಇವುಗಳೆಂದರೆ – ಗಿರಿಜಾ ಕಲ್ಯಾಣ, ರುಕ್ಮಾಂಗದ ಚರಿತ್ರೆ, ಮಾರ್ಕಂಡೇಯ ಚರಿತ್ರೆ, ಶಿವಪಂಚಾಕ್ಷರಿ, ದೇವಿ ಮಹಾತ್ಮೆ, ಜಲಂಧರನ ಕಾಳಗ, ಕುಮುದ್ವತೀ ಕಲ್ಯಾಣ ಇತ್ಯಾದಿಗಳು.

ಐತಿಹಾಸಿಕ ಪ್ರಸಂಗಗಳು ಹಾಗೂ ಕ್ಷೇತ್ರ ಮಹಾತ್ಮೆಗಳು :

ಕನ್ನಡ ಸಾಹಿತ್ಯದಂತೆ ಯಕ್ಷಗಾನ ಸಾಹಿತ್ಯದಲ್ಲೂ ಐತಿಹಾಸಿಕ ವಸ್ತು ಉಳ್ಳ ಬರವಣಿಗೆಗಳು ಬಹು ವಿರಳ. ಕೆಲವು ವೀರರ ವೀರಗಾಥೆಗಳು ಅಲ್ಲೊಂದು ಇಲ್ಲೊಂದು ಬೆಳಕು ಕಂಡಿವೆ. ಇವುಗಳ ಜೊತೆಯಲ್ಲೇ ಕೆಲವು ಪುಣ್ಯಕ್ಷೇತ್ರಗಳ ಮಹತ್ವವನ್ನು ತಿಳಿಸುವ ಪ್ರಸಂಗಗಳನ್ನು ಸೇರಿಸಬಹುದು. ಪ್ರಯೋಗದಲ್ಲಂತೂ ಈ ಬಗೆಯ ಪ್ರಸಂಗಗಳು ಯಶಸ್ಸನ್ನು ಪಡೆದಿವೆ. ಐತಿಹಾಸಿಕ ಪ್ರಸಂಗಗಳಲ್ಲಿ ಕರಿಭಂಟನ ಕಾಳಗ, ಕುಮಾರ ರಾಮನ ಚರಿತ್ರೆ, ರಾಣಾ ರಾಜಾಸಿಂಹ ಮುಂತಾದವುಗಳು ಮುಖ್ಯವಾದರೆ ಕ್ಷೇತ್ರ ಮಹಾತ್ಮೆಯಲ್ಲಿ ಬಪ್ಪನಾಡು ಕ್ಷೇತ್ರಮಹಾತ್ಮೆ, ಧರ್ಮಸ್ಥಳ ಮಹಾತ್ಮೆ, ಗುರು ವಾಯೂರು ಮಹಾತ್ಮೆ, ಆನೆಗುಡ್ಡ ಶ್ರೀಗಣೇಶ ಮಹಾತ್ಮೆ, ಭೂಕೈಲಾಸ ಮುಂತಾದವುಗಳು ಹೆಸರನ್ನು ಪಡೆದಿವೆ.

ಕಾಲ್ಪನಿಕ ಪ್ರಸಂಗಗಳು ಹಾಗೂ ಕನ್ನಡ ಸಾಹಿತ್ಯದ ಕಥಾವಸ್ತು ಉಳ್ಳ ಪ್ರಸಂಗಗಳು :

ಯಕ್ಷಗಾನ ಸಾಹಿತ್ಯ ಸೃಷ್ಟಿಗೊಂಡಂತೆ ಕಲ್ಪನೆಯ ಅಂಶಗಳು ಸೇರಿಸಲು ಕವಿಗಳು ಪ್ರಯತ್ನಿಸಿದರು. ಇದು ಹೆಚ್ಚುತ್ತಾ ಬಂದು ಸಂಪೂರ್ಣ ಕಲ್ಪಿತವಾದ ಪ್ರಸಂಗಗಳೇ ರಚನೆಗೊಳ್ಳಲು ಮೊದಲಾದವು. ಇದು ಅತಿ ಯಾಗುತ್ತಿರುವುದು ಇತ್ತೀಚಿನ ಹತ್ತು ಹದಿನೈದು ವರ್ಷಗಳಲ್ಲಿ. ಇವುಗಳಲ್ಲಿ ಕೆಲವಂತೂ ಸಾಹಿತ್ಯಕ ಅಂಶಕ್ಕೆ ಉತ್ತಮ ರಾಗ ವೈವಿಧ್ಯಕ್ಕೆ, ಪ್ರೌಢ ಕಥಾ ಸಂವಿಧಾನಕ್ಕೆ ಎರವಾಗಿವೆ. ಜನರಿಗೆ ಬೇಕಾದ ರಂಜನೆ, ಸಿನಿಮೀಯಶೈಲಿ, ಕುತೂಹಲಭರಿತ ಘಟನೆಗಳು ಮಾತ್ರ ಇವುಗಳ ಜೀವಾಳವಾಗಿವೆ. ಕಾಲ್ಪನಿಕ ಪ್ರಸಂಗಗಳಲ್ಲಿ ಜಯಭೇರಿ ಹೊಡೆದವುಗಳೆಂದರೆ ಗುಣ ಸುಂದರಿ, ನಾಗಶ್ರೀ, ರೂಪಶ್ರೀ, ದಳವಾಯಿ ದುಗ್ಗಣ್ಣ ಇತ್ಯಾದಿ. ಕನ್ನಡ ಸಾಹಿತ್ಯವನ್ನು ಓದಿದ ಕೆಲವು ಈಚಿನವರು ಅಲ್ಲಿನ ಉತ್ತಮ ಸಾರವತ್ತಾದ ಘಟನೆಯನ್ನು ಆಯ್ದು ಯಕ್ಷಗಾನಗಳ ಮೂಲಕ ನವೀನ ಸೃಷ್ಟಿಯನ್ನು ಮಾಡಿದ್ದಾರೆ. ಸಾಹಿತ್ಯಕ ವಸ್ತುವುಳ್ಳ ಪ್ರಸಂಗಗಳಲ್ಲಿ ಉತ್ತಮವಾದುವೆಂದರೆ ಯಶೋಧರ ಚರಿತ್ರೆ, ಸಾಹಸ ಭೀಮ ವಿಜಯ, ಭರತೇಶ ದಿಗ್ವಿಜಯ, ದುರ್ಯೋಧನ ವಧೆ ಇತ್ಯಾದಿ.

ಮುಳಿಯ ಕೇಶವಯ್ಯನವರಿಂದ ರಚಿಸಲ್ಪಟ್ಟ ಯಕ್ಷಗಾನ ಮಹಾಜೇತನ (ಕ್ರಿಸ್ತ ಮಹಾತ್ಮೆ) ಎಂಬ ಯಕ್ಷಗಾನ ಕೃತಿಯು ಇಂಗ್ಲೀಷಿಗೆ ಭಾಷಾಂತರಗೊಂಡ ಮೊದಲ ಯಕ್ಷಗಾನ ಪ್ರಸಂಗವಾಗಿದೆ. ಇದೊಂದು ಕುತೂಹಲದ ಸಂಗತಿ

ಸಾಮಾಜಿಕ ಪ್ರಸಂಗಗಳು :

ಇಂದಿನ ಕಾಲದಲ್ಲಿ ನಡೆದ, ನಡೆಯುತ್ತಿರುವ ಘಟನೆಗಳಿಗೆ ಯಕ್ಷಗಾನ ಕವಿಗಳು ಸ್ಪಂದಿಸಿದ್ದಾರೆ. ಇದರ ಫಲವಾಗಿ ಹಲವಾರು ಹೊಸ ಬಗೆಯ ಪ್ರಸಂಗಗಳು ಬಂದಿವೆ. ವಿದ್ವತ್ ವಲಯದಲ್ಲಿ ಇವುಗಳ ಬಗ್ಗೆ ಅಪಾರ ಆಕ್ಷೇಪಣೆ ಇದ್ದರೂ ಇವು ಒಂದು ಸಾಮಾಜಿಕ ಹಾಗೂ ಸಾಂಸ್ಕೃತಿಕ ದಾಖಲೆ ಎನ್ನುವುದರಿಂದಾಗಿ ಒಂದೇ ಮಾನದಂಡದಿಂದ ಅಳಿಯದೇ ಅಭ್ಯಸಿಸಬೇಕಾಗಿದೆ. ಇವುಗಳಲ್ಲೆಲ್ಲಾ ಮುಖ್ಯವಾದವೆಂದರೆ, ಹೈದರಾಬಾದು ವಿಜಯ, ಕಾಶ್ಮೀರ ಕಾಳಗ, ಜಪಾನೀ ಕೃಷಿ ವಿಜಯ, ರಾಷ್ಟ್ರ ವಿಜಯ ಇತ್ಯಾದಿ.

ಈ ಬಗೆಯಾಗಿ ವೈವಿಧ್ಯಮಯ ವಾದ ವಸ್ತುವನ್ನು ಉಳ್ಳ ಯಕ್ಷಗಾನವು ಅಭ್ಯಾಸಕ್ಕೆ ಕಾದು ನಿಂತ ವಲಯವಾಗಿದೆ.

ಅಡಿಟಿಪ್ಪಣಿಗಳು :

1. ಇದೇ ಪ್ರಬಂಧದ ಅನುಬಂಧ-1 ನೋಡಬಹುದು.

* * * * *

ಭಾಗ – 2

ರಾಮಾಯಣ ಪ್ರಸಂಗಗಳು

ವಸ್ತು ವಿವೇಚನೆ :

"ಯಾವತ್ ಸ್ಥಾವಂತಿ ಗಿರಯಃ ಸರಿತಶ್ಚ ಮಹೀತಲೇ
ತಾವದ್ರಾಮಾಯಣ ಕಥಾ ಲೋಕೇಷು ಪ್ರಚರಿಷ್ಯತಿ"

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ರಾಮಾಯಣ ತನ್ನದೇ ಆದ ಅದ್ವಿತೀಯ ಸ್ಥಾನವನ್ನು ಹೊಂದಿದೆ. ಈ ಮಣ್ಣಿನ ಸಂಸ್ಕೃತಿಯೊಂದಿಗೆ ಮಿಳಿತವಾದ ರಾಮ ಕಥೆ ಪಡೆದುಕೊಂಡ ಹರಹು ಬೆರಗುಗೊಳಿಸುವಂಥದ್ದು. ಮೊದಲಿಗೆ ಕಾವ್ಯವಾಗಿದ್ದ ಇದು ಮುಂದೆ ಧರ್ಮಬೋಧೆಯ ಗ್ರಂಥವಾಗಿದ್ದಿರಬೇಕು. ಅದನ್ನೇ ಮಾಸ್ತಿಯವರು "ರಾಮಾಯಣ ಮೂಲತಃ ಕಾವ್ಯ ಅದಕ್ಕೆ ಅದರದೇ ಆದ ಧರ್ಮವಿದೆ. ಮೊದಲಿಗೆ ಪ್ರಚಾರವಾದುದು ಕಾವ್ಯವಾಗಿಯೇ ಹೊರತು ಧರ್ಮ ಗ್ರಂಥವಾಗಿ ಅಲ್ಲ. ಇತಿಹಾಸದ ಪ್ರಸಾರದಲ್ಲಿ ಧರ್ಮ ಅರಗಿನ ಮನೆ. ಕಾವ್ಯವೊಂದೇ ಅದನ್ನು ಉಳಿಸುವ ಸಾಧನ...[1] ಎಂದಿದ್ದಾರೆ. ನಡತೆಯಿಂದ ದೇವರಾದ ಮನುಷ್ಯನನ್ನು ಚಿತ್ರಿಸುವುದು ಕವಿ ಕುಲಗುರುವಾದ ವಾಲ್ಮೀಕಿಯ ಉದ್ದೇಶವಾಗಿತ್ತು. ಅದು ಶ್ರೀಮದ್ರಾಮಾಯಣದಲ್ಲಿ ಸಫಲವಾಗಿದೆ.

ವೈದಿಕ ಸಾಹಿತ್ಯದಲ್ಲಿ ರಾಮಾಯಣ ಕಥಾವಸ್ತು ದೊರಕದಿದ್ದರೂ ಕೆಲವು ಹೆಸರುಗಳು ಬರುತ್ತವೆ. ಹೆಚ್. ಯಾಕೋಬಿಯವರು "ರಾಮಾಯಣವು ವೇದದಿಂದಲೇ ಕಥಾವಸ್ತುವನ್ನು ಆಯ್ದುಕೊಂಡಿದೆ" ಎಂದು ತಮ್ಮ "Thus Ramayana"ದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಈ.ಡಬ್ಲ್ಯು. ಹಾಪ್‌ಕಿನ್ಸ್‌ರ ಅಭಿಪ್ರಾಯ ಇದಕ್ಕೆ ತೀರ ಭಿನ್ನವಾಗಿದ್ದು "ಮಹಾಭಾರತದ ರಾಮೋಪಾಖ್ಯಾನವು ವಾಲ್ಮೀಕಿ ರಾಮಾಯಣಕ್ಕೆ ಮೂಲಕ ಆಕರವೆಂದು"[2] ಹೇಳುತ್ತಾರೆ.

ರೆ.ಫಾ.ಕಾಮಿಲ್ ಬುಲ್ಕೆಯವರು ತಮ್ಮ 'ರಾಮಕಥಾ'ದಲ್ಲಿ ಮಂಡಿಸಿರುವ ಅಭಿಪ್ರಾಯಗಳು ಹೆಚ್ಚು ಆದರಣೀಯವಾಗಿವೆ.

ಮೊದಲಿಗೆ ರಾಮಕಥೆಯು ಸಂಕ್ಷಿಪ್ತವಾಗಿದ್ದು ಜಾನಪದ ರೂಪದಲ್ಲಿದ್ದಿರಬೇಕು. ಆದಿಕವಿ ವಾಲ್ಮೀಕಿಯ ಕಾವ್ಯ ಪ್ರತಿಭೆಯಿಂದ ಅದು ಮಹಾ ಕಾವ್ಯವಾಗಿ ರೂಪಗೊಂಡಿತು. ರಾಮಾಯಣ ಕಥೆ ವಿಕಾಸಗೊಂಡದ್ದರಲ್ಲಿ ಹಲವು ಹಂತಗಳನ್ನು ಗುರುತಿಸಲಾಗಿದೆ.

ರೆ.ಫಾ.ಕಾಮಿಲ್ ಬುಲ್ಕೆಯವರ ಅಭಿಮತದಂತೆ ಉತ್ತರಕಾಂಡ ಮತ್ತು ಬಾಲಕಾಂಡವು ಮುಂದಿನ ಕವಿಗಳಿಂದ ರಚಿತಗೊಂಡು ಇದರೊಂದಿಗೆ ಸೇರ್ಪಡೆಗೊಂಡಿತು.

ದೇಶ ಭಾಷೆಗಳಲ್ಲಿ ನಾನಾ ರೂಪದಿಂದ ಬೆಳೆದು ಬಂದ ರಾಮಕಥೆ ಹಲವು ಅಚ್ಚರಿಯಿಂದ ಕೂಡಿಕೊಂಡಿದೆ. ಕನ್ನಡಿಗರಿಗಂತೂ ರಾಮಾಯಣ ಬಹು ಪ್ರೀತಿಯ ಅಷ್ಟೇ ಗೌರವದ ಗ್ರಂಥ. ಸೀತಾರಾಮ ಸ್ಪರ್ಶದಿಂದ ಪವಿತ್ರವಾದ ಪಂಪಾ ಸರೋವರವು, ಸುಗ್ರೀವಾಂಜನೇಯರ ಸ್ವಸ್ಥಳವಾದ ಕಿಷ್ಕಿಂದೆಯು ಕರ್ನಾಟಕದ ಕ್ಷೇತ್ರ ಸಂಪತ್ತು.[3] ಇಲ್ಲಿ ಹನುಮಂತನ ಗುಡಿ ಇಲ್ಲದ ಗ್ರಾಮಗಳಿಲ್ಲ. ಶ್ರೀರಾಮ ದೇವಾಲಯಗಳಂತೂ ಅಸಂಖ್ಯಾತ. ಗಾದೆಗಳಲ್ಲಿ ನುಡಿಕಟ್ಟುಗಳಲ್ಲಿ ರಾಮಾಯಣದ ಎಷ್ಟೋ ನೀತಿ ವಿಚಾರಗಳು ಸೇರಿಕೊಂಡಿವೆ. ಜೈನ ರಾಮಾಯಣದ ಪ್ರಭಾವವಂತೂ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟಿದೆ. ಕೌಶಿಕ ರಾಮಾಯಣ, ತೊರವೇ ರಾಮಾಯಣ, ಜನಪದ ರಾಮಾಯಣ, ಜೈಮಿನಿ ಭಾರತದಲ್ಲಿ ಬರುವ ಲವಕುಶರ ಕಥೆ ಇತ್ಯಾದಿಗಳೆಲ್ಲಾ ರಾಮಾಯಣದ ಪ್ರಜ್ಞೆಯನ್ನು ಕನ್ನಡಿಗರಲ್ಲಿ ಮೂಡಿಸುವಲ್ಲಿ ಸಫಲವಾಗಿವೆ. ಇದರಿಂದಾಗಿಯೇ ಪ್ರೀತಿ, ತಾಳ್ಮೆ, ಸೇವೆ ಇತ್ಯಾದಿ ಮನೋಭಾವನೆಗಳು ಕನ್ನಡಿಗರ ಸಂಸ್ಕೃತಿಯಲ್ಲಿ ಮಿಳಿತವಾಗಿವೆ.

ಇಂತಹ ಒಂದು ಸಂಸ್ಕೃತಿ ಇರುವ ಈ ನಾಡಿನ ಜನಪದ ಕಥನ ಕವನಗಳಲ್ಲಿ ರಾಮಾಯಣ ಹಾಸುಹೊಕ್ಕಾಗಿದೆ. ಅಂತೆಯೇ ಜಾನಪದ ಕಲೆಯಾದ ಯಕ್ಷಗಾನದಲ್ಲೂ ಇದೇ ಬಗೆಯ ಮನೋಭಾವ ಇರುವ ಪಾತ್ರ ಸನ್ನಿವೇಶ ರೂಪುಗೊಂಡಿದೆ. ಯಕ್ಷಗಾನ ರಾಮಾಯಣ ಪ್ರಸಂಗಗಳ ಮೇಲೆ ತೊರವೇ ಹಾಗೂ ಕೌಶಿಕ ರಾಮಾಯಣದ ಪ್ರಭಾವ ಸಾಕಷ್ಟಿದೆಯಾದರೂ ಶ್ರೀಮದ್ರಾಮಾಯಣದಲ್ಲಿ ಸಾರಲಾದ ಜೀವನ ಮೌಲ್ಯವೇ ಇಂದೂ ಒಂದಿಲ್ಲೊಂದು ರೀತಿಯಲ್ಲಿ ಬಂದಿದೆ. ತೋರವೇ ರಾಮಾಯಣದಂತೆ ಯಕ್ಷಗಾನ ಕವಿಗಳು ಶ್ರೀರಾಮನನ್ನು ವಿಷ್ಣುವಿನ ಅವತಾರವೆಂಬ ಪೂರ್ವ ನಿರ್ಧಾರದಿಂದಲೇ ಪ್ರಸಂಗಗಳನ್ನು ಬರೆದಿದ್ದಾರೆ. ಪ್ರಪೂರ್ಣ ಪುರುಷೋತ್ತಮನಾದ ರಾಮನ ಗುಣಗಾನವೇ ಯಕ್ಷಗಾನದ ತುಂಬಾ ಕೇಳಿ ಬರುತ್ತಿದೆ. ಹೀಗೆ ಸೃಷ್ಟಿಗೊಂಡಿರುವ ರಾಮಾಯಣ ಪ್ರಸಂಗದ ಕಥಾ ವಸ್ತುವನ್ನು ಇಲ್ಲಿ ಅವಲೋಕಿಸಲಾಗಿದೆ.

ಪುತ್ರಕಾಮೇಷ್ಟಿ ಮತ್ತು ಸೀತಾಕಲ್ಯಾಣ[4]

ಇಲ್ಲಿ ವಾಲ್ಮೀಕಿಯು ಲವಕುಶರಿಗೆ ಹೇಳಿದ ಕಥೆಯನ್ನು ಶಿವನು ಪಾರ್ವತಿಗೆ ತಿಳಿಸುತ್ತಾನೆ. ದಶರಥನ ಒಡ್ಡೋಲದೊಂದಿಗೆ ಪ್ರಸಂಗ ಪ್ರಾರಂಭವಾಗುತ್ತದೆ. ವಸಿಷ್ಠನಲ್ಲಿ ಮಕ್ಕಳಿಲ್ಲದ ವ್ಯಥೆಯನ್ನು ಹೇಳಿದಾಗ ಅಶ್ವಮೇಧಯಾಗ ಮಾಡುವ ಸೂಚನೆ ಬರುತ್ತದೆ. ಅಂತೆಯೇ ಯಜ್ಞಕ್ಕೆ ವ್ಯವಸ್ಥೆಮಾಡಿ ಋಷ್ಯಶೃಂಗರನ್ನು ಕರೆಸಲು ಏರ್ಪಾಡು ಮಾಡುತ್ತಾನೆ. ಅತ್ತ ದೇವತೆಗಳು ವಿಷ್ಣುವಿನಲ್ಲಿಗೆ ಬಂದು ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ. ಅವರಿಗೆ ಅಭಯ ಹಸ್ತವನ್ನಿತ್ತ ವಿಷ್ಣುವು ರಾಮಾವತಾರದ ಉದ್ದೇಶವನ್ನು ತಿಳಿಸುತ್ತಾನೆ. ದಶರಥನ ಯಾಗ ಮಧ್ಯದಲ್ಲಿ ಅಗ್ನಿಯಿಂದ ಪಾಯಸ ದೊರೆತು ಅದರ ಪರಿಣಾಮವಾಗಿ ರಾಣಿಯರು ಗರ್ಭವತಿಯರಾಗುತ್ತಾರೆ. ಮಕ್ಕಳ ಜನನದೊಂದಿಗೆ ಆ ಸಂಸಾರವು ಆನಂದಭರಿತವಾಗುತ್ತದೆ. ಬಾಲ್ಯವನ್ನು ಆ ಮಕ್ಕಳು ಸಂತೋಷದಿಂದಲೇ ಕಳೆಯುತ್ತಾರೆ.

ಒಮ್ಮೆ ವಿಶ್ವಾಮಿತ್ರ ಮುನಿಯು ದಶರಥನ ಆಸ್ಥಾನವನ್ನು ಪ್ರವೇಶಿಸಿ ಯಜ್ಞ ಕಾರ್ಯ ರಕ್ಷಣೆಗೆ ರಾಮಲಕ್ಷ್ಮಣರನ್ನು ಕಳಿಸುವಂತೆ ಕೇಳುತ್ತಾನೆ. ಪುತ್ರ ವಾತ್ಸಲ್ಯದಿಂದ ದಶರಥ ಒಪ್ಪದೇ ಹೋದಾಗ ಕೋಪದಿಂದ ಹೊರಟ ವಿಶ್ವಾಮಿತ್ರನನ್ನು ವಸಿಷ್ಠನು ಸಮಾಧಾನಗೊಳಿಸಿ ಅವರಿಬ್ಬರನ್ನು ಕಳುಹಿಸುವ ವ್ಯವಸ್ಥೆ ಮಾಡುತ್ತಾನೆ. ವಿಶ್ವಾಮಿತ್ರನೊಂದಿಗೆ ವನವನ್ನು ಪ್ರವೇಶಿಸಿದ ರಾಮಲಕ್ಷ್ಮಣರು ತಾಟಕಿಯ ಮುಂದೆ ಬಂದಾಗ ವಿಶ್ವಾಮಿತ್ರನ ಆದೇಶದಂತೆ ಕೊಲ್ಲುತ್ತಾರೆ. ಯಜ್ಞಕ್ಕೆ ತೊಂದರೆ ಕೊಡುತ್ತಿದ್ದ ಉಳಿದ ರಾಕ್ಷಸರನ್ನು ಸಂಹರಿಸಿ ಮುನಿಗಳಿಗೆ ಸಂತೋಷವನ್ನುಂಟು ಮಾಡುತ್ತಾರೆ. ಆ ಸಮಯಕ್ಕೆ ಜನಕರಾಜನ ಓಲೆಕಾರನೊಬ್ಬ ಸೀತಾಸ್ವಯಂವರದ ಸುದ್ದಿ ತರುತ್ತಾನೆ. ಅದನ್ನು ಸ್ವೀಕರಿಸಿ ಅಲ್ಲಿಗೆ ಹೊರಟ ರಾಮಲಕ್ಷ್ಮಣರು ಅಹಲ್ಯೋದ್ಧಾರ ಮಾಡಿ ವಿಶ್ವಾಮಿತ್ರರೊಂದಿಗೆ ಪಟ್ಟಣ ಪ್ರವೇಶ ಮಾಡುತ್ತಾರೆ.

ಸೀತಾಸ್ವಯಂವರಕ್ಕೆ ಸಾಕಷ್ಟು ರಾಜರು ಸೇರಿದ್ದರು. ಹರಧನುಸ್ಸನ್ನು ಎತ್ತಿದವಗೆ ಮಗಳನ್ನು ಕೊಡುತ್ತೇನೆ ಎಂದು ಹೇಳಿದ ಜನಕನ ಸೂಚನೆಯಂತೆ ರಾಜರೆಲ್ಲಾ ಪ್ರಯತ್ನಿಸುತ್ತಾರೆ. ಅಂಗರಾಜ, ರಾವಣ ಎಲ್ಲರೂ ಸೋಲುತ್ತಾರೆ. ಕೊನೆಗೆ ರಾಮ ಶಿವಧನು ಇದ್ದಲ್ಲಿಗೆ ಬಂದು ಎತ್ತಲು ಅದು ಮುರಿದು ಹೋಗುತ್ತದೆ. ರಾಜನು ದಶರಥನ ನಾಲ್ವರು ಮಕ್ಕಳಿಗೆ ತನ್ನ ನಾಲ್ವರು ಪುತ್ರಿಯರನ್ನು ಕೊಟ್ಟು ಮದುವೆ ಮಾಡಿಸುತ್ತಾನೆ. ಅಯೋಧ್ಯೆಗೆ ಹಿಂದಿರುಗುತ್ತಿರುವ ರಾಮನನ್ನು ಸೆಣಸಲು ಕರೆದು ಸೋತುಹೋದ ಪರಶುರಾಮ ಹರಸಿ ತಪಸ್ಸಿಗೆ ತೆರಳುತ್ತಾನೆ. ಇದು ಸ್ಥೂಲ ಕಥಾ ರೂಪ.

ಈ ಕಥಾವಸ್ತುವನ್ನು ಆಧಾರವಾಗಿಟ್ಟುಕೊಂಡು ಲಕ್ಷ್ಮೀನರಸಿಂಹ, ಅಳಿಯ ಲಿಂಗರಾಜ, ಪಾರ್ತಿಸುಬ್ಬ ಮತ್ತು ಗೆರೆಸೊಪ್ಪೆ ಶಾಂತಪ್ಪಯ್ಯ ಈ ನಾಲ್ಕು ಮಂದಿ ಪ್ರಸಂಗವನ್ನು ರಚಿಸಿದ್ದಾರೆ. ಕೊನೆಯ ಎರಡು ಪ್ರಸಂಗಗಳನ್ನು ಮೇಳದವರು ಇಂದಿಗೂ ಆಡುತ್ತಿದ್ದಾರೆ. ಗೆರೆಸೊಪ್ಪೆ ಶಾಂತಪ್ಪಯ್ಯನ ಪ್ರಸಂಗವು ಸುಬ್ಬನ ಪ್ರಸಂಗಕ್ಕೆ ಋಣಿಯಾಗಿದ್ದರೆ ಸುಬ್ಬನದು ತೊರವೆ ರಾಮಾಯಣಕ್ಕೆ ಋಣಿಯಾಗಿದೆ. ಬ್ರಾಹ್ಮಣರ ಭೋಜನ ವರ್ಣನೆಯಲ್ಲಿ ರತ್ನಾಕರ ವರ್ಣಿಯ ಭರತೇಶ ವೈಭವದ ಪ್ರಭಾವವು ಇಬ್ಬರ ಪ್ರಸಂಗಗಳಲ್ಲೂ ಬಿದ್ದಿರುವುದನ್ನು ಮುಳಿಯ ತಿಮ್ಮಪ್ಪಯ್ಯನವರು ಗುರುತಿಸಿದ್ದಾರೆ. ಸಾಹಿತ್ಯ ದೃಷ್ಟಿಯಿಂದ ಹಾಗೂ ಪ್ರದರ್ಶನ ದೃಷ್ಟಿಯಿಂದ ಇವೆರಡೂ ಉತ್ತಮ ಪ್ರಸಂಗಗಳಾಗಿವೆ. ಮೊದಲಿನದೆರಡು ಅಷ್ಟಾಗಿ ಪ್ರದರ್ಶನದಲ್ಲಿ ಪ್ರಚಲಿತವಾಗಿಲ್ಲ.

ಪಂಚವಟಿ ಪಟ್ಟಾಭಿಷೇಕ:[5]

ಇದರಲ್ಲೂ ಕೂಡ ದಶರಥನ ಒಡ್ಡೋಲಗದೊಂದಿಗೆ ಪ್ರಾರಂಭವಾಗುವ ಕಥೆಯು ಮೂಲವನ್ನೇ ಹೆಚ್ಚಾಗಿ ಅನುಸರಿಸಿದೆ.

ಕೇಕೇಯನು ಬಂದು ಭರತ ಶತ್ರುಘ್ನರನ್ನು ವಿದ್ಯಾಭ್ಯಾಸಕ್ಕೆಂದು ಕರೆದೊಯ್ಯುತ್ತಾನೆ ಅನಂತರ ಒಮ್ಮೆ ದಶರಥನು ರಾಮಚಂದ್ರನಿಗೆ ಪಟ್ಟಕಟ್ಟಲು ನಿರ್ಧಾರ ಮಾಡುತ್ತಾನೆ. ಇದನ್ನು ತಿಳಿದ ಮಂಥರೆ ಕೈಕೆಯ ಮನಸ್ಸಿನಲ್ಲಿ ವಿಷವನ್ನು ಬಿತ್ತಲು ಪ್ರಯತ್ನಿಸುತ್ತಾಳೆ.

ರಕ್ಕಸಿಯ ಹೃದಯದಿಂದ ಕೈಕೆಯ ಅಂತಃಕರಣವನ್ನು ಹೊಕ್ಕು ಕದಡುತ್ತಾಳೆ. ಪಟ್ಟಾಭಿಷೇಕದ ಎಲ್ಲಾ ಸಿದ್ಧತೆಗಳಾಗಿದ್ದು ಕೈಕೆಯೊಬ್ಬಳೇ ಬಾರದೇ ಉಳಿದಾಗ ಅವಳಲ್ಲಿಗೆ ಲಕ್ಷ್ಮಣನನ್ನು ಕಳಿಸುತ್ತಾರೆ. ಅವನ ಮೂಲಕ ದಶರಥನನ್ನು ಕರೆಸಿಕೊಂಡ ಆಕೆ ರಾಮನ ವನವಾಸವನ್ನು ಭರತನ ಪಟ್ಟವನ್ನು ತಿಳಿಸುತ್ತಾಳೆ. ಇದನ್ನು ತಿಳಿದುಕೊಂಡ ರಾಮ ಕಾಡಿಗೆ ಹೊರಡುತ್ತಾನೆ. ತಂದೆಯ ಮಾತನ್ನು ನಡೆಸಿ ಕೊಡಲು ಎಲ್ಲಾ ಅಡೆತಡೆಗಳನ್ನು ಎದುರಿಸಿ ಲಕ್ಷ್ಮಣ ಸೀತೆಯರೊಂದಿಗೆ ಕಾಡಿಗೆ ನಡೆಯುತ್ತಾನೆ. ಗುಹನ ಅತಿಥ್ಯವನ್ನು ಪಡೆದು, ಭಾರಧ್ವಾಜನ ಸೂಚನೆಯಂತೆ ಚಿತ್ರ ಕೂಟದಲ್ಲಿ ವಾಸಿಸುತ್ತಾನೆ. ರಾಮನ ನಿರ್ಗಮನದಿಂದ ದಶರಥ ಸಾವನ್ನಪ್ಪುತ್ತಾನೆ. ಭರತನು ಬಂದು ತಾಯಿಯಮೇಲೆ ಕೋಪಗೊಂಡು ರಾಮನಿದ್ದ ಚಿತ್ರಕೂಟಕ್ಕೆ ಬರುತ್ತಾನೆ. ಆತನಿಂದ ತಂದೆಯವರ ಮರಣವನ್ನು ತಿಳಿದು ಅವರೆಲ್ಲಾ ಗೋಳಾಡುತ್ತಾರೆ. ಭರತನಿಗೆ ಧರ್ಮಮಾರ್ಗವನ್ನು ರಾಮನು ಉಪದೇಶಿಸಿ ತನ್ನ ಪಾದುಕೆಯನ್ನ ಕೊಟ್ಟು ಕಳಿಸುತ್ತಾನೆ. ಅಲ್ಲಿ ವಾಸಿಸಲು ಮನಸ್ಸು ಬಾರದೆ ಸೀತಾರಾಮ ಲಕ್ಷ್ಮಣರು ವನಪ್ರಯಾಣ ಕೈಗೊಳ್ಳುತ್ತಾರೆ. ಮುಂದೆ ನಿರ್ಮಲ ಜಲ ಸಮೀಪದಲ್ಲಿ ಪರ್ಣಶಾಲೆಯನ್ನು ನಿರ್ಮಿಸಿಕೊಳ್ಳುತ್ತಾರೆ. ರಾಕ್ಷಸರ ಉಪಟಳದಿಂದ ಅಲ್ಲಿನ ಋಷಿಗಳು ಬೆದರುತ್ತಿರುತ್ತಾರೆ.

ಆ ಸಮಯದಲ್ಲಿ ಶೂರ್ಪನಖಿಯ ಪ್ರವೇಶವಾಗುತ್ತದೆ. ರಾಮನ ಮೋಹನಾಕಾರವನ್ನು ನೋಡಿ ಮೋಹಿಸಿದ ಆಕೆ ಸುಂದರ ರೂಪವನ್ನು ತಾಳಿ ಮದುವೆಯಾಗುವಂತೆ ಕೇಳುತ್ತಾಳೆ. ಅವನು ಲಕ್ಷ್ಮಣನನ್ನು ಸೂಚಿಸಿದಾಗ ಆತನಲ್ಲಿಗೆ ಬಂದು ಒತ್ತಾಯಿಸುತ್ತಾಳೆ. ರಾಮನ ಗುರುತು ತಂದರೆ ಯೋಚನೆ ಮಾಡುವುದಾಗಿ ತಿಳಿಸುತ್ತಾನೆ. ರಾಮನು ಅಂಬಿನ ತುದಿಯಿಂದ ಅವಳ ಮೊಲೆ, ಮೂಗನ್ನು ಕೊಯ್ಯುವಂತೆ ಬರೆದು ಕಳಿಸುತ್ತಾನೆ. ಲಕ್ಷ್ಮಣ ಅದೇ ರೀತಿ ಮಾಡುತ್ತಾನೆ. ಇದರಿಂದ ಕೋಪಗೊಂಡ ಶೂರ್ಪನಖಿ "ಎನ್ನಗ್ರಜರಿಂಗಿದನೆಂದು ನಿನ್ನ ಸತಿಯಳನ್ನು ತಂದು ಬನ್ನ ಬಡಿಸದಿದ್ದರೆ ನಾ ಹೆಣ್ಣಲ್ಲ ಕಾಣೋ" ಎಂದು ಪ್ರತಿಜ್ಞೆ ಮಾಡುತ್ತಾಳೆ. ಅಂತೆಯೇ ಯುದ್ಧಕ್ಕೆ ಬಂದ ಖರದೂಷಣರು ಸಾವನ್ನಪ್ಪುತ್ತಾರೆ.

ಈ ಪ್ರಸಂಗದಲ್ಲಿ ರಾಮಾಯಣ ಕಥೆಯ ಉತ್ತಮ ಭಾಗ ಒಳಗೊಂಡಿದೆ. ಅತ್ಯಂತ ಸರಳ ರೀತಿಯಲ್ಲಿ ಅಷ್ಟೇ ಮನಮುಟ್ಟುವ ಶೈಲಿಯಲ್ಲಿ ಕವಿ ಪ್ರಸಂಗ ನಿರ್ಮಾಣಮಾಡಿದ್ದಾನೆ. ಇದು ತೊರವೇ ರಾಮಾಯಣವನ್ನು ಅನುಸರಿಸಿ ರಚನೆ ಗೊಂಡಿದ್ದರೂ ಕೆಲವೊಂದು ವ್ಯತ್ಯಾಸವಿದೆ. ವನವಾಸಕ್ಕೆ ಹೊರಟ ರಾಮನಿಗೆ ರಾಜ ಲಾಂಛನದ ಮುದ್ರೆಯುಂಗುರವನ್ನು ಕೊಟ್ಟು ದಶರಥನು ಹರಸುವ ಅಂಶ ತೊರವೇ ರಾಮಾಯಣದಲ್ಲಿ ಇದೆ. ಆದರೆ ಇಲ್ಲಿ ಅದರ ಪ್ರಸ್ತಾಪವೇ ಇಲ್ಲ. ಚಿತ್ರಕೂಟದಲ್ಲಿ ರಾಮ ಮತ್ತು ಭರತನ ಮಾತುಕತೆಗಳು ಅವರಿಬ್ಬರ ವ್ಯಕ್ತಿತ್ವಕ್ಕೆ ಕಳಸವಿಡುವ ರೀತಿಯಲ್ಲಿ ರೂಪಿತಗೊಂಡಿದೆ. ಶೂರ್ಪನಖಿಯ ವೃತ್ತಾಂತದಲ್ಲಿ ಮಾತ್ರ ರಾಮನ ವ್ಯಕ್ತಿತ್ವಕ್ಕೆ ಅಷ್ಟೇ ಧಕ್ಕೆ ಉಂಟಾಗಿದೆ. ಯಕ್ಷಗಾನ ಪ್ರಯೋಗಗಳಲ್ಲಿ ಈ ಅಂಶವು ಸಾಮಾನ್ಯವಾಗಿ ಸವಿವರವಾದ ಚರ್ಚೆಗೆ ಒಳಪಡುತ್ತದೆ.

ಪಂಚವಟಿ ವಾಲಿಸಂಹಾರ :[6]

ಅಲ್ಲಿಂದ ಮುಂದಿನ ಕಥಾ ಬೆಳವಣಿಗೆಯನ್ನು ವಾಲಿಸಂಹಾರದಲ್ಲಿ ಕಟ್ಟಿ ಕೊಡಲಾಗಿದೆ.

ರಾವಣನಲ್ಲಿಗೆ ಬಂದ ಶೂರ್ಪನಖಿ ಸೀತೆಯನ್ನು ಹೊಗಳಿ ರಾವಣನು ಕಾಮಾಸಕ್ತನಾಗುವಂತೆ ಮಾಡುತ್ತಾಳೆ. ಮಂಡೋದರಿ ರಾವಣನ ನಿರ್ಧಾರಕ್ಕೆ 'ತರವಲ್ಲ ಕುಲವೇ ಸಂಹಾರವಾಗುವ ಕಾಲ ಬಂತು' ಎಂದರೂ ಕೇಳುವುದಿಲ್ಲ. ಮಾರೀಚನ ಸಹಾಯದೊಂದಿಗೆ ಆತ ಮುನ್ನುಗ್ಗುತ್ತಾನೆ. ಮಾಯಾಮೃಗವಾಗಿ ಸುಳಿದ ಮಾರೀಚ ಸೀತೆಗೆ ಮಬ್ಬು ಕವಿಸುತ್ತಾನೆ. ಆ ಜಿಂಕೆಯನ್ನು ತಂದು ಕೊಡಲೇಬೇಕೆಂದು ಹಠ ಹಿಡಿದಾಗ ರಾಮನು ಹೊರಡುತ್ತಾನೆ. ರಾಮನನ್ನು ದೂರಕ್ಕೆ ಕರೆದು ಸಾಯುವಾಗ ಲಕ್ಷ್ಮಣಾ! ಸೀತೆ ! ಎಂದು ಸಾವನಪ್ಪುತ್ತಾನೆ. ಲಕ್ಷ್ಮಣನನ್ನು ಅಲ್ಲಿಗೆ ಹೋಗುವಂತೆ ಸೀತೆ ತಿಳಿಸುತ್ತಾಳೆ. ಆತ ರಾಕ್ಷಸರ ಮಾಯೆ ಎಂದು ಹೋಗದೆ ಉಳಿದಾಗ 'ರಾಮ ತಾನಳಿದ ಮೇಲೆನ್ನ ಆಳುವೆನೆಂಬ ದುರಾಶೆಯಿಂದ ಹೋಗುತ್ತಿಲ್ಲ' ಎಂದೂ ಆಪಾದಿಸುತ್ತಾಳೆ. ಆಗ ಲಕ್ಷ್ಮಣ ಹೊರಟು ಹೋಗುತ್ತಾನೆ. ರಾವಣ ಸಂನ್ಯಾಸಿ ವೇಷದಲ್ಲಿ ಬಂದು ನೆಲ ಸಹಿತ ಸೀತೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಕೊಂಡೊಯ್ಯುತ್ತಾನೆ. ಎದುರಿಸಿದ ಜಟಾಯುವಿನ ರೆಕ್ಕೆಯನ್ನು ಮುರಿಯುತ್ತಾನೆ. ಸೀತೆಯನ್ನು ಅಶೋಕ ವನದಲ್ಲಿ ಸೆರೆಯಿಡುತ್ತಾನೆ. ಆಶ್ರಮಕ್ಕೆ ಹಿಂದಿರುಗಿದ ರಾಮ ಲಕ್ಷ್ಮಣರಿಗೆ ಮೋಸದ ಅರಿವಾಗುತ್ತದೆ. ರಾಮನಿಗಂತೂ ಕಣ್ಣುಕತ್ತಲೆ ಕಟ್ಟಿ ಅಡವಿಗಿಡಮರ ಕಲ್ಲುಗಳು ಅರಸಿನದ ಪುಡಿಯಂತೆ ತೋರುತ್ತದೆ. ಜಟಾಯುವಿನಿಂದ ವಿಚಾರ ತಿಳಿದು ದಕ್ಷಿಣಕ್ಕೆ ಹೊರಟು ಕಬಂಧನನ್ನು ಉದ್ಧರಿಸಿ ಶಬರಿಯನ್ನು ಆಶೀರ್ವದಿಸಿ ಕಿಷ್ಕಿಂದೆಗೆ ಬರುತ್ತಾರೆ.

ಮಾರ್ಗದಲ್ಲಿ ಸಿಕ್ಕಿದ ಹನುಮಂತನಿಂದ ಸುಗ್ರೀವನ ವಿಚಾರ ತಿಳಿದು ತನ್ನ ವಿಚಾರವನ್ನು ಹೇಳಿಕೊಂಡು ಸಖ್ಯ ಬೆಳೆಸುತ್ತಾನೆ. ರಾಮನ ಸಹಾಯದಿಂದ ಸುಗ್ರೀವನು ವಾಲಿಯನ್ನು ಯುದ್ಧಕ್ಕೆ ಕರೆದು ಮೊದಲಬಾರಿ ಸೋಲುತ್ತಾನೆ. ಎರಡನೆಯ ಬಾರಿ ತುಳಸಿ ಮಾಲೆಯನ್ನು ಧರಿಸಿ ಯುದ್ಧ ಮಾಡುತ್ತಾನೆ. ರಾಮನ ಬಾಣಕ್ಕೆ ವಾಲಿ ಗುರಿಯಾಗಿ ಕೆಳಗುರುಳಿದಾಗ ಅವರಿಬ್ಬರ ಮಧ್ಯೆ ವಾದವಿವಾದ ನಡೆಯುತ್ತದೆ. ವಾಲಿಗೆ ಮುಕ್ತಿಯಾಗುತ್ತದೆ. ಸುಗ್ರೀವಗೆ ಪಟ್ಟ ದೊರೆಯುತ್ತದೆ. ಅಂಗದನಿಗೆ ಯುವ ರಾಜಾಭಿಷೇಕ ನಡೆಯುತ್ತದೆ.

ಯಕ್ಷಗಾನ ಪಂಚವಟಿ ವಾಲೀಸಂಹಾರವು ಪ್ರದರ್ಶನಕ್ಕೆ ಹಾಗೂ ತಾಳಮದ್ದಲೆಗೆ ಯೋಗ್ಯವಾದ ಪ್ರಸಂಗವಾಗಿದೆ. ದೇಶಿಶೈಲಿಯನ್ನು ಇಲ್ಲಿ ಬಹಳಷ್ಟು ಕಾಣಬಹುದು. ಶೂರ್ಪನಖಿ "ಮಂಡೆ ಮಂಡೆ ಹೊಡೆಕೊಳ್ಳುತ್ತಾ...." ರಾವಣನಲ್ಲಿಗೆ ಹೋದಳಂತೆ. ರಾಮಸೀತೆಯರ ಮಾತು ಸಾಮಾನ್ಯ ದೇಸಿಗರ ಮಾತು ಎನಿಸುತ್ತದೆ. ವಾಲಿ ಹಾಗೂ ರಾಮರ ವಾದ ವಿವಾದ ಬಹಳ ತಾರ್ಕಿಕವಾಗಿದ್ದು ದೊಡ್ಡ ಸಮಸ್ಯೆಯೊಂದನ್ನು ತೆರೆದು ತೋರುತ್ತದೆ. ಯಕ್ಷಗಾನ ತಾಳಮದ್ದಲೆಯಲ್ಲಂತೂ ಈ ಭಾಗ ಬಹು ಜನರಂಜನೀಯ. ಸಮರ್ಥರಾದ ಅರ್ಥಧಾರಿಗಳಿದ್ದರೆ ಇದೊಂದೇ ಭಾಗದಲ್ಲಿ ರಾತ್ರಿ

ಕಳೆದು ಬೆಳಗಾಗುತ್ತದೆ. ಸುಮಾರು ಹತ್ತು ವರ್ಷದ ಕೆಳಗೆ ಸಾಲಿಗ್ರಾಮದ ಸಂಸ್ಕೃತ ಶಾಲೆಯಲ್ಲಿ ಈ ಪ್ರಸಂಗದ ತಾಳ ಮದ್ದಲೆ ನಡೆಯಿತು. ಹಿರಿಯರಾದ ಸಾಮಗ ಸಹೋದರರು ಶೇಣಿಯವರು ಭಾಗವಹಿಸಿ ಚರ್ಚಿಸಿ ಸುಮಾರು 5 ಗಂಟೆಗಳ ಕಾಲ ಆಡಿದ ಮಾತುಗಳು ಇನ್ನೂ ನೆನಪಿನಲ್ಲಿ ಉಳಿದಿವೆ.

ಯಕ್ಷಗಾನ ವಾಲಿ ಸುಗ್ರೀವ :7

ಇಪ್ಪತ್ತನೇ ಶತಮಾನದಲ್ಲಿದ್ದು ದಕ್ಷಿಣ ಕನ್ನಡದಲ್ಲಿ 'ಕವಿಭೂಷಣ'ರೆಂದು ಪ್ರಸಿದ್ಧರಾದ ವೆಂಕಪ್ಪಶೆಟ್ಟರು 'ಯಕ್ಷಗಾನ ವಾಲಿಸುಗ್ರೀವ' ಪ್ರಸಂಗವನ್ನು ಬರೆದಿದ್ದಾರೆ. ಇವರಿಗೆ ಯಕ್ಷಗಾನ ಪ್ರಪಂಚದಲ್ಲಿ ಹಿರಿಯ ಸ್ಥಾನವಿದೆ. ಇಲ್ಲಿ ಇವರು ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳ ಸಂಘರ್ಷವನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಮೂಲ ಕಥಾಸಾರ ಒಂದೇ ಆಗಿದ್ದು ರಾಮಾಯಣವನ್ನೇ ಅನುಸರಿಸಿದ್ದರೂ ಆಶಯದಲ್ಲಿ ಮಾತ್ರ ಭಿನ್ನವಾಗಿದೆ. ಇಲ್ಲಿ ಬರುವ ಪಾತ್ರಗಳ ಸಂಭಾಷಣೆ ತಾತ್ವಿಕ ವಿಚಾರದಿಂದ ಕೂಡಿಕೊಂಡಿದೆ. ಆದರೂ ಈ ಪ್ರಸಂಗ ತೊರವೆ ರಾಮಾಯಣಕ್ಕೆ ಸಾಕಷ್ಟು ಋಣಿಯಾಗಿದೆ. ಎಷ್ಟೋ ಪದ್ಯಗಳು ತೊರವೆ ರಾಮಾಯಣದಿಂದ ನೇರವಾಗಿ ಬಂದಿವೆ.

ಉದಾ :

ತೊರವೆ ರಾಮಾಯಣ

ಮರುಳಲಾ ಸುಗ್ರೀವ ಪೂರ್ವದ
ಚರಿತ ದುಷ್ಕೃತ ಸುಕೃತವಿವು ಜೀ
ವರಿಗೆ ಜಂ ಜಡವಾಗಿಹವು ನೀನಳಲ ಲೇಕಿದಕೆ ?

(ಕಾಂಡ 4, ಸಂಧಿ 4, ಪದ್ಯ 67)

ಯಕ್ಷಗಾನ ವಾಲಿಸುಗ್ರೀವ

ಮರುಳಲಾ ಸುಗ್ರೀವ ಪೂರ್ವದ
ಚರಿತ ದುಷ್ಕೃತವಾಗೆ ಜೀವದ
ದುರಿತರೂಪದ ಕರ್ಮ ವೀ ಪರಿ ವಿರಿಸಲಾಯ್ತು.

(ಪುಟ 57)

ಉಂಗುರಸಂಧಿ ಅಥವಾ ಚೂಡಾಮಣಿ :8

ಇದು ಕವಿ ಪ್ರತಿಭೆ ಕೆನೆಕಟ್ಟಿ ಬಂದಿರುವ ಪ್ರಸಂಗ. ಸುಗ್ರೀವ ರಾಜ್ಯ ಸುಖದಲ್ಲಿ ಮೈಮರೆತಾದ ಲಕ್ಷ್ಮಣ ಹೋಗಿ ಎಚ್ಚರಿಸುತ್ತಾನೆ. ಭಯಗೊಂಡ ಸುಗ್ರೀವನ ಆದೇಶದಂತೆ ಸಾಕಷ್ಟು ಕಪಿಗಳೆಲ್ಲಾ ಸೇರಿ ಮುಂದಿನ ಕಾರ್ಯಕ್ಕೆ ಮುನ್ನುಗ್ಗುತ್ತಾರೆ. ಸೀತಾನ್ವೇಷಣೆಗೆ ಒಂದೊಂದು ಗುಂಪು ಒಂದೊಂದು ದಿಕ್ಕಿಗೆ ನಡೆಯುತ್ತದೆ. ದಕ್ಷಿಣಕ್ಕೆ ಬಂದು ಜಾಂಬವಂತ, ಅಂಗದ, ಹನುಮಂತ ಮುಂತಾದವರು ಎಲ್ಲೂ ಹುಡುಕಲಾರದೆ ಮತಿಗೆಟ್ಟ ಸಂದರ್ಭದಲ್ಲಿ ಸಂಪಾತಿಯು ದಾರಿ ತೋರಿಸುತ್ತಾನೆ. ಅದೇ ರೀತಿ ಸಮುದ್ರ ದಡಕ್ಕೆ ಬಂದವರು ಜಾಂಬವಂತನ ಸೂಚನೆಯಂತೆ ಹನುಮಂತನನ್ನು ಲಂಕೆಗೆ

ಕಳುಹಿಸಲು ಒಪ್ಪಿಸುತ್ತಾರೆ. ಹನುಮಂತನು 'ಗಗನಾಂಗಣಕ್ಕೆ ಲಂಘಿಸಿ' ಸಮುದ್ರ ದಾಟುತ್ತಾನೆ. ತರಣ ಬಿಂದುವಿನ ಆಶೀರ್ವಚನ ಪಡೆದು ಲಂಕೆಯನ್ನು ಹೊಕ್ಕು ಲಂಕಿಣಿಯನ್ನು ಕೊಲ್ಲುತ್ತಾನೆ. ಎಲ್ಲೂ ಸೀತೆಯನ್ನು ನೋಡದೆ ವ್ಯಥೆಯಲ್ಲಿದ್ದಾಗ ಅಶೋಕವನದಲ್ಲಿದ್ದ ಸೀತೆಯನ್ನು ಕಂಡು ಗುರುತಿನ ಉಂಗುರವನ್ನು ಕೊಟ್ಟು ಸಮಾಧಾನವನ್ನು ಹೇಳಿ ಚೂಡಾಮಣಿಯನ್ನು ಪಡೆದು ಕೊಂಡು ಅಲ್ಲಿಂದ ಹೊರಡುತ್ತಾನೆ.

ರಾವಣನ ಉದ್ಯಾನವನ ಪ್ರದೇಶಕ್ಕೆ ಬಂದು ಅದನ್ನು ಹಾಳುಮಾಡಿ ರಾಕ್ಷಸರನ್ನು ಅಕ್ಷಕುಮಾರನನ್ನು ಕೊಲ್ಲುತ್ತಾನೆ. ಕೊನೆಯಲ್ಲಿ ಹನುಮಂತನನ್ನು ರಾಕ್ಷಸರು ಸೆರೆ ಹಿಡಿದು ರಾವಣನ ಆಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ರಾವಣನಿಂದ ಬಾಲಸುಡುವ ಶಿಕ್ಷೆ ದೊರೆತಾಗ ಅದೇ ಬೆಂಕಿಯಿಂದ ಲಂಕಾನಗರವು ಭಸ್ಮವಾಗುತ್ತದೆ.

ಇಲ್ಲಿ ಹನುಮಂತನ ಸಾಹಸವೇ ಪ್ರಸಂಗದುದ್ದಕ್ಕೂ ಕಂಡು ಬರುತ್ತದೆ. ಅದಕ್ಕೆ ಹಿನ್ನಲೆಯಂತೆ ಸೀತೆಯ ಶೋಕ, ಪ್ರಸಂಗದ ಉತ್ತರಾರ್ಧದಲ್ಲಿ ತುಂಬಿಕೊಂಡಿವೆ. ಯಾವೊಂದೂ ಅಪರಾಧಗಳಿಲ್ಲದೆ ಆಕೆಗೆ ಒದಗಿ ಬರುವ ಕಷ್ಟ ಪರಂಪರೆ, ರಾಮನನ್ನು ನೆನಸಿ ಆಕೆ ಹಲುಬುವ ರೀತಿ, ಇವನ್ನೆಲ್ಲಾ ಕವಿ ಎದೆ ತುಂಬಿ ಹಾಡಿದ್ದಾನೆ. ಸರಮೆಯು ಸೀತೆಯ ಹಂಬಲವನ್ನು ಹೀಗೆ ಹೇಳುತ್ತಾಳೆ –

ಧರಣಿ ಸುತೆಗಾ ರಾಮಚಂದ್ರನ ಸ್ಮರಣೆಯೇ ಹೊರತಾಗಿ ಮನದಲಿ
ಕಿರಿಯ ಭಾವನೆಯಿಲ್ಲ ಲಾಲಿಪುದಿರುಳು ಹಗಲು
ಪರುವತವು ನೊಣ ನುಂಗಿತಾದರೂ ಇರುವೆ ಶರಧಿಯ ಕುಡಿದು ಪೋದರು
ಸರುವಥಾಜಾನಕಿಯೊಲಲಿವ ಕನವರಿಕೆ ಸಲ್ಲ[9]

ಹನುಮಂತನೊಡನೆ ಸೀತೆಯಾಡುವ ಮಾತುಗಳು ಮನಮೋಹಕವಾಗಿವೆ–

ಏಸುದಿನ ಬೇಕೆನ್ನ ಪ್ರಾಣೇಶನ ಕಾಂಬುದಕಿನ್ನು
ಬೇಸರಿಕೆಯನದೆಂತು – ಹೇಳಲಿ ಹೇಗೆ ತಾಳಲಿ
ಬೇಟೆಗಾರ ನಿಟ್ಟ ಬಲೆಯ ಕೋಟಲೆಗೊಳಗಾದ ಹುಲ್ಲೆ
ಯಾಟದಂತೆ ಬಳಲಿ ಕಣ್ಣ ಬಿಡುವೆನು ಏನನುಡಿವೆನು.

ಎಂಬಲ್ಲೆಲ್ಲಾ ಕರುಣಾರಸ ಪ್ರತಿಪಾದನೆಯಾಗಿದೆ.

ಸೇತುಬಂಧನ :[10]

ಕೈಯಲ್ಲಿ ಚೂಡಾಮಣಿ ಬಂದನಂತರ ದುಃಖಿಸುತ್ತಾ ರಾಮನು ಹನುಮಂತನ ಸಾಹಸಕ್ಕೆ ಬ್ರಹ್ಮ ಪದವಿಯ ಭಾಗ್ಯವನ್ನು ಕರುಣಿಸುತ್ತಾನೆ. ಅನಂತರ ಆ ಕಪಿಸೈನ್ಯದೊಂದಿಗೆ ಸಾಗರದ ತಡಿಗೆ ಬರುತ್ತಾನೆ. ರಾಕ್ಷಸರು ಈ ದಂಡನ್ನು ಕಂಡು ಅಂಜಿದರು. ರಾವಣನು ಸಭೆಯನ್ನು ಕರೆದು ಯುದ್ಧ ಕ್ರಮವನ್ನು ಚರ್ಚಿಸುತ್ತಾನೆ. ವಿಭೀಷಣನಾಡಿದ ನೀತಿಯ

ಮಾತುಗಳು ಫಲಕಾರಿಯಾಗದಿರಲು ವಿಭೀಷಣ ಅವನನ್ನು ತ್ಯಜಿಸಿ ರಾಮನ ಪಾಳೇಯುವನ್ನು ಸೇರುತ್ತಾನೆ. ಸಮುದ್ರವು ಮಾರ್ಗಕ್ಕೆ ಅಡ್ಡವಾದಾಗ ನಾನಾ ಉಪಾಯಗಳಿಂದ ದಾಟುವ ಯೋಜನೆಯನ್ನು ರಾಮ ಮೊದಲಾದವರು ಯೋಚಿಸಿ, ಕೊನೆಯಲ್ಲಿ ಸೇತುವೆ ಕಟ್ಟುವುದೆಂದು ನಿರ್ಧರಿಸುತ್ತಾರೆ. ನಳನು ಸೇತುವೆ ಕಟ್ಟುವ ಕಾರ್ಯವನ್ನು ಪ್ರಾರಂಭಿಸುತ್ತಾನೆ. ತಿಮಿಂಗಿಲಗಳು ಹಾಕಿದ ಕಲ್ಲನ್ನು ತಿನ್ನಲು ಪ್ರಾರಂಭಿಸಿದಾಗ ವಿಘ್ನೇಶ್ವರನ ಪ್ರಾರ್ಥನೆ ಮಾಡಿ ಕೆಲಸವನ್ನು ಬಿರುಸಿನಿಂದ ಸಾಗಿಸುತ್ತಾರೆ. ಎಲ್ಲಾ ಭಾಗಗಳಿಂದಲೂ ಕಲ್ಲುಗಳನ್ನು ತಂದು ಅಡಕುತ್ತಾರೆ. ಈಶ್ವರ ಕಪಿಗಳ ಸಾಹಸವನ್ನು ನೋಡಿ "ನೋಡಿದೆಯೂ ಗೌರಿ ರಾಮನಾಟಗಳ" ಎಂದು ಬೆರಗು ಗೊಳ್ಳುತ್ತಾನೆ. ಹನುಮಂತನ ಕಲ್ಲಿನಿಂದ ಸೇತುವೆ ಸಂಪೂರ್ಣವಾಗುತ್ತದೆ. ಅದಕ್ಕೆ ಬಣ್ಣ, ಸಾರುವೆ, ಮೇಲುಗಟ್ಟುಗಳಿಂದ ಅಲಂಕರಿಸುತ್ತಾರೆ.

ಸೇತು ಬಂಧನವು ಹಾಸ್ಯದ ಮತ್ತು ವರ್ಣನಾಪರವಾದ ಪ್ರಸಂಗವಾಗಿದೆ. ಕಪಿಗಳ ಸಾಹಸ, ಕಪಿಗಳು ಈಶ್ವರನನ್ನು ಬೆರಗುಗೊಳಿಸುವ ರೀತಿ ರಂಜಿತ ಅಂಶಗಳಾಗಿವೆ. ಸಮುದ್ರರಾಜ ಮತ್ತು ರಾಮನ ನಡುವಿನ ಮನಸ್ತಾಪ ವಿಭೀಷಣನು ರಾಮನ ಪಾಳೆಯವನ್ನು ಸೇರಿದ ಬಗೆ ಇವೆಲ್ಲಾ ಕುತೂಹಲಕಾರಿ ವಿಚಾರಗಳಾಗಿವೆ. ಬಂಧ ಕೆಲವೆಡೆ ಸಡಿಲಗೊಂಡಿದ್ದರೂ ಹಾಸ್ಯರಸ ಹೆಚ್ಚಿಸಲು ಸಹಕಾರಿಯಾಗಿವೆ. ತೊರವೇ ರಾಮಾಯಣಕ್ಕಿಂತ ಒಂದು ಭಿನ್ನವಾದ ಅಂಶವೆಂದರೆ ವಿಭೀಷಣನನ್ನು ಜರೆದ ರಾವಣ 'ಆತನನ್ನು ನೂಕಿ' ಎಂದು ಚಾರರಿಗೆ ಹೇಳಿದಾಗ ತಾನೇ ಹೋಗುವುದಾಗಿ ಹೇಳಿ ಹೊರಡುತ್ತಾನೆ. ಆದರೆ ಕುಮಾರ ವಾಲ್ಮೀಕಿಯಲ್ಲಿ ಮೊದಲೇ ಪರಿಸ್ಥಿತಿಯನ್ನು ಅರಿತು ತಾಯಿಗೆ ತಿಳಿಸಿ ವಿಭೀಷಣ ಹೊರಟು ಹೋಗುತ್ತಾನೆ. ಕೈಕಸೆಯ ನೀತಿ ಬೋಧೆ ಯಕ್ಷಗಾನ ಸೇತು ಬಂಧನದಲ್ಲಿ ಹೊಸತಾಗಿ ಬಂದಿದೆ.

ಅಂಗದ ಸಂಧಾನ :[11]

ಸೇತುವೆಯನ್ನು ದಾಟಿ ಎಲ್ಲರೂ ಲಂಕಾಪುರದೆಡೆಗೆ ನಡೆಯುತ್ತಾರೆ. ಲಂಕಾಪುರದಲ್ಲಿ ಗುಲ್ಲು ಹಬ್ಬಿ ಜನರು "ಪೆಟ್ಟಿಗೆಗಳನ್ನು ಕಟ್ಟಿಡು ಮಾಣಿ" ಎಂದೆನಂತ ಕಡಲೆ, ಗೋಧಿ, ಬೆಲ್ಲಗಳನ್ನು ಕಂಡವರಿಗೆ ಕೊಟ್ಟರು. ರಾವಣನ ಒಡ್ಡೋಲಗ ನಡೆಯುತ್ತದೆ. ಶುಕಸಾರಣರು ಬೇಹುಗಾರರಾಗಿ ಬಂದು ಸೆರೆಸಿಕ್ಕಿ ರಾಮನ ಔದಾರ್ಯ ನೋಡಿ ಹೊಗಳುತ್ತಾರೆ. ಆಕಾಶಗಾಮಿಯಾಗಿ ಬಂದ ರಾವಣ ಸುಗ್ರೀವನಿಂದ ಮಾನಭಂಗಿತನಾಗುತ್ತಾನೆ. ರಾಮನು ಸಂಧಾನಕ್ಕೆಂದು ರಾವಣನಲ್ಲಿಗೆ ಅಂಗದನನ್ನು ಕಳುಹಿಸುತ್ತಾನೆ. ಅಂಗದನಿಗೂ ಪ್ರಹಸ್ತನಿಗೂ ಮಾತಿನ ಚಕಮಕಿ ನಡೆಯುತ್ತದೆ. ರಾವಣನನ್ನು ನೋಡಿ "ಎನ್ಮ್ಯಾರಾವಣ ಎನ್ಮ್ಯಾ ಸೀತೆಯ ಕಾಣದಹಂಗೆ ಕದ್ದು ತಂದೆ ಎನ್ಮ್ಯಾ" ಎಂದು ಛೇಡಿಸುತ್ತಾನೆ. ರಾವಣನ ಭಟರಿಂದ ಅಂಗದನಿಗೆ ಹೊಡೆತ ಬೀಳಲು ಬಂದಾಗ ಇಬ್ಬರಿಗೂ ಯುದ್ಧವಾಗುತ್ತದೆ. ಅಂಗದನನ್ನು ಹುಡುಕಿ ಬಂದ ಹನುಮಂತನೂ ಅವನೊಂದಿಗೆ ಸೇರಿ ಸಾಕಷ್ಟು ಜನರನ್ನು ಕೊಂದು "ಹೋಗುವಾ ನಾವ ರಾಮನಲ್ಲಿಗೆ ನಾಳೆ ಹೇಗೂ ಬರುವುದುಂಟು ಇಲ್ಲಿಗೆ" ಎಂದು ಹೊರಡುತ್ತಾರೆ. ಮುಂದೆ ಯುದ್ಧ ಪ್ರಾರಂಭವಾಗುತ್ತದೆ. ಸೀತೆಯನ್ನು ಮೋಸಗೊಳಿಸಲು ಮಾಯಾ ರಾಮನ ಶಿರಸ್ಸನ್ನು ತೋರಿಸುತ್ತಾರೆ. ತ್ರಿಜಟೆ ಸೀತೆಯನ್ನು

ಸಮಾಧಾನ ಪಡಿಸುತ್ತಾಳೆ. ರಾಮ ರಾವಣರಿಗೆ ಭಯಂಕರವಾದ ಯುದ್ಧ ಸಂಭವಿಸುತ್ತದೆ. ಯುದ್ಧ ಕೌಶಲ್ಯದಿಂದ ರಾವಣನನ್ನು ರಾಮನು ದಿಗಂಬರನನ್ನಾಗಿ ಮಾಡುತ್ತಾನೆ. ಶ್ರೀರಾಮನ ಮಹಿಮೆಯನ್ನು ದೇವತೆಗಳೇ ಕೊಂಡಾಡುತ್ತಾರೆ.

ಯಕ್ಷಗಾನ ತಾಳಮದ್ದಲೆಗೆ ಹೇಳಿ ಮಾಡಿಸಿದಂತಹ ಪ್ರಸಂಗವಾಗಿದೆ ಈ ಅಂಗದ ಸಂಧಾನ. ಇಲ್ಲಿ ಬರುವ ಹಾಡುಗಳು ಅದಕ್ಕೆ ಅನ್ವಯಿಸಿ ಬರುವ ವಾದ ವಿವಾದಗಳು ಬಹು ಆಕರ್ಷಕ. ಇದು ಸಜೀವವಾಗಿದ್ದು ನೀತಿ ಬೋಧಕವಾಗಿದ್ದು ನವನವೋನ್ವೇಷ ಶಾಲಿಯಾಗಿದೆ. ರಾವಣನ ಸಭೆಗೆ ಬಂದ ಅಂಗದ ಪ್ರಹಸ್ತನೊಂದಿಗೆ ಆಡುವ ಮಾತುಗಳು ಬಹಳ ಮೊನಚಾಗಿದೆ. ನೀನ್ಯಾರೂ ಎಂದಾಗ 'ದಾಶರಥಿಯ ಕಿರುದಾಸರೊಳಾನೊಬ್ಬ' ಎನ್ನುತ್ತಾನೆ. ಇಲ್ಲಿ ಪ್ರಯೋಗಿಸಲ್ಪಟ್ಟ ದಾಸ ಎಂಬ ಶಬ್ದಕ್ಕೆ ಕೇವಲ ಸೇವಕ ಎಂಬ ಅರ್ಥಕ್ಕಿಂತ ವಿಷ್ಣು ಭಕ್ತ ಎಂಬ ಅರ್ಥವಿಸ್ತಾರ ದೊರಕಿದೆ. ಈ ಪ್ರಸಂಗದಲ್ಲಿ ಘಟನೆಗಿಂತ ಸಂಭಾಷಣೆಯೇ ಹೆಚ್ಚು.

ಇಂದ್ರಜಿತು ಕಾಳಗ :[12]

ಮಕರಾಕ್ಷನ ಸಾವಿನಿಂದ ಚಿಂತೆಗೊಂಡು ರಾವಣನಿಗೆ ಇಂದ್ರಜಿತು 'ಚಿಂತೆಯೇಕಲೆ ಜೀಯ ರಿಪುಕುಲದಂತಕನು ತಾನಿರಲು' ಎಂದು ಹೇಳಿ ರಣರಂಗಕ್ಕೆ ಬರುತ್ತಾನೆ. ಮೊದಲಿಗೆ ಮಾಯಾ ಸೀತೆಯನ್ನು ಕಡಿದು ರಾಮನನ್ನು ದುಃಖಕ್ಕೆ ದೂಡುತ್ತಾನೆ. ವಿಭೀಷಣನ ಸಮಾಧಾನೋಕ್ತಿಯಿಂದ ರಾಮನು ನಿಜ ವಿಚಾರವನ್ನು ತಿಳಿದು ಮತ್ತೆ ಯುದ್ಧ ಪ್ರಾರಂಭಿಸುತ್ತಾನೆ. ಈ ಮಧ್ಯದಲ್ಲಿ ಇಂದ್ರಜಿತವು 'ಮಾರಣಾಧ್ವರವ' ನಿಶ್ಚಯಿಸಿ ಕುಂಭಿನಿಯಲ್ಲಿಗೆ ಬರುತ್ತಾನೆ.

ಇದನ್ನು ತಿಳಿದ ವಿಭೀಷಣನು ರಾಮನ ಮೂಲಕ ಲಕ್ಷ್ಮಣನನ್ನು ಮತ್ತು ಕಪಿಗಳನ್ನು ಕಳಿಸಿ ಯಜ್ಞವನ್ನು ಕೆಡಿಸುತ್ತಾನೆ. ಇಂದ್ರಜಿತುವಿನೊಂದಿಗೆ ವಿಭೀಷಣನು ಯುದ್ಧಕ್ಕೆ ಬಂದಾಗ 'ಭಂಡರ ತಿಲಕ ತೊಲಗು' ಎಂದು ಯುದ್ಧ ಮಾಡಿ ಸೋಲಿಸುತ್ತಾನೆ. ಆತನನ್ನು ಕೊಲ್ಲಲು ಹನ್ನೆರಡು ವರ್ಷಗಳ ನಿದ್ರಾ ಮತ್ತು ಸತಿಯರ ಸ್ಪರ್ಶವಿಲ್ಲದ ವ್ಯಕ್ತಿಯಾಗಬೇಕು ಎಂದಾ ಲಕ್ಷ್ಮಣನೇ ನುಗ್ಗಿ ಆತನ ತಲೆಯನ್ನು ಕಡಿಯುತ್ತಾನೆ. ರಾಮನು ಲಕ್ಷ್ಮಣನ ಕಷ್ಟವನ್ನು ತಿಳಿದು ಹೊಗಳುತ್ತಾನೆ. ರಾವಣನು ಮಗನ ಶವವನ್ನು ಕಂಡು ದುಃಖಪಡುತ್ತಾನೆ.

ವೀರರಸ ಪ್ರಚುರವಾದ ಈ ಪ್ರಸಂಗವು ಪ್ರದರ್ಶನದಲ್ಲಿ ಹೆಚ್ಚು ಸಫಲಗೊಂಡಿದೆ. ಹಟ್ಟಿಯಂಗಡಿ ರಾಮಭಟ್ಟನು ಇದೇ ಪ್ರಸಂಗ ಬರೆದಿದ್ದರೂ ಅಚ್ಚಿಗೆ ಬಂದಿಲ್ಲ. ಇಂದ್ರಜಿತುವಿನ ಅಸಮಸಾಹಸ ಶೌರ್ಯವೇ ಇದರ ಕಥಾ ವಸ್ತು. ಆತನೇ ನಾಯಕ. ಕೊನೆಯಲ್ಲಿ ಸೌಮಿತ್ರಿಯ ಕೈಯಲ್ಲಿ ಅಸುನೀಗುವುದರ ಮೂಲಕ ಪೌರುಷ ಶಕ್ತಿಗಳ ಮಿತಿಯನ್ನು ತೆರೆದು ತೋರಿಸಲಾಗಿದೆ. ಇಲ್ಲಿ ಬರುವ ಯಜ್ಞದ ವರ್ಣನೆ ಬಲಿಕೊಡುವ ವಿಚಾರ, ಐಂದ್ರಜಾಲಿಕ ಶಕ್ತಿ ಇವೆಲ್ಲವೂ ಪ್ರೇಕ್ಷಕರ ಮುಂದೆ ಒಂದು ಹೊಸ ಲೋಕವನ್ನು ತೆರೆದಿಡುತ್ತದೆ.

ಮಾರೀಮುಖಿಗ ಕಾಳಗ :[13]

ರಾಮಾಯಣದ ಪ್ರಸಂಗಗಳಲ್ಲಿ ಜನಮನಕ್ಕೆ ಹೆಚ್ಚು ರಂಜಿಸಿದ್ದು ಕಾಳಗ ಪ್ರಧಾನವಾದ ಮಾರೀಮುಖಿನ ಕಾಳಗ, ಕಾಲನೇಮಿ ಕಾಳಗ, ಅತಿಕಾಯ ಕಾಳಗ, ಕುಂಭಕರ್ಣ ಕಾಳಗ ಮುಂತಾದವುಗಳು. ಎಲ್ಲಾ ಪ್ರಸಂಗಗಳಲ್ಲೂ ಕಾಳಗಗಳು ಅನಿವಾರ್ಯ ಅಂಗಗಳಂತಿದ್ದರೂ ಈ ಶಿರೋನಾಮೆಯನ್ನು ಹೊತ್ತ ಪ್ರಸಂಗಗಳು ಇನ್ನಷ್ಟು ಮನಸ್ಸನ್ನು ಕುಣಿಸುತ್ತವೆ. ಆದುದರಿಂದ ಶ್ರೀಮದ್ ರಾಮಾಯಣದಲ್ಲಿ ಅಷ್ಟೊಂದು ಹಿರಿಯಸ್ಥಾನ ಗಳಿಸದವರೆಲ್ಲಾ ಇಲ್ಲಿ ನಾಯಕಪಟ್ಟಕ್ಕೆ ಏರಿದ್ದಾರೆ. ಮಾರೀಮುಖಿನು ಹೋರಾಡಿದ ಬಗೆಯೇ ಇದರ ಕಥಾವಸ್ತು. ಇದನ್ನು ಬರೆದ ಕವಿಯ ಬಗ್ಗೆ ಅಸ್ಪಷ್ಟತೆ ಇದೆ.

ರಣರಂಗವು ಭಯಂಕರವಾಗುತ್ತಾ ಇರಲು ಮಾರೀಮುಖಿನು ರಾವಣನಿಂದ ನೇಮವನ್ನು ಪಡೆದು ಯುದ್ಧಕ್ಕೆ ಬರುತ್ತಾನೆ. ಹನುಮಂತ ಮತ್ತು ಜಾಂಬವಂತರನ್ನು ಮೊದಲ ಬಾರಿಗೆ ಎದುರಿಸುತ್ತಾನೆ. ಅವರಿಗೆ ಅಸಾಧ್ಯವಾಗಲು ರಾಮನೇ ಮಾರೀಮುಖಿನಿಗೆ ಎದುರಾಗುತ್ತಾನೆ. ಭಯಂಕರವಾದ ಯುದ್ಧದ ಕೊನೆಯಲ್ಲಿ ಆತನಿಗೆ ದೈವದರ್ಶನ ಭಾಗ್ಯವು ದೊರೆತು ಮರಣವನ್ನಪ್ಪುತ್ತಾನೆ. ವೀರರಸ ಪ್ರಧಾನವಾದ ಈ ಪ್ರಸಂಗದ ಬಗ್ಗೆ 'ಇದು ರಾಮಾಯಣದ ಒಂದು ಕಥೆ. ಸರಳವಾದ ಸುಲಭವಾದ ಭಾಷೆಯಿಂದಲೂ ಧಾಟಿಯಿಂದಲೂ ಕೂಡಿದಂತ ಒಂದು ರಚನೆ'[14] ಎಂದು ಡಾ. ಕಾರಂತರು ಹೇಳಿದ್ದಾರೆ.

ಮಕರಾಕ್ಷ ಕಾಳಗ :[15]

ಇಪ್ಪತ್ತನೆಯ ಶತಮಾನದಲ್ಲಿ ರಾಮಕಥೆಯನ್ನು ವಸ್ತುವಾಗಿರಿಸಿಕೊಂಡು ಪ್ರಸಂಗಗಳನ್ನು ರಚಿಸಿದ ಕೆಲವರಲ್ಲಿ ರಾಮಣ್ಣ ಶಗ್ರಿತ್ತಾಯರು ಒಬ್ಬರು. ಇವರ 'ರಾಮನಿಜಪಟ್ಟಾಭಿಷೇಕ', 'ಮಕರಾಕ್ಷ ಕಾಳಗ' ಮುಂತಾದವು ತೆಂಕುತಿಟ್ಟಿನಲ್ಲಿ ಪ್ರದರ್ಶನ ಗೊಳ್ಳುತ್ತಿರುವುದು ಹೆಚ್ಚು. ಇಲ್ಲಿ ಕಥಾನಾಯಕ ಮಕರಾಕ್ಷ. ರಾವಣನ ಸೇನಾಧಿಪತಿ. ಮಕರಾಕ್ಷನು ನೇಮವನ್ನು ಪಡೆದು ಕಾಳಗಕ್ಕೆ ಬರುತ್ತಾನೆ. ಅವರ ಶೌರ್ಯಕ್ಕೆ ಸೌಮಿತ್ರಿ ಮತ್ತು ವಿಭೀಷಣರು ಹಿಂಜರಿಯುತ್ತಾರೆ. ರಾಮನೇ ಹೋರಾಡಲು ಬರಬೇಕಾಗುತ್ತದೆ. ಅವರಿಬ್ಬರ ನಡುವಿನ ಕೊನೆಯ ಸುತ್ತಿನ ಹೋರಾಟದಲ್ಲಿ ಮಕರಾಕ್ಷನು ಸಾವನ್ನಪ್ಪುತ್ತಾನೆ. ಈ ಪ್ರಸಂಗ ಪ್ರದರ್ಶನಕ್ಕೆ ಯೋಗ್ಯವಾಗಿದ್ದು ರಂಜನೀಯ ಅಂಶದಿಂದ ಕೂಡಿದೆ.

ಯಕ್ಷಗಾನ ಅತಿಕಾಯ ಕಾಳಗ :[16]

ರಾವಣನು ತನಗೆ ಆಗುತ್ತಿರುವ ಸೋಲನ್ನು ನೆನೆಸಿಕೊಂಡು ಒಡ್ಡೋಲಗ ಕರೆದಾಗ ಅತಿಕಾಯ ಬಂದು "ಏತಕೇ ಮರುಳಾದೆ ತಾತ ರಘುನಾಥನೋಳ್ ಕಲಹವೇ ಲೋಕ ವಿಖ್ಯಾತ" ಎಂದರೂ ರಾವಣನ ಕೋಪವನ್ನು ನೋಡಿ ಯುದ್ಧಕ್ಕೆ ಹೋರಡುತ್ತಾನೆ. "ಬನ್ನಿರೈ ಸಂಸಾರ ಶರಧಿಯನ್ನು ದಾಟುವರು" ಎಂದು ಎಲ್ಲರೊಂದಿಗೆ ಬಂದ ಅತಿಕಾಯವನ್ನು ಕಂಡು ರಾಮನ ಪಡೆಯಲ್ಲಿ 'ವೀರವೈಷ್ಣವರೆರೆಯ ಬರುತ್ತಿದ್ದಾನೆಂದು' ಗಜಿಬಿಜಿಯಾಗುತ್ತದೆ. ಲಕ್ಷ್ಮಣನು ಮೊದಲಿಗೆ ಆತನನ್ನು ಎದುರಿಸುತ್ತಾನೆ. ಆತನಲ್ಲಿ

ಅತಿಕಾಯ 'ನಾವು ಸಮರಾಂಗಣದೊಳಾತ್ಮ ನಿವೇದಕರು' ಎಂದು ಹೇಳಿಕೊಳ್ಳುತ್ತಾನೆ. ಭಯಂಕರವಾದ ಯುದ್ಧದ ಕೊನೆಯಲ್ಲಿ ಅತಿಕಾಯನು ರಾಮನನ್ನು ನೆನೆಸುತ್ತಾ ಅಸುನೀಗುತ್ತಾನೆ. ಅತಿಕಾಯನ ತಾಯಿ ಧ್ಯಾನಮಾಲಿನಿಯು ಶೋಕಿಸುತ್ತಾಳೆ. ರಾವಣ ಸಮಾಧಾನಗೊಳಿಸಿ ತಾನೇ ಯುದ್ಧ ಭೂಮಿಗೆ ಬರುತ್ತಾನೆ. ಲಕ್ಷ್ಮಣನನ್ನು ಎದುರಿಸಿ ರಣದಲ್ಲಿ ಬೀಳುವಂತೆ ಮಾಡುತ್ತಾನೆ. ಹನುಮಂತನು ದಶಾನನಿಗೆ ಮುಷ್ಟಿಯ ಪ್ರಹಾರ ಮಾಡಿ ಬಿಸಿಬಿಸಿ ನೆತ್ತರನ್ನು ಕಾರಿಸುತ್ತಾನೆ. ರಾಮನು ರಾವಣನಲ್ಲಿ ಯುದ್ಧ ಮಾಡಿ ಸೋಲಿಸಿ ಹಿಮ್ಮೆಟ್ಟಿಸುತ್ತಾನೆ. ಲಕ್ಷ್ಮಣನ ಸಾವಿನಿಂದ ಶೋಕಗೊಂಡ ರಾಮನನ್ನು ಜಾಂಬವಂತನು ಸಮಾಧಾನಗೊಳಿಸಿ ಸಂಜೀವನವನ್ನು ತರಲು ಹನುಮಂತನನ್ನು ಅಟ್ಟುತ್ತಾನೆ.

"ಅತಿಕಾಯ" ಪಾತ್ರದ ನವೀನ ಸೃಷ್ಟಿ ಕುಮಾರ ವಾಲ್ಮೀಕಿಯ ಕೊಡುಗೆ.... ವಾಲ್ಮೀಕಿ ರಾಮಾಯಣದಲ್ಲಿ ಆದ್ರಿ ಸಂಕಾರನೂ ದೇವ ದಾನವ ದರ್ಪಹಾರನೂ ಆಗಿದ್ದ ಅತಿಕಾಯನು ಇಲ್ಲಿ ಅಂತರಂಗ ಘರ್ಷಣೆಯುಳ್ಳ ಉದಾತ್ತ ಚೇತನದ ವೀರ ವೈಷ್ಣವನಾಗಿ ಕಂಗೊಳಿಸಿದ್ದಾನೆ."[17] ಹಟ್ಟಿಯಂಗಡಿ ರಾಮಭಟ್ಟರು ಇದನ್ನೇ ಅನುಸರಿಸಿ ತನ್ನ ಪ್ರಸಂಗದಲ್ಲಿ ಒಬ್ಬ ವೀರಭಟನ ಶ್ರೇಷ್ಠ ಭಕ್ತನ ಉದಾತ್ತ ತ್ಯಾಗವನ್ನು ಚಿತ್ರಿಸಿದ್ದಾರೆ. ಅತಿಕಾಯನು ಯುದ್ಧಕ್ಕೆ ಹೊರಟ ಸಂದರ್ಭವಾಗಲೀ. ರಾವಣನೊಂದಿಗೆ ಆತನಾಡುವ ಮಾತುಗಳಾಗಲೀ ಚಿತ್ರವತ್ತಾಗಿ ಮೂಡಿ ಬಂದಿದೆ. ಸಾಹಿತ್ಯ ದೃಷ್ಟಿಯಿಂದ ಮಾತ್ರವಲ್ಲದೆ ಪ್ರಯೋಗ ದೃಷ್ಟಿಯಿಂದಲೂ ಉತ್ತಮವಾಗಿರುವ ಪ್ರಸಂಗಗಳಲ್ಲಿ ಇದೂ ಒಂದು. ತೊರವೆ ರಾಮಾಯಣವನ್ನು ಹೆಚ್ಚಾಗಿ ಅನುಸರಿಸಿಯೇ ಪ್ರಸಂಗ ರಚನೆಯಾಗಿದೆ.

ಕಾಲನೇಮಿ ಕಾಳಗ [18]

ಅತಿಕಾಯನ ಸಾವನ್ನು ತಿಳಿದು ಕೋಪಗೊಂಡು ಪ್ರತೀಕಾರದಿಂದ ಉರಿಯುತ್ತಿದ್ದ ರಾವಣನಲ್ಲಿಗೆ ಮಂಡೋದರಿ ಬಂದು ಬುದ್ಧಿವಾದ ಹೇಳಿದರೂ ಕೇಳದೇ ಯುದ್ಧಕ್ಕೆ ಹೊರಡುತ್ತಾನೆ. ಯುದ್ಧದಲ್ಲಿ ಸೋತು ಸಂಜೀವನವನ್ನು ತರಲು ಹೋದ ಹನುಮಂತನನ್ನು ತಡೆಯಬೇಕೆಂದು ಕಾಲನೇಮಿಯನ್ನು ಕಳಿಸುತ್ತಾನೆ. ಈ ಕಾಲನೇಮಿಯ ಮಾಯಾ ವಿಚಿತ್ರದಿಂದ ಹನುಮನ ಮಾರ್ಗಮಧ್ಯದಲ್ಲಿ ಆಶ್ರಮವನ್ನು ನಿರ್ಮಿಸಿ ಆತನು ಇಳಿದು ಬಂದಾಗ ಉಪಚರಿಸುತ್ತಾನೆ. ತನ್ನ ಮೋಡಿಯಿಂದ ಅವನನ್ನು ಕೊಲ್ಲಲು ಬಂದಾಗ ಹನುಮಂತನು ಭಕ್ತಿಬಲದಿಂದ ಖಳನ ಮಾಯವನ್ನು ಜಯಿಸುತ್ತಾನೆ. ಕಾಲನೇಮಿಯನ್ನು ಕೊಂದು ಸಂಜೀವನವನ್ನು ತಂದು ಲಕ್ಷ್ಮಣನನ್ನು ಹಾಗೂ ಉಳಿದ ಕಪಿಸೈನ್ಯವನ್ನು ಬದುಕುವಂತೆ ಮಾಡುತ್ತಾನೆ. ಹನುಮಂತನ ಸಾಹಸವೇ ಇಲ್ಲಿ ವಿಜೃಂಭಿಸಿದೆ. ಈ ಪ್ರಸಂಗ ಹಲವು ರೀತಿಯಲ್ಲಿ ತೊರವೇ ರಾಮಾಯಣಕ್ಕೆ ಋಣಿಯಾಗಿದೆ. ಕೆಲವು ಪದ್ಯಗಳನ್ನಂತೂ ಕವಿನೇರವಾಗಿ ಬಳಸಿದ್ದಾನೆ. ಮುಂದೆ ಆ ಬಗ್ಗೆ ಪ್ರಸ್ತಾಪಿಸಲಾಗಿದೆ. ಹನುಮ-ರಾವಣರ ನಡುವಿನ ಕಾಳಗ ಇಲ್ಲಿ ಹಾಸ್ಯ ಪೂರ್ಣವಾಗಿ ನಿರೂಪಿತವಾಗಿದೆ. ಋಷಿ, ರಾಕ್ಷಸ, ಕಪಿಗಳ ಪಾತ್ರಗಳಿಂದಾಗಿ ಪ್ರಯೋಗದಲ್ಲಿ ಯಶಸ್ವಿಯಾಗುವ ಅಂಶವನ್ನು ಪಡೆದುಕೊಂಡಿದೆ. ಈ ಕಥೆಯನ್ನು ಆನಂದ ರಾಮಾಯಣದಿಂದ ಪ್ರಸಂಗಕಾರ ಪರಮೇಶ್ವರನನ್ನು ತೆಗೆದುಕೊಂಡಿರಬೇಕು.

ಮೈರಾವಣ ಕಾಳಗ[19]

ರಾಮಾಯಣಗಳಲ್ಲಿ ಅಪೂರ್ವವಾದ ಒಂದು ಕಥೆ ಮೈರಾವಣ ಕಾಳಗ. ವಾಲ್ಮೀಕಿ ರಾಮಾಯಣದಲ್ಲಿ ಇದರ ಬಗ್ಗೆ ಯಾವ ಸುಳಿವೂ ಇಲ್ಲ. ವಾಲ್ಮೀಕಿ ರಾಮಾಯಣದ ರಚನೆಯ ನಂತರ ಅದು ವಿಸ್ತಾರಗೊಳ್ಳುತ್ತಾ ಹಲವು ರಾಮಾಯಣಗಳ ಹುಟ್ಟಿಕೊಂಡವು. ಒಂದೊಂದರಲ್ಲೂ ಒಂದೊಂದು ಜೀವನ ವಿಚಾರದ ಒಂದೊಂದು ದೃಷ್ಟಿಯು ಒಂದೊಂದು ಧರ್ಮವಿಚಾರದ ಅಂಶಗಳು ಪ್ರತಿಪಾದಿತವಾಯಿತು. 'ಕೆಲವು ಕವಿಗಳು ರಾಮಕಥಾ ವಸ್ತುವನ್ನು ತಮ್ಮ ದರ್ಶನದಲ್ಲಿ ರೂಪಾಂತರಿಸಿ ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ.'[20] ಹೊಸಕಥೆಗಳು ರಾಮಾಯಣ ಕಥೆಯಲ್ಲಿ ಸೇರಿಕೊಂಡವು. ಹಾಗೆ ಸೇರಿಕೊಂಡಿದ್ದರಲ್ಲಿ ಮೈರಾವಣ ಕಾಳಗವು ಒಂದು. ಪಾತಾಳ ಲಂಕೆಯಲ್ಲಿ ಮೈರಾವಣನ ವೈಭವದ ಒಡ್ಡೋಲಗ ನಡೆಯುತ್ತಿರುತ್ತದೆ. ತನ್ನ ಸೋದರಳಿಯ ನೀಲಮೇಘನಾದನು ಮುಂದೆ ತನ್ನ ಮೃತ್ಯುವಿಗೆ ಕಾರಣನಾಗುತ್ತಾನೆಂದು ಸೆರೆಯಲ್ಲಿ ಹಾಕಿಸಿರುತ್ತಾನೆ. ರಾಮ ರಾವಣರ ಯುದ್ಧ ತೀವ್ರವಾದ ಸಂದರ್ಭದಲ್ಲಿ ರಾವಣನು ಹಿಂದೆ ಐರಾವಣನು ಮಾತು ಕೊಟ್ಟದ್ದನ್ನು ನೆನೆಸಿಕೊಂಡು ಸಹಾಯ ಯಾಚಿಸುತ್ತಾನೆ. ಐರಾವಣನು ರಾಮಲಕ್ಷ್ಮಣರನ್ನು ಕೊಲ್ಲುವುದಾಗಿ ಹೇಳಿ ಮಾಯಾ ವಿದ್ಯೆಯಿಂದ ಹನುಮಂತನ ಕಾವಲನ್ನು ಭೇದಿಸಿ ರಾಮಸೈನ್ಯವನ್ನು ಸೇರಿಕೊಳ್ಳುತ್ತಾನೆ. ವಿಭೀಷಣನ ರೂಪದಿಂದ ರಾಮಲಕ್ಷ್ಮಣರನ್ನು ಪಾತಾಳ ಲಂಕೆಗೆ ಕರೆದೊಯ್ಯುತ್ತಾನೆ. ಅಲ್ಲಿ ಅವರಿಬ್ಬರನ್ನು ಬಲಿಕೊಡಬೇಕೆಂದು ನಿಶ್ಚಯಿಸುತ್ತಾನೆ. ರಾಮಲಕ್ಷ್ಮಣರಿಲ್ಲದಿರುವುದನ್ನು ತಿಳಿದು ರಾಮಸೈನ್ಯದಲ್ಲಿ ಗಲಿಬಿಲಿಯಾಗುತ್ತದೆ. ಐರಾವಣನ ಕೃತ್ಯ ಇದೆಂದು ಊಹಿಸಿದ ವಿಭೀಷಣನ ಆದೇಶದಂತೆ ಹನುಮಂತನು ಪಾತಾಳ ಲಂಕೆಗೆ ಬರುತ್ತಾನೆ. ಮಾರ್ಗ ಮಧ್ಯದಲ್ಲಿ ಮತ್ಸ್ಯವಾನರನ ಭೇಟಿಯಾಗುತ್ತದೆ. ತನ್ನ ಮಗನಾದ ಆತನನ್ನು ಹೊಗಳಿ ಆತನ ಸಹಾಯದಿಂದ ಮೇಘನಾದನ ತಾಯಿ ದುರುದುಂಬೆ ಎಂಬುವಳ ನೀರಿನ ಕೊಡದಲ್ಲಿದ್ದು ಕೋಟೆಯನ್ನು ಪ್ರವೇಶಿಸುತ್ತಾನೆ. ಒಳಹೊಕ್ಕು ರಕ್ಕಸರನ್ನು ಸದಬಡಿದು ಐರಾವಣನನ್ನು ಕಾಳಗಕ್ಕೆ ಕರೆಯುತ್ತಾನೆ. ಭಯಂಕರವಾದ ಯುದ್ಧದಲ್ಲಿ ಐರಾವಣ ಸಾವನ್ನಪ್ಪುತ್ತಾನೆ. ಮೇಘನಾದನಿಗೆ ಪಟ್ಟವನ್ನು ಕಟ್ಟಿ ರಾಮಲಕ್ಷ್ಮಣರನ್ನು ಹನುಮಂತನು ಹೊತ್ತು ಮರಳಿ ಬರುತ್ತಾನೆ. ಅವರಿಬ್ಬರೂ ನಿದ್ರೆಯಿಂದ ಎದ್ದವರಂತೆ ಎದ್ದು ನಿಲ್ಲುತ್ತಾರೆ.

ಹೀಗೆ ಅತ್ಯಂತ ವೀರರಸ ಪ್ರಧಾನವಾದ ಕಥಾಭಾಗ ಉಳ್ಳ ಈ ಪ್ರಸಂಗ ಕನ್ನಡ ಜಿಲ್ಲೆಯ ಜನತೆಗೆ ಬಹಳಷ್ಟು ಹಿಡಿಸಿದೆ. ಇಲ್ಲಿ ವೆಂಕಟನು ಪೌರುಷ ಪ್ರಧಾನವಾದ ಮಾತುಗಳನ್ನು ತುಂಬಿದ್ದಾನೆ.

ಕುಂಭಕರ್ಣ ಕಾಳಗ :[21]

ರಾವಣನು ಓಲಗದಲ್ಲಿ ಕುಳತಿದ್ದು ಮುಂದಣ ಕಾಳಗಕ್ಕೆ ನಿದ್ರಾವಶನಾದ ಕುಂಭಕರ್ಣ ಏಳಿಸಬೇಕೆಂದು ಚಾರರನ್ನು ಅಟ್ಟುತ್ತಾನೆ. 'ಜೇನುನೊಣಗಳು ಮುತ್ತುವಂದದಿ ದಾನವರು ಕೂಗಿದರು ಕಿವಿಯಲಿ ಬೇಟೆವಾದ್ಯಗಳ ಹೊಯ್ದರು.' ಆದರೂ 'ಏಳದಿರಲು ನಿದ್ರೆಯ ತಿಳಿದೇಳದಿರಲು' ರಾವಣನು 'ತಮ್ಮಗೆ ನಿದ್ರೆಯ ಕೊಟ್ಟ ಬೊಮ್ಮನ ಕರೆ' ಎನ್ನಲು

ಬೆದರಿ ಬ್ರಹ್ಮ ಬಂದು ಮಂತ್ರೋದಕವನ್ನು ಎರಚುತ್ತಾನೆ. ಆಗ ಅಬ್ಬರ ತಾಳದಲ್ಲಿ ಕುಂಭಕರ್ಣನ ಪ್ರವೇಶವಾಗುತ್ತದೆ. ಹಸಿದ ಆತನ ಹಾರಾಟ ತಡೆಯಲಾರದೆ, ಹೆಂಡದ ಗಡಿಗೆಗಳನ್ನು, ಮಾಂಸದ ಹೆಡಿಗೆಗಳನ್ನು ಮಂಡೆಗಳಲ್ಲಿ ತುಂಬಿಸಿ ಕಳುಹಿಸುತ್ತಾನೆ. ಸಾಕಷ್ಟು ಬಗೆಯ ಪಕ್ವಾನ್ನ, ಮುದಿಯಾನೆ, ಹೋರಿ, ಕೋಣ, ಕತ್ತೆಗಳಕೊಂದ ತಂದಿತ್ತರೈಸೂರ! ಆದರೂ ಪ್ರಯೋಜನವಾಗದೇ ಹೋದಾಗ, ಗುರು ಶುಕ್ರಾ ಚಾರ್ಯರನ್ನು ಕರೆಸಿ, ಮಂತ್ರ ಹಾಕಿಸುತ್ತಾರೆ. ಸಮಾಧಾನಗೊಂಡ ಕುಂಭಕರ್ಣನು ವಿಚಾರ ತಿಳಿದು 'ನಿನ್ನಂಥ ಜಾಣರಿಗಿದು ನೀತಿಯೇ ಪೇಳಣ್ಣ' ಎಂದು ಹೇಳಿದರೂ, "ಮುಂದೆ ಮಾಧವನ ಸೇರ್ವೆ ನಾ ವಿರೋಧದಿಂದಾರೂ ಸ್ವಾಮಿಯ ಪಾದವ ಹೊಂದುವೆ" ಎಂದು ಯುದ್ಧಕ್ಕೆ ಹೊರಡುತ್ತಾನೆ.

ಯುದ್ಧ ಭಯಂಕರವಾಗಿ ಸಾಗುತ್ತದೆ. 'ಕುಂಭಕರ್ಣನ ರಣದ ಸೊಬಗಿನ ಸಂಭ್ರಮದ ನೋಡುತ್ತ ದಿವಿಜ ಕದಂಬ ಬೆರಗಿನಲಿದ್ದುದು' ರಾಮನೊಂದಿಗೆ ಹೋರಾಡುತ್ತಾ ರಾಮಬಾಣಕ್ಕೆ ಗುರಿಯಾಗಿ ಸಾವನಪ್ಪುತ್ತಾನೆ.

ಕುಂಭಕರ್ಣ ಕಾಳಗವು ಕೆಲವು ರೀತಿಯಲ್ಲಿ ವಿಶಿಷ್ಟವಾಗಿದೆ. ಆತನನ್ನು ನಿದ್ರೆಯಿಂದ ಏಳಿಸಲು ಮಾಡಿದ ವರ್ಣನೆ, ಅವನಿಗೆ ಕೊಟ್ಟ ಆಹಾರ ಪದಾರ್ಥಗಳ ವಿವರಣೆ, ಅವನ ಪರಾಕ್ರಮದ ನಿರೂಪಣೆ ಇವೆಲ್ಲಾ ಉಳಿದ ಪ್ರಸಂಗದಳಿಗಿಂತ ಭಿನ್ನವಾಗಿ ಬಂದಿವೆ. ತೊರವೇ ರಾಮಾಯಣಕ್ಕಿಂತ ಇಲ್ಲಿನ ಕುಂಭಕರ್ಣ ಭಿನ್ನನಾಗಿದ್ದಾನೆ. ಅಣ್ಣನ ನೋವನ್ನು ನೋಡಿ ಕುಂಭಕರ್ಣನು ಮನಕರಗಿ ಯುದ್ಧಕ್ಕೆ ಹೊರಡುತ್ತಾನೆ.

ರಾವಣೇಶ್ವರ ಕಾಳಗ :[22]

ಎಲ್ಲರನ್ನು ಕಳೆದುಕೊಂಡ ರಾವಣ ತಾನೇ ರಣಾಂಗಣಕ್ಕೆ ಹೊರಡಲು ಸಿದ್ಧನಾಗುತ್ತಾನೆ. ಮಂಡೋದರಿಯೊಂದಿಗೆ ಸಂಭಾಷಿಸುತ್ತಾ ರಾಮನ ಅವತಾರ ಮಹಿಮೆಯನ್ನು ಕೊಂಡಾಡುತ್ತಾನೆ. ತನ್ನ ಪೂರ್ವಜನ್ಮ ವೃತ್ತಾಂತವನ್ನು ತಿಳಿಸಿ ಸಂತೋಷದಿಂದಲೇ ಮರಣಕ್ಕೆ ಸಿದ್ಧನಾಗುತ್ತಾನೆ. ದಾನ ಧರ್ಮಾದಿಗಳನ್ನು ಮಾಡಿ ಯುದ್ಧ ಭೂಮಿಗೆ ಬಂದು ಹೋರಾಡುತ್ತಾನೆ. ರಾವಣನು ಮಾರಣಾಧ್ವರವನ್ನು ಮಾಡುತ್ತಿರುವಾಗ ಶ್ರೀರಾಮನ ಅಪ್ಪಣೆಯಂತೆ ಕಪಿಗಳು ಬಂದು ಉಪಟಳ ಕೊಟ್ಟು ವಿಘ್ನವನ್ನುಂಟು ಮಾಡುತ್ತಾರೆ. ಹನುಮಂತನು ರಾಮನಿಂದೆಗೆ ಗುರಿಯಾಗುತ್ತಾನೆ. ಮಾರನೆಯ ದಿನ ರಾಮರಾವಣರ ಘೋರ ಯುದ್ಧ ಸಂಭವಿಸುತ್ತದೆ. ಅಗಸ್ತ್ಯರು ಬಂದು ಸೂರ್ಯ ಕವಚವನ್ನು ಬೋಧಿಸಿ ರಾಮನನ್ನು ಆಶೀರ್ವದಿಸುತ್ತಾರೆ. ಕೊನೆಯ ಹೋರಾಟದಲ್ಲಿ ರಾವಣ ಮೃತ್ಯುವನ್ನಪ್ಪುತ್ತಾನೆ.

ಇದು ಇಪ್ಪತ್ತನೆಯ ಶತಮಾನದಲ್ಲಿ ರಚಿತಗೊಂಡ ಕೃತಿಯಾಗಿದೆ. ಇಲ್ಲಿನ ಮುಖ್ಯ ಕಥೇ ರಾಮರಾವಣ ಕಾಳಗವೇ. ರಾವಣನ ಪಾತ್ರವನ್ನು ಉದಾತ್ತೀಕರಿಸಲು ಪ್ರಸಂಗಕಾರರು ಪ್ರಯತ್ನಿಸಿ ಸಫಲರಾಗಿದ್ದಾರೆ. ಇಲ್ಲಿನ ವರ್ಣನೆ ಮನಮುಟ್ಟುವಂತಿದ್ದು ಕೌಶಿಕ ಹಾಗೂ ತೊರವೇ ರಾಮಾಯಣಗಳ ಪ್ರಭಾವದಿಂದ ಕೂಡಿದೆ.

ರಾವಣಾಸುರನ ಕಾಳಗ :[23]

ಇದರಲ್ಲಿ ಕಥಾಸಾರಾಂಶವು ಎಲ್ಲಾ ರೀತಿಯಲ್ಲೂ ರಾವಣೇಶ್ವರನ ಕಾಳಗವನ್ನೆ ಹೋಲುತ್ತದೆ. ಒಂದೆರಡು ಚಿಕ್ಕಪುಟ್ಟ ಬದಲಾವಣೆಗಳನ್ನು ಕವಿ ಮಾಡಿಕೊಂಡಿದ್ದಾನೆ. ಸ್ವರ್ಗದಿಂದ ಮಾತಲಿಯು ಇಳಿದು ಬಂದು ಧನುಸ್ಸನ್ನು ಮತ್ತು ಅಮೃತ ಕಳಶವನ್ನು ಕೊಡುತ್ತಾನೆ. ನಾರದನ ಪ್ರವೇಶ ಹಾಗೂ ದೇವೇಂದ್ರನ ರಥದ ವಿಚಾರ ಇಲ್ಲಿ ಬಂದಿದೆ. ಸರಳವಾದ ನಿರೂಪಣೆ ಚಿಕ್ಕ ಚಿಕ್ಕ ಪದ್ಯಗಳು ಇಲ್ಲಿ ತುಂಬಿವೆ. ರಾವಣನ ವ್ಯಕ್ತಿತ್ವದ ಸ್ಫುಟ ಚಿತ್ರಣ ಕವಿಕಟ್ಟಿಕೊಟ್ಟಿದ್ದಾನೆ. ಹಾಡುಗಳ ಬಂಧದಲ್ಲಿ ಸಡಿಲತೆ ಇದೆ. ಹಾಗೆಯೇ ಪಾರ್ತಿಸುಬ್ಬ ಮುಂತಾದವರ ಅನುಸರಣೆ ಇದೆ.

ರಾಮ ಪಟ್ಟಾಭಿಷೇಕ ಮತ್ತು ಲವಣಾಸುರ ಕಾಳಗ :[24]

ಯುದ್ಧವೆಲ್ಲಾ ಮುಗಿದಿದ್ದು ಅಣ್ಣನ ಮರಣದಿಂದ ವಿಭೀಷಣ ದುಃಖಿತನಾಗಿದ್ದಾನೆ. ರಾಮನು ಸಮಾಧಾನಗೊಳಿಸಿ ವಿಭೀಷಣನಿಗೆ ಪಟ್ಟಕಟ್ಟಿಸುತ್ತಾನೆ. ಸೀತೆಯನ್ನು ಕರೆಸಿದಾಗ ಆಕೆ ಶೃಂಗಾರಗೊಂಡು ಬಂದಳೆಂದು ಸಿಟ್ಟುಗೊಂಡು ತಿರಸ್ಕರಿಸುತ್ತಾನೆ. ತನ್ನನ್ನು ಪರೀಕ್ಷೆಮಾಡಲು ಅಗ್ನಿ ಪ್ರವೇಶವನ್ನು ಆಕೆಯೇ ಸೂಚಿಸುತ್ತಾಳೆ. ಆ ಸಮಯದಲ್ಲಿ ದೇವತೆಗಳು ದಶರಥನು ಪ್ರತ್ಯೇಕವಾಗಿ ಸೀತೆಯನ್ನು ಸ್ವೀಕರಿಸುವಂತೆ ತಿಳಿಸುತ್ತಾರೆ. ಅಂತೆಯೇ ಮಾಡಿ ಅಯೋಧ್ಯೆಗೆ ಹಿಂತಿರುಗುತ್ತಿರುವಾಗ ಗಂಧಮಾದನಗಿರಿ ಇದ್ದಲ್ಲಿಗೆ ಬಂದು ಪೂಜೆಯನ್ನು ಸಲ್ಲಿಸಲು ರಾಮನು ನಿರ್ಧರಿಸುತ್ತಾನೆ. ಶಿವಲಿಂಗವನ್ನು ತರಲು ಹನುಮಂತನು ರಜತಾದ್ರಿಗೆ ಹೋಗಿ ನರ್ಮದೆಯಲ್ಲಿ ಲಿಂಗವಿರುವುದೆಂದು ಹೋದಾಗ ಆತನು ಬರುವುದು ನಿಧಾನವಾಗುತ್ತದೆ. ಮಳಲ ಲಿಂಗದಿಂದ ರಾಮನು ಪೂಜೆಮಾಡುತ್ತಾನೆ. ಹನುಮನು ಲಿಂಗಸಹಿತವಾಗಿ ಬಂದಾಗ ರಾಮನ ಕೃತ್ಯವನ್ನು ನೋಡಿ ಕೋಪಿಸಿಕೊಳ್ಳುತ್ತಾನೆ. ರಾಮನು ಬುದ್ಧಿವಾದ ಹೇಳಿ ಹನುಮನನ್ನು ಭರತನಲ್ಲಿಗೆ ಕಳುಹಿಸಿ ಆತನ ಅಗ್ನಿಪ್ರವೇಶವನ್ನು ತಪ್ಪಿಸುತ್ತಾನೆ. ಮುಂದೆ ರಾಮನಿಗೆ ಪಟ್ಟಾಭಿಷೇಕವಾಗುತ್ತದೆ.

ಇತ್ತ ಮಧುರಾ ಪಟ್ಟಣದಲ್ಲಿ ಶೂಲಾಯುಧ ಹೊಂದಿದ ಲವಣಾಸುರನು ರಾವಣನ ಸಾವನ್ನು ತಿಳಿದು ಕೋಪಗೊಂಡು ರಾಮನೊಂದಿಗೆ ಯುದ್ಧಕ್ಕೆ ಬರುತ್ತಾನೆ. ಶತ್ರುಘ್ನನು ಯುದ್ಧಕ್ಕೆ ಹೊರಟು ರಾಮನು ಕರುಣಿಸಿದ ಮಹಾಸ್ತ್ರದಿಂದ ಅವನನ್ನು ಕೊಲ್ಲುತ್ತಾನೆ. ಕವಿ ಕೈಯ್ಯಾರ ಕಿಞ್ಞಣ್ಣರೈಯವರು ಈ ಪ್ರಸಂಗದ ಬಗ್ಗೆ "ಭಾಷೆಯ ಲಾಲಿತ್ಯ, ರಾಗತಾಳಗಳ ಜ್ಞಾನ, ಛಂದೋ ಗತಿ, ವಿವಿಧ ಘಟನೆಗಳನ್ನು ಜೋಡಿಸಿ ಪ್ರೇಕ್ಷಕರನ್ನು ಬೆರಗು ಗೊಳಿಸುವ ಚಮತ್ಕೃತಿ ಇವೆಲ್ಲವೂ ಇಲ್ಲಿ ಒಳಗೊಂಡಿದೆ"ಯೆಂದು ಅಭಿಮಾನದಿಂದ ಹೇಳಿರುವುದು ಸತ್ಯಕ್ಕೆ ದೂರವಾಗಿಲ್ಲ.[25] ಇವರು ಈ ಪ್ರಸಂಗದ ನಿಜವಾದ ವಿಮರ್ಶೆಯನ್ನು ಮಾಡಿದ್ದಾರೆ. ಉತ್ತಮ ಭಾಗವತರಾದ ರಾಮಕೃಷ್ಣ ಭಾಗವತರು ಅತ್ಯಂತ ಭಾವುಕರಾಗಿ ಹಾಡುಗಳನ್ನು ಹೆಣೆಯ ಬಲ್ಲರು ಎಂಬುದಕ್ಕೆ ಈ ಕೆಳಗಿನ ಹಾಡು ಉದಾಹರಣೆಯಗಿದೆ.

"ಚಿತ್ತವಿಸ್ಮೈ ದೇವಾ ಚಿತ್ತದ ವ್ಯಥೆಯ
ಎತ್ತಣ ಮೋಹವೋ ಮುತ್ತಿದೆ ಹೃದಯ
ಹೆತ್ತಯ್ಯನಗಲಿದ ಮತ್ತೆಯೊಟ್ಟಾಗಿ
ಬತ್ತಿದ ಪ್ರೇಮವಚ್ಚೊತ್ತಿದೆ ಸಾಗೀ."[26]

ಪ್ರಚಂಡ ಲಂಕೇಶ್ವರ :[27]

ಕೈಕಸೆಯು ವಿಶ್ರ ವಸುವನ್ನು ಬಯಸಿ, ಮದುವೆ ಮಾಡಿಕೊಂಡು ಮಕ್ಕಳನ್ನು ಪಡೆಯುತ್ತಾಳೆ. ಮಕ್ಕಳುಗಳಲ್ಲಿ ರಾವಣ, ಕುಂಭಕರ್ಣ, ಶೂರ್ಪನಖಿಯರು ದುಷ್ಟರಾಗಿ, ವಿಭೀಷಣನು ಉತ್ತಮ ಗುಣವುಳ್ಳವನಾಗಿ ಬೆಳೆಯುತ್ತಾರೆ. ಹೆಚ್ಚಿನ ಶಕ್ತಿಗಾಗಿ ತಪಸ್ಸನ್ನು ಮಾಡಿ ವರಗಳನ್ನು ಪಡೆಯುತ್ತಾರೆ. ಮುಂದೆ ರಕ್ಕಸರೆಲ್ಲಾ ಇವರನ್ನು ಸೇರಿಕೊಂಡು ಲಂಕೆಯಲ್ಲಿದ್ದ ಕುಬೇರನನ್ನು ಓಡಿಸುತ್ತಾರೆ. ಇದರಿಂದಾಗಿ ರಾವಣನು ಲಂಕೇಶ್ವರನಾಗುತ್ತಾನೆ. ರಾವಣ ಬೇಟೆಯಾಡುತ್ತಾ ಜಲಕ್ರೀಡೆಯಾಡುತ್ತಿದ್ದ ಮಂಡೋದರಿಯನ್ನು ಮೋಹಿಸಿ ಮಯನಲ್ಲಿ ಮದುವೆ ಮಾಡಿಕೊಡೆಂದು ಕೇಳುತ್ತಾನೆ. ಮಯನು 'ಧನ್ಯನಾದೆನು ದಾನವೇಂದ್ರ ಎನ್ನ ಕನ್ಯೆಯ ನಿನಗೀವೆ' ಎಂದು ಮದುವೆ ಮಾಡಿಸಿಕೊಡುತ್ತಾನೆ. ಮುಂದೆ ದಿಗ್ವಿಜಯಕ್ಕೆ ಹೊರಟ ರಾವಣನು ಅಯೋಧ್ಯೆಯ ರಾಜನಾದ ಅನರಣ್ಯನನ್ನು ಸೋಲಿಸಿ ಅವನ ಶಾಪಕ್ಕೆ ಗುರಿಯಾಗುತ್ತಾನೆ. ತಪೋನಿರತಳಾದ ವೇದವತಿಯನ್ನು ಕಾಮಿಸಿ ಅವಳು ಬೇಡವೆಂದರೂ ಕೇಳದೆ ಕೈಹಿಡಿಯಲು ಹೋಗಿ ಇನ್ನೊಂದು ಶಾಪಕ್ಕೆ ಬಲಿಯಾಗುತ್ತಾನೆ. ಲಂಕೇಶ್ವರನು ಯಮನ ಪಟ್ಟಣ ಸೇರಿ ಅವನೊಂದಿಗೇ ಯುದ್ಧ ಮಾಡುತ್ತಾನೆ. ದೇವಲೋಕಕ್ಕೆ ಯುದ್ಧಕ್ಕೆಂದು ಹೊರಟಾಗ, ರಂಭೆಯನ್ನು ಬಲಾತ್ಕಾರವಾಗಿ ಭೋಗಿಸಿ ನಳನ ಶಾಪಕ್ಕೆ ಗುರಿಯಾಗುತ್ತಾನೆ. ಮುಂದೆ ದೇವತೆಗಳನ್ನೇನೋ ಗೆಲ್ಲುತ್ತಾನೆ. ಆದರೆ ಈ ಮೂರು ಶಾಪಗಳಿಂದ ತನ್ನ ಅವಸಾನವನ್ನು ತಾನೇ ಕೈಯಾರೆ ತಂದುಕೊಳ್ಳುತ್ತಾನೆ.

ಈ ಪ್ರಸಂಗ ಉತ್ತರ ಕನ್ನಡದಲ್ಲಿ ಬಹಳ ಪ್ರಚಲಿತವಾಗಿದೆ. ಕವಿಹೃದಯವುಳ್ಳ ಹೆಗ್ಗಡೆಯವರು ರಾಗತಾಳ ಬದ್ಧವಾಗಿರುವ ಸುಂದರ ವರ್ಣನೆಗಳನ್ನು ಸಾಕಷ್ಟು ತಂದಿದ್ದಾರೆ. ರಾವಣನ ಏರು ಜೀವನದ ಚಿತ್ರಣ ಇಲ್ಲಿ ಚಿತ್ರಿತವಾಗಿದೆ. ಪ್ರಸಿದ್ಧ ಭಾಗವತರಾದ ಕಡತೋಕರು ಇದರ ಕಾವ್ಯ ಮಾಧುರ್ಯವನ್ನು ಹೊಗಳಿದ್ದಾರೆ.[28]

ಕುಶಲವರ ಕಾಳಗ ;[29]

ರಾಮಾಯಣದ ಉತ್ತರ ಕಾಂಡದಲ್ಲಿ ಕಥೆ ಬಂದಿದ್ದರೂ ಈ ಪ್ರಸಂಗವು ಜೈಮಿನೀ ಭಾರತದಿಂದ ವಸ್ತುವನ್ನು ಆಯ್ದುಕೊಂಡಿರುವುದು ಸ್ಪಷ್ಟವಾಗಿದೆ. ಪಟ್ಟಾಭಿಷಿಕ್ತನಾದ ರಾಮನು ವನವಿಹಾರಕ್ಕೆ ಹೋಗುತ್ತಾನೆ. ಮುಂದೆ ಸೀತೆ ಗರ್ಭಿಣಿಯಾದುದನ್ನು ತಿಳಿದು ಸಂತೋಷಗೊಳ್ಳುತ್ತಾನೆ. ಆಕೆಯ ಮೇಲೆ ಅಗಸನೊಬ್ಬನು ಆಡಿದ ಅಪವಾದದ ಮಾತಿನಿಂದ ಖಿನ್ನವಾದ ರಾಮ ಅವಳನ್ನು ಅರಣ್ಯಕ್ಕೆ ಬಿಟ್ಟು ಬರುವಂತೆ ಲಕ್ಷ್ಮಣನನ್ನು ನೇಮಿಸುತ್ತಾನೆ. ಮೊದಲಿಗೆ ವನವಿಹಾರವೆಂದು ಸಂತೋಷಗೊಂಡ ಸೀತೆ ನಿಜವಿಚಾರವನ್ನು ತಿಳಿದು ಗೋಳಾಡುತ್ತಾಳೆ. ಏಕಾಂಗಿಯಾದ ಆಕೆಯನ್ನು ವಾಲ್ಮೀಕಿ

ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಕುಶಲವರು ಜನಿಸುತ್ತಾರೆ. ಮಕ್ಕಳ ಬಾಲ ಲೀಲೆಯಲ್ಲಿ ದಿನಗಳು ಸರಿಯುತ್ತವೆ. ಬಿಲ್ಲು ವಿದ್ಯೆಯನ್ನು ಕಲಿತ ಮಕ್ಕಳು ವಾಲ್ಮೀಕಿ ಮಹರ್ಷಿಯ ವರುಣಲೋಕದ ಯಾಗಕ್ಕೆ ಹೋಗಿದ್ದ ಸಮಯದಲ್ಲಿ ರಾಮನ ಅಶ್ವಮೇಧದ ಕುದುರೆಯನ್ನು ಹಿಡಿದು ಕಟ್ಟುತ್ತಾರೆ. ಶತ್ರುಘ್ನ 'ಅಶ್ವ ಬಿಡು ಎಂದರೆ 'ದಿಟ್ಟ'ನಾದರ ಇದನ್ನು ಬಿಟ್ಟುಕೊಂಡು ಹೋಗು' ಎನ್ನುತ್ತಾನೆ. ಮೊದಲಿಗೆ ಲವ ಸೋತರೂ ಕುಶನ ಪರಾಕ್ರಮದಿಂದ ಶತ್ರುಘ್ನ ಸೋಲುತ್ತಾನೆ. ರಾಮನಿಗೆ ಸುದ್ದಿ ಬಂದು ಭರತನನ್ನು ಯುದ್ಧಕ್ಕೆ ಕಳುಹಿಸುತ್ತಾನೆ. ಭರತನೂ ಮೂರ್ಛೆ ಹೋದಾಗ ಯಾಗ ದೀಕ್ಷೆಯಲ್ಲಿದ್ದ ರಾಮ ತಾನೇ ಬರುತ್ತಾನೆ. "ಗುಣಕ್ಕೆ ಹುರುಡೇ ಜಾಣರೆನುತ ಇನ್ನಾದರೂ ಬೇಡ ಬೇಡ ಮಕ್ಕಳಿರಾ" ಎನ್ನುತ್ತಾನೆ. ಆದರೂ ಕೇಳದೇ ಯುದ್ಧಮಾಡಿ ಅವನನ್ನು ಮೂರ್ಛೆಗೊಳಿಸುತ್ತಾರೆ. ಅಲ್ಲಿಗೆ ಬಂದ ವಾಲ್ಮೀಕಿ ತಪೋಜಲದಿಂದ ಎಲ್ಲರನ್ನೂ ಬದುಕಿಸುತ್ತಾನೆ. ರಾಮನು ಸೀತೆಯ ವಿಚಾರವನ್ನು ತಿಳಿದು ಸಂತೋಷಗೊಂಡು ಹಿಂದಣ ಮುನಿಸನ್ನು ಮರೆತು ತನ್ನ ನಿಜಪುರಕ್ಕೆ ತೆರಳುತ್ತಾನೆ.

ಇದೇ ಕಥಾವಸ್ತುವಿನ ಮೇಲೆ ಸುಮಾರು ಐದು ಜನ ಪ್ರಸಂಗಕಾರರು ಪ್ರಸಂಗಗಳನ್ನು ಬರೆದಿರುತ್ತಾರೆ. ಅವರೆಂದರೆ ಅಳಿಯ ಲಿಂಗರಾಜ, ಹೆಳವನಕಟ್ಟೆ ಗಿರಿಯಮ್ಮ, ತಿಪ್ಪಣಾರ್ಯ, ರಾಮಭಟ್ಟ ಮತ್ತು ಪಾರ್ತಿಸುಬ್ಬ. ಕೊನೆಯಲ್ಲಿಬ್ಬರ ಕೃತಿಗಳು ಪ್ರದರ್ಶನದಲ್ಲಿ ಪ್ರಚಲಿತವಾಗಿವೆ. ರಾಮಭಟ್ಟನು ಈ ಕಥಾವಸ್ತುವನ್ನು ಬದಲಿಸಿಕೊಂಡು ತನ್ನ 'ಲವಕುಶರ ಕಾಳಗ'ದಲ್ಲಿ ಸೀತೆಗೆ ಒದಗಿದ ದುಃಖಕ್ಕೆ 'ಶೂರ್ಪನಖಿಯ ಆರದ ಸೇಡಿನ ಫಲ' ಎಂದು ರೂಪಿಸಿದ್ದಾನೆ. ಶೂರ್ಪನಖಿಯ ಕುಟಿಲತೆಯಿಂದಾಗಿ ಸೀತೆ ಶ್ರೀರಾಮನ ಅನುಮಾನಕ್ಕೆ ಗುರಿಯಾಗಿ ಕಾಡನ್ನು ಸೇರುತ್ತಾಳೆ. ಮುಂದೆ ತಂದೆ ಮಕ್ಕಳಲ್ಲಿ ಯುದ್ಧ ಸಂಭವಿಸುವಂತೆ ಮಾಡುವಲ್ಲಿ ಕೂಡ ಆಕೆಯ ಕೈವಾಡ ಇದೆ. ಇಲ್ಲಿನ ಕಥಾನಿರೂಪಣೆ ಬಹು ಆಕರ್ಷಕವಾಗಿದೆ. ಪಾರ್ತಿಸುಬ್ಬನು ಹೆಚ್ಚಾಗಿ ಜೈಮಿನಿಯನ್ನೇ ಅನುಸರಿಸಿದ್ದಾನೆ. ಇವೆರಡೂ ಪ್ರಸಂಗಗಳು ಉತ್ತಮವಾಗಿ ನಿರೂಪಿತಗೊಂಡಿವೆ.

ಲವಕುಶರ ಕಾಳಗ[30]

ರಾಮಾಯಣದ ಉತ್ತರಕಾಂಡಕ್ಕೆ ಸಂಬಂಧಿಸಿದ ಕಥೆ ಇಲ್ಲಿದೆ. ಪಟ್ಟಾಭಿಷೇಕದ ನಂತರ ಹಿಂದೆ ಭಂಗಿತಳಾಗಿದ್ದ ಶೂರ್ಪನಖಿ ತನ್ನ ಸೇಡನ್ನು ಹೇಗಾದರೂ ತೀರಿಸಿಕೊಳ್ಳಬೇಕೆಂದು ಹವಣಿಸಿ, ರಾಮನಿಲ್ಲದ ಹೊತ್ತಿನಲ್ಲಿ ಮಂಥರೆಯ ರೂಪದಿಂದ ಬಂದು ಸೀತೆಯ ಕೈಯಿಂದ ರಾವಣನ ಉಂಗುಷ್ಠದ ಚಿತ್ರ ಬರೆಸುತ್ತಾಳೆ. ಮುಂದೆ ತಾನು ಪೂರ್ಣಗೊಳಿಸಿದ ಆ ಚಿತ್ರಪಟವನ್ನು ಅಲ್ಲೇ ಬಿಟ್ಟು ಹೋಗುತ್ತಾಳೆ. ಮುಂದೆ ರಾಮನಿಗೆ ಆ ಚಿತ್ರಪಟಸಿಕ್ಕಿ ಸಿಟ್ಟುಗೊಂಡು ಸೀತೆಯನ್ನು ಕಾಡಿಗೆ ಅಟ್ಟ ವಧಿಸುವಂತೆ ಆಜ್ಞಾಪಿಸುತ್ತಾನೆ. ಸೀತೆ ಗರ್ಭಿಣಿ ಎಂದು ತಿಳಿದ ಲಕ್ಷಣ ಅವಳನ್ನು ಕೊಲ್ಲದೆ ಅಯೋಧ್ಯೆಗೆ ಮರಳಿ ಬಂದು ಕೊಂದೆನೆಂದು ತಿಳಿಸುತ್ತಾನೆ. ನಾರದನ ನೆರವಿನಿಂದ ವಾಲ್ಮೀಕಿಯ ಆಶ್ರಮ ತಲುಪಿದ ಸೀತೆ ಮೊದಲಿಗೆ ಲವನನ್ನು ಹೆರುತ್ತಾಳೆ. ಮುಂದೆ ವಾಲ್ಮೀಕಿಯು ಒಂದು ದರ್ಭೆಯಿಂದ ಇನ್ನೊಂದು ಮಗುವನ್ನು ಸೃಷ್ಟಿಸಿ ಕುಶನೆಂದು ಹೆಸರಿಡುತ್ತಾನೆ. ಲವಕುಶರು ಬೆಳೆದು ಒಮ್ಮೆ ಬೇಟೆಯಾಡಲು ಕಾಡಿಗೆ ತೆರಳಿದಾಗ ಮತ್ತೆ ಕಾಣಿಸಿಕೊಂಡ

ಶೂರ್ಪನಖಿ ದ್ವೇಷದಿಂದ ಲವನನ್ನು ಅಪಹರಿಸುತ್ತಾಳೆ. ಆದರೆ ಕುಶನ ಕೌಶಲ್ಯದಿಂದ ಸೋತು ಲಂಕೆಗೆ ಹಿಂದುರುಗಿ ವಿಭಿಷಣನಿಗೆ ಚಾಡಿ ಹೇಳುತ್ತಾಳೆ. ವಿಭೀಷಣ ಸೈನ್ಯದೊಂದಿಗೆ ಕಾಡಿಗೆ ಬಂದು ಲವಕುಶರೊಂದಿಗೆ ಯುದ್ಧಮಾಡುವಾಗ ಸೀತಾ ಪುತ್ರರೆಂದು ತಿಳಿದು ಲಂಕೆಗೆ ಹಿಂದಿರುಗುತ್ತಾನೆ. ಸೇಡು ಆರದ ಶೂರ್ಪನಖಿ ಮತ್ತೆ ಕೊರವಂಜಿಯ ರೂಪದಲ್ಲಿ ರಾಮನಲ್ಲಿಗೆ ಬಂದು ಕಾಡಿನಲ್ಲಿರುವ ಇಬ್ಬರು ಹುಡುಗರ ಪ್ರಾಣವನ್ನು ಪರಕೆಗೆ ಬಲಿಯಾಗಿ ತಂದುಕೊಡಬೇಕೆಂದು ಕೋರುತ್ತಾಳೆ.

ರಾಮನ ಆದೇಶದೊಂದಿಗೆ ಸೈನ್ಯದೊಂದಿಗೆ ಕಾಡಿಗೆ ಬಂದ ಲಕ್ಷ್ಮಣನು ಲವಕುಶರಲ್ಲಿ ಯುದ್ಧಮಾಡಿ ಲವನನ್ನು ಸೆರೆ ಹಿಡಿದುಕೊಂಡು ಹೋಗುತ್ತಾನೆ. ತಾಯಿಯಿಂದ ಮಾಹಿತಿ ಪಡೆದು ಕುಶನು ಸೈನ್ಯದ ಬೆನ್ನಟ್ಟುತ್ತಾನೆ. ರಾಮನು ಕುಶನೊಂದಿಗೆ ಯುದ್ಧಮಾಡುವಾಗ ಲಕ್ಷ್ಮಣನಿಂದ ಸತ್ಯ ಸಂಗತಿ ತಿಳಿಯುತ್ತದೆ. ಮುಂದೆ ಶ್ರೀರಾಮನು ಆಶ್ರಮಕ್ಕೆ ಬಂದು ಸೀತೆ ಹಾಗೂ ಮಕ್ಕಳನ್ನು ವೈಭವದಿಂದ ಅಯೋಧ್ಯೆಗೆ ಕರೆದು ಕೊಂಡು ಹೋಗುತ್ತಾನೆ.

ಪಟ್ಟಿಯಂಗಡಿ ರಾಮಭಟ್ಟನು ಬರೆದ ಈ ಪ್ರಸಂಗದ ಮೂಲ ಆಕರ ಯಾವುದು ಎಂಬುದು ಚರ್ಚೆಗೆ ಒಳಪಟ್ಟ ವಿಷಯ. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಈ ಕತೆ ಬಂದಿಲ್ಲ. ಆನಂದ ರಾಮಾಯಣ ಹಾಗೂ ಹೆಳವನ ಕಟ್ಟೆ ಗಿರಿಜಮ್ಮನ (18ನೇ ಶತಮಾನದಲ್ಲಿದ್ದ ಕವಯತ್ರಿ. ಆಕೆ ಕೂಡ ಅನೇಕ ಯಕ್ಷಗಾನ ಕಿರುಕಾವ್ಯಗಳನ್ನು (ಹಾಡುಗಬ್ಬ) ರಚಿಸಿರುವ ಉಲ್ಲೇಖವಿದೆ) ಪಠದ ಸಂಧಿಯಲ್ಲಿ ಈ ಬಗೆಯ ಕಥೆಯ ನಿರೂಪಣೆ ಬಂದಿದೆ. ಆದರೆ ಲವಕುಶರ ಕಾಳಗ ಇವೆರಡಕ್ಕಿಂತ ಕೆಲವೆಡೆ ಭಿನ್ನವಾಗಿದೆ. ಹಟ್ಟಿಯಂಗಡಿ ರಾಮಭಟ್ಟನು ಜಾನಪದದಲ್ಲಿ ಪ್ರಚಲಿತವಿದ್ದ ಅನೇಕ ಕಥೆಗಳನ್ನು ಆಶ್ರಯಿಸಿದ್ದು ಪ್ರಸಂಗ ರಚನೆಗೆ ಹಾಗೂ ಪ್ರದರ್ಶನಕ್ಕೆ ಅನುಕೂಲವಾಗುವ ಘಟನೆಗಳನ್ನು, ಪಾತ್ರಗಳನ್ನು ಆಯ್ದುಕೊಂಡಿರಬೇಕು. ಅಷ್ಟಿದ್ದೂ ಆಟಗಳಲ್ಲಿ ಈ ಪ್ರಸಂಗದ ಬಳಕೆ ಅಷ್ಟಾಗಿ ಕಂಡುಬರುತ್ತಿಲ್ಲ. ಉತ್ತರ ರಾಮಾಯಣದಲ್ಲಿನ ಕಥೆಗೂ, ಈಗ ಹೆಚ್ಚು ಬಳಕೆಯಲ್ಲಿರುವ ಕುಶಲವರ ಕಾಳಗಕ್ಕಿಂತಲೂ ಇದು ಭಿನ್ನ ಎಂಬುದಕ್ಕಾಗಿ ಈ ಪ್ರಸಂಗ ಉಲ್ಲೇಖನಾರ್ಹ.

ಕೌಶಿಕ ಚರಿತ್ರೆ : [31]

ಇದು ರಾಮಾಯಣದ ಕಥೆಯಲ್ಲಿ ಅಷ್ಟಾಗಿ ಸೇರಿಬರದ ಕಥೆಯನ್ನು ಹೊಂದಿದ್ದರೂ 'ಶ್ರೀಮದ್ ರಾಮಾಯಣದೊಳಗಣ ಕೌಶಿಕ ಚರಿತ್ರೆ' ಎಂದೇ ಹೆಸರು ಪಡೆದಿದೆ. ಒಮ್ಮೆ ಕುಶನಗರ ಪತಿಯಾದ ಕೌಶಿಕನು ಬೇಟೆಗೆ ಹೋದಾಗ ವಸಿಷ್ಠನ ಧೇನುವಿನಿಂದಾದ ಉಪಚಾರವನ್ನು ನೋಡಿ ಅದನ್ನು ಬಯಸಿ ವಸಿಷ್ಠನ ಶತ್ರುತ್ವವನ್ನು ಸಂಪಾದಿಸುತ್ತಾನೆ. ತಾನೂ ಬ್ರಹ್ಮಋಷಿ ಪದವಿಯನ್ನು ಬಯಸಿ ಘೋರ ತಪಸ್ಸನ್ನು ಮಾಡುತ್ತಾನೆ. ಇದರಿಂದ ಘಾತಿಗೊಂಡ ದೇವೇಂದ್ರ ಮೇನಕೆಯನ್ನು ಕಳುಹಿಸಿ ತಪೋಭಂಗವನ್ನುಂಟು ಮಾಡುತ್ತಾನೆ. ಮುಂದೆ ನಾರದನಿಂದ ಸಂಸಾರ ಬಂಧನವನ್ನು ತಿಳಿದು ಎಚ್ಚೆತ್ತು ತಪಸ್ಸಿಗೆ ಕುಳಿತಾಗ ತ್ರಿಶಂಕುವಿನ ಮೂಲಕ ತನ್ನ ತಪೋಶಕ್ತಿಯನ್ನು ಕಳೆದುಕೊಳ್ಳುತ್ತಾನೆ.

ಆದರೂ ಛಲ ಬಿಡದೆ ಮನಸ್ಸನ್ನು ತಪದಲ್ಲಿ ನೆಟ್ಟು ಮೂರು ಲೋಕವನ್ನೂ ಅಲ್ಲೋಲಕಲ್ಲೋಲ ಗೊಳಿಸುತ್ತಾನೆ. ಭೂಲೋಕದಲ್ಲಿ ಇದರಿಂದಾಗಿ ದುರ್ಭಿಕ್ಷ ಉಂಟಾಗುತ್ತದೆ. ಕುಪಿತಗೊಂಡ ಗಾಧಿಜ ಯಜ್ಞಮಾಡಿ ಮಾಂಸವನ್ನೇ ದೇವತೆಗಳಿಗೆ ಅರ್ಪಿಸುತ್ತಾನೆ. ಇಕ್ಕಟ್ಟಿಗೆ ಸಿಕ್ಕಿದ ದೇವತೆಗಳು ತ್ರಿಮೂರ್ತಿಗಳ ಮೊರೆಹೊಕ್ಕು ಅವರೆಲ್ಲರೂ ವಿಶ್ವಾಮಿತ್ರನ ಮುಂದೆ ನೆರೆಯುತ್ತಾರೆ. ದೇವತೆಗಳು ಬ್ರಹ್ಮಋಷಿ ಎಂದು ಕರೆದರೂ ಒಪ್ಪದೇ ವಸಿಷ್ಠನು ಬ್ರಹ್ಮರ್ಷಿತ್ವವನ್ನು ಒಪ್ಪಿಕೊಂಡ ಮೇಲೆ ತಪಸ್ಸನ್ನು ನಿಲ್ಲಿಸಿ ಸುಭಿಕ್ಷೆ ನೆಲೆಸುವಂತೆ ಮಾಡುತ್ತಾನೆ.

ಈ ಪ್ರಸಂಗದಲ್ಲಿ ಕೌಶಿಕನ ಅಸಾಧ್ಯ ತಪೋಶಕ್ತಿಯ ವೈಭವವನ್ನು ನಿರೂಪಿಸಲಾಗಿದೆ. ಹಲಸಿನಹಳ್ಳಿ ನರಸಿಂಹ ಶಾಸ್ತ್ರೀಯವರು ಕಾಲ, ದೇಶ, ವಿಚಾರಗಳೊಂದಿಗೆ ಕೃತಿಯನ್ನು ಮುಗಿಸಿದ್ದಾರೆ.

ಸಮೀಕ್ಷೆ :

ಹೀಗೆ ವಿಪುಲ ಸಂಖ್ಯೆಯಲ್ಲಿ ಸೃಷ್ಟಿಗೊಂಡ ರಾಮಾಯಣ ಪ್ರಸಂಗಗಳು ವಸ್ತು ವಿಚಾರದಲ್ಲಿ ಮೂಲಕಥೆಗೆ ಸಾಕಷ್ಟು ಋಣಿಯಾಗಿವೆ. ತೊರವೇ ರಾಮಾಯಣ ಇಲ್ಲವೇ ಕೌಶಿಕ ರಾಮಾಯಣವನ್ನು ಓದಿಕೊಂಡಿದ್ದ ಯಕ್ಷಗಾನ ಕವಿಗಳು ಅವುಗಳನ್ನು ನೇರವಾಗಿ ಅನುಸರಿಸಿದರು. ಅವರಿಗೆ ಮೂಲವಾಗಲೀ, ಬೇರ್‍ಯಾವ ವಿಚಾರವಾಗಲೀ ಬೇಕಾಗಿರಲಿಲ್ಲ. ಜನಮನವನ್ನು ರಂಜಿಸಬಲ್ಲಂತಹ, ಪ್ರಯೋಗದಲ್ಲಿ ಹಾಗೂ ಸಾಹಿತ್ಯದಲ್ಲಿ ಅದ್ವಿತೀಯವಾಗಬಲ್ಲಂತಹ ಪ್ರಸಂಗಗಳನ್ನು ರಚಿಸುವುದು ಉದ್ದೇಶವಾಗಿತ್ತು. ತಮ್ಮ ಕಾವ್ಯ ಪ್ರತಿಭೆಯ ಮೂಲಕ ರಾಮಾಯಣದ ಕಥೆಯನ್ನು ಜನ ಸಾಮಾನ್ಯರಿಗೆ ಮುಟ್ಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ತೊರವೇ ರಾಮಾಯಣಕ್ಕೆ ಭಿನ್ನವಾಗಿ ಬದ ಅಂಶಗಳೂ ಇವೆ. ಉದಾಹರಣೆಗೆ ತೊರವೇ ರಾಮಾಯಣದಲ್ಲಿ ದಶರಥನೇ ಕೈಕೆ ಇದ್ದಲ್ಲಿಗೆ ಬಂದ ಎಂಬ ಉಲ್ಲೇಖವಿದೆ. ಆದರೆ ಪ್ರಸಂಗದಲ್ಲಿ ಲಕ್ಷ್ಮಣ ಹೋಗಿ ಅವನ ಮೂಲಕ ಕೈಕೆಯಿಯೇ ದಶರಥನನ್ನು ಕರೆಸಿಕೊಳ್ಳುತ್ತಾಳೆ. ಇಂತಹ ಸುಮಾರು 17 ವ್ಯತ್ಯಾಸಗಳನ್ನು (ರಾಮ ಪಟ್ಟಾಬಿಷೇಕ-4, ವಾಲಿಸಂಹಾರ-8, ಸೇತುಬಂಧನ-3, ಅಂಗದ ಸಂಧಾನ ಹಾಗೂ ಕುಂಭಕರ್ಣ ಕಾಳಗದಲ್ಲಿ ಒಂದೊಂದು) ಶ್ರೀಯುತ ದೇರಾಜೆ ಸೀತಾರಾಮಯ್ಯನವರು ಪಟ್ಟಿ ಮಾಡಿದ್ದಾರೆ.[32] ಈ ಬಗೆಯ ಕೆಲವು ಚಿಕ್ಕಪುಟ್ಟ ವ್ಯತ್ಯಾಸಗಳಿದ್ದರೂ ಕಥೆಯ ಓಟದಲ್ಲಿ ಮೌಲ್ಯ ನಿರೂಪಣೆಯಲ್ಲಿ ಅವು ಸ್ವತಂತ್ರವಾಗಿವೆ ಎನ್ನುವಂತಿಲ್ಲ. ಇಲ್ಲಿ ಕಾವ್ಯ ಪ್ರತಿಭೆಯ ವಿಲಾಸವಿದೆ. ಹೊಸ ಬಗೆಯ ಆವಿಷ್ಕಾರಗಳ ಪ್ರಯತ್ನವಿದೆ. ಆದರೆ ಅವೆಲ್ಲವೂ ನಿಂತದ್ದು ಮೂಲ ಕಾವ್ಯದ ತಳಹದಿ ಮೇಲೆಯೇ ಎಂಬುದನ್ನು ಮರೆಯುವಂತಿಲ್ಲ. ಹೀಗೆ ರಾಮಾಯಣ ಪ್ರಸಂಗಗಳು ತಮ್ಮ ವಸ್ತುವೈವಿಧ್ಯದ ಮೂಲಕ ಅಪಾರ ಜನಪ್ರಿಯತೆಯನ್ನು ಗಳಿಸಿವೆ.

ಅಡಿಟಿಪ್ಪಣಿಗಳು :

1. ಆದಿಕವಿ ವಾಲ್ಮೀಕಿ – ಮಾಸ್ತಿ ವೆಂಕಟೇಶ ಅಯ್ಯಂಗಾರ್ – 1955
   ಪ್ರ. ಜೀವನ ಕಾರ್ಯಾಲಯ, ಬೆಂಗಳೂರು.

2. The Great Epic of India. E.W. Hopkkins P.63
3. ರಾಮಾಯಣ ಬಾಲಕಾಂಡ –ಡಿ.ವಿ.ಜಿ. ಯವರ ಮುನ್ನುಡಿ : ಪುಟ 1
4. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ
ಪ್ರ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪಾರ್ತಿಸುಬ್ಬನ ಯಕ್ಷಗಾನಗಳು – ಪಂಚವಟಿ ಪಟ್ಟಾಭಿಷೇಕ ಪುಟ 61
ಸಂ. ಕುಕ್ಕಿಲ ಕೃಷ್ಣಭಟ್ಟ
6. ಪಂಚವಟಿ ವಾಲಿಸಂಹಾರ – ಪಾರ್ತಿಸುಬ್ಬ
ಪ್ರ. ಎಂ. ವೆಂಕಟರಾವ್, ನಿತ್ಯಾನಂದ ಗ್ರಂಥಮಾಲೆ, ಮಂಗಳೂರು.
7. ಯಕ್ಷಗಾನ ವಾಲಿಸುಗ್ರೀವ – ವೆಂಕಪ್ಪ ಶೆಟ್ಟಿ, ಪ್ರ. ಅಂತರಂಗ ಕಾರ್ಯಾಲಯ, ಉಡುಪಿ.
8. ಯಕ್ಷಗಾನ ಲಂಕಾದಹನ – ಪಾರ್ತಿಸುಬ್ಬ, ಪ್ರ.ಆರ್. ವಿಟ್ಟಪ್ಪಶೆಟ್ಟಿ, ಕಾರ್ಕಳ.
9. ಯಕ್ಷಗಾನ ಸುಂದರ ಕಾಂಡ – ಪಾರ್ತಿಸುಬ್ಬ,
ಪ್ರ. ವಾಜಪೇಯ ಕೃಷ್ಣಯ್ಯ, ಬೆಂಗಳೂರು, 1894.
10. ಪಾರ್ತಿಸುಬ್ಬನ ಯಕ್ಷಗಾನಗಳು – ಸೇತುಬಂಧನ,
ಸಂ. ಕುಕ್ಕಿಲ ಕೃಷ್ಣಭಟ್ಟ, ಪುಟ 249.
11. ಅಂಗದ ಸಂಧಾನ – ದಿ. ಪಾರ್ತಿಸುಬ್ಬ ವಿರಚಿತ,
ಪ್ರ. ಎಂ ವೆಂಕಟರಾವ್, ಮಂಗಳೂರು 1967.
12. ಯಕ್ಷಗಾನ ಇಂದ್ರಜಿತು ಕಾಳಗ –
ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಉಡುಪಿ.
13. ಮಾರೀಮುಖನ ಕಾಳಗ – ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಉಡುಪಿ.
14. ಯಕ್ಷಗಾನ ಬಯಲಾಟ – ಡಾ. ಶಿವರಾಮ ಕಾರಂತ,
ಪ್ರ. ಹರ್ಷಪ್ರಕಟಣಾಲಯ, ಪುತ್ತೂರು ಪುಟ 260
15. ಮಕರಾಕ್ಷ ಕಾಳಗ – ಅಲೆಟ್ಟಿ ರಾಮಣ್ಣ ಶಗ್ರಿತ್ತಾಯ,
16. ಯಕ್ಷಗಾನ ಅತಿಕಾಯ ಕಾಳಗ – ದಿ. ಹಟ್ಟಿಯಂಗಡಿ ರಾಮಭಟ್ಟ.
17. ಕುಮಾರ ವಾಲ್ಮೀಕಿ – ಒಂದು ಅಧ್ಯಯನ – ಡಾ. ಹೆಚ್. ಸೀತಾರಾಮ್ ಆಚಾರ್,
ಪ್ರ. ಕನ್ನಡ ಅದ್ಯಯನ ಸಂಸ್ಥೆ, ಮೈಸೂರು.
18. ಕಾಲನೇಮಿ ಕಾಳಗ – ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಉಡುಪಿ.... (ವೆಂಕಟನ ಮಗ ಪರಮೇಶ್ವರ)
19. ಮೈರಾವಣ ಕಾಳಗ – ಬ್ರಹ್ಮಾವರ ವೆಂಕಟ
ಪ್ರ. ಗುರುರಾವ್ ಅಂಡ್ ಸನ್ಸ್, ಉಡುಪಿ.
20. ರಾಮಾಯಣ ಕಥಾವಸ್ತುವಿನ ಉಗಮ ಮತ್ತು ಬೆಳವಣಿಗೆ –ಉ. ಕಾ. ಸುಬ್ರಾಯಾಚಾರ್
ಶ್ರೀಕಂಠತೀರ್ಥ, ಪುಟ 261 ಪ್ರ. ತಿ. ನಂ. ಶ್ರೀ ಸಂಸಾರವರ್ಗ.
21. ಪಾರ್ತಿಸುಬ್ಬನ ಯಕ್ಷಗಾನಗಳು – ಕುಂಭಕರ್ಣಾದಿ ಕಾಳಗ – ಕುಕ್ಕಿಲ ಕೃಷ್ಣಭಟ್ಟ.
22. ರಾವಣೇಶ್ವರ ಕಾಳಗ – ಕಾಸರಗೋಡು ಸುಬ್ರಾಯ.
23. ರಾವಣಾಸುರನ ಕಾಳಗ – ಕೊರ್ಡೆಲ್ ವೆಂಕಟರಾವ್, ಉಡುಪಿ
24. ರಾಮ ಪಟ್ಟಾಭಿಷೇಕ ಮತ್ತು ಲವಣಾಸುರ ಕಾಳಗ – ಪುತ್ತಿಗೆ ರಾಮಕೃಷ್ಣ ಭಾಗವತ
ಪ್ರ. ಡಿ.ವಿ.ಹೊಳ್ಳ ವಿದ್ವಾನ್, ತೆಕ್ಕಟೆ.

25. ಶ್ರೀರಾಮ ಪಟ್ಟಾಭಿಷೇಕ – (ಮುನ್ನುಡಿ)– ಪುತ್ತಿಗೆ ರಾಮಕೃಷ್ಣ ಭಾಗವತರು.

26. ಅದೇ ಪುಟ 5

27. ಪ್ರಚಂಡ ಲಂಕೇಶ್ವರ – ಮುರೂರು ದೇವರು ಹೆಗ್ಗಡೆ ಪ್ರ. ಮೂರೂರು – 1974.

28. ಪ್ರಚಂಡ ಲಂಕೇಶ್ವರ – ಅಭಿಪ್ರಾಯಗಳು – ಕಡತೋಕ ಮಂಜುನಾಥ ಭಾಗವತ–

29. ಪಾರ್ತಿಸುಬ್ಬನ ಯಕ್ಷಗಾನಗಳು – ಕುಶಲವರ ಕಾಳಗ; ಸಂ. ಕುಕ್ಕಿಲ ಕೃಷ್ಣಭಟ್ಟ. ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

30. ಲವಕುಶರ ಕಾಳಗ – ಹಟ್ಟಿಯಂಗಡಿ ರಾಮಭಟ್ಟ.

31. ಯಕ್ಷಗಾನ ಕೌಶಿಕ ಚರಿತ್ರೆ – ಹಲಸಿನಹಳ್ಳಿ ನರಸಿಂಹಶಾಸ್ತ್ರಿ:

32. ಯಕ್ಷಗಾನ ವಿವೇಚನೆ :– ಶ್ರೀಮದ್ ರಾಮಾಯಣದ ಮೂಲಕಾವ್ಯದ ಪ್ರಕರಣಗಳಿಗೂ ಪ್ರಸಂಗಗಳ ಕಲ್ಪನೆಗೂ ಇರುವ ವ್ಯತ್ಯಾಸಗಳು – ದೇರಾಜೇ ಎಂ. ಸೀತಾರಾಮಯ್ಯ ಪುಟ 33 ಪ್ರ. ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು.

* * * * *

ಸಾಹಿತ್ಯಕ ನೆಲೆ ಹಾಗು ತಾತ್ವಿಕ ನಿಲುವುಗಳು

ಹಳೆಯ ಯಕ್ಷಗಾನ ಪ್ರಸಂಗಗಳಲ್ಲಿ ಸಂಗೀತದಷ್ಟೇ ಸಾಹಿತ್ಯವೂ ಪ್ರಧಾನವಾಗಿತ್ತು. ರಾಮಾಯಣ ಭಾರತ ಮುಂತಾದ ಕಥಾನಕಗಳನ್ನು ಹೊಂದಿರುವ ಪ್ರಸಂಗಗಳು ವಸ್ತುವನ್ನು ಆಯ್ದುಕೊಳ್ಳುವಲ್ಲಿ ನೇರವಾಗಿ ಅವುಗಳ ಮೂಲವಾದ ಸಂಸ್ಕೃತ ಇಲ್ಲವೇ ಕನ್ನಡ ಗ್ರಂಥಗಳಿಗೆ ಋಣಿಯಾಗಿವೆ. ವಸ್ತುವನ್ನು ಅಲ್ಲಿಂದ ಆಯ್ದರೂ ಹಲವು ಅಂಶಗಳನ್ನು ಸೇರಿಸಿಯೋ ಬಿಟ್ಟೋ ಹೊಸ ವರ್ಣನೆಗಳನ್ನು, ತಮ್ಮ ಅನುಭವದಲ್ಲಿನ ಘಟನೆಗಳನ್ನು ವಿವರಿಸಿ ಪ್ರಸಂಗವನ್ನು ನವೀನ ಸೃಷ್ಟಿಯಾಗಿ ಮಾಡಿದ್ದಾರೆ. ಅವರ ಅಧ್ಯಯನವು ಹೆಚ್ಚಾಗಿ ಕನ್ನಡಕ್ಕೆ ಮೀಸಲಾಗಿರುವುದರಿಂದ ಕನ್ನಡ ಕಾವ್ಯ ಪರಂಪರೆಯಿಂದ ಆಚೆ' ದೃಷ್ಟಿ ಹಾಯಿಸುವುದು ಅವರಿಗೆ ಅಸಾಧ್ಯವಾಗಿತ್ತು. ಆದಾಗ್ಯೂ ಕವಿಹೃದಯವುಳ್ಳ ಪಾರ್ತಿಸುಬ್ಬ, ರಾಮಭಟ್ಟ, ಶಾಂತಪ್ಪಯ್ಯ, ನಗರದ ಸುಬ್ಬ ಮುಂತಾದವರ ಪ್ರಸಂಗಗಳಲ್ಲಿ ಒಳ್ಳೆಯ ಸಾಹಿತ್ಯ ಕಂಡುಬಂದಿದೆ. ರಾಮಾಯಣ ಪ್ರಸಂಗಗಳಂತೂ ಸತ್ವಯುತವಾದ ಹಾಡುಗಳಿಂದ ಕೂಡಿಕೊಂಡಿದ್ದು ಜನಪ್ರಿಯ ಪ್ರಸಂಗಗಳಾಗಿವೆ.

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಪದ್ಯಗಳೇ ಹೆಚ್ಚು. ಕೆಲವೆಡೆ ಗದ್ಯ ಬಂದರೂ ಒಂದೆರಡು ವಾಕ್ಯದಲ್ಲೇ ಮುಗಿದುಹೋಗುತ್ತದೆ. ಈ ಪದ್ಯಗಳು ಕಂದ, ವೃತ್ತ, ದ್ವಿಪದಿ, ಚೌಪದಿ, ಭಾಮಿನಿ, ವಾರ್ಧಕ, ಸಾಂಗತ್ಯ ಮುಂತಾದ ನಾನಾ ಪ್ರಕಾರಗಳಲ್ಲಿವೆ. ಇವುಗಳ ರಚನೆಯಲ್ಲಿ ಕವಿ ಛಂದಸ್ಸಿಗಿಂತ ಹೆಚ್ಚಾಗಿ ಹಾಡಿನ ಧಾಟಿಗೆ, ಭಾವವಿಸ್ತಾರಕ್ಕೆ ಗಮನ ಕೊಟ್ಟಿದ್ದಾನೆ. ಈ ಬಗೆಯ ವೈವಿಧ್ಯದಿಂದ ಕೂಡಿದ್ದರೂ ಯಕ್ಷಗಾನ ಹಾಡುಗಳಲ್ಲಿ ಸರಳತೆಗೆ ಪ್ರಾಧಾನ್ಯ. ಸಹಜವಾದ ವರ್ಣನೆಗಳು, ಮನಮುಟ್ಟುವ ನಿರೂಪಣೆ, ಭಾವವನ್ನು ಹೊರಹೊಮ್ಮಿಸುವ ರಾಗಗಳು, ಮನಸ್ಸಿನ ಉಮ್ಮಳವನ್ನು ಪ್ರದರ್ಶಿಸುವ ಧಾಟಿಗಳು ಇಲ್ಲಿ ತುಂಬಿಕೊಂಡಿವೆ. ಇದನ್ನು ಕಾರಂತರು "ಯಕ್ಷಗಾನ ಹಾಡುಗಳ ಪರಂಪರೆಯಲ್ಲಿ ನಾವು ಸಮೃದ್ಧವಾಗಿ ಕಾಣಬಹುದಾದ ಒಂದು ಸಂಪತ್ತೆಂದರೆ; ಹಾಡಿಕೆಗೆ ಒದಗುವ ಬಗೆಬಗೆಯ ಧಾಟಿಗಳು ಅಥವಾ ಛಂದಸ್ಸಿನ ರೂಪಗಳು. ಇವುಗಳ ಸೊಗಸನ್ನು ಶಕ್ತಿಯನ್ನು ಕಾಣುವವರು ತೀರ ಆರಂಭದ ಕಾಲದ ಪ್ರಸಂಗಗಳ ಕಡೆಗೆ ದೃಷ್ಟಿ ಹಾಯಿಸಬೇಕು" ಎಂದಿದ್ದಾರೆ. ಈ ಬಗೆಯ ಸಾಹಿತ್ಯಕ ಅಂಶಗಳಿಂದ ಕೂಡಿಕೊಂಡ ಪ್ರಸಂಗಗಳನ್ನು ಹಾಗೂ ಅವುಗಳಲ್ಲಿರುವ ತಾತ್ವಿಕ ವಿಚಾರಗಳನ್ನು ಇಲ್ಲಿ ಪರೀಕ್ಷಿಸಲಾಗಿದೆ. ಒಂದು ಕಾವ್ಯವು ಶ್ರಾವ್ಯದಿಂದ ದೃಶ್ಯಕ್ಕೆ ತಿರುಗುವಾಗ ನಾನಾ ಬಗೆಯಲ್ಲಿ ಬದಲಾವಣೆಗೊಳ್ಳಬೇಕಾಗುತ್ತದೆ. ಯಕ್ಷಗಾನ ಪ್ರಸಂಗಗಳ ಹಿಂದಿರುವ ಉದ್ದೇಶ ಕಾವ್ಯನಿರ್ಮಾಣಕ್ಕಿಂತ ಕಥಾನಕವನ್ನು ಹಾಡಿ, ಆಡಿ ತೋರಿಸುವುದೇ ಆಗಿದೆ. ಆದುದರಿಂದ ವಸ್ತುಕವು

ವರ್ಣಕಕ್ಕೆ ತಿರುಗುವಾಗ ಉಂಟಾದ ವ್ಯತ್ಯಾಸಗಳು ಇಲ್ಲು ಕಂಡು ಬಂದಿವೆ. ಯಕ್ಷಗಾನ ಪ್ರಸಂಗಗಳನ್ನು ಈ ಕಾರಣಕ್ಕಾಗಿ ಶುದ್ಧ ಹಾಡುಗಬ್ಬಗಳೆಂದೇ ಬಗೆದು ಬೆಲೆ ಕಟ್ಟಬೇಕಾಗಿದೆ.

ಯಕ್ಷಗಾನ ಪ್ರಸಂಗದಲ್ಲಿ ಸ್ವಭಾವೋಕ್ತಿಯು ಸಾಕಷ್ಟು ಸಮೃದ್ಧವಾಗಿಯೇ ಬಂದಿದೆ. ಪಟ್ಟಾಭಿಷೇಕದಲ್ಲಿ ರಾಮನು ತಾಯಿ ಕೌಸಲ್ಯೆಯನ್ನು ಸಮಾಧಾನಗೊಳಿಸುತ್ತಾ ಆಡುವ ಮಾತುಗಳು ಅಚ್ಚಾಗನ್ನಡ ನುಡಿಕಟ್ಟುಗಳಿಂದ ಕೂಡಿಕೊಂಡಿವೆ. ಉದಾಹರಣೆಗೆ–

ಕಣ್ಣ ನೀರಬುಧಿಯೊಳಾಳುವ ಜನನಿಯ
ಪುಣ್ಯ ಪುರುಷ ನೋಡುತ್ತ
ಬಣ್ಣಗಾರಿಕೆಯಲ್ಲ ತಾಯಿ ತಂದೆಯ ಮಾತ
ನುಣ್ಣಗಳೆಯ ಬಾರದು"[1]

ಇದೇ ಪ್ರಸಂಗದಲ್ಲಿ ದಶರಥನ ಮರಣದಿಂದ ಶೋಕಗೊಂಡ ರಾಣಿಯರನ್ನು ವಸಿಷ್ಠನು ಸಮಾಧಾನಗೊಳಿಸುತ್ತ ಆಡುವ ಮಾತುಗಳು ಗಂಭೀರ ಹಾಗೂ ಸರಳತೆಯಿಂದ ಕೂಡಿಕೊಂಡಿದೆ.

"ಗಾಳಿ ಸಿಡಿಲು ಮಳೆ ಹೊಯ್ಯ ಬೇಡೆಂದು ಕೈ
ತೋಳನೆತ್ತಿದರೆ ನಿಲ್ಲುವುದೇ
ಬಾಲಕರಿಲ್ಲದ ವೇಳೆಯೆಂದರೆ ಯಮ
ನಾಳುಗಳದನು ಕೇಳುವರೇ
ನೆಲೆಯಿಲ್ಲ ತನುವಿದು ಮಳೆಗಾಲದಲಿ ತುಂಬಿ
ದ್ಹೊಳೆಯಲ್ಲಿ ನೆರೆಪುಟ್ಟುವಂತೆ
ನಳಿನಸಂಭವ ಬರೆದಾ ದಿನ ಸಂದರೆ
ಉಳಿವವೇ ನಿಮಿಷ ಪ್ರಾಣಿಗಳು....."[2]

ದಂಡಕಾರಣ್ಯದಲ್ಲಿ ಸೀತೆ ನಡೆಯುತ್ತಾ ಆಯಾಸಗೊಂಡಾಗ "ನಡೆಯಲಾರೆ ನಯ್ಯೊ ಮುಂದೆ.... ನಡುಗುತಿದೆನ್ನ ಕೈಕಾಲು ಒಡೆದುದೇತಕಯ್ಯೊ..." ಎಂದು ಶೋಕಿಸಿದಾಗ ರಾಮನು "ಎನ್ನ ಕೈವಿಡಿದು ಇನಿತು ಭಾಗ್ಯ ಉಂಡಳಲ್ಲ ತಮ್ಮಾ" ಎಂದು ವನಿತೆಯನ್ನು ಬಿಟ್ಟು ಬರಲು ತಿಳಿಸುತ್ತಾನೆ. ಆಗ ಆಕೆ "ನೀರನಿನ್ನನಿಲ್ಲಿ ಬಿಟ್ಟು ಊರೊಳೇನು ಭಾಗ್ಯ ಉಣಲಿ" ಎಂದು ವಿವರಿಸಿ ಅಲ್ಲೇ ಉಳಿಯುತ್ತಾಳೆ. ಗಂಡ ಹೆಂಡಿರ ನಡುವೆ ನಡೆಯಬಹುದಾದ ನೇರ ಮಾತುಕತೆಯ ತುಣುಕೊಂದನ್ನೇ ಕವಿ ಬಳಸಿದ್ದಾನೆ. ಈ ಸಂಭಾಷಣೆ ಒಂದು ಸಹಜ ಸುಂದರ ಶಬ್ದ ಚಿತ್ರವಾಗಿದೆ.

ಪಂಚವಟಿ ವಾಲಿಸಂಹಾರದಲ್ಲಿ ಕಾಮಾಸಕ್ತನಾದ ರಾವಣನು ಅಷ್ಟತಾಳದ ಶಂಕರಾಭರಣ ರಾಗದಲ್ಲಿ ಹಾಡುವ ಈ ಪದ್ಯ ಶ್ರೋತೃಗಳ ಮನಮುಟ್ಟುವಂತಿದೆ. ಇಲ್ಲಿನ ವಿಸ್ಮಯ ಮೆಚ್ಚುವ ರೀತಿಯದು.

"ಅಂಥ ಚೆಲುವೆಯೇನೆ ಜಾನಕಿ ದೇವಿ
ಅಂತರಂಗದಿ ಮಂಡೋದರಿಗಿಂತ ಸೊಬಗುಳ್ಳ ॥ ಪ ॥

ಕಣ್ಣು ಗಳೆಂತಿಹವು ಅವಳ ಮೈಯ
ಬಣ್ಣ ವದೆಂತಿಹದು
ರನ್ನ ಕೆತ್ತಿದನಡು ಸಣ್ಣವಾಗಿಹುದೇನೆ
ಮನ್ಮಥನರಗಿಣಿಯಂತೆ ತೋರುವಳೇನೆ."[3]

ಇಲ್ಲಿ ಅನುಪಲ್ಲವಿಯ ಮಾತುಗಳು ಪೋಷಕವಾಗಿ ಬಂದಿವೆ. ಪಲ್ಲವಿಯಲ್ಲಿರುವ ವಿಸ್ಮಯಕ್ಕೆ ಅನುಪಲ್ಲವಿಯಲ್ಲಿ ಉತ್ತರ ದೊರೆತಿದೆ. ಈ ಬಗೆಯಲ್ಲಿ ಬರುವ ಹಾಡುಗಳು ಸಾಹಿತ್ಯಕವಾಗಿ ಮಾತ್ರವಲ್ಲ ಸೊಲ್ಲಿನ ತರಂಗಿತ ರೂಪದಲ್ಲೂ ಜನ ಮನದ ಮೇಲೆ ಪ್ರಭಾವವನ್ನು ಬೀರುತ್ತವೆ. ಶೂರ್ಪನಖಿ "ತರಬೇಕು ತರಣಿಯುಳ ಕಾಮನ ಮುಂಗಯ್ಯರಗಿಣಿಯಂತಹಳ" ಎಂದು ರಾವಣನನ್ನು ಪ್ರೋತ್ಸಾಹಿಸಿದರೆ ಮಂಡೋದರಿ "ತರವಲ್ಲ ಕಾಂತ ತರವಲ್ಲ" ಎಂದು ವಿರೋಧಿಸುತ್ತಾಳೆ. ಇಲ್ಲಿನ ಮಾತು ಪ್ರತಿಮಾತುಗಳು ಸಹಜವಾಗಿದ್ದು ರಾವಣನ ಮದಾಂಧತೆಗೆ, ಮಂಡೋದರಿಯ ವಿವೇಕಕ್ಕೆ ಧ್ವನಿಯಾಗಿ ಬಂದಿವೆ.

ಸೀತೆಯನ್ನು ಕಳೆದುಕೊಂಡ ರಾಮನು ಪಡುವ ದುಃಖವನ್ನು ಸುಬ್ಬನು ಸಹಜವಾದ ರೀತಿಯಲ್ಲೇ ವರ್ಣಿಸಿದ್ದಾನೆ.

"ಅಡವಿಗಿಡ ಮರಕಲ್ಲಿಗಳು ನೋಡೆ ಅರಿಸಿನದ
ಪುಡಿಯಂತೆ ತೋರುತಿದೆ ತಮ್ಮಾ
ಒಡಲೊಳುರಿ ತಾಪಬೇರ್ವಿಡಿದು ಜಠರಾಗ್ನಿಯಲಿ
ನಡಗುತಿದೆ ಕೈಕಾಲು ತಮ್ಮಾ!"[4]

ಈ ಭಾಗವನ್ನು ತುಲನಾತ್ಮಕವಾಗಿ ಉಳಿದ ಕನ್ನಡ ಕಾವ್ಯಗಳಿಗೆ ಹೋಲಿಸಿದ ಶ್ರೀ ಮುಳಿಯ ತಿಮ್ಮಪ್ಪಯ್ಯನವರು "ಸುಬ್ಬನಂತೂ ಈ ಹಾಡನ್ನು ಹಾಡುವಲ್ಲಿ ತಾನೇ ರಾಮನಾಗಿ ಹೋದಂತೆ ತೋರುತ್ತದೆ...."[5] ಎಂದಿದ್ದಾರೆ. ನಿಜವಾದ ಕವಿ ಪ್ರತಿಭೆ ಇಲ್ಲಿ ವ್ಯಕ್ತವಾಗುತ್ತದೆ. ಕವಿ ಸುಬ್ಬನು ಸಂಸ್ಕೃತದ ಮುಕ್ತಕಗಳಿಗೆ ಮಾರು ಹೋಗದೆ ನಿಜವಾದ ದುಃಖವನ್ನು ಸರಳ ಮಾತುಗಳಲ್ಲಿ ನಿವೇದಿಸಿಕೊಂಡಿದ್ದಾನೆ.

ಚೂಡಾಮಣಿಯ ಪ್ರಸಂಗವಂತೂ ಸಾಹಿತ್ಯಕವಾಗಿ ಮಹತ್ವ ಪೂರ್ಣವಾಗಿದೆ. ಅದರ ಕಾವ್ಯಶಕ್ತಿಯಿಂದಲೇ ಅದು ಜನಪ್ರಿಯವಾಗಿದೆ. ತೃಣಬಿಂದುವಿನೊಡನೆ ಹನುಮಂತ ನಾಡುವ ಮಾತುಗಳು ಸರಳವಾಗಿದ್ದು ರೂಢಿಯ ಸಂಭಾಷಣೆಯ ಭಾಗ ಒಂದರಂತಿದೆ. ತೃಣಬಿಂದುವಿನ "ತಿರಿದುಂಬಾತನ ಮನ ಪಲ್ಲಕ್ಕಿಯೇರುವ ತೆರವಾಯ್ತು" ಎಂಬುದಕ್ಕೆ ಉತ್ತರವಾಗಿ ಹನುಮಂತನು "ವನಸಂಭವ ಹಣೆಯೊಳು ಬರೆದಿಟ್ಟಂತಾದ್ದನ್ನು ಮೀರಲಳವೇ ಜೀವರಿಗೆ" ಎಂದು ಲೋಕದಲ್ಲಿ ಪ್ರಚಲಿತವಿರುವ ಮಾತನ್ನು ಆಡುತ್ತಾನೆ.

ಸೀತೆಯುನ್ನು ಹನುಮಂತನು ಲಂಕೆಯಲ್ಲಿ ಹುಡುಕಲು "ಹತ್ತಿನೋಡಿದ ಗೋಪುರಂಗಳ, ಸುತ್ತಿದಣಿದನು ಕೊಟೆ ಕೊತ್ತಳ" ಕೊನೆಯಲ್ಲಿ "ಹಟ್ಟಿಯಲಿ ನೋಡಿದನು, ಕರುಗಳ ಕಟ್ಟುವುದರೊಳಗರಸಿ ಬಚ್ಚಲು ಕೊಟ್ಟಿಗೆಗಳೊಳು ಸಹಿತ ಹುಡುಕಿದ" ಆದರೂ ದೊರೆಯಲಿಲ್ಲ.

ಸೀತೆಯಲ್ಲಿ ರಾವಣನು ಕಾಮಾತುರನಾಗಿ "ಕಣ್ಣಿಗೆ ನಿದ್ದೆ ಬಾರದು, ಬಾಯಿಗೆ ಅನ್ನ ಸೇರದು, ನಿನ್ನ ಹಂಬಲಿಸಿ ನೆನೆದು ಎನ್ನ ಜೀವವು ಉಳಿಯದು" ಎನ್ನುತ್ತಾನೆ. ಈ ಪ್ರಸಂಗದ ಅಂತ್ಯದಲ್ಲಿ ಬರುವ ಲಂಕಾದಹನ ಭಾಗವು ಸ್ವಾರಸ್ಯಕರವಾಗಿದೆ.

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಸಂಭಾಷಣ ಮುಖ್ಯವಾದುದು. ವ್ಯಕ್ತಿಗಳ ಶೀಲವನ್ನು ಪ್ರಕಟಿಸುವ ರೀತಿಯಲ್ಲಿ ಕವಿ ಸಂಭಾಷಣೆಯನ್ನು ಜೋಡಿಸಿದ್ದಾನೆ. ರಾಮಾಯಣ ಪ್ರಸಂಗಗಳಲ್ಲಂತೂ ಈ ಬಗೆಯ ಸಂಭಾಷಣೆಗಳು ಸಾಕಷ್ಟಿವೆ. ರಾವಣ ಮತ್ತು ವಿಭೀಷಣನೊಡನೆ ನಡೆಯುವ ಸಂಭಾಷಣೆ ಅವರಿಬ್ಬರ ಶೀಲ ಸಂಘರ್ಷವನ್ನು ತೋರಿಸುತ್ತದೆ. 'ಇನ್ನಾದರೂ ಬಿಡು ನಿನ್ನ ಛಲವ' ಎಂದು ವಿಭೀಷಣನು ಎಂದರೆ ರಾವಣನು

"ಏನೆಂದೇ ತಮ್ಮ ಏನೇಂದೇ
ಏನೆಂದೇ ತಮ್ಮಾ ಏತಕೆ ಮರುಳಾದೆ
ದಾನವರುಗಳ ಶಕ್ತಿಯನು ನೀನರಿಯದೆ"[6]

ಎಂಬ ಪಲ್ಲವಿ ಅನುಪಲ್ಲವಿಗಳಲ್ಲಿ ತಮ್ಮನನ್ನು ಖಂಡಿಸುತ್ತಾನೆ. ಇದೇ ಬಗೆಯಲ್ಲಿ 'ಅಂಗದ ಸಂಧಾನ'ದಲ್ಲಿ ಬರುವ ಶುಕ-ರಾವಣರ ಮಾತುಕತೆ, ವಾಲಿಸುಗ್ರೀವದಲ್ಲಿ ಬರುವ ವಾಲಿ ಮತ್ತು ರಾಮರ ಮಾತು ಪ್ರತಿಮಾತುಗಳು ಆಯಾಯ ಪಾತ್ರಗಳ ಶೀಲ ಸ್ವರೂಪವನ್ನು ತೆರೆದು ತೋರಿಸುವಂತಿದೆ.

ಅಂಗದ ಸಂಧಾನದಲ್ಲಿ ಬರುವ ಒಂದು ವರ್ಣನೆ ಕುಮಾರ ವಾಲ್ಮೀಕಿಯ ಪ್ರಭಾವಕ್ಕೆ ಒಳಗಾಗಿದ್ದರೂ ಕಣ್ಣಿಗೆ ಕಟ್ಟುವ ಸಹಜತೆಯಿಂದ ಸುಂದರವಾಗಿದೆ.

ಕಡಲತೆರೆಗಳುಬ್ಬುತ್ತಡಿಗಡಿಗೆ ದಡಕೆ ಬಡಿಯುತ
ಒಡೆಯನೀನೋಂಡೆಂದು ಜಳದ ಬೆಡಗನೊಡ್ಡಿ ತೋರುತ
ತಡೆದು ತಡೆದು ನೀರೊಳಡ್ಡ ಕೆಡಹುತೆಡಹುತಾಡುತ
ಅಡಗಿದವರ ನಟ್ಟಿಕುಟ್ಟಿ ಹಿಡಿದು ತಂದು ಕೂಡುತ
ಪಡೆಯುನಡೆಯಲಾಗ ಸೇತು ಹಡಗಿನಂತೋಲಾಡುತ[7]

ಎಂಬುದು ಆ ಸೈನ್ಯದ ಪರಿಭ್ರಮಣವನ್ನು ಅದರಿಂದ ಸೇತುವೆ ನಡುಗಿದ್ದನ್ನು ಹಾಗೂ ಸಮುದ್ರದ ಮೊರೆತವನ್ನು ಕವಿ ಸುಂದರವಾಗಿ ಚಿತ್ರಿಸಿದ್ದಾನೆ.

ಅತಿಕಾಯ ಕಾಳಗದಲ್ಲಿ ಧ್ಯಾನ ಮಾಲಿನಿಯು ದುಃಖಪಡುವ ಬಗೆಯಂತೂ ಕರುಣಾರಸ ಪೂರಿತವಾಗಿದೆ. ಆಕೆಯ ಕರುಳಕುಡಿ ಚಿವುಟಹೋದ್ದರಿಂದ ಆಕೆ ಹೀಗೆ ಗೋಳಾಡುತ್ತಾಳೆ.

"ಬಾಲನೆಲ್ಲಿಗೆ ಪೋದನ್ನೆ ಎನ್ನಯ ಚಾರುಶೀಲ ತಾನೇನಾದನ್ನೆ ತಾಳಲಾರೆನು ಕಾಣದೆಂತಾದನೆಂಬುದ ಪೇಳು ಸಾರಥಿಯೇ ನೀನು ಕೈಮುಗಿವೆನು" ಎನ್ನುತ್ತಾರೆ. ಅವಳ ಶೋಕ ಮುಂದೆ ಈ ರೀತಿಯಾಗಿ ಬಂದಿದೆ.

"ಚಿಣ್ಣಿನ ಕಳುಹಿದಿರೆ ಹಬ್ಬವನ್ನೆನ್ನ ಕಣ್ಣಿಗೆ ಮಾಡಿದಿರೆ
ಎಣ್ಣಿದ ಬಯಕೆ ತೀರ್ದುದೆ ಹಾಲಕೊಂಡಂತೆ ರಣ್ಣಿಗೆ ಹೊಟ್ಟೆಗಾದುದೆ
ಪರರ ಹೆಂಗಸನು ತಂದು ಎನ್ನಯ ಮಗನ ಹರಿಬವ ಕಂಡಿರಿಂದು
ಅರಿಗಳ ದೂರಲೇಕೆ ಕಂದಗೆ ಮೃತ್ಯುವರಿಯಲು ನೀವೆ ಪರಾಕೆ...."[8]

ಎನ್ನುವಲ್ಲಿ ಈ ತಾಯಿಯ ದುಃಖವನ್ನು ಕವಿ ಪ್ರತಿಭೆ ಸಹಜವಾಗಿ ಬಿಂಬಿಸಿದೆ.

ಭಕ್ತ ಶಿರೋಮಣಿ ಅತಿಕಾಯನ ಪಾತ್ರವು ಕನ್ನಡ ಸಾಹಿತ್ಯಕ್ಕೆ ಕುಮಾರ ವಾಲ್ಮೀಕಿಯ ಕೊಡುಗೆಯಾದರೂ ಅದನ್ನು ಜನಮನಕ್ಕೆ ನಾಟುವಂತೆ ಮಾಡಿದ ಕೀರ್ತಿ ಯಕ್ಷಗಾನ ಪ್ರಸಂಗಕಾರರಿಗೆ ಸಲ್ಲುತ್ತದೆ. ವೀರ ವೈಷ್ಣವನಾದ ಆತ ತಂದೆ ಯೊಡನಾಡುವ ಮಾತುಗಳು, ಯುದ್ಧಕ್ಕೆ ಸನ್ನದ್ಧನಾದ ಬಗೆ ಎಲ್ಲವೂ ಮನ ಮೋಹಕ. ರಾವಣನಲ್ಲಿ ಅವನು ಹೇಳುವ

"ಸಕಲ ಲೋಕೈಕನಾಥನು ಸರ್ವಾತ್ಮಕನು ಸರ್ವರ ರಕ್ಷಿಸುವ
ದೈವನವನು
ಮುಕುತಿದಾಯಕನು ಶಾಶ್ವತನು ನಿನ್ನ ಯುಕುತಿ ನಡೆಯ
ದಾದಿವಸ್ತು ರಾಘವನು...."[9]

ಎಂಬ ಸಾಲುಗಳಲ್ಲಿ ತಂದೆಯ ಕೃತ್ಯದ ಬಗ್ಗೆ ಇರುವ ಅಸಮಾಧಾನ, ರಾಮನ ಬಗ್ಗೆ ಇರುವ ಭಕ್ತಿ ಎಲ್ಲವೂ ಕಾಣಿಸಿಕೊಂಡಿದೆ. ರಾಮಭಟ್ಟನು ಇಲ್ಲಿ ಅತಿಕಾಯನ ಭಕ್ತ ಹೃದಯವನ್ನು ಸೂರೆಗೊಂಡಿದ್ದಾನೆ. ಆತನ ಕಳಕಳಿಗೆ ಅನುಗುಣವಾಗಿ ಶಬ್ದಗಳನ್ನು ಜೋಡಿಸಿದ್ದಾನೆ. 'ಜಗದೊಡೆಯರಾಮನ ಕೆಣಕಲು ಬಂತು ಕೇಡು' ಎಂಬ ತೀರ್ಮಾನಕ್ಕೆ ಬಂದರೂ ತಂದೆಯಿಂದ 'ಜೀಯಾ ತಾ ಸಂಗರಕೆ ವೀಳೆಯ' ಎಂದು ಪಡೆದು 'ಕೇಶವನ ಕೂಡವೂಡೆ ಬನ್ನಿರೆನ್ನೊಡನೆ' ಎಂದು ಡಂಗುರ ಹೊಡೆಸಿ ಸೈನ್ಯವನ್ನು ಕರೆದುಕೊಂಡು ಹೋಗುತ್ತಾನೆ.

ಇಲ್ಲಿ ಗಮನಿಸಬೇಕಾದ್ದು ಪ್ರಸಂಗ ಸಾಹಿತ್ಯೋದ್ದೇಶ ಹೇಗೆ ಸಫಲವಾಗಿದೆ ಎಂಬುದನ್ನು. ಭಕ್ತಿಯ ಹಿರಿಮೆಯನ್ನು ಸಾರುವುದೇ ಯಕ್ಷಗಾನ ಪ್ರಸಂಗದ ಉದ್ದೇಶ. ದೈವೇಚ್ಛೆಯನ್ನು ಯಾರೂ ಮೀರಲು ಸಾಧ್ಯವಿಲ್ಲ ಎಂಬುದನ್ನು ನಿರೂಪಿಸಲಾಗಿದೆ. ಆದ್ದರಿಂದಲೇ ಹೆಚ್ಚು ಪಾತ್ರಗಳು ಆ ಮಿತಿಯಲ್ಲೇ ಬಾಳಿ ಬದುಕುತ್ತವೆ. ಇದಕ್ಕೆ ಪುರಾವೆಯಾಗಿ ಹೆಚ್ಚಿನ ಪ್ರಸಂಗಗಳಲ್ಲಿ ದೊರೆಯುವ ಈ ಕೆಳಗಿನ ಪದ್ಯಗಳನ್ನು ಗಮನಿಸಬೇಕಾಗುತ್ತದೆ.

(ಅ) "ಎಷ್ಟು ಹೇಳಿದರೇನು ವಿಧಿಪಣೆಯೊಳು ಬರ
ದಿಟ್ಟುದಲ್ಲದೆ ಬೇರೆ ನಿಷ್ಠುರವಿಲ್ಲ"[10]

(ಆ) ಏನು ಮಾಡಲಿ ವಿಧಿ ಬರೆದುದಾಯಿತು ಮುಂದೆ
ನೀನು ಸುಖದೊಳಿರ್ರೈ ಧಾರಿಣೀಪಾಲ.[11]

(ಇ) ಜನನ ಮರಣ ಹಾನಿವೃದ್ಧಿಗಳೆಲ್ಲಾ
ಜನಹೊಂದಿದ ವಿಧಿವಿಲಸನ ಕೇಳಾ
ದಿನ ಮೂರೆಣಿಕೆಯ ಕ್ಷಣಿಕ ಸಂಸಾರ
ಅನುಭವಿಸಲು ಬೇಕು ಕರ್ಮ ಸಂಭಾರ![12]

(ಈ) ಕರ್ಮ ಬಂಧಗಳು ಕಟ್ಟೆಳೆದಾಗ ಮಿಕ್ಕಾವ ಧರ್ಮದೈವಗಳು
ರಕ್ಷಿಪವೇ[13]

(ಉ) ಪ್ರಾರಬ್ಧ ಶೇಷ ಮಯ್ಯೇರಿದಂತಾಹುದಕೆ
ಬೇರೇಕೆ ನಿನ್ನಣ್ಣ ವಾಲಿಯೇ ಸಾಕ್ಷಿ.[14]

(ಊ) ತಂದೆತಾಯಿಗಳೆಂಬುದೊಂದು ಸ್ವಪ್ನವಿಚಾರ.......
ಮೂರು ದಿನದ ಈ ಸಂಸಾರ ಶಾಶ್ವತವಲ್ಲ![15]

ರಾಮನನ್ನು ಇಲ್ಲಿನ ಎಲ್ಲಾ ಪಾತ್ರಗಳು ಅವತಾರ ಪುರುಷನೆಂದೇ ಬಗೆದವುಗಳು. ತಾವು ಆಡುತ್ತಿರುವುದು ಒಂದು ಜಗನ್ನಾಟಕ. ತಮ್ಮ ಅಗತ್ಯವೆಷ್ಟಿದೆಯೋ ಅಷ್ಟೇ ಕುಣಿಯಬೇಕೆಂದು ನಿರ್ಧರಿಸಿಕೊಂಡು ಬಂದಂತೆ ಇಲ್ಲಿನ ಪಾತ್ರಗಳು ರೂಪಿಸಲ್ಪಟ್ಟಿವೆ. ಅತಿಕಾಯ, ವಿಭೀಷಣ, ಮಂಡೋದರಿ, ರಾವಣ ಎಲ್ಲರೂ ಕೂಡಾ ಮುಂದೆ ನಡೆಯಬಹುದಾದುದನ್ನೆಲ್ಲಾ ಊಹಿಸಿಯೇ ಮಾತನಾಡುತ್ತಾರೆ. ರಾವಣನ ಮೂರ್ಖತೆಯ ದುರಂತ ಛಾಯೆ ಅವರೆಲ್ಲರಿಗೆ ಬಡಿದಿದೆ. ವಿಧಿಯ ಮಸಕವನ್ನು ಧಿಕ್ಕರಿಸುವಂತಿಲ್ಲ. ಅದಕ್ಕೆ ಬದ್ಧರಾಗಿಯೇ ಸಾಗಬೇಕಾಗಿದೆ. ಪ್ರೇಕ್ಷಕನು ಕೂಡ ಇದನ್ನರಿತವನೇ. ಆದುದರಿಂದ ಈ ಮಾತುಕತೆಗಳನ್ನೆಲ್ಲಾ ಕೇಳಿ ತಲೆದೂಗುತ್ತಾನೆ. ಹಾಗೇ ತನ್ನ ದೈನಂದಿನ ಹೋರಾಟಕ್ಕೂ ಸಿದ್ಧನಾಗುತ್ತಾನೆ.

ಯಕ್ಷಗಾನ ಪ್ರಸಂಗ ಸೃಷ್ಟಿಯ ಹಿನ್ನೆಲೆಯಲ್ಲಿ ಬೃಹದ್ ವ್ಯಾಪಿಯಾಗಿ ಬೆಳೆದ ವೈಷ್ಣವ ಸಾಹಿತ್ಯ ಪರಂಪರೆಯೊಂದಿತ್ತೆಂಬುದನ್ನು ಮರೆಯಬಾರದು. 16ನೇ ಶತಮಾನದಿಂದ 19ನೇ ಶತಮಾನದವರೆಗೆ ಈ ನಾಡಿನಲ್ಲಿ ಭಾಗವತ ಪಂಥ ಭದ್ರವಾಗಿ ನೆಲೆಸಿತ್ತು. ವ್ಯಾಸಕೂಟ ದಾಸಕೂಟಗಳ ಗಮನಾರ್ಹ ಚಟುವಟಿಕೆಯಿಂದಾಗಿ ಭಕ್ತಿಪಂಥದ ಪ್ರಚಾರ ಹಾಗೂ ಪ್ರಭಾವ ಎಲ್ಲೆಡೆ ಹರಡಿತ್ತು. ಇದೇ ವಾತಾವರಣದಲ್ಲಿ ಬೆಳೆದ ಕವಿಗಳು ಪ್ರಸಂಗ ರಚನೆಯ ಉದ್ದೇಶವಾದ ದೈವಲೀಲೆಯ ಹಿರಿಮೆಯನ್ನು ಸಾರುವುದನ್ನು ಸಾಕಷ್ಟು ಕಡೆ ಗಮನಿಸಬಹುದು. ಆ ಬಗೆಯ ಜೀವನ ದೃಷ್ಟಿಕೋನವೇ ಇಲ್ಲೂ ಸಾಹಿತ್ಯ ರೂಪವಾಗಿ ಮೈದಾಳಿದೆ.

ನಮ್ಮ ಕರ್ಮಗಳನ್ನು ನಾವೆಲ್ಲರೂ ಮಾಡಲೇಬೇಕು. ತನ್ನ ಪಾಲಿಗೆ ಬಂದ ಕರ್ತವ್ಯ ಮಾಡುವುದರಲ್ಲೇ ಮಾನವತೆಯ ಸಫಲತೆ. ತಂದೆಯ ಮಾತನ್ನು ನಡೆಸುವುದು ತನ್ನ ಪಾಲಿನ ಧರ್ಮವೆಂದೇ ನಂಬಿದ್ದ ರಾಮನು ಭರತನ ಯಾವ ಆಗ್ರಹಕ್ಕೂ ಸೊಪ್ಪು ಹಾಕುವುದಿಲ್ಲ. ಕರ್ತವ್ಯದ ಮುಂದೆ ಭ್ರಾತೃತ್ವ ಸೋಲುತ್ತದೆ. ಆಗ ತಮ್ಮನಿಗೆ ನೀಡುವ ಉಪದೇಶ ಜೀವನ ಮೌಲ್ಯದ ಹಾಗೂ ಬದುಕಿನ ತಾತ್ವಿಕ ಮೌಲ್ಯದ ಕಡೆ ಬೊಟ್ಟುಮಾಡಿ ತೋರಿಸುತ್ತದೆ. ಭರತನ ಅಪೇಕ್ಷೆಯನ್ನು ಒಪ್ಪದೆ ರಾಮಚಂದ್ರನು–

> "ತಮ್ಮ ಕೇಳ್ ಇನಕುಲದ ರಾಯರಲಿ ಜನಿಸಿರ್ದು
> ಧರ್ಮವೇ ಸತ್ಯವನ್ನು ಬಿಟ್ಟು ನಡೆಯುವುದು
> ಪಿತನ ವಾಕ್ಯವ ಮೀರಿ ಪಿಂತೆ ನಡೆದವರುಂಟೆ..."[16]

ಎಂದು ಹೇಳಿ ಹಿಂದೆ ಕಳುಹಿಸಿ ಕರ್ತವ್ಯ ಪರತೆಯನ್ನು ಎತ್ತಿ ಹಿಡಿದಿದ್ದಾನೆ.

ಹೀಗೆ ಬದುಕಿನ ಮೌಲ್ಯಗಳನ್ನು ಭಾವನೆಗಳನ್ನು ಬಿಂಬಿಸುವ ಸಾಹಿತ್ಯವಾಗಿ ಯಕ್ಷಗಾನ ಪ್ರಸಂಗ ಸಾಹಿತ್ಯವು ಮೈದಾಳಿದೆ. ರಂಗದಲ್ಲಿ ಮೂಡಿಬರುವ ಭಾವನೆಗಳ ಹಿನ್ನೆಲೆಯಾಗಿ ಪ್ರಸಂಗ ಸಾಹಿತ್ಯ ಕೆಲಸ ಮಾಡುತ್ತದೆ. ಪ್ರಸಂಗಕಾರನು ಅಭಿನಯಿಸಲ್ಪಡುವ ಪ್ರದರ್ಶನಕ್ಕೆ ಬೇಕಾದ ಭಾವವನ್ನು ಗಣನೆಗೆ ತೆಗೆದುಕೊಳ್ಳುತ್ತಾನೆ. ಈ ಹಂದರದಲ್ಲಿ ಮೂಡಿಬಂದ ಸಾಹಿತ್ಯ ವಿಮರ್ಶಕನಿಗೆ ತೆಳುವಾಗಿ ಕಾಣಬಹುದು. ಆದರೆ "ಜನಪದ ನೃತ್ಯ ನಾಟಕಗಳಲ್ಲಿ ಸಾ,ಹಿತ್ಯದ ಅಂಶ ಇರುವಂಥದ್ದು ಆ ನಾಟಕದ ಒಟ್ಟು ಪ್ರಭಾವ ಪ್ರೇಕ್ಷಕರ ಮೇಲು ಬೀಳುವುದರ ಸಲುವಾಗಿ ಇಲ್ಲಿ ಸಾಹಿತ್ಯದ ಮೌಲ್ಯಗಳು ಸಾಂಧರ್ಬಿಕವಲ್ಲ"[17] ಎಂಬಮಾತನ್ನು ಗಮನಿಸಬೇಕಾಗುತ್ತದೆ. ರಾಮಾಯಣ ಪ್ರಸಂಗಗಳಲ್ಲಿ ಈ ಬದುಕನ್ನು ಒಂದು ನಾಟಕ ಎಂದು ಬಗೆದೇ ಜೀವನವನ್ನು ಸಮೀಕ್ಷಿಸಿದ್ದಾರೆ. ಒಳ್ಳೆಯದಕ್ಕೂ ಕೆಟ್ಟದಕ್ಕೂ, ಶಾಶ್ವತಕ್ಕೂ ನಶ್ವರಕ್ಕೂ ನಡೆಯುವ ಸಂಘರ್ಷ ಇಲ್ಲಿ ಕಂಡುಬರುತ್ತದೆ. ಈ ಸಂಘರ್ಷದಲ್ಲಿ ಉಂಟಾಗುವ ಸುಖ-ದುಃಖವನ್ನು, ನೋವು-ನಲಿವುಗಳನ್ನು, ಹಿಗ್ಗು-ಕುಗ್ಗುಗಳನ್ನು ಪ್ರಸಂಗಕರ್ತರು ನಿರೂಪಿಸಿದ್ದಾರೆ. ಬದುಕಿಗೆ ಅಗತ್ಯವಾದ ಸಮಾಧಾನಗಳನ್ನು ಇಲ್ಲಿ ಕಾಣಬಹುದು ಹಾಗೆಯೇ ದೈವಕಾರುಣ್ಯಕ್ಕೆ ಹೊರತಾಗಿ ಹಿಡಿದ ಛಲವನ್ನು ಬಿಡದೇ ಹೋರಾಡುತ್ತ ಸೋತು ಮುಗ್ಗರಿಸಿದವರ ಬದುಕಿನ ದುರಂತವನ್ನು ಇಲ್ಲಿ ಚಿತ್ರಿಸಲಾಗಿದೆ.

ಅಡಿಟಿಪ್ಪಣಿಗಳು :

1. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ ಕುಕ್ಕಿಲ ಕೃಷ್ಣಭಟ್ಟ ಪುಟ : 83
2. ಅದೇ ಪುಟ : 100
3. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ ಪುಟ : 136
4. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ ಪುಟ 156
5. ಪಾರ್ತಿಸುಬ್ಬ – ಮುಳಿಯ ತಿಮ್ಮಪ್ಪಯ್ಯ ಪುಟ . 67
6. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ ಪುಟ 256
7. ಅದೇ ಪುಟ 298
8. ಅತಿಕಾಯ ಕಾಳಗ – ಹಟ್ಟಿಯಂಗಡಿ ರಾಮಭಟ್ಟ – ಪುಟ 14
   ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಉಡುಪಿ.
9. ಅದೇ ಪುಟ 4.
10. ಯಕ್ಷಗಾನ ಪಾರ್ತಿಸುಬ್ಬನ ಪ್ರಸಂಗಗಳು – ಪಟ್ಟಾಭಿಷೇಕ ಪುಟ 81
11. ಅದೇ" ಪುಟ 81
12. ರಾಮ ಪಟ್ಟಾಭಿಷೇಕ – ಪುತ್ತಿಗೆ ರಾಮಕೃಷ್ಣ ಭಾಗವತರು ಪುಟ 3

13. ಪಾರ್ತಿಸುಬ್ಬನ ಯಕ್ಷಗಾನಗಳು - ಸಂ. ಕುಕ್ಕಿಲ ಕೃಷ್ಣಭಟ್ಟ ಪುಟ 99

14. ಅದೇ ಪುಟ 99

15. ಅದೇ ಪುಟ 185

16. ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು - ಪಾರ್ತಿಸುಬ್ಬ ಪುಟ 107.

17. ಜಾನಪದ ಸಮಾವೇಶ - ಕು.ಶಿ. ಹರಿದಾಸಭಟ್ಟರ ಅಧ್ಯಕ್ಷ ಭಾಷಣ, ಸಂ. ಜೀ. ಶಂ. ಪರಮಶಿವಯ್ಯ.

* * * * *

ರಸ ಪ್ರತಿಪಾದನೆ ಹಾಗೂ ವರ್ಣನೆಗಳು

ಕವಿಯ ಅನುಭವ ಕಾವ್ಯದ ಮೂಲವಸ್ತು. ಕವಿ ತನ್ನ ಅನುಭವವನ್ನು ಭಾಷೆಯ ಮೂಲಕ ಸಾಹಿತ್ಯದಲ್ಲಿ ಅಭಿವ್ಯಕ್ತಿ ಮಾಡುತ್ತಾನೆ. ಈ ಸಾಹಿತ್ಯವನ್ನು ಓದುವ ಸಹೃದಯ ತನ್ನಲ್ಲಿ ಆ ಸಾಹಿತ್ಯದ ಪುನರ್ ಅನುಭವ ಪಡೆಯುತ್ತಾನೆ. ಇದನ್ನೇ ಭಾರತೀಯ ಕಾವ್ಯ ಮೀಮಾಂಸಕರು ಪಾರಿಭಾಷಿಕವಾಗಿ ರಸಾನುಭವ ಎಂದು ಕರೆದು ಅಂತಹ ರಸಾನುಭವವನ್ನು ಅಧ್ಯಯನದ ಅನುಕೂಲಕ್ಕಾಗಿ ಒಂಬತ್ತು ಉಪವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಅದನ್ನೇ ಒಂಬತ್ತು ರಸಗಳು ಎಂದು ಕರೆಯಲಾಗಿದೆ. ಪ್ರಸಂಗ ಸಾಹಿತ್ಯದಲ್ಲಿ ಅದರಲ್ಲೂ ರಾಮಾಯಣ ಪ್ರಸಂಗಳಿಗೆ ಸಂಬಂಧಿಸಿದಂತೆ ಈ ನವರಸಗಳಲ್ಲಿ ಪ್ರತಿಪಾದಿತವಾದ ಮುಖ್ಯ ರಸಗಳು ಹೇಗೆ ಬಂದಿವೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಕನ್ನಡ ಕಾವ್ಯಗಳಲ್ಲೆಲ್ಲಾ ವೀರರಸಕ್ಕೆ ಪ್ರಧಾನ ಪಟ್ಟಸಂದಿದೆ. ಜನ ಜೀವನದಲ್ಲಿ ಒಂದು ಅಂಗವಾಗಿ ಬಂದ ಯುದ್ಧವನ್ನು ಅನೇಕ ಕವಿಗಳು ತಮ್ಮ ಕಾವ್ಯದಲ್ಲಿ ಸುದೀರ್ಘವಾಗಿ ವಿವರಿಸಿದ್ದಾರೆ. ಜನಜೀವನದೊಂದಿಗೆ ನೇರ ಸಂಬಂಧವುಳ್ಳ ಯಕ್ಷಗಾನ ಪ್ರಸಂಗಗಳೂ ಕೂಡ ಅಂದಿನ ವೀರ ಜೀವನವನ್ನು ಬಿಂಬಿಸುವಲ್ಲಿ ಸಫಲವಾಗಿವೆ. ಹಾಗೆ ನೋಡ ಹೋದರೆ, ಪ್ರಸಂಗಗಳಲ್ಲಿ ಬರುವಂಥಾದ್ದು ಹೆಚ್ಚಾಗಿ ವೀರ ಮತ್ತು ಶೃಂಗಾರ ರಸ. ಪ್ರಸಂಗಗಳು ಹೆಚ್ಚಿನವುಗಳು ಕಾಳಗಗಳಾಗಿವೆ. ಇಲ್ಲವೇ ಕಲ್ಯಾಣಗಳಾಗಿವೆ. ಕಲ್ಯಾಣಗಳು ಕಾಳಗದ ನಂತರ ನಡೆಯಬೇಕಷ್ಟೆ; ಹೀಗೆ ವೀರರಸಕ್ಕೆ ಪಟ್ಟ ಬಂದಿದೆ.

ಯುದ್ಧ ಎಲ್ಲಾ 'ಪ್ರಸಂಗ'ಗಳಲ್ಲೂ ಬಂದೇ ಬರುತ್ತದೆ. ಯುದ್ಧಕ್ಕೆ ಕಾರಣ ದ್ವೇಷ, ಸೇಡು, ಯುದ್ಧ ವೀರರಲ್ಲಿ ಮೊದಲಿಗೆ ಬಿರುಸಿನ ಸಂಭಾಷಣೆ ನಡೆಯುತ್ತದೆ. ಪರಸ್ಪರ ಮೂದಲಿಸಿಕೊಳ್ಳುತ್ತಾರೆ. ರಾಮ-ರಾವಣ, ಲಕ್ಷ್ಮಣ-ರಾವಣ, ಲಕ್ಷ್ಮಣ-ಇಂದ್ರಜಿತು, ಹನುಮಂತ-ಕಾಲನೇಮಿ. ಅತಿಕಾಯ-ಲಕ್ಷ್ಮಣ, ವಾಲಿ-ಸುಗ್ರೀವ, ರಾವಣ-ವಿಭೀಷಣ, ಅಂಗದ-ರಾವಣ ಇವರ ಮಧ್ಯೆ ನಡೆಯುವ ಮಾತು ಪ್ರತಿ ಮಾತುಗಳು ಅವರು ಪ್ರಯೋಗಿಸುವ ಬಾಣದಷ್ಟೇ ಹರಿತವಾಗಿವೆ. ಇದನ್ನು ಕೇಳಿದ ಪ್ರೇಕ್ಷಕನಿಗೆ, ಓದುವ ಸಹೃದಯನಿಗೆ ರೋಮಾಂಚನ ಉಂಟಾಗುತ್ತದೆ.

ಅತಿಕಾಯ ಕಾಳಗದಲ್ಲಿ ಲಕ್ಷ್ಮಣ ಮತ್ತು ರಾವಣರು ಪರಸ್ಪರ ಎದುರಾದ ಸಂದರ್ಭದಲ್ಲಿ ನಡೆದ ಸಂಭಾಷಣೆ ಇದಕ್ಕೆ ಉತ್ತಮ ಉದಾಹರಣೆ.

ರಾವಣ : ಹುಡುಗ ನೀನು ನಿಮ್ಮೊಳೆಮ್ಮ ಕಡಹುಲೇಸಗೊಡದು ನಿನ್ನ

ಒಡಹುಟ್ಟಿದವನೊಳೀಗ ಬೆಡಗ ತೋರ್ಪೆನು.

ಲಕ್ಷ್ಮಣ : ಕೊಳಚೆನೀರ ದಾಟಲಾರದೊಳವಿಗೇಕೊ ಕಡಲ ಮಾತು
ಗೆಲಿದು ಮೊದಲೊಳೆನ್ನನಣ್ಣ ನಳವಿಗೆ ಬಯಸೊ[1]

ಎಂದು ಪರಸ್ಪರ ದೋಷಾರೋಪಣೆ ಮಾಡುತ್ತಾರೆ.

ಮಾರೀಮುಖನ ಕಾಳಗದಲ್ಲಿ ಚಿತ್ರ ಮಾಲಿನಿಯೊಂದಿಗೆ ಆಕೆಯ ಮಗನಾಡುವ ಮಾತುಗಳು ಪೌರುಷಯುಕ್ತವಾಗಿವೆ. ಆತ ತನ್ನ ಸಾಹಸವನ್ನು ಹೀಗೆ ಹೇಳಿ ಕೊಳ್ಳುತ್ತಾನೆ.

ಅಣ್ಣನ ಕೊಂದಿಹ ಸಣ್ಣ ಕಪಿಯನೀಗ ಅಮ್ಮ ಕೇಳು
ಕುಟ್ಟಿ ಬೊಮ್ಮನ ಪುರ ಕಟ್ಟಿ ಬರುವೆನು ನಿಮಿಷದಿ ಅಮ್ಮಕೇಳು
ಶತಬಲಿ ಸುಷೇಣ ಗವಯೀಗವಾಕ್ಷರ ಅಮ್ಮಕೇಳು
ಕೊಂದುಖತಿಯೊಳು ಕೆಡಹುವೆ ರವಿಜನ ಮೊದಲಾಗಿ ಅಮ್ಮಕೇಳು[2]

ಇದು ಕೇವಲ "ಉತ್ತರನ ಪೌರುಷ"ವಾಗದೇ ಧುರಧೀರನ ಆತ್ಮವಿಶ್ವಾಸದ ಕೆಚ್ಚೆದೆಯ ಮಾತಾಗಿ ಪರಿಣಮಿಸಿದೆ.

ಯಕ್ಷಗಾನ ಪ್ರಸಂಗಗಳಲ್ಲಿ ರಾಕ್ಷಸರ ಪಾತ್ರ ವಿಶಿಷ್ಟವಾಗಿದೆ. ಇವನ್ನು ಬಣ್ಣದ ವೇಷ ಎಂದು ಕರೆಯುತ್ತಾರೆ. ಬಣ್ಣದ ವೇಷದಿಂದ ಬಯಲಾಟಕ್ಕೆ ಒಂದು ಕಳೆ ಬರುತ್ತದೆ. ಅವುಗಳು ಪ್ರವೇಶಿಸುವ ವಿಧಾನವೇ ಆಗಲೀ, ಕೊಡುವ ಒಡ್ಡೋಲಗದ ರೀತಿಯೇ ಆಗಲೀ, ಧರಿಸಿರುವ ಮುಖವರ್ಣಿಕೆಯಾಗಲೀ ಎಲ್ಲವೂ ವಿನೂತನವಾಗಿದೆ. ಶೂರ್ಪನಖಿ, ಅಧೋಮುಖಿ ಮುಂತಾದ ಪಾತ್ರ ಸೃಷ್ಟಿಯು ತೊರವೇ ರಾಮಾಯಣದಲ್ಲಿ ಬಂದಿದ್ದರೂ ಅವುಗಳ ಭಯಂಕರತೆ ಜನಮನಕ್ಕೆ ನೆಟ್ಟಿದ್ದು ಯಕ್ಷಗಾನ ಪ್ರಸಂಗಗಳಿಂದಲೇ, ಈ ಪಾತ್ರಗಳು ಪ್ರವೇಶಿಸುವಾಗಲೇ ಕವಿಯು ಎದೆ ಡವಗುಟ್ಟುವಂತಹ ರಾಗಗಳನ್ನು ಬಳಸಿದ್ದಾನೆ. ಅವರಾಡುವ ಮಾತುಗಳು ಅಷ್ಟೇ ಭಯಂಕರವಾಗಿವೆ. ರಾಮಾಯಣ ಪ್ರಸಂಗಗಳಲ್ಲಿ ಈ ಬಗೆಯ ಭಯಂಕರ ವಾತಾವರಣವನ್ನುಂಟು ಮಾಡುವವರು ಅಧೋಮುಖಿ ಮತ್ತು ಶೂರ್ಪನಖಿಯರು.

ಯಕ್ಷಗಾನ ಪ್ರಸಂಗಗಳಲ್ಲಿ ಬಳಸಲ್ಪಟ್ಟ ಯುದ್ಧ ಸಾಮಗ್ರಿಯ ಪಟ್ಟಿಯಲ್ಲಿ ಅಂತಹ ವಿಶೇಷಗಳೇನೂ ಇಲ್ಲ. ಹಿಂದಿನ ಕಾವ್ಯಗಳಲ್ಲಿ ವರ್ಣಿಸಲಾದಂತಹ ಹಾಗೂ ಬಳಸಲ್ಪಟ್ಟಂತ ವಸ್ತುಗಳ ಹೆಸರುಗಳೇ ಇಲ್ಲೂ ಬಳಕೆಯಾಗಿವೆ. ಅವುಗಳೆಂದರೆ ಖಡ್ಗ, ತೋಮರ, ಪರಷು, ಗದೆ, ಕುಂತ, ಕಣೆ, ಕೃಪಾಣ, ಬಿಲ್ಲು, ಬಾಣ, ಅಂಬು, ಬಂದಿಡ, ಗಾಲಿ-ಮಿಣಿ, ಸರಪಣಿ, ಛತ್ರ, ಚಾಮರ, ಪತಾಕೆ, ತಮ್ಮಟೆ, ವಾದ್ಯ, ಭೇರಿ ಇತ್ಯಾದಿ.

ಯಕ್ಷಗಾನ ಕಥಾನಕಗಳಲ್ಲಿ ಕಳೆಯಿರುವುದು ಯುದ್ಧದ ಸನ್ನಿವೇಶಗಳಲ್ಲೇ. ಇಂತಹ ಪ್ರಸಂಗಗಳ ಗುಣಾವಲೋಕವನ್ನು ಮಾಡಿದ ಕಾರಂತರು – "ಹೆಚ್ಚಾಗಿ ಜನರನ್ನು ಆಕರ್ಷಿಸುವ ಅಂಶಗಳೆಂದರೆ – ಪೌರುಷ ಪರಾಕ್ರಮಗಳಿಗೂ, ದುಃಖಕ್ಕೂ, ಮರುಕಕ್ಕೂ, ಅವಕಾಶಗಳನ್ನು ಕೊಡುವ ಸನ್ನಿವೇಶಗಳು... ಅವರು ಕಾದಿರುವುದೇ ಯುದ್ಧದ

ಗಳಿಗೆಯನ್ನು ಮತ್ತು ಆ ಕಾಲದ ತೀಕ್ಷ್ಣ ಸಂಭಾಷಣೆಗಳನ್ನು... ಪ್ರೇಕ್ಷಕ ವರ್ಗ ರಂಗಸ್ಥಳದಲ್ಲಿ ಕಾಳಗವನ್ನು ನಿರೀಕ್ಷಿಸುವಷ್ಟು ಕುತೂಹಲದಿಂದ ಇನ್ಯಾವ ಘಟನೆಯನ್ನೂ ನಿರೀಕ್ಷಿಸುವುದಿಲ್ಲ. ಯಾರೇ ಗೆಲ್ಲಲಿ ಯಾರೇ ಸೋಲಲೀ ಜನರಿಗೆ ಯುದ್ಧವಂತೂ ಇದ್ದೇ ತೀರಬೇಕು..."[3] ಎಂದಿದ್ದಾರೆ.

ಇದೇ ರೀತಿ ಯಕ್ಷಗಾನದಲ್ಲಿ ರೌದ್ರಪೂರಿತವಾದ ಸಂದರ್ಭಗಳಿಗೂ ಕಮ್ಮಿ ಇಲ್ಲ. ಕೌಶಿಕ ಚರಿತ್ರೆಯಲ್ಲಿ ವಿಶ್ವಾಮಿತ್ರನು ಕೋಪಗೊಂಡಾಗೆಲ್ಲಾ ರೌದ್ರಾವೇಶವನ್ನು ತಾಳುತ್ತಾನೆ. ಆ ಸಂದರ್ಭದಲ್ಲಿ ಆತನಾಡುವ ಮಾತುಗಳನ್ನು ಗಮನಿಸಿ.

"ಕಿಡಿಗೆದುರು ತಲಾಕೌಶಿಕನಾ ಕ್ಷಣ ಕಡಿಯುತ ಪಲ್ಗಳನು
ಕಡುದುರಳನು ಏನಗೀಪರಿ ಮದದೊಳು ನುಡಿದನು ಭಲ ಭಲರೆ
ಉರುಹುವೆ ತಪದೊಳು ತ್ರೈ ಜಗವೆಲ್ಲವ ನರೆಕ್ಷಣದೊಳಗೀಗ
ದುರಳೆಯು ಮೇನಕೆ ವಿಘ್ನವಗೈದಳು ಬರಿ ನಿಂದೆಗಳಾಯ್ತು"[4]

ಎನ್ನುವಲ್ಲಿನ ರೌದ್ರಾವೇಶ ಎಂತಹವರಿಗೂ ಭಯವನ್ನುಂಟು ಮಾಡುವಂತಿದೆ.

ಶೃಂಗಾರ ರಸವನ್ನಂತೂ ಯಕ್ಷಗಾನ ಕವಿಗಳು ಬಹಳ ಧಾರಾಳವಾಗಿಯೇ ಬಳಸಿದ್ದಾರೆ. ಹೆಣ್ಣಿನ ಬೆಡಗು ವೈಯ್ಯಾರಗಳನ್ನು ವಿವರಿಸಬೇಕಾದ ಸಂದರ್ಭಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ತಮ್ಮ ಕವಿತಾ ಶಕ್ತಿಯನ್ನು ಪ್ರದರ್ಶನ ಮಾಡಿದ್ದಾರೆ. ವಿಶ್ವಾಮಿತ್ರನ ತಪೋಭಂಗಕ್ಕೆ ಬಂದ ಮೇನಕೆ ಹೀಗಿದ್ದಳಂತೆ.

"ಕಾಲಲೊಪ್ಪುವ ನೂಪುರದ ನಳಿದೋಳುಗಳ ಕಂಕಣದ ಕಟತಟೆ
ಲೋಲಕಾಂ ಬೇಗುಣದ ಮಣಿಮುದ್ರಿಕೆಯ ಬೆರಳುಗಳ
ಬಾಲೆದರಹಸಿತಾಂಬುಜಾಕ್ಷಿಯು ನೀಳ ಕುಂತಳೆ ಯಾರೆನುತ ಭೂ
ಪಾಲ ವಿಸ್ಮಿತನಾಗಿ ನುಡಿಸಿದನಾಗ ಮೋಹದಲೀ...."[5]

ಒಮ್ಮೊಮ್ಮೆ ಈ ಬಗೆಯ ಶೃಂಗಾರ ವರ್ಣನೆ ಅಶ್ಲೀಲ ಎನಿಸುವ ಹಂತವನ್ನು ಮುಟ್ಟಿದ್ದೂ ಉಂಟು. ಪುತ್ರಕಾಮೇಷ್ಟಿಯಲ್ಲಿ ದಶರಥನಿಗೂ ಅವನ ರಾಣಿಯರಿಗೂ ನಡೆದ ಸಂಭಾಷಣೆ ನೋಡಿದಾಗ ಸ್ಪಷ್ಟವಾಗುತ್ತದೆ.

"ಎಲ್ಲ ಸ್ಮರನ ತಂತ್ರವನ್ನು ಬಲ್ಲೆದೆರೆಯ ನಿಂತು
ಸುಲಭವೇನೇ ಸುರತವಾಡದೆ ಸುತರ ಪಡೆವದೆಂತು
ನಳಿನಾಕ್ಷಿ ಮರನ ಸುಖದಿ ನಲಿದರಿಂದರೇನೇ
ಖಳಸಂಹರನ ಕೃಪೆಯಾಗಬೇಕು ಯಜ್ಞ ಮುಖದಿತಾನೆ"[6]

ಎಂಬಲ್ಲೆಲ್ಲಾ ಗಂಡ ಹೆಂಡಿರ ನಡುವೆ ಈ ಮಾತುಗಳೆಲ್ಲಾ ಇರುವವೇ. ಆದರೆ ಸಾರ್ವಜನಿಕವಾಗಿ ಪ್ರದರ್ಶಿಸಲ್ಪಡುವ ಬಯಲಾಟಗಳಲ್ಲಿ ಈ ಮಾತುಗಳ ಔಚಿತ್ಯ ಎಷ್ಟು? ಇದೇ ರೀತಿ ತಪಸ್ವೀ ಋಷ್ಯಶೃಂಗರು ರೋಮಪಾದನಿಂದ ಕಳುಹಿಸಲ್ಪಟ್ಟ ಸುಂದರಿಯನ್ನು ನೋಡಿ ಆಡುವ ಮಾತುಗಳನ್ನು ಕವಿ ಹೀಗೆ ಹೇಳಿದ್ದಾನೆ.

ನಮಗೆ ಒಂದೇ ಕೋಡು ನಿಮಗೆ ದ್ವಯಗಳುಂಟು
ಅಮಮ ಮಹಾಮುನಿವರರೆನಲು ಕಮಲ ವದನೆಯರು ಭ್ರಮರ
ಕುಂತಳೆಯರು
ಚಮರಗವೊಲು ಬೀಸುತ ಹೊದ್ದುತಾ...[7] ಹೋದರಂತೆ.

ಪ್ರಚಂಡ ಲಂಕೇಶ್ವರ ಎಂಬ ಪ್ರಸಂಗದಲ್ಲಿ ಮೊದಲ ನೋಟದಲ್ಲೇ ಪ್ರಣಯಾಂಕುರವಾದ ರಾವಣ ಮಂಡೋದರಿಯರ ಭಾವನೆಗಳನ್ನು ಚಿತ್ರಕ ಶಕ್ತಿಯಿಂದ ಕಟ್ಟಲಾಗಿದೆ.

ಸುಖದ ಹಿಂದೆ ದುಃಖ, ಜಯಪಡೆದವರ ಸಂತೋಷದೊಂದಿಗೆ ಅಪಜಯ ಹೊಂದಿದವರ ಯಾತನೆ ಇದ್ದೇ ಇರುತ್ತದೆ. ಈ ಶೋಕಭಾವವೇ ಕರುಣೆಗೆ ಕಾರಣವಾಗುತ್ತದೆ. ಇಂತಹ ಕರುಣಾರಸ ಪೂರಿತವಾದ ಪ್ರಸಂಗಗಳು ರಾಮಾಯಣ ಪ್ರಸಂಗಗಳಲ್ಲಿ ಸಾಕಷ್ಟು ಬಂದಿವೆ. ಒಂದರ್ಥದಲ್ಲಿ ಸೀತೆಯ ಶೋಕವೇ ರಾಮಾಯಣದ ಎಲ್ಲ ಚಾಲನೆಗೆ 'ಕೀ' ಇದ್ದಂತೆ. ಆಕೆ ಪಡುವ ವೇದನೆಯನ್ನು ಚೂಡಾಮಣಿ ಪ್ರಸಂಗದಲ್ಲಿ ಬಹುಸೂಕ್ಷ್ಮವಾಗಿ ಕಡೆಯಲಾಗಿದೆ. ರಾಮಪಟ್ಟಾಭಿಷೇಕದಲ್ಲಿ ರಾವಣನ ಮರಣದಿಂದ ಶೋಕಗೊಂಡ ವಿಭೀಷಣನ ಗೋಳು ಹೀಗಿದೆ.

"ಚಿತ್ತವಿಸೈ ದೇವಾ ಚಿತ್ತದ ವ್ಯಥೆಯಾ
ಎತ್ತಣ ಮೋಹವೋ ಮುತ್ತಿದೆ ಹೃದಯ
ಹೆತ್ತಯ್ಯನಗಲಿದ ಮತ್ತೆಯೊಟ್ಟಾಗಿ
ಬತ್ತಿದ ಪ್ರೇಮವಚ್ಚೊತ್ತಿದೆ ಸಾಗಿ"[8]

ಎಂದೆಲ್ಲಾ ಗೋಳಾಡುತ್ತಾನೆ. ಕೊನೆಯಲ್ಲಿ ಶ್ರೀರಾಮನೇ ಕರುಳ ಸಂಬಂಧದ ಹರಿಬವೇ ಹಿರಿದೆನ್ನುತ್ತಾನೆ.

ರಾಮಭಟ್ಟನ ಲವಕುಶರ ಕಾಳಗದಲ್ಲಿ ಸೀತೆಗೆ ಆದ ಅವಸ್ಥೆಯನ್ನು ನೋಡಿ ಮರುಗುವ ಜನರ ದುಃಖವನ್ನು ಹೀಗೆ ವರ್ಣಿಸಲಾಗಿದೆ.

ಪುರಜನ ಪರಿಜನ ಮಾನಿನಿಜನ ಮುಂತಾಗಿರುವರೆಲ್ಲರೂ ದುಗುಡದಲಿ
ತರುಣಿ ಸೀತೆಯ ವನಕ್ಕೊಯ್ಯುಲು ಮರುಗಿದರೆನು ಪೇಳ್ವೆನು
ಸಡಲಿಧಾವರಣದಿ ತಡಲಿಸಿ ದಾಸ್ಯದಿ ಕಡಲಿಡುವ ಕಂಬನಿಯಧಾರೆಗಳ
ಪೊಡವಿಯೊಳೆ ನೆಟ್ಟ ದೃಷ್ಟಿಯ ಮೌನ ಮುಸುಕಿದ ಮಡದಿ ಸೀತೆ
ಬರುತಿರಲು[9]

ಎಂಬಲ್ಲಿ "ಮೌನ ಮುಸುಕಿದ ಮಡದಿ ಸೀತೆ" ಎಂಬುದು ಎಷ್ಟು ಅರ್ಥಪೂರ್ಣವಾಗಿದೆ. ಇಲ್ಲಿ ಮೌನವನ್ನೇ ಮುಸುಕು ಹಾಕಿಕೊಂಡಿರುವ ಎಂಬ ಅರ್ಥ ವಿಸ್ತಾರ ದೊಡ್ಡದು. ಶೂರ್ಪನಖಿಯ ಸೇಡಿನಿಂದಾಗಿ ನಿರಪರಾಧಿಯಾದ ತಾನು ಬಲಿಯಾಗುತ್ತಿದ್ದರೂ ಇಲ್ಲಿ ಮೌನವನ್ನು ಮುಸುಕು ಹಾಕಿಕೊಂಡಿದ್ದಾಳೆ. ಈ ಮೌನದ ಮುಸುಕೇ ಆಕೆಯ ಕಷ್ಟಕ್ಕೆ ಕಾರಣವಾಯಿತು.

ಭಕ್ತಿ ಭಾವವಂತೂ ಯಕ್ಷಗಾನ ಪ್ರಸಂಗಗಳಲ್ಲಿ ಹಲವೆಡೆ ನಿರೂಪಿತವಾಗಿದೆ. ಎಲ್ಲಾ ಕವಿಗಳೂ ಅಂತೆಯೇ ಇಲ್ಲಿ ಬರುವ ಎಲ್ಲಾ ಪಾತ್ರಧಾರಿಗಳೂ ಶ್ರೀರಾಮನನ್ನೂ ವಿಷ್ಣುವಿನ ಪ್ರಪೂರ್ಣ ಅವತಾರೀ ಎಂದಿದ್ದಾರೆ. ಕೆಲವರು ಆತನನ್ನು ಪೂಜಿಸಿ ಭಕ್ತಿ ತೋರಿಸಿದರೆ ಇನು ಕೆಲವರು ಆತನನ್ನು ವಿರೋಧಿಸಿ ತಮ್ಮ ಭಕ್ತಿಯ ಪರಾಕಾಕಷ್ಠೆಯನ್ನು ತೋರಿಸುತ್ತಾರೆ. ರಾಮನೊಂದಿಗೆ ಸಾಕಷ್ಟು ವಾದಮಾಡಿ ಜರೆದು ಬೈಯ್ದಂತಹ ವಾಲಿಯೇ ಕೊನೆಗೆ ಆಡುವ ಮಾತನ್ನು ಗಮನಿಸಿ-

"ಕರುಣವಿದ್ದರೆ ಸಾಕು ನಿನ್ನಪಾದದ ಕರುಣವಿದ್ದರೆ ಸಾಕು
ಪರಿಪೂರ್ಣವಾಗಿ ಪಾಲಿಸಿಕೊಳ್ಳಬೇಕೆಂಬ ಮೂರು ದಿನದ ಸಂ
ಸಾರ ಶಾಶ್ವತವಲ್ಲ ಘೋರ ಪಾಪಗಳ ಸಂಹಾರ ಮಾಡುವು
ದೊಂದು...."[10]

ಇಲ್ಲಿ ವಿರೋಧ ಭಕ್ತಿಯನ್ನು ಗಮನಿಸಬಹುದು. ಇದೇ ರೀತಿ ಇಂದ್ರಜಿತು, ರಾವಣ, ಕುಂಭಕರ್ಣರೂ ಕೂಡ ತಮ್ಮ ಭಕ್ತಿಯನ್ನು ಪ್ರದರ್ಶಿಸಿದ್ದಾರೆ. ಇಂದ್ರಜಿತು ಕಾಳಗದಲ್ಲೂ ಇದೇ ಬಗೆಯ ಮಾತುಗಳು ಬರುತ್ತವೆ.

ಕಾಲನೇಮಿ ಕಾಳಗದಲ್ಲಿ ಒಂದು ಹಾಸ್ಯಭರಿತವಾದ ಪ್ರಸಂಗ ಬರುತ್ತದೆ. ಕಪಿಗಳಿಗೆ ಸೆರೆ ಸಿಕ್ಕಿದ ರಾವಣನನ್ನು ಅವುಗಳು ಬಾಲದಲ್ಲಿ ಕಟ್ಟಿ ಜಡಿದು ತೂಗುತ್ತಾರೆ. ಇದೇ ಅಂಶವು ತೊರವೇ ರಾಮಾಯಣದಲ್ಲಿ ವ್ಯಕ್ತವಾಗಿದ್ದರೂ ಇಲ್ಲಿ ಇನ್ನಷ್ಟು ದೀರ್ಘವಾಗಿ ಹಾಗೂ ಹಾಸ್ಯವು ಹೊಮ್ಮುವಂತೆ ಬಳಕೆಯಾಗಿದೆ. ಈ ಸಂಗತಿ ಅಸಂಭಾವ್ಯವಾಗಿರಬಹುದು. ಆದರೆ ಈ ಅಸಂಭಾವ್ಯತೆಯಿಂದಲೂ ಕಾವ್ಯಕ್ಕೆ ಒಂದು ರಮ್ಯತೆ ಬರುತ್ತದೆ. ಇಲ್ಲಿ ಕವಿಯ ಆಶಯದ ಹಿಂದಿನ ಮನೋಭಾವವನ್ನು ಗುರುತಿಸಬೇಕು. ರಾವಣನಂತಹ ದುಷ್ಟನನ್ನು ಸೆರೆ ಹಿಡಿದಾಗ ಯಾವ ಅವಸ್ಥೆಗೆ ಗುರಿಮಾಡುತ್ತಾರೆ ಎಂಬುದರ ಬಗ್ಗೆ ನಿರೂಪಣೆ ಇದೆ. ಇದನ್ನೇ ಗಾದೆಯಲ್ಲಿ "ತೋಳ ಹಳ್ಳಕ್ಕೆ ಬಿದ್ದರೆ ಆಳಿಗೆ ಒಂದು ಕಲ್ಲು" ಎನ್ನಲಾಗಿದೆ.

ಯಕ್ಷಗಾನ ಪ್ರಸಂಗಕಾರರು ಹಾಸ್ಯವನ್ನು ತಾವು ತಂದಿರುವುದಕ್ಕಿಂತ ಹೆಚ್ಚಾಗಿ ವಿದೂಷಕ ಪಾತ್ರಧಾರಿಯೇ ಹಾಸ್ಯಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಚಾರಕ, ಹನುಮನಾಯಕ, ದೂತ, ಬೇಟೆಗಾರ ಮುಂತಾದ ಪಾತ್ರಗಳ ಸೃಷ್ಟಿಯ ಮೂಲಕ ಪ್ರದರ್ಶನದಲ್ಲಿ ಹಾಸ್ಯದ ಹೊನಲನ್ನು ಹರಿಸುತ್ತಾರೆ. ಸೈಗುಟ್ಟುವ ಭಾಗವತರಾಗಲೀ, ಪಾತ್ರಧಾರಿಗಳಾಗಲೀ ಇದ್ದು ಜಂಬಕೊಚ್ಚಿಕೊಳ್ಳುವ ಹಾಸ್ಯಗಾರರಿದ್ದರೆ ಪ್ರೇಕ್ಷಕರ ತೂಕಡಿಕೆಗೆ ಸೊನ್ನೆ ಬಿದ್ದಂತೆ. ಆತ ಕಟ್ಟುವ ರುಮಾಲು, ಕುಣಿಯುವ ವಿಧಾನ, ಹಾಕಿರುವ ಧಿರಿಸುಗಳು, ಆಡುವ ಮಾತುಗಳು ಎಲ್ಲವೂ ನಗೆ ಉಕ್ಕಲು ಸಹಾಯಕ. ಕೆಲವು ಪ್ರಸಂಗಗಳಲ್ಲಿನ ಪಾತ್ರವು ಹಾಸ್ಯಕ್ಕೆಂದೇ ಮೀಸಲಾಗಿದೆ. ಲಂಕಾದಹನ, ಚಂದ್ರಾವಳಿ ಮುಂತಾದ ಪ್ರಸಂಗಗಳಲ್ಲಿ ಹೆಣ್ಣು ಪಾತ್ರಗಳ ಮೂಲಕ ಹಾಸ್ಯವನ್ನು ಹರಿಯಿಸಲು ಪ್ರಯತ್ನಿಸಲಾಗಿದೆ. ಪ್ರತಿಯೊಂದು ಮೇಳದಲ್ಲಿ ಹಾಸ್ಯಕ್ಕೆಂದೇ ಒಬ್ಬರಿರುತ್ತಾರೆ. ಅವರನ್ನು ಹಾಸ್ಯಗಾರರೆಂದು ಕರೆಯುತ್ತಾರೆ.

ಕವಿಯಾದವನು ತಾನು ಪಟ್ಟ ಅನುಭವವನ್ನು ಸಹೃದಯರಿಗೆ ಹಂಚಲು ವರ್ಣನೆಗಳನ್ನು ಬಳಸುತ್ತಾನೆ. ಪ್ರಸಂಗಕಾರರು ಕವಿಹೃದಯವುಳ್ಳವರಾಗಿದ್ದು ತಮ್ಮ ಪ್ರಸಂಗಗಳಲ್ಲಿ ಹಲವು ವರ್ಣನೆಗಳನ್ನು ತಂದಿದ್ದಾರೆ. ಮಹಾಕಾವ್ಯಗಳಲ್ಲಿ ಬರುವಂತೆ ಅಷ್ಟಾದಶ ವರ್ಣನೆಯ ಕಟ್ಟಿಗೆ ಒಳಗಾಗದೇ ಉಚಿತವಾದಲ್ಲಿ ಮಾತ್ರ ಮಿತವಾದ ರೀತಿಯಲ್ಲಿ ವರ್ಣನೆಗಳನ್ನು ಬಳಸಿ ಯಶಸ್ವಿಯಾಗಿದ್ದಾರೆ. ಅವರ ವರ್ಣನೆಗಳು ಸಹಜ ಹಾಗೂ ಜೀವಂತವಾಗಿವೆ.

ಅಷ್ಟಾದಶ ವರ್ಣನೆಗಳಲ್ಲಿ ಒಂದಾದ ಸಮುದ್ರ ವರ್ಣನೆ ಕನ್ನಡ ಕಾವ್ಯಗಳಲ್ಲಿ ಸಾಕಷ್ಟು ಬಗೆಯಾಗಿ ಬಂದಿದೆ. ಯಕ್ಷಗಾನ ಲಂಕಾದಹನದಲ್ಲಿ ಸೀತೆಯನ್ನು ಹುಡುಕುತ್ತಾ ಬಂದ ಕಪಿ ಶ್ರೇಷ್ಠರ ಗುಂಪು ಸಾಗರದ ತಡಿಯನ್ನು ಮುಟ್ಟುತ್ತದೆ. ಹಿರಿಯನಾದ ಜಾಂಬವಂತ ಉಳಿದ ಕಪಿಗಳಿಗೆ ಸಮುದ್ರವನ್ನು ಹೀಗೆ ವರ್ಣಿಸುತ್ತಾನೆ.

ಕಂಡಿರೇ ನೀವು ಕಂಡಿರೇ
ಕಂಡಿರೇ ಸಮುದ್ರರಾಜ ಕೆಂಡದಂತುಚ್ಚರಿಸುವುದನು ಕಂಡಿರೇ
ಧರೆಯ ಪುಣ್ಯನದಿಗಳನ್ನು
ಕರೆಸಿ ಬೆರಸಿಕೊಂಡು ಕೊಬ್ಬಿ ಮೊರೆವುದಾ ಭೋರ್ಗರೆವುದಾ ಕಂಡಿರೆ॥

ಅಂಬರಕೆ ಹಾರಿ ಮಗುಚಿ
ಬಿಂಬಿಸುವುದು ಭಯವನಿಂತು ನೊರೆಗಳಾ ಬಹತೆರೆಗಳಾ
ಅಗಣಿತದ ಪರ್ವತಗಳ
ಸೊಗಸು ಮೀರಿ ಚರಿಪ ಮೀನು ಹೊಳೆವುದಾ ಬಾಯಕಳೆವುದಾ...[11]

ಮೇಲಿನ ವರ್ಣನೆ ಕವಿಯ ಚಿತ್ರಣ ಸಾಮರ್ಥ್ಯಕ್ಕೆ ಶ್ರೇಷ್ಠ ಉದಾಹರಣೆ ಎನ್ನಬಹುದು.

'ಪ್ರಚಂಡ ಲಂಕೇಶ್ವರ'ದಲ್ಲಿ ಚಂದ್ರೋದಯದ ವರ್ಣನೆಯನ್ನು ಮೂರೂರು ದೇವರು ಹೆಗ್ಗಡೆಯವರು ಯಮನ್ ಕಲ್ಯಾಣಿರಾಗದ ಏಕ ತಾಳದಲ್ಲಿ ಹೀಗೆ ರಚಿಸಿದ್ದಾರೆ. ಇಲ್ಲಿಯ ದೇಶೀಯ ಸೊಬಗು ಮೆಚ್ಚುವಂತಾದ್ದು –

"ಅಹಹ ಯೇನ್ಸೊಬಗು ರಂಜಿಪುದಿಲ್ಲಿ ಕಣ್
ಮನವ ಸೂರೆಯಗೊಂಬ ಬಗೆಯಲ್ಲಿ
ಹರಿತಪ್ಪತಂಗಾಳಿ ಯಡೆಯಲ್ಲಿ
ಪರಿಮಳಿಪ ಸೌಗಂಧವ್ಯೆ ತಹುದಿಲ್ಲಿ.....[12]

ಈ ಪದ್ಯದ ಬಗ್ಗೆ ಶ್ರೀ ಪಿ.ವಿ.ಹಾಸ್ಯಗಾರರು "ಈ ಪದ್ಯವನ್ನು ಓದುವಾಗ ಗೆಜ್ಜೆಯನಾದ ಕಿಂಕಿಣಿ ಕಿಲಿಕಿಲಿರೆಂದು ನನ್ನ ಕಿವಿಯಲ್ಲಿ ಧ್ವನಿಸದಂತಾಯ್ತು" ಎಂದಿದ್ದಾರೆ.[13]

ಕಾಲನೇಮಿ ಕಾಳಗದಲ್ಲಿ ತಪೋವನದ ನಿರ್ಮಾಣ ಒಂದು ವಾರ್ಧಕದಲ್ಲಿ ಹೀಗೆ ನಡೆದಿದೆ.

ಪರಿಕಿಸಲು ಚೋದ್ಯವಹ ಭುಜವಲ್ಲರಿಗಳಿಂ
ಸುರುಚಿರದ ತಳಿರು ಕುಡ್ಮಲ ಕುಸುಮ ಫಲಗಳಿಂ
ಗೆರಗಿ ಸವಿವ ಚಕೋರ ಕೋಗಿಲೆಗಳಿಂ ಸಂಚರಿಪ ಸಾಧು ಮೃಗಗಳಿಂದ
ಮೆರೆವ ಗಹನದಿ ವೇದ ತರ್ಕ ಘನಶಾಸ್ತ್ರದಿಂ
ನಿರತ ವಟುಗಳನೋದಿವೆಸುತಲಗ್ನಿ ಹೋತ್ರದಿಂ
ಪರಮ ಸಂಯಮಿಯೆನಿಪ ಮಾಯಾ ವಿಚಿತ್ರದಿಂದ ಸುರೇಂದ್ರ
ನೆನೆದನೆಂದ.....[14]

ಅಸುರೇಂದ್ರನು ಪರಮ ಸಂಯಮಿ ಎನಿಸುವ ರೀತಿಯಲ್ಲಿ ಮಾಯೆಯಿಂದ ಇದ್ದನಂತೆ.

ರಾಮನು ಬೇಟೆಗೆ ಹೋದ ವರ್ಣನೆ ಕುಶಲವರ ಕಾಳಗದಲ್ಲಿ ಉತ್ತಮ ರೂಪಕ ವಿಧಾನದಿಂದ ಬಂದಿದೆ.

ಬೇಟೆಯಾಡುತ ಬಂದ ರಾಮ ಸಂತೋಷದಿಂದ
ಈಟಿ ಕಠಾರಿಯ ಕೋಟಿ ಮಂದಿ ಎನಗೆ ನೆಗೆದಾಟವಾಡುತ ನಾಟಕವಾಗಿ
ಸೊಕ್ಕಿದ ಮೃಗಗಳಾ ಧಿಕ್ಕರಿಸುತಾ ಬಲುಗಕ್ಕಸದಿಂದಲಿ
ರಕ್ಕಸ ವೈರಿ.....

ಇಲ್ಲಿನ ಶಬ್ದದೊಡನೆ ಚಿತ್ರವತ್ತಾದ ವರ್ಣನೆ ಹಾಗೂ ಸಹಜತೆ ಮೆಚ್ಚುವಂತಾದ್ದಾಗಿದೆ.

ಸುಭಿಕ್ಷವಾಗಿರುವ ರಾಮರಾಜ್ಯವನ್ನು ಶತಾಸ್ಯರಾವಣ ಕಾಳಗ ಕವಿ ವಿಷ್ಣು ಸಭಾಹಿತನು ವಿವರಿಸುವುದರ ಮೂಲಕ ಒಂದು ಸುಖ ಸಂತೋಷದ ಚಿತ್ರಣವನ್ನೇ ಕಟ್ಟಿಕೊಡುತ್ತಾನೆ. ರಾಮನ ರಾಜ್ಯದಲ್ಲಿ ಜನರು ವಾಸಿಸುತ್ತಿದ್ದ ರೀತಿ ಹೀಗಿತ್ತು. ಚರಣ ನಾಲ್ಕರಲ್ಲೂ ಧರ್ಮವು ನೆಲೆಸಿತ್ತು. ಪರಸ್ತ್ರೀಯರನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ.

"ಸೋಮನಂದದಿ ಶಾಂತರಾಗುವರೆಲ್ಲಾ
ರಾಮರಾಜ್ಯದೊಳ ಕಾಲದ ಮರಣವಿಲ್ಲ
ಮಕ್ಕಳಿಲ್ಲೆಂಬುದನು ಕಾಣೆ ಸತಿಯರಿಗೆ
ತಕ್ಕರಾಗಿಹರೆಲ್ಲ ದಂಪತಿಗಳೊಳಗೆ...."[16]

ಜಲಕೇಳಿಯನ್ನು ಸುಂದರವಾಗಿ ವರ್ಣಿಸಬಲ್ಲ ಯಕ್ಷಗಾನ ಕವಿಗಳಿದ್ದಾರೆ. 'ಆಡಿದರೂ ಆಡಿದರೂ' ಎಂದು ಎರಡೆರಡು ಬಾರಿ ಹಾಡುವಾಗ ಬರುವ ನಾದಗುಣ ಬಹಳ ಸೊಗಸಾಗಿದ್ದು ಆಡುವ ಕ್ರಿಯೆಯನ್ನು ಧ್ವನಿಸುತ್ತಿದೆ –

ಆಡಿದರಾಡಿದರು ನೀರಾಟವ
ನಾಡಿದರಾಡಿದರು
ಮುಳುಗುತಲೇಳುತ ಜಲಗಳನೆರೆಚುತ
ಘಳಿಲ ನೋರ್ವರೋರ್ವರ ಪಿಡಿದೆಳೆಯುತ ರಾಡಿದರಾಡಿದರು

ಯೇರುತ ಹಾರುತ ತೂರುತ ನೀರ್ಗಳ
ಜಾರುತ ನಗುವನು ಬೀರುತ ಸೊಬಗಿನೊಳಾಡಿದವರಾಡಿದರು....[17]

ಉತ್ತಮವಾದ ಅಲಂಕಾರಿಕ ಭಾಷೆಯನ್ನು ಇಲ್ಲಿನ ಕವಿಗಳು ಬಳಸಬಲ್ಲರು. ತಾವು ಕಂಡದ್ದನ್ನು ಹೋಲಿಸುವುದರ ಮೂಲಕ ಅರ್ಥವೈಶಾಲ್ಯವನ್ನು ಉಂಟು ಮಾಡಬಲ್ಲರು.

ರಾಮಭಟ್ಟನ ಇಂದ್ರಜಿತು ಕಾಳಗದಲ್ಲಿ ಇಂದ್ರಜಿತುವಿನ ಶಿರದೊಂದಿಗೆ ರಾವಣನ ಮುಂದಿನ ಅಧಃಪತನವನ್ನು ಸೂಚಿಸಲಾಗಿದೆ. ಅದೆಂದರೆ 'ಇಂದ್ರಜಿತುವಿನ ಎಸೆವ ಶಿರವನು ಕೊಂಡು ಸಾರಥಿ ದಶಶಿರನ ಮುಂದಿಡೆ ಲಂಕಾಪುರದ ಸಿರಿಯಂತೆ.[18] ಎಂಬುದು ಉಪಮಾ ಅಲಂಕಾರದಲ್ಲಿ ಬಂದಿದೆ. ಕುಶಲವರ ಕಾಳಗವಂತೂ ಜೈಮಿನೀ ಭಾರತದ ಪ್ರಭಾವಕ್ಕೆ ಒಳಗಾಗಿದ್ದು ಉಪಮಾಲೋಲ ಲಕ್ಷ್ಮೀಶನ ಉಪಮಾಶಕ್ತಿ ಯಿಂದಲೂ ಪ್ರಭಾವಿತಗೊಂಡಿದೆ.

ಪ್ರಸಂಗಗಳಲ್ಲಿ ಬಳಸಲಾದ ಉಪಮೇಗಳಲ್ಲಿ ಕೆಲವನ್ನು ಇಲ್ಲಿ ಉದಾಹರಣೆ ಗೋಸ್ಕರ ಪಟ್ಟಿಮಾಡಬಹುದು-

(ಅ) ಕಾಡಿನೊಳಗೆ ಹುಲಿಯಿರುವ ಸುದ್ದಿ ಕೇಳಿ
ನಾಡಿಂದೊಕ್ಕಲು ತೆಗೆದಂತೆ[19]

(ಆ) ಹೊಡೆದ ಮಳೆನೀರ ಹೊಳೆಯಲಿ ಮುಳುಗಿ ಸಾವವನ
ಹಿಡಿದೆತ್ತಿ ಜೀವವನು ಕಾಯ್ದಂತೆ ವಾಲ್ಮೀಕಿ
ನಡುಗುತಿಹ ಜಾನಕಿಯನ್ನು ಕರೆತಂದ ನೊಡನಿರ್ದತಾಪಸೋತ್ತಮರ
ಸಹಿತ[20]

(ಇ) ನೆಲೆಯಲ್ಲ ತನುವಿದು ಮಳೆಗಾಲದಲಿ ತುಂಬಿದ್ಹೊಳೆಯಲ್ಲಿ
ನೆರೆಪುಟ್ಟುವಂತೆ[21]

ರೂಪಕವನ್ನು ಬಳಸುವಲ್ಲಿ ಉಳಿದೆಲ್ಲರಿಗಿಂತ ರಾಮಭಟ್ಟನೇ ಮುಂದು. ಆತನ ಅತಿಕಾಯ ಕಾಳಗದಲ್ಲಿ ಸಾಕಷ್ಟು ರೂಪಕಗಳು ಬಂದಿವೆ. ಅತಿಕಾಯನು ಬರುತ್ತಿರುವುದನ್ನು ರೂಪಕದ ವೈಭವದ ಮೂಲಕ ವರ್ಣಿಸಿದ್ದಾನೆ.

"ಕೆಲಸಾರು ಭಕ್ತಿಯ ಮಹಮ್ಮೇರು ಬರುತಲಿದೆ
ಕೆಲಸಾರು ಸದ್ಧರ್ಮ ಕಲ್ಪತರು ಬರುತಲಿದೆ
ಕೆಲಸಾರು ಶ್ರೀರಾಮ ಚರಣಾರವಿಂದ ಮಧುಕರತಾನೆ ಬರುತಲಿದೆ[22]

ಅತಿಕಾಯನ ಶಿರವನ್ನು ನೋಡಿ ವಿಭೀಷಣನ ಪ್ರಲಾಪಿಸಲು ಕವಿ ಸಹಜ ಸ್ಪೂರ್ತವಾಗಿ ರೂಪಕವನ್ನು ನೇಯ್ದಿದ್ದಾನೆ.

"ಯಾರು ಬದುಕಿರ್ದು ಫಲವೇನು ನಿನಳಿಯೆ
ತೀರಿತೆಮ್ಮಾಯುಷ್ಯ ರಿಪುತಿಮರ ಭಾನು[23]

ಎನ್ನುವಲ್ಲಿ ಮನಸ್ಸಿನಲ್ಲಿ ನಾಟುವಂತಹ ವೇದನೆಯು ರೂಪಕದ ಮೂಲಕ ಬಂದಿದೆ.

ಈ ವರೆಗಿನ ಅಧ್ಯಯನದಿಂದ ಜಾನಪದ ಸ್ಫೂರ್ತವಾಗಿ ಹೊರಹೊಮ್ಮಿದ ಯಕ್ಷಗಾನ ಕೃತಿಗಳಲ್ಲೂ ಕೂಡ ಶಿಷ್ಟ ಕಾವ್ಯ ಪರಂಪರೆಯಲ್ಲಿ ನಾವು ಕಾಣಬಹುದಾದ ಮಟ್ಟದ ವರ್ಣನೆ ಮತ್ತು ರಸಪ್ರತಿಪಾದನೆ ಅಲ್ಲಲ್ಲಿ ಮಿಂಚಿರುವುದನ್ನು ನೋಡುವಾಗ ನಮ್ಮ ಸಂಸ್ಕೃತಿಯ ಬೇರುಗಳು ಹೇಗೆ ಹಳ್ಳಿಗಳಲ್ಲಿ ಬೇರೂರಿದೆ ಎಂಬುದು ಸ್ಪಷ್ಟವಾಗುವುದು. ಕವಿ ಪ್ರತಿಭೆಗೆ ಅಚ್ಚುಕಟ್ಟಾದ ಮಿತಿಯಲ್ಲಿರುವ ಪಾಂಡಿತ್ಯವು ಇಲ್ಲಿ ಪೂರಕವಾಗಿದೆ.

ಅಡಿಟಿಪ್ಪಣಿಗಳು

1. ಅತಿಕಾಯ ಕಾಳಗ – ಹಟ್ಟಿಯಂಗಡಿ ರಾಮಭಟ್ಟ – ಪುಟ 18
2. ಮಾರೀಮುಖನ ಕಾಳಗ – ಸೋಮೇಶ್ವರನ ಭಕ್ತ,
   ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಉಡುಪಿ.
3. ಯಕ್ಷಗಾನ – ಡಾ. ಶಿವರಾಮ ಕಾರಂತ ಪುಟ 34.
   ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
4. ಯಕ್ಷಗಾನ ಕೌಶಿಕ ಚರಿತ್ರೆ – ಹ. ನರಸಿಂಹಶಾಸ್ತ್ರಿ ಪುಟ 17.
5. ಯಕ್ಷಗಾನ ಕೌಶಿಕ ಚರಿತ್ರೆ – ಹ. ನರಸಿಂಹಶಾಸ್ತ್ರಿ ಪುಟ 14
6. ಪುತ್ರಕಾಮೇಷ್ಟಿ ಮತ್ತು ಸೀತಾಕಲ್ಯಾಣ – ಪಾರ್ತಿಸುಬ್ಬ ಪುಟ 4
7. ಅದೇ – ಪುಟ 5
8. ರಾಮ ಪಟ್ಟಾಭಿಷೇಕ – ರಾಮಕೃಷ್ಣ ಭಾಗವತ ಪುಟ 5
9. ಲವಕುಶರ ಕಾಳಗ – ಹಟ್ಟಿಯಂಗಡಿ ರಾಮಭಟ್ಟ.
10. ಪಂಚವಟಿ ವಾಲಿಸುಗ್ರೀವ ಕಾಳಗ – ಪಾರ್ತಿಸುಬ್ಬ.
11. ಯಕ್ಷಗಾನ ಲಂಕಾದಹನ – ಪುಟ 11 ಪ್ರ. ವಿಟ್ಟಪ್ಪ ಶೆಣೈ, ಕಾರ್ಕಳ.
12. ಪ್ರಚಂಡ ಲಂಕೇಶ್ವರ – ಮೂರೂರು ದೇವರು ಹೆಗ್ಗಡೆ ಪುಟ 31
13. ಅದೇ ಮುನ್ನುಡಿ ಪುಟ 9
14. ಕಾಲನೇಮಿ ಕಾಳಗ – ಪುಟ 40 ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್.
15. ಕುಶಲವರ ಕಾಳಗ – ಪುಟ 4, ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಉಡುಪಿ.
16. ಶತಾಸ್ಯರಾವಣ ಕಾಳಗ – ವಿಷ್ಣು ಸಭಾಹಿತ.
17. ಪ್ರಚಂಡ ಲಂಕೇಶ್ವರ – ಮೂರೂರು ದೇವರು ಹೆಗ್ಗಡೆ ಪುಟ 16.
18. ಇಂದ್ರಜಿತು ಕಾಳಗ – ಹಟ್ಟಿಯಂಗಡಿ ರಾಮಭಟ್ಟ
19. ಕುಶಲವರ ಕಾಳಗ – ಪಾರ್ತಿಸುಬ್ಬ
20. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ ಪುಟ 400
21. ಅದೇ ಪುಟ 100
22. ಅತಿಕಾಯ ಕಾಳಗ – ಹಟ್ಟಿಯಂಗಡಿ ರಾಮಭಟ್ಟ ಪುಟ 6
23. ಅತಿಕಾಯ ಕಾಳಗ – ಹಟ್ಟಿಯಂಗಡಿ ರಾಮಭಟ್ಟ ಪುಟ 15

* * * * *

ಪ್ರಸಂಗಗಳಲ್ಲಿ ಸಾಮಾಜಿಕತೆ

ಸಾಹಿತ್ಯ – ಬದುಕು ಒಂದನ್ನೊಂದು ಬಿಟ್ಟಿರಲಾರವು. ಕವಿ, ಸಮಾಜದಲ್ಲಿದ್ದು ಬದುಕನ್ನು ತನ್ನ ಕಾವ್ಯದಲ್ಲಿ ಒಡಮೂಡಿಸುತ್ತಾನೆ. ಆಗ ಸೃಷ್ಟಿಯಾದ ಸಾಹಿತ್ಯ, ಬದುಕಿನ ಒಂದು ಅಂಗವೇ ಆಗಿದ್ದು, ಬದುಕಿಗಾಗಿಯೇ ಇರುತ್ತದೆ. ಬದುಕಿಲ್ಲದೆ ಅನುಭವ ಇಲ್ಲ. ಅನುಭವವಿಲ್ಲದೆ ಸಾಹಿತ್ಯವಿಲ್ಲ. ಜೀವಂತ ಅನುಭವ ಮಾತ್ರ ಸೃಜನತೆಗೆ ಕಾರಣವಾಗುತ್ತದೆ. ಆದುದರಿಂದಲೇ 'Art cannot be created in vaccum' (ಸಾಹಿತ್ಯ ಶೂನ್ಯದಲ್ಲಿ ಸೃಷ್ಟಿಯಾಗುವುದಿಲ್ಲ) ಎಂದಿರುವುದು. ಜನ ಜೀವನದೊಂದಿಗೆ ನೇರ ಸಂಬಂಧವುಳ್ಳ ಸಾಹಿತ್ಯ ಬದುಕಿನ ಒರೆಕೊರೆಗಳನ್ನು ಚಿತ್ರಿಸುವುದರೊಂದಿಗೆ ಮನುಷ್ಯನಲ್ಲಿ ಕಾಣುವ ನೋವು–ನಲಿವು, ಹಿಗ್ಗು–ಕುಗ್ಗು, ಭಯ–ಭೀತಿ ಮೊದಲಾದ ಭಾವಗಳನ್ನು ಮಿಡಿಯುತ್ತದೆ. ಈ ಕಾರಣದಿಂದಲೇ ಪ್ರಕೃತಿಯಂತೆ ಸಾಹಿತ್ಯವು ಕೂಡ ನವನವೋನ್ಮೇಷಶಾಲಿಯಾಗಿದೆ.

ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಾಹಿತ್ಯವನ್ನು ಗಮನದಲ್ಲಿಟ್ಟುಕೊಂಡಾಗ ಅವುಗಳ ಧೋರಣೆಯಲ್ಲಿ ಕಂಡು ಬರುವ ಅಂತರವನ್ನು ಗುರುತಿಸ ಬೇಕಾಗುತ್ತದೆ. ಶಿಷ್ಟ ಸಾಹಿತ್ಯವೆನ್ನುವುದು ಅನುಭವದ ಪ್ರತಿಸೃಷ್ಟಿಯಾಗಿರಬಹುದು. ಆದರೆ ಅದರ ಹಿನ್ನಲೆಯಲ್ಲಿ ಕಲೆಯಾಗಬೇಕೆಂಬ ಗುರಿ ಅಡಗಿರುವುದರಿಂದ ಅದರದೇ ಆದ ಒಂದು ಮಿತಿಗೆ ಬದ್ಧವಾಗಿರುತ್ತದೆ. ನಾಜೂಕಿನ ಸಾಹಿತ್ಯ ಸೃಷ್ಟಿಯನ್ನು ಬಯಸಿದ ಸಾಹಿತಿಯು ಈ ಬಗೆಯ ಸುಧಾರಣಾ ಮನೋಭಾವದಿಂದ ತನ್ನ ಪ್ರಾಮಾಣಿಕ ಅಭಿವ್ಯಕ್ತಿಗೆ ಎರವಾಗುವ ಸಂಭವವಿದೆ. ಕಲೆಯದೃಷ್ಟಿ, ಮಡಿವಂತಿಕೆ ದೃಷ್ಟಿ ಬೆಳೆಯುತ್ತಾ ಹೋದಂತೆ ಸಾಹಿತ್ಯ, ಪಾಂಡಿತ್ಯದ ಜೀತದಾಳಾಗುತ್ತದೆ. ಇದರಿಂದಲೇ ಹಳೆಗನ್ನಡ ಸಾಹಿತ್ಯದಲ್ಲಿ ಕೆಲವೊಂದು ಸಾಹಿತ್ಯ ಕೃತಿಗಳು, ಕಬ್ಬಿಣದ ಕಡಲೆಯಾದದ್ದು. ಲಕ್ಷ್ಮಣ ಶಾಸ್ತ್ರಕ್ಕೆ ಕಟ್ಟುಬಿದ್ದ ಕವಿ, ಕಲಾಕೃತಿಯನ್ನು ನಿರ್ಮಿಸಬೇಕೆಂಬ ಸಂಕಲ್ಪದಿಂದ ಬದುಕಿನಿಂದ ದೂರ ಸರಿಯುವ ಸಂಭವವಿದೆ.

ಈ ರೀತಿ ಕೈಕಟ್ಟಿಸಿಕೊಂಡ ಶಿಷ್ಟ ಸಾಹಿತ್ಯದ ಧೋರಣೆಗಿಂತ ಜಾನಪದ ಸಾಹಿತ್ಯದ ಧೋರಣೆ ಸಂಪೂರ್ಣ ಭಿನ್ನವಾಗಿದೆ. ಬದುಕಿನ ಜೊತೆ ಸ್ಪಂದಿಸಬಲ್ಲ ಶಕ್ತಿಯನ್ನು ಜನಪದ ಸಾಹಿತ್ಯ ಪಡೆದುಕೊಂಡು ಬಂದಿದೆ. ಜಾನಪದ ಕವಿಗೆ ಇತಿಮಿತಿಗಳಾಗಲೀ, ಕಟ್ಟುಪಾಡುಗಳಾಗಲೀ ಇಲ್ಲದಿರುವುದರಿಂದಲೇ ಆತನು ಸೃಷ್ಟಿಸಿದ ಸಾಹಿತ್ಯ ಬದುಕಿಗೆ ಅಥೆಂಟಿಕ್ ಆಗಿರುತ್ತದೆ.

ಯಕ್ಷಗಾನ ಕವಿಗಳು ಹಳ್ಳಿಗಾಡುಗಳಲ್ಲಿದ್ದು, ಬೇಸಾಯ, ತೋಟಗಾರಿಕೆ ಮುಂತಾದವುಗಳನ್ನು ಮಾಡಿಕೊಳ್ಳುತ್ತಾ. ವಿರಾಮ ವೇಳೆಯಲ್ಲಿ ಭಾಗವತ, ಭಾರತ, ಪುರಾಣ ಪುಣ್ಯಕತೆಗಳನ್ನು ಓದಿಕೊಳ್ಳುತ್ತಾ, ತಾವು ಓದಿದ್ದನ್ನು ಓದುಬಾರದ ಅಕ್ಕಪಕ್ಕದವರಿಗೆ, ಸಮಯ ಸಂದರ್ಭ ಸಿಕ್ಕಿದಾಗಲೆಲ್ಲಾ ಹೇಳಿಕೊಳ್ಳುತ್ತಾ ಕಾಲವನ್ನು ಕಳೆಯುವಂತವರು ಸಂಸ್ಕೃತದ ಮಹಾ ಮಹಾ ಪಾಂಡಿತ್ಯದ ಪುಸ್ತಕಗಳನ್ನಾಗಲೀ, ವೇದ ಉಪನಿಷತ್‌ಗಳನ್ನಾಗಲೀ, ಲಕ್ಷಣ ಶಾಸ್ತ್ರಗಳನ್ನಾಗಲೀ ಓದಿ ಅರಿತವರೇನಲ್ಲ. ಹೆಚ್ಚಿನ ಕವಿಗಳು ವೃತ್ತಿಯಲ್ಲಿ ಯಕ್ಷಗಾನ ಭಾಗವತರಾಗಿದ್ದು ಪ್ರಸಂಗವನ್ನು ರಚಿಸಿದ್ದುಂಟು. ಮಳೆಗಾಲದಲ್ಲಿ ಬೇಸಾಯ ಮಾಡುತ್ತಾ ತಮ್ಮ ಸಂಸಾರದೊಂದಿಗೆ ಸಿಹಿಕಹಿಯನ್ನು ಉಂಡಂತವರು, ಬೇಸಾಯ ಮುಗಿದನಂತರ ಮೇಳಗಳೊಂದಿಗೆ ಊರೂರು ಅಲೆಯುತ್ತಾ ಆಗ ಬಂದ ಎಡರು ತೊಡರುಗಳನ್ನು ಎದುರಿಸುತ್ತ ಹೊರಟವರು. ತಮ್ಮೊಂದಿಗೆ ಬಂದ ಮೇಳದ ಮಂದಿಯ ಬೇರೆ ಬೇರೆ ರುಚಿಗಳನ್ನ, ಗುರಿಗಳನ್ನ, ನಡವಳಿಕೆಗಳನ್ನ ನೋಡಿದಂತಹವರು. ಸಾಮಾನ್ಯ ಜನತೆಯ ಮಧ್ಯೆಯೇ ಬದುಕಿ, ಅವರಿಗೋಸ್ಕರವೇ ಪ್ರಸಂಗ ಸೃಷ್ಟಿಸಿ, ಅವರ ಬದುಕನ್ನೇ ಕಲಾಕೃತಿಯಾಗಿ ಸೃಷ್ಟಿಸಿದವರಾಗಿದ್ದಾರೆ. ಈ ದೃಷ್ಟಿಯಿಂದ ಯಕ್ಷಗಾನ ಪ್ರಸಂಗಗಳು ಸಾಮಾಜಿಕ ಬದುಕಿನ ದಾಖಲೆಯಾಗಿವೆ. ಕಾರಣ, ಜನವರ್ಗದ ಸಂಸ್ಕೃತಿಯಿಂದಲೇ ಒಡಮೂಡಿದ, ಜನವರ್ಗದ ಸಂಸ್ಕೃತಿಯನ್ನೇ ನೇರ್ಪಡಿಸಿದ ಹಿರಿಮೆ ಇದರದ್ದಾಗಿದೆ. ಪ್ರಸಂಗಕರ್ತರು ಒಂದು ಮಹಾ ಕಲೆಯನ್ನು ಸೃಷ್ಟಿಸಲು ಹೊರಟವರಲ್ಲ. ಪ್ರಚಲಿತವಿದ್ದ ಒಂದು ಕಥಾನಕವನ್ನು ಆರಿಸಿಕೊಂಡು, ಅದು ಸಾರುವ ಮೌಲ್ಯವನ್ನು ಜನತೆಯ ಕಣ್ಣಿಗೆ ಕಟ್ಟಬೇಕಾದದ್ದು ಮಾತ್ರ ಅವರ ಗುರಿ ಹೀಗೆ ಹೊರಟಾಗ ತಮ್ಮ ಪ್ರಾಮಾಣಿಕ ಅನುಭವವನ್ನು ಸಾಧ್ಯವಾದಲ್ಲೆಲ್ಲಾ ಹೇಳಿಕೊಂಡಿದ್ದಾರೆ.

ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಅಲ್ಲಿ ಕಂಡುಬರುವ ಸೊಗಸು ಬೆರಗುಗೊಳಿಸುವಂತಹದು. ಶಿಷ್ಟ ಸಾಹಿತ್ಯವನ್ನೇ ಓದಿದಂತಹವರಿಗೆ ಇದು ಮಹತ್ವದ್ದಾಗಿ ಕಂಡು ಬರದಿರಬಹುದು. ಆದರೆ ಇಲ್ಲಿರುವ ಜೀವಂತಿಕೆಗೆ ಕೆಲವು ಕಬ್ಬಿಣದ ಕಡಲೆಯಂತಹ ಪಾಂಡಿತ್ಯ ಪೂರ್ಣ ಶುಷ್ಕ ಸಾಹಿತ್ಯ ಸೋಲಬೇಕಾಗುತ್ತದೆ. ನಾವು ಪ್ರಸಂಗಗಳಲ್ಲಿ ಕಾಣುವ ವರ್ಣನೆಗಳಾಗಲೀ, ಘಟನೆಗಳಾಗಲೀ, ಪಾತ್ರಗಳಾಗಲೀ, ದೈನಂದಿನ ಜೀವನಕ್ಕೆ ಬಹಳ ಸಮೀಪವಾದವುಗಳು. ಯಕ್ಷಗಾನ ಪ್ರಸಂಗಗಳ ಸಾಮಾಜಿಕ ಅಧ್ಯಯನಕ್ಕೆ ಇಂತಹವುಗಳ ಸಮೀಕ್ಷೆ ಬಹು ಸಹಕಾರಿ.

ಜೋಗುಳದ ಹಾಡುಗಳು :

ಯಕ್ಷಗಾನ ಪ್ರಸಂಗಗಳಲ್ಲಿ ಉತ್ತಮವಾಗಿರುವ ಹಲವು ರಾಗಗಳ ಮಟ್ಟುಗಳು ಜಾನಪದ ಹಾಡುಗಳಿಗೆ ತೀರ ಹತ್ತಿರವಾದದ್ದಾಗಿವೆ. ಸೇನಪಾಲ ಅರ್ಜುನ, ಕರ್ಣಾರ್ಜುನ ಕಾಳಗ ಮುಂತಾದ ಪ್ರಸಂಗಗಳಲ್ಲಿ ಜನಪದ ಹಾಡುಗಳ ನೇರ ಪ್ರಭಾವವನ್ನು ಗುರುತಿಸಬಹುದು. ಮೂಲದಲ್ಲಿ ಎಲ್ಲೂ ಕಾಣದ ವಿನೂತನತೆ ಇಲ್ಲಿ ಇದೆ. ಈ ಬಗ್ಗೆ ಕವಿ ತಾನು ಕಂಡ ಮದುವೆ ಮುಂಜಿ ಮುಂತಾದ ಸಮಾರಂಭಗಳಲ್ಲಿ ಬಳಕೆಯಲ್ಲಿರುವ ಹಾಡುಗಳನ್ನೇ ಯಥಾವತ್ತಾಗಿ ಬಳಸಿರುವುದೂ ಉಂಟು.

ಪುತ್ರಕಾಮೇಷ್ಟಿಯಲ್ಲಿ ಬರುವ –

"ಜೋಜೋ ದಶಶಿರ ವೈರಿ ಮುರಾರಿ
ಜೋಜೋ ಶ್ರೀರಾಮಚಂದ್ರ ಉದಾರಿ
ಜೋಜೋ ಇಂದ್ರಜಿತುವಿನ ಸಂಹಾರಿ
ಜೋಜೋ ಲಕ್ಷ್ಮಣ ಶೇಷಾವತಾರಿ । ಜೋಜೋ ।

ಜೋಜೋ ಕೈಕಾದೇವಿಯ ಕಂದ
ಜೋಜೋ ಭರತ ವೀರ ಸದ್ಗುಣ ಸಾಂದ್ರ
ಜೋಜೋ ಸುಮಿತ್ರಾ ದೇವಿಯ ಕಂದ
ಜೋಜೋ ಶತ್ರುಘ್ನ ರವಿಕೋಟಿ ಸಾಂದ್ರ । ಜೋಜೋ ।[1]

ಇಲ್ಲಿ ಶ್ರೀರಾಮನು ಮುಂದೆ ಮಾಡುವ ಕೆಲಸಗಳನ್ನು ಕವಿ ಸಾರಿಬಿಟ್ಟದ್ದಾನೆ. ರಾವಣನು ಉದಾರಿಯಾಗುವನೆಂಬ, ದಶಕಂಠನು ವೈರಿಯಾಗುವನೆಂಬ ಗುಣವಾಚಕಗಳೆಲ್ಲಾ ಈ ಜೋಗುಳದ ಹಾಡಿನಲ್ಲಿ ಬಂದಿದೆ. ಲಕ್ಷ್ಮಣ ಮುಂದೆ ಇಂದ್ರಜಿತುವನ್ನು ಕೊಲ್ಲುತ್ತಾನೆಂದು ಇಲ್ಲೇ ಉಕ್ತವಾಗಿದೆ. ಕಾವ್ಯಮಿಮಾಂಸೆಯ ಪ್ರಕಾರವಾಗಿ ಇದು ಔಚಿತ್ಯಕ್ಕೆ ಎರವಾಗಿದೆ. ಇದೇ ಹಾಡನ್ನು ದಕ್ಷಿಣ ಕನ್ನಡ ಜಿಲ್ಲೆಯ ಜೋಗುಳದ ಹಾಡುಗಳ ಪ್ರಾರಂಭದಲ್ಲಿ ಬರುವುದುಂಟು. ಇದು ಪ್ರಾಯಶಃ ಜೋಗುಳದ ಹಾಡಿನ ಪ್ರಭಾವವಾಗಿ ಬಂದಿರಬೇಕು.

ಕುಶಲವರ ಕಾಳಗದಲ್ಲಿ ಇದೇ ರೀತಿ ಕುಶಲವರನ್ನು ತೊಟ್ಟಿಲಲ್ಲಿ ಇಟ್ಟು ಜೋಗುಳ ಹಾಡುವ ಪದ ಬರುತ್ತದೆ. ಇಲ್ಲಿ....

"ಜೋಜೋ ಸೀತಾದೇವಿಯ ಕಂದ
ಜೋಜೋ ಶ್ರೀರಾಮ ಪುತ್ರಾನಂದ
ಜೋಜೋ ರಾಕ್ಷಸ ಕುಲವೈರಿ ಕಂದ
ಜೋಜೋ ಯೆನುತ ತೂಗಿದರರವಿಂದ ಜೋಜೋ"[2]

ಸೀತಾಮಾತೆಯು ಅವಳಿ ಜವಳಿ ಮಕ್ಕಳನ್ನು ಹೆತ್ತಾಗ ಆಶ್ರಮವಾಸಿಗಳಾದ ಸ್ತ್ರೀಯರು ಈ ಹಾಡನ್ನು ಹಾಡುತ್ತಾ ಮಗುವನ್ನು ಮಲಗಿಸುತ್ತಾರೆ.

ಸೋಬಾನೆ ಹಾಡುಗಳು :

ಸೀತಾಕಲ್ಯಾಣದಲ್ಲಿ ಬರುವ ಮದುವೆಯ ವರ್ಣನೆ ಸೋಬಾನೆ ಹಾಡಿನಿಂದ ಕೂಡಿದೆ.

ಗಂಗಾಜಲವನ್ನಾಗಲೇ ತಂದು
ಅಂಗನೆಯರ ಸಹಿತವೇ ತಾನಿಂದು
ಮಂಗಳ ಮಹಿಮ ಶ್ರೀರಾಮಗೊಲಿದು
ಅಂಗನೆ ಸೀತಾದೇವಿಯ ಧಾರೆಯ

ಮಂಗಲದಿ ಜನಕ ನೆರೆದನು ಸೋ.... ಬಾ.... ನೆ....
ಚಿನ್ನದ ಹಮಣೆಯ ಮೇಲೆ ಪನ್ನಗವೇಣಿಯ ಕುಳ್ಳಿಗಿಸಿ
ಚೆನ್ನಾಗಿ ಶೋಭನ ಪಾಡುತ ಚಿನ್ನದಾರತಿಯ ಬೆಳಗಿರೆ ಸೋಬಾನೆ[3]

ಇದೇ ಸೋಬಾನೆ ಹಾಡನ್ನು ಹೆಚ್ಚಿನ ಮದುವೆ ಸಂದರ್ಭದಲ್ಲಿ ಬಳಸುತ್ತಾರೆ.

ಪಟ್ಟಣದ ವರ್ಣನೆ – ಸಿಂಗರಿಸುವ ವಿಚಾರ :

ಕನ್ನಡ ಸಾಹಿತ್ಯದಲ್ಲಿ ಪುರವರ್ಣನೆ, ಅಷ್ಟಾದಶ ವರ್ಣನೆಗಳಲ್ಲಿ ಒಂದಾಗಿದ್ದು ಹಲವೆಡೆ ಚರ್ವಿತ ಚರ್ವಣವಾಗಿದೆ. ಆದರೆ ಇಂತಹ ವರ್ಣನೆಗಳಲ್ಲಿ ಕವಿ ತನ್ನ ಕಾಲಕ್ಕೆ ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಬದ್ಧನಾಗಿರುವುದುಂಟು. ಹೀಗೆ ಬಂದ ವರ್ಣನೆಗಳನ್ನು ಗಮನಿಸಿದಾಗ ಯಕ್ಷಗಾನ ಕವಿಗಳು ಕೆಲವೆಡೆ ತಾವು ಕಂಡ ಪಟ್ಟಣಗಳನ್ನೇ ವರ್ಣಿಸಿದಂತಿದೆ. ಪಟ್ಟಾಭಿಷೇಕದಲ್ಲಿ ಕವಿ ಪಾರ್ತಿಸುಬ್ಬನು ಹೀಗೆ ವರ್ಣಿಸುತ್ತಾನೆ.

"ಸೊಗಸಾದ ಚಪ್ಪರ ಮೇಲುಗಟ್ಟುಗಳಿಂದ ನಗರವ ಶೃಂಗರಿಸಿದರು
ಮುತ್ತಿನುಪ್ಪರಿಗೆ ಚಾವಡಿ ಕೋಣೆ ಚೌಕಿಯ ಸುತ್ತಲೂ ಬಿಗಿದಪಚ್ಚೆಗಳ
ಪುತ್ಥಳಿಬೊಂಬೆ ಬಾಗಿಲದಾರಂದದ ಮನೆ ಹತ್ತು ಸಾವಿರವ
ಮಾಡಿದರು"[4]

ಇಲ್ಲಿ ಅಯೋಧ್ಯಾನಗರದ ವರ್ಣನೆಯು ದಕ್ಷಿಣ ಕನ್ನಡದ ಊರೊಂದರ ಹೆಗ್ಗಡೆಯೊಬ್ಬಾತನ ಮನೆಯ ವಿಶೇಷ ಸಮಾರಂಭಕ್ಕೆ ಮಾಡಿದ ವರ್ಣನೆಯಂತಿದೆ. ಕವಿ ತಾನು ಕಂಡದ್ದನ್ನೇ ತನ್ನ ಮಿತಿಯಲ್ಲಿ ವರ್ಣಿಸಿದ್ದಾನೆ. ಚಾವಡಿ, ಕೋಣೆ, ಚೌಕಿ, ಉಪ್ಪರಿಗೆ ಇವೆಲ್ಲ ದೊಡ್ಡ ಮನೆಯೊಂದರ ಅಂಗಗಳು. ಬಾಗಿಲು ದಾರಂದದಲಿ ಪುತ್ಥಳಿ ಬೊಂಬೆ ನಿಲ್ಲಿಸುವುದು, ಚಪ್ಪರಮೇಲುಗಟ್ಟುಗಳನ್ನು ಹಾಕುವುದು, ಪಚ್ಚೆಗಳನ್ನು ಸುತ್ತಲೂ ಬಿಗಿಯುವುದು, ಉತ್ಸವ ಸಮಯದಲ್ಲಿ ಮನೆ ಅಲಂಕರಿಸುವ ವಿಧಾನವಾಗಿದೆ.

ಕೋಟೆ ಕೊತ್ತಲಗಳ ನಿರ್ಮಾಣದ ವಿಚಾರ :

"ಅಂಗದ ಸಂಧಾನ"ದಲ್ಲಿ ಬರುವ ಒಂದು ಕೋಟೆಯ ವರ್ಣನೆ, ಇತ್ತೀಚಿನ ಕೋಟೆಯೊಂದರ ಚಿತ್ರಣವನ್ನು ಕೊಡುತ್ತದೆ.

"ಏಳುಸುತ್ತಿನ ಕೋಟೆಯಲ್ಲಿ ಬೇತಾಳ ಕುದುರೆ ಬಂಡಿ ರಾಕ್ಷಸರನ್ನೆಲ್ಲಾ ನಿಲ್ಲಿಸಿದ್ದಾರಂತೆ, ಆ ಕೋಟೆಯನ್ನು ಕಾಯಲು ರಾವಣನು ಮದ್ದುಗುಂಡುಗಳಿಂದ ಸನ್ನದ್ಧನಾಗಿದ್ದಾನೆ. ವೈರಿಗಳನ್ನು ತಡೆಯಲು ಒಲೆಯಲ್ಲಿ ಸಣ್ಣ ಸಾಸಿವೆಯನ್ನು ಎಣ್ಣೆಯನ್ನು ಕಾಯಿಸಲು ಸಿದ್ಧ ಮಾಡಿದ್ದಾನಂತೆ. ಅಸಂಖ್ಯೆ ಫಿರಂಗಿಗಳು ಕೊತ್ತಳದ ಮೇಲಿದ್ದು ಅಡವಿ ಕೋಡುಗಗಳನ್ನು ಕೊಲ್ಲಲ ಸನ್ನದ್ಧವಾಗಿವೆ. ಈ ವರ್ಣನೆಯು ತೊರವೆ ರಾಮಾಯಣದಿಂದ ಪ್ರಭಾವಿತಗೊಂಡಿದ್ದರೂ ಕವಿಯು ಸಮಕಾಲೀನ ವಿವರಗಳನ್ನು ಬಳಸಿಕೊಂಡಿರುವುದನ್ನು ಗುರುತಿಸಬಹುದು.

ಸಾಂಪ್ರದಾಯಿಕ ವಿಚಾರಗಳು :

ಕವಿ ಆದವನು ತನ್ನ ಕಾಲದ ಸಾಮಾಜಿಕ ಮೌಲ್ಯವನ್ನು ತನ್ನ ಕಾವ್ಯದಲ್ಲಿ ಒಂದಲ್ಲ ಒಂದು ಬಗೆಯಲ್ಲಿ ವ್ಯಕ್ತಪಡಿಸಲೇ ಬೇಕಾಗುತ್ತದೆ.

ಯಕ್ಷಗಾನ ರಾಮಾಯಣ ಪ್ರಸಂಗಗಳಲ್ಲಿ ಬರುವ ಅನೇಕ ಪಾತ್ರಗಳು ಸಮಕಾಲೀನವಾದ ಅನೇಕ ಅಂಶಗಳನ್ನು ತಮ್ಮ ನಡೆನುಡಿಗಳಲ್ಲಿ ವ್ಯಕ್ತಪಡಿಸಿವೆ. ಸಾಂಪ್ರದಾಯಿಕ ವಿಚಾರಗಳೆಷ್ಟೋ ಇಲ್ಲಿ ಬಂದಿವೆ. ಅತಿಕಾಯನ ಪಾತ್ರವು ಕುಮಾರ ವಾಲ್ಮೀಕಿಯ ಸೃಷ್ಟಿಯಾದರೂ ಯಕ್ಷಗಾನ ಕವಿ ಆತನಿಗೊಂದು ಹೊಸ ವ್ಯಕ್ತಿತ್ವವನ್ನು ನೀಡಿದ್ದಾನೆ. ಆತ ಯುದ್ಧಕ್ಕೆ ಹೊರಡುವಾಗ ನಡೆದುಕೊಂಡ ರೀತಿ ಒಬ್ಬ ಭಕ್ತನಾದವನು ಪ್ರಾಣಾರ್ಪಣೆ ಮಾಡಲು ಹೊರಟಂತಿದೆ. ಅವನಾಡುವ ಈ ಮಾತುಗಳನ್ನು ಗಮನಿಸಿ,

"ನಾವು ಬಲ್ಲೆವು ನಮ್ಮ ಕುಲದ ಸ್ವಭಾವವನು
ನಾವ್ ಬಿಡಲು ಬಹುದೆ ಪೂರ್ವ ಪದ್ಧತಿಯ
ನಾವು ಮಾಡುವ ಸಮರಮುಖ ಸಂ
ಭಾವನೋಚಿತ ಸರಳಭಕ್ತಿಯ[5]

ಕುಲದ ಸ್ವಭಾವವನ್ನು ಬಿಡದೆ ಪೂರ್ವ ಪದ್ಧತಿಯನ್ನು ತ್ಯಜಿಸದೆ ಅತಿಕಾಯನು ತನ್ನ ಆರಾಧ್ಯ ದೈವವಾದ ಶ್ರೀರಾಮನನ್ನು ಎದುರಿಸಲು ಹೊರಟಿರುವುದು ಆತ 'ಭಾಗವತ ಮಸ್ತಕ ಮಣಿ' ಎನ್ನುವುದನ್ನು ತೋರಿಸುತ್ತದೆ.

ಒಂದು ಸ್ವಾರಸ್ಯಕರ ಅಂಶವೆಂದರೆ 'ಸೇತು ಬಂಧನ'ದಲ್ಲಿ ಸೇತುವೆಯನ್ನು ಕಟ್ಟುವ ಮುನ್ನ ಗಣೇಶನ ಪೂಜೆಯನ್ನು ಮಾಡುವುದನ್ನು ಮರೆಯುತ್ತಾರೆ. ಅದರ ಫಲವಾಗಿ ರಾಮಭಂಟರು ತಂದ ಪರ್ವತ ಸದೃಶ್ಯವಾದ ಕಲ್ಲುಗಳನ್ನೆಲ್ಲಾ ಸಮುದ್ರದಲ್ಲಿರುವ ಮೀನುಗಳು ನುಂಗಿ ವಿಘ್ನವನ್ನು ಒಡ್ಡುತ್ತವೆ. ಹೇರಂಬನ ಪ್ರಾರ್ಥನೆ ಮಾಡದೆ ಇದ್ದುದರಿಂದ ಹೀಗಾಯಿತು ಎಂಬುದನ್ನು ತಿಳಿದು ನಳನು ರಾಮನೊಂದಿಗೆ ಸೇರಿ ಪ್ರಾರ್ಥನೆ ಮಾಡುತ್ತಾನೆ.

"ಸಕಲ ವಿಘ್ನಗಳೆಲ್ಲಾ ಪರಿಹರಿಸಯ್ಯ ಮೂಷಕರೂಢ ನೀನೇ ಎಂದು
ಭಕುತಿಯಿಂದೆರಗಿ ಬೇಡುವೆವು ನೀರೊಳಗೆ ಕಂಟಕ ಬಾರದಂತೆ
ಕಾಯೋ"[6]

ಈ ಅಂಶ ಆಗಿನ ಕಾಲದ ಜನಗಳ ನಂಬಿಕೆಯನ್ನು ತೋರಿಸುತ್ತದೆ. ಕಾರ್ಯಾರಂಭದಲ್ಲಿ ಗಣಪತಿಸ್ತುತಿ ಯಿಲ್ಲದೆ ಯಾವ ಕೆಲಸ ಮಾಡಿದರೂ ವ್ಯರ್ಥ ಎಂಬ ಅಂದಿನ ಜನರ ಸಾರ್ವತ್ರಿಕ ಮನೋಭಾವನೆಯನ್ನು ನಳನು ಇಲ್ಲಿ ತೋರಿದ್ದಾನೆ.

ಲವಕುಶರ ಕಾಳಗದಲ್ಲಿ ಅರಣ್ಯಕ್ಕೆ ಹೊರಟ ಸೀತೆಯನ್ನು ಹಳ್ಳಿಯ ಹೆಣ್ಣು ಮಗಳಂತೆ – "ಗ್ರಾಮದೇವತೆಯ ಕಂಡೆರಗುತ್ತಾ ಕುಲಸ್ವಾಮಿಗೆ ಜಯವೆಂದು ಪೊಗಳುತ್ತಾ"[7] ಎಂದು ಕವಿ ವರ್ಣಿಸಿದ್ದಾನೆ. ಕುಲಸ್ವಾಮಿಯನ್ನಾಗಲೀ ಗ್ರಾಮ

ದೇವತೆಯನ್ನಾಗಲೀ ನೆನೆಯುವುದು ನಮ್ಮ ಹಳ್ಳಿಗಳಲ್ಲಿ ರೂಢಿಯಲ್ಲಿರುವ ಸಂಪ್ರದಾಯವಾಗಿದೆ.

ಜನಸಾಮಾನ್ಯರ ಪಡಿಯಚ್ಚುಗಳಾಗಿ ಬರುವ ಪಾತ್ರಗಳು :

ಮೈಸೂರು ಪ್ರಾಂತ್ಯದ ಅಳಿಯ ಲಿಂಗರಾಜ ಮುಂತಾದವರನ್ನು ಉಳಿದು ಹೆಚ್ಚಿನ ಯಕ್ಷಗಾನ ಕವಿಗಳಿಗೆ ರಾಜಾಸ್ಥಾನದ ಸಂಪರ್ಕ ಇದ್ದಂತಿಲ್ಲ. ಜನಸಾಮಾನ್ಯರ ನಡುವೆ ಬಾಳಿ ಬದುಕಿದ ಅವರು ಜನತೆಯ ನೋವು ನಲಿವುಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಸ್ಪಂದಿಸಿದ್ದಾರೆ. ಅವರು ಪೌರಾಣಿಕ ಪಾತ್ರಗಳನ್ನು ಸೃಜಿಸಿದರೂ ಅಂತರ್ಯದಲ್ಲಿ ಅಂದಿನ ಸಮಾಜದ ಮಾನವೀಯ ಮೌಲ್ಯಗಳನ್ನು ಮಿಡಿಯುವ ಪ್ರತಿರೂಪಗಳನ್ನೇ ಅವುಗಳಲ್ಲಿ ಎರಕ ಹೊಯ್ದಿದ್ದಾರೆ. ಇದರಿಂದ ಯಕ್ಷಗಾನ ಪಾತ್ರಗಳಲ್ಲಿ ಔಚಿತ್ಯದ ಅಂಶ ಕಡಿಮೆಯಾದರೂ ಅವು ಕವಿ ಸೃಷ್ಟಿಸಿದ ಕಾಲಕ್ಕೆ ಒಂದಲ್ಲ ಒಂದು ಬಗೆಯಾಗಿ ಬದ್ಧವಾಗಿರುವುದನ್ನು ಗುರುತಿಸಬಹುದು. ದಶರಥ ಸೀತೆಯರ ನಡುವಿನ ಸಂಬಂಧ ರಾಮಾಯಣದಲ್ಲೇ ಬರುವ ಒಬ್ಬ ಚಕ್ರವರ್ತಿ ಮತ್ತು ಆತನ ಸೊಸೆಯ ನಡುವಿನ ಬಿಗುಮಾನಪೂರಿತ ಗಂಭೀರ ಸಂಬಂಧದಂತಿಲ್ಲ. ಬದಲು ಒಬ್ಬ ಹಳ್ಳಿಯ ಹಿರಿಯ ಮತ್ತು ಆತನನ್ನು ಪ್ರೀತಿಸಿ ಗೌರವಿಸುವ ಹಿರಿಯ ಸೊಸೆಯೊಬ್ಬಳ ಸಂಬಂಧ ಹೇಗಿರುತ್ತದೊ ಹಾಗೆ ಯಕ್ಷಗಾನದಲ್ಲಿ ಬಂದಿದೆ. ಪಂಚವಟಿಯಲ್ಲಿ ಈ ಮಾತಿಗೆ ಸಾಕ್ಷಿಯನ್ನು ಒದಗಿಸಬಹುದು. ದಶರಥ ಸ್ವರ್ಗಸ್ಥನಾಗಿರುವ ವಿಚಾರವನ್ನು ಭರತನು ಬಂದು ರಾಮಲಕ್ಷ್ಮಣ ಸೀತೆಯರಿಗೆ ತಿಳಿಸಿದಾಗ ಅವರು ಪಡುವ ಶೋಕ ಅದರಲ್ಲೂ ಸೀತೆ ಹೇಳುವ ಮಾತನ್ನು ಗಮನಿಸಬೇಕಾಗುತ್ತದೆ.

> "ಇನ್ನಾರೆನ್ನನು ಗುಣದಲಿ ಮನ್ನಿಸಿ ಮನ್ನಿಸಿ ಕರೆವರು
> ಕಣ್ಣಲಿ ಕಾಣದೆ ಹೋಯಿತೆ ಪುಣ್ಯವೇ ಹಾ ವಿಧಿಯೇ
> ಮಾವನ ಗುಣವರ್ಣಿಸುವಡೆ ಸಾವಿರ ಬಾಯಿರಬೇಕು
> ಯಾವರಿಗಿಂಥಾ ಮನಸಿದೆ, ದೇವರಿಗೆ ಸಮಾನ.
>
> ಎಷ್ಟು ಸಂಕಟ ಪಟ್ಟನೊ ಮಕ್ಕಳ ನೋಡುವೆನೆನುತಲಿ
> ಎಷ್ಟೆಮ್ಮನು ಕರೆಕರೆದು ಬಿಟ್ಟನೊ ಪ್ರಾಣವನು
> ಒದಗುವರಾಪತ್ತಿಗೆಂದು ಮದುವೆಯ ಮಾಡಿ ಮಗನಿಗೆ
> ತುದಿಗಾಲಕ್ಕೆ ನಾವಿದ್ದಿಲ್ಲದ ಹಾಗಾಯ್ತಲ್ಲ"[8]

ಇಲ್ಲಿ ಒಬ್ಬ ಸಾಮಾನ್ಯ ಹಳ್ಳಿಯ ಹುಡುಗಿ ಆಡಿದ ಮಾತಿನಂತೆ ಸೀತೆಯ ಮಾತಿದೆ. ಆಪತ್ತಿಗೆಂದು ಮಕ್ಕಳಿಗೆ ಮದುವೆ ಮಾಡಿಸಿದರೆ ತುದಿಗಾಲಕ್ಕೆ ಅವರಿಲ್ಲ ಎನ್ನುವುದು ಹಿರಿಯರ ಪಾಲಿಗೆ ದೊಡ್ಡ ಕೊರತೆ, ಅದನ್ನು ಇಲ್ಲಿ ಸೀತೆಯು ಸಾಮಾನ್ಯರು ಆಡುವಂತೆ ಆಡಿದ್ದಾಳೆ.

ಅದೇ ರೀತಿ ಭರತನು ಶ್ರೀರಾಮಚಂದ್ರನಲ್ಲಿ "ಕೋಪಿಸಿಕೊಂಡು ನೀವು ಜರೆದರೆ ಪೋಪೆ ಮತ್ತೊಂದೂರಿಗೆ"[9] ಎನ್ನುತ್ತಾನೆ. ತಂದೆ ಮಕ್ಕಳ ಜಗಳವಾದಾಗ ಅಥವಾ

ಅಣ್ಣ ತಮ್ಮಂದಿರ ಜಗಳವಾದಾಗ, ಕಿರಿಯನಾದವನು ಈ ಊರು ಬಿಟ್ಟು ಬೇರೆ ಊರಿಗೆ ಓಡಿಹೋಗುತ್ತೇನೆ ಅನ್ನುವ ಧಾಟಿಯಲ್ಲಿದೆ, ಭರತನ ಮಾತು.

ಪಾರ್ತಿಸುಬ್ಬನಂತಹ ಪ್ರತಿಭಾವಂತ ಕವಿಗಳು ಕೆಲವು ಸಣ್ಣ ವಿವರಗಳ ಮೂಲಕವೇ ಕುಟುಂಬದೊಳಗಣ ಸಾಮರಸ್ಯವನ್ನು ಅರುಹಿದ್ದಾರೆ. ನಿದರ್ಶನಕ್ಕೆ 'ಪಂಚವಟಿ ಪಟ್ಟಾಭಿಷೇಕ'ದಲ್ಲಿ ಬರುವ

ಅಣ್ಣ ನೀವ್ ಮೂವರಾ। ರಣ್ಯದೊಳಿರುವಾಗ
ಬಣ್ಣವೇ ತನಗೆ ರಾಜ್ಯ ॥
....
ಸಮ್ಮತ ವಲ್ಲದಿದ್ದರೆ ನಾ ಅಯೋಧ್ಯೆಗೆ
ಜನ್ಮಾಂತರ ಕೂ ಪೋಗೆನೂ ॥[9] – ಎಂಬ ಭರತನ ಮಾತುಗಳೆಲ್ಲ

ಸಹೋದರ ಪ್ರೇಮದ ಕಠಿಣನಿರ್ಧಾರವಿದೆ. ಮನೆಯ ದೊಡ್ಡ ಮಗನ ಗುಣಶೀಲಗಳನ್ನೆಲ್ಲ ಕವಿ ರಾಮನಲ್ಲಿ ಕಾಣಿಸಿದ್ದಾನೆ. ತಾಯಿಯೊಂದಿಗೆ ರಾಮನಾಡುವ ಮಾತುಗಳಲ್ಲಿ ಈ ಅಂಶ ಗೋಚರವಾಗುತ್ತದೆ.

ಬಣ್ಣಗಾರಿಕೆಯಲ್ಲಿ । ತಾಯಿತಂದೆಯ ಮಾತ
ನುಣ್ಣಗಳೆಯಬಾರದು
ಜಾನಕಿ ಲಕ್ಷ್ಮಣರರಿಯರು । ಬುದ್ಧಿಯ
ನಿನಿದ್ದು ಸಲಹೆಯ । ವ್ವ ॥
ತಾನ್ನೊಂದು । ಕೊಂಬರರಿತರೆ ಪೋಗುವ ಸುದ್ದಿ
ನೀನಾಗಿ ಅರುಹಬೇಡ[10]

ತಾನು ಕಾಡಿಗೆ ಹೋಗುವ ಸುದ್ದಿ ತಿಳಿದರೆ ಹೆಂಡತಿ ತಮ್ಮ ನೊಂದುಕೊಳ್ಳುವರೆಂಬ ಯೋಚನೆ ರಾಮನಿಗೆ. ಅಷ್ಟೇ ಸೀತೆ ಕೂಡ ಗಂಡನ ಬಗ್ಗೆ ಪ್ರೀತಿ ಉಳ್ಳವಳು. ವಂಚಿಸಿ ಹೋದರೆ ವಿಷ ಕುಡಿದು ಸಾಯುತ್ತೇನೆ ಎಂದು ಹೆದರಿಸುತ್ತಾಳೆ.

ಶೂರ್ಪನಖಿಯನ್ನು ನೋಡಿದ ರಾಮ ಸೀತೆಗೆ ಹೆದರಬೇಡ ಕಣ್ಣು ಮುಚ್ಚಿಕೋ ಎಂದು ಸಾಮಾನ್ಯರಂತೆ ಧೈರ್ಯ ತುಂಬುತ್ತಾನೆ. ಹೀಗೆ ರಾಮಾಯಣದ ಕೆಲವು ಪ್ರಸಂಗಗಳಲ್ಲಿ ಅವಿಭಕ್ತ ಕುಟುಂಬದ ಚಿತ್ರಣ ಸೊಗಸಾಗಿ ಬಂದಿದೆ. ಯಾವಾಗಲೂ ಕುಟುಂಬವು ಪ್ರತಿಯೊಬ್ಬನ ವ್ಯಕ್ತಿತ್ವ ವಿಕಸನಕ್ಕೆ ಆ ಮೂಲಕ ಸಮಾಜದ ಆರೋಗ್ಯಕ್ಕೆ ದಾರಿ ದೀಪವಾಗುತ್ತದೆ. ನಮ್ಮ ಕುಟುಂಬದ ರಾಚನಿಕ ಸ್ವರೂಪವು ಸಮಾಜದ ಅನೇಕ ದೈನಿಕಗಳ, ರೀತಿ ರಿವಾಜುಗಳ ನಿರ್ಧಾರಕ ಅಂಶವಾಗಿದೆ. ಖ್ಯಾತ ಸಮಾಜ ಶಾಸ್ತ್ರಜ್ಞ ಏಂಡ್ರೆ ಬೆಟೆಲ್ –

"In the midst of Great Social economical and Political changes over the centuries India has a long heritage of stable family life and family structure and the Spirit of family solidarity has remained a

sustaning power which was provided meaning to the daily lives of the Indian People"[11]

– ಎಂದು ಹೇಳುವ ಮೂಲಕ ಭಾರತೀಯ ಕುಟುಂಬ ಪ್ರಧಾನ ಸಮಾಜ ವ್ಯವಸ್ಥೆಯ ವೈಶಿಷ್ಟ್ಯವನ್ನು ತಿಳಿಸಿದ್ದಾನೆ. ಇಲ್ಲಿನ ರಾಮ, ಸೀತೆ, ಲಕ್ಷ್ಮಣ, ಭರತರೆಲ್ಲರ ಮೂಲಕ ಹಿಂದಿನ ಶತಮಾನಗಳಲ್ಲಿ ನಮ್ಮ ಗ್ರಾಮೀಣ ಭಾಗದಲ್ಲಿದ್ದ ಕುಟುಂಬ ವ್ಯವಸ್ಥೆಯ ನೈಜ್ಯ ಚಿತ್ರಣ ದೊರೆಯುತ್ತದೆ.

ಪಂಚವಟಿಯಲ್ಲಿ ಬರುವ ಒಂದು ಘಟನೆಯಂತೂ ಸ್ವಾರಸ್ಯವಾಗಿದೆ. ಒಂದು ಬಂಗಾರದ ಬಣ್ಣದ ಜಿಂಕೆಯು ಸೀತೆಯ ಮನಸ್ಸಿನಲ್ಲಿ "ತನ್ನಂಗದಿನ್ನೆಂಗ ದಿಕ್ಕಟ ತೊಯೆಂದು ಕುಣಿವ ಮೃಗವು"[12] ಆಗುತ್ತದೆ. ಸೀತೆ ಅದು ಬೇಕೆನ್ನುತ್ತಾಳೆ. ರಾಮನಿಗೆ ಇದು ರಾಕ್ಷಸರ ಮಾಯೆ ಎಂದು ತಿಳಿದು ಬೇಡವೆಂದರೂ ಕೇಳುವುದಿಲ್ಲ. ಹೆಣ್ಣು ಮಕ್ಕಳಿಗೆ ಸಹಜವಾದ ಬಯಕೆಯನ್ನು ಸೀತೆ ತೋರ್ಪಡಿಸುತ್ತಾಳೆ. ಆಗ ರಾಮನಾಡುವ ಈ ಮಾತು "ಕೆಟ್ಟ ಮೇಲೆ ಬುದ್ಧಿ ಬರುವುದು ನೀ ಗಂಟು ಕಟ್ಟಕೋಸೆರಗಿನಲಿ ದಿಟ್ಟೆ ಹೆಂಗಸು ನಿನ್ನ ಛಲ ಬೇಡವಿದರಿಂದ ಕೆಟ್ಟ ಕಾರ್ಯಗಳಾವುದು..."[13] ಅದಕ್ಕೆ ಉತ್ತರವಾಗಿ ಸೀತೆ "ಎಷ್ಟು ಚಾಳಿಸಿದರೂ ನಾನೀ ಮಾತನ್ನು ಕೇಳಿ ಬಿಟ್ಟವಳಲ್ಲ. ನಿನ್ನ ಸಿಟ್ಟು ಬಂದರೂ ಬರಲದತಾರದಿದ್ದರೆ ಬಿಟ್ಟೇನೇ ಪ್ರಾಣವನ್ನು"[14] ಎನ್ನುವ ಉತ್ತರ ಜನಸಾಮಾನ್ಯರ ಮಾತಿನಂತೆ ಕಾಣಿಸುತ್ತದೆ.

ಶ್ರೀಮದ್ ರಾಮಾಯಣದಲ್ಲಿ ರಾಮ ಸೀತೆಯರ ಪವಿತ್ರ ದಾಂಪತ್ಯದ ಅನಾದೃಶ್ಯ ಸ್ವಪ್ನ ಸೃಷ್ಟಿ ಇದ್ದರೆ, ನಮ್ಮ ಕವಿಗಳು ಪರಸ್ಪರ ಪ್ರೀತಿಸುವ, ಅಷ್ಟೇ ಜಗಳವಾಡುವ ಸಾಮಾನ್ಯ ದಂಪತಿಗಳ ಚಿತ್ರಣವನ್ನು ನೀಡಿದ್ದಾರೆ. ಇದು ಅವರ ಪ್ರಾಮಾಣಿಕವಾದ ಅನುಭವ ನಿಷ್ಠೆಯನ್ನು ತೋರಿಸುತ್ತದೆ. ಸೀತೆಯ ಪಾತ್ರವು ರಾಮಾಯಣದ ಉಗಮ ವಿಕಾಸದೊಂದಿಗೆ ಬೆಳೆಯುತ್ತಾ ಬಂದದ್ದಾಗಿದೆ. ವೇದದಲ್ಲಿ ಸೀತೆ ಎನ್ನುವ ಶಬ್ದಕ್ಕೆ "ಕೃಷಿಯ ಅಧಿಷ್ಠಾತ್ರಿ ದೇವತೆ"[15] ಎಂಬ ಅರ್ಥವಿದೆ. ವಾಲ್ಮೀಕಿ ರಾಮಾಯಣದಲ್ಲಿ ಸೀತೆ ಭೂಮಿಯಲ್ಲಿ ದೊರಕಿ ಭೂಮಿಯಲ್ಲಿ ಸೇರಿ ಹೋದ ವಿಚಾರವಿದೆ. ಇದನ್ನು ವೈದಿಕ ಸಾಹಿತ್ಯದ ಪ್ರಭಾವದ ಒಂದು ರೇಖೆ ಎಂದು ಕರೆದಿದ್ದಾರೆ. ಇಂತಹ ಒಂದು ವಿಚಾರದ ಹಿನ್ನಲೆಯಲ್ಲಿ ಯಕ್ಷಗಾನ ರಾಮಾಯಣ ಪ್ರಸಂಗದಲ್ಲಿ ಬರುವ ಸೀತೆಯನ್ನು ಗಮನಿಸಿದಾಗ ಸಂಪೂರ್ಣ ಭಿನ್ನ ಪಾತ್ರವೊಂದರ ದರ್ಶನವಾದಂತಾಗುತ್ತದೆ. ಆಕೆಯಾಡುವ ಮಾತು ನೋಡಿ.

"ಹೆಣ್ಣು ಜನ್ಮವೇ ಸಾಕು ಎನಕಂಡು ಮರೆಯಿರೋ, ರಾಮರಾಮ
ಬಂದು ಕಣ್ಣಲ್ಲಿ ಕಾಣ ಬಾರದೇ ಎನ್ನ ವಿಧಿಯ ಶ್ರೀರಾಮರಾಮ"[16]

ನಮ್ಮಲ್ಲಿ ಸ್ತ್ರೀವರ್ಗ ಅತ್ಯಂತ ಕಷ್ಟಕ್ಕೆ ಗುರಿಯಾಗಿದೆ. ಬದುಕನ್ನು ನಿಷ್ಠುರ ಮಾರ್ಗದಲ್ಲಿ ನಡೆಸುತ್ತಾ ಎಲ್ಲರ ಅನಾದರಕ್ಕೆ ಗುರಿಯಾಗುವ ಬಾಳು ಹೆಣ್ಣಿನದಾಗಿತ್ತು. ಸೀತಾಮಾತೆಯೇ ತನ್ನನ್ನು ಕಂಡು ಹೆಣ್ಣು ಜನ್ಮವನ್ನು ಮರೆಯಿರಿ ಎನ್ನುವಾಗ ಸಾಮಾನ್ಯರ ಪಾಡೇನು? ಅಂತೆಯೇ ಇಲ್ಲಿ ಬರುವ ಭಾವವನ್ನು ಗಮನಿಸಬೇಕು. ಕರುಣಾರಸ ಇಷ್ಟೊಂದು

ಆರ್ದ್ರವಾಗಿ ಬರುವುದು ವಿರಳ. ಅದರಲ್ಲೂ ಸೌರಾಷ್ಟ್ರ ರಾಗದ ಅಷ್ಟತಾಳದಲ್ಲಿ ಅದು ಮನಸ್ಸು ಮಿಡಿಯುವಂತಿದೆ....[17]

ಇನ್ನೊಂದು ಸಂಗತಿಯೆಂದರೆ 'ಚೂಡಾಮಣಿ'ಯಲ್ಲಿ ಬರುವ ಕಪಿಚೇಷ್ಟೆ. ರಾಮಾಯಣದ ಶ್ರೀಮದ್ ಗಾಂಭೀರ್ಯವೆಲ್ಲಾ ಇಲ್ಲಿ ನುಚ್ಚು ನೂರಾಗಿದೆ. ಕಪಿ ಎಂದರೆ ನಮಗೆಲ್ಲಾ ಒಂದು ಬಗೆಯ ಭಾವನೆ. ಚೇಷ್ಟೆಗಂತೂ ಅವುಗಳು ಪ್ರಸಿದ್ಧಿ. ಆದರೆ ರಾಮಾಯಣದಲ್ಲಿ ಬರುವವರು ಹೆಚ್ಚಿನ ಸಂದರ್ಭಗಳಲ್ಲಿ ಶ್ರೇಷ್ಠರಾದ ವಾನರ ವೀರರೇ ಹೊರತು ಕಪಿಗಳಲ್ಲ. ವಾಲಿ, ಸುಗ್ರೀವ, ಹನುಮಂತ, ನೀಲ ಜಾಂಬದ ಇವರೆಲ್ಲರ ಅವತಾರದ ಹಿಂದೆ ಮಹೋನ್ನತ ಉದ್ದೇಶವಿದೆ. ಆ ಉದ್ದೇಶದಷ್ಟೇ ಅವರೆಲ್ಲರೂ ಉನ್ನತಿಗೆ ಏರಿದವರು. ಅವರ ಕಾರ್ಯವು ಔನತ್ಯ ಪರವಾದುದೇ. ಮಹಾಸಾಗರಕ್ಕೆ ಸೇತುವೆಯನ್ನು ನಿರ್ಮಿಸಿದ ಸಾಹಸ ಅವರದು. ಆದರೆ ಇಲ್ಲಿನ ಕಪಿಗಳು ಜನತೆಯಲ್ಲಿ ಪ್ರಚಲಿತವಿದ್ದಂತಹ ಭಾವನೆಯನ್ನೇ ಬಳಸಿದ್ದಾರೆ. ಕಪಿಗಳ ಮೂಲಕ ಲಘುವಾದದ್ದನ್ನು ವಿವರಿಸಿ ಪ್ರಸಂಗ ಸಾಹಿತ್ಯವು ಜನರಿಗೆ ಹತ್ತಿರವಾಗುವಂತೆ ಮಾಡಿದ್ದಾರೆ. ಹಾಸ್ಯರಸವನ್ನು ಉಕ್ಕಿಸಲು ಕಪಿಗಳು ಬಳಸಿಕೊಂಡಿರುವುದೂ ಉಂಟು. 'ಚೂಡಾಮಣಿ'ಯಲ್ಲಿ ಸೀತಾನ್ವೇಷಣೆಗೆ ಹೊರಟ ಕಪಿಗಳು ಮಾಡಿದ ಕಾರ್ಯ ಹೀಗೆ ವಿವರಿಸಲಾಗಿದೆ.

ದಿಕ್ಕು ದಿಕ್ಕಿನೊಳಿಪ್ಪ ಅರಸು ಬಲ್ಲಾಳರ ಸೊಕ್ಕುಗಳನೇ ಮುರಿದೂ
ಒಕ್ಕಲೊಂದುಳಿಯದೇ ಮನೆಮನೆಯಲಿ ಕಳ್ಳರಕ್ಕಸನನು ಕೇಳುತಾ
ಮಕ್ಕಳು ಹಿರಿಯರು ಯೌವನದಾ ಹೆಮ್ಮಕ್ಕಳ ಬೆಸಗೊಳ್ಳುತಾ
ಅಕ್ಕರಿಂದಲೆ ಕಂಡುದಿಲ್ಲೆಂಬ ಅಣೆಯ ತಕ್ಕೊಂಡವರ ಕೈಯ್ಯ....[18]

ಕಪಿಗಳು ಒಂದೂ ಒಕ್ಕಲು ಉಳಿಯದಂತೆ ಎಲ್ಲರನ್ನೂ ಕೇಳುತ್ತಾರೆ. ಅಷ್ಟೂ ಸಾಲದೆ ಅವರಿಂದ ಅಣೆಯನ್ನು ಮಾಡಿಸಿಕೊಳ್ಳುತ್ತಾರೆ. ರಾಜಮಹಾರಾಜರಿಂದ ಬರೆಯಿಸಿಕೊಳ್ಳುತ್ತಾರೆ. ಎಲ್ಲೂ ರಾವಣನ ಸುಳಿವನ್ನು ಕಾಣದೆ ಕೈಲಾಸಕ್ಕೆ ಬರುತ್ತಾರೆ. ಕಪಿಗಳ ಸಾಹಸವನ್ನು ನೋಡಿದ ಈಶ್ವರನು ತನ್ನ ಪತ್ನಿಗೆ 'ಕಂಡೆಯಾ ಗಿರಿಜಾತೆ ಕಪಿಗಳ ಸಾಹಸ ಕಂಡೆಯೇನೆ– ದಶಕಂಠನನ್ನು ತೋರಿಸೆಂದೆಮ್ಮ ಕೇಳುವುದ ಕಂಡೆಯೇನೆ – ಹಲ್ಲ ಬಲುತರ ಕೋಪಾಟೋಪದಿ ಕಿರಿವುದಕಂಡೆಯೇನೆ....[19] ಎನ್ನುವುದರ ಮೂಲಕ ಕಪಿಗಳು ಹುಬ್ಬು ಗಂಟಿಕ್ಕುವುದನ್ನು ಹಲ್ಲುಕಿರಿಯುವುದನ್ನು ವಿಶೇಷವಾಗಿ ವರ್ಣಿಸಿದ್ದಾನೆ.

ಯಕ್ಷಗಾನ ಲವಕುಶದಲ್ಲಿ ಚಿತ್ರಿತವಾಗಿರುವ ರಾಮನ ಪಾತ್ರ ರಚನೆಯಲ್ಲಿ ಕವಿ ತನ್ನ ಮನೋಭಾವನೆಯನ್ನು ತಂದಿದ್ದಾನೆ. ರಾಮ ಬೇಟೆಗೆ ಹೋಗಿದ್ದಾಗ ಅವನೊಂದಿಗೆ ಬಂದಿದ್ದ ಸೀತೆ ಬಹಿಷ್ಠೆಯಾಗುತ್ತಾಳೆ. ಆಗ ದೂರದಲ್ಲಿ ನಿಂತ ಸೀತೆಯನ್ನು ನೋಡಿ ರಾಮನು ಅವಳ ಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಾನೆ. ತಕ್ಷಣ ಸೇನೆಯನ್ನು ಹಿಂದಕ್ಕೆ ತಿರುಗಿಸುತ್ತಾನೆ. ಇದು ಪ್ರಸಂಗ ಓದುವ ನಮ್ಮ ನಿಮ್ಮಂತಹವರಿಗೆ ತಮಾಷೆಯ ಸಂಗತಿಯಾಗಿರಬಹುದು. ಆದರೆ ಹಳ್ಳಿಗನಾದ ಕವಿಗೆ ರಾಮನು ಸಾಮಾನ್ಯನೇ. ಆತನ ಕೃತ್ಯಗಳು ದಿನನಿತ್ಯದ ಬದುಕಿಗಿಂತ ಹೊರತಾದುದಲ್ಲ. ಇಂತಹ ರಾಮ ಸೀತೆಯರನ್ನು ಯಕ್ಷಗಾನ ಪ್ರಸಂಗಗಳಲ್ಲಿ ಕಾಣಬಹುದು.

ಕುಶಲವರ ಕಾಳಗದಲ್ಲಿ ರಾಮನಿಂದ ಪರಿತ್ಯಜಿತಳಾದ ಸೀತಾಮಾತೆಯನ್ನು ವಾಲ್ಮೀಕಿ ತನ್ನ ಆಶ್ರಮಕ್ಕೆ ಕರೆದೊಯ್ಯುತ್ತಾನೆ. ಆಕೆಗೆ ಒಂಬತ್ತು ತಿಂಗಳು ತುಂಬಿದೆ. ಇನ್ನೇನು ಪ್ರಸದ ಸಮಯ. ಕವಿ ಇದನ್ನು ವರ್ಣಿಸುವಾಗ ತನ್ನ ಕಣ್ಣಾರೆ ತನ್ನವರೊಬ್ಬರ ಪ್ರಸವ ವೇದನೆಯನ್ನು ಹೊರನಿಂತು ಅನುಭವಿಸುವವನಂತೆ ವರ್ಣಿಸಿದ್ದಾನೆ. ಸರ್ವಸಂಗ ಪರಿತ್ಯಾಗಿಯಾದ ವಾಲ್ಮೀಕಿ ಕೂಡಾ ಆ ಸಮಯದಲ್ಲಿ ವರ್ತಿಸುವ ರೀತಿ ಮನಕರಗುವಂತಿದೆ.

"ಸುತ್ತ ಮುತ್ತಲಿರುವ ಮುನಿ ಪತ್ನಿಯರೆಲ್ಲ ಕೂಡಿ
ಮತ್ತ ಗಜಗಮನೆಯ ಆಪತ್ತ ನೋಡುತ್ತ
ಮತ್ತದಕ್ಕೆ ಬೇಕಾದಂಥ ವಸ್ತುಗಳೆಲ್ಲಾ ತರಿಸಿ
ಸುತ್ತಲೂ ಭೂಜಾತೆಯ ಕಾಯುತ್ತಲಿರ್ದರು
ನಾರಿಯರತ್ತಿತ್ತ ಸುಳಿವ ಕಾರಣ ಕಂಡು ಮುನಿ
ಬೇರೇನಿನ್ನಾಹುದೇ ಯೆಂದು ಬೆದರುತಿರ್ದನು
ನಾರಾಯಣನೆಗತಿ ಎನ್ನುತ ವಾಲ್ಮೀಕಿ ತಾನು ಮತ್ತೆ
ಮೂರು ದಿನದಿ ಹಗಲೂ ಇರುಳೂ ಕಾಯುತ್ತಿದ್ದನು...[20]

ಇಂತಹ ಒಂದು ವರ್ಣನೆ ಶಿಷ್ಟ ಸಾಹಿತ್ಯದಲ್ಲಂತೂ ಅಪೂರ್ವ ಕವಿಯ ಅನುಭವವೇ ಕಾವ್ಯಕ್ಕೆ ಇಲ್ಲಿ ಪೂರಕವಾಗಿದೆ. ವಾಲ್ಮಿಕಿಯ ಅವಸ್ಥೆ ಸಾಮಾನ್ಯರದ್ದೇ ಹೊರತು ವಾಲ್ಮೀಕಿಯದಲ್ಲ. ಆದರೆ ಪಾರ್ತಿಸುಬ್ಬನಿಗೆ ವಾಲ್ಮೀಕಿ ಕೂಡ ಒಬ್ಬ ಸಾಮಾನ್ಯ ಮನುಷ್ಯನೇ ಆಗಿದ್ದಾನೆ.

ಸಮಕಾಲೀನ ಶಬ್ದಗಳು :

ಒಂದು ಸಾಹಿತ್ಯ ಕೃತಿಯ ಕಾಲ ನಿರ್ಣಯದಲ್ಲಾಗಲೀ ಮೌಲ್ಯ ನಿರ್ಣಯದಲ್ಲಾಗಲೀ ಸಮಕಾಲೀನ ಅಂಶಗಳು ಮಹತ್ತರ ಪಾತ್ರವನ್ನು ವಹಿಸುತ್ತವೆ. ಈ ದೃಷ್ಟಿಯಿಂದ ಯೋಚಿಸುವಾಗ ಘಟನೆಗಳು ಮಾತ್ರವಲ್ಲದೇ ಕವಿ ಬಳಸಿದ ನುಡಿಕಟ್ಟುಗಳು ಮತ್ತು ಶಬ್ದಗಳನ್ನು ಗಮನಿಸಬೇಕಾಗುತ್ತದೆ. ಅಂದಿನ ಸಂಸ್ಕೃತಿಯನ್ನು ತಿಳಿಯಲು ಕೂಡ ಅದು ಸಹಾಯಕವಾಗುತ್ತದೆ. ಯಕ್ಷಗಾನಗಳಲ್ಲಿ ಸಾಕಷ್ಟು ಆಡು ಬಳಕೆಯ ಶಬ್ದಗಳು ಬಂದಿವೆ. ಅವುಗಳ ಪಟ್ಟಿಯನ್ನು ಮಾಡುವುದಕ್ಕಿಂತ ಕೆಲವು ಅಂತಹ ಶಬ್ದಗಳ, ಶಬ್ದ ಗುಚ್ಚಗಳ ವಿಶಿಷ್ಟತೆಯನ್ನು ಅರಿಯುವುದು ಹೆಚ್ಚು ಸೂಕ್ತ.

ಘೂತಕಿ : 'ಪುತ್ರ ಕಾಮೇಷ್ಟಿ'ಯಲ್ಲಿ ಬಂದಿರುವ ಈ ಶಬ್ದ ಪಾತಕಿ ಎನ್ನುವ ಅರ್ಥದಲ್ಲೇ ಬಳಕೆಯಲ್ಲಿದೆ.

ಚಾಡಿಯ ಸಿಗೆ: ಮಂಥರೆಯನ್ನು ಜರೆಯುವಾಗ ಕೈಕೆ ಬಳಸುವ ಶಬ್ದ. ಇಂದಿಗೂ ಜಾಡಿಕೋರರಿಗೆ ಜಾಡಿಯ ಸೀಗೆ ಎನ್ನುತ್ತಾರೆ.

ಬದ್ಧವೆ : ಇದು ಸತ್ಯವೇ ಎನ್ನುವ ಅರ್ಥದಲ್ಲಿ ದಕ್ಷಿಣ ಕನ್ನಡದಲ್ಲಿ ಬಳಕೆಯಲ್ಲಿದೆ.

ಮದ್ದರೆಯುವ: ಒಬ್ಬರನ್ನು ನಾಶಮಾಡಲು ಮದ್ದು ಹಾಕುವುದು ಹಿಂದೆ ಪ್ರಚಲಿತವಾಗಿತ್ತು. ಮದ್ದನ್ನು ಅರೆಯುವುದೆಂದರೆ ನಾಶಮಾಡುವ ಸಿದ್ಧತೆ ಎನ್ನುವ ಅರ್ಥದಲ್ಲಿದೆ.

ಅರಸು ಬಲ್ಲಾಳರು: ಚಾರಿತ್ರಿಕ ಕಾವ್ಯಗಳಲ್ಲಿ ಉಕ್ತವಾಗಿದ್ದರೂ ಬಲ್ಲಾಳರೆಂದರೆ ಇಲ್ಲಿ ಹೆಗ್ಗಡೆ ಎಂಬ ಅರ್ಥವಿದೆ.

ಗೋಟರಾಯ : ಆ ಕಾಲದ ಒಬ್ಬ ದೊರೆಯಾಗಿರಬೇಕು. ಸೀತಾ ಸ್ವಯಂವರದಲ್ಲಿ ಇವನ ಹೆಸರು ಬಳಕೆಯಾಗಿದೆ.

ದಟ್ಟಿಚಲ್ಲಣ : 'ಪುತ್ರಕಾಮೇಷ್ಟಿ'ಯಲ್ಲಿ ರಾಮನು ದಟ್ಟಿ ಚಲ್ಲಣ ಧರಿಸಿದ್ದ ಎಂದು ಬರುತ್ತದೆ. ಇದು ಆ ಕಾಲದ ಉಡುಗೆಯಾಗಿದೆ.

ನೆರಿಯೆ : 'ಪಂಚವಟಿ'ಯಲ್ಲಿ ಶೂರ್ಪನಖಿಯ ಪ್ರತಿಜ್ಞೆಯಲ್ಲಿ ನಾವು ಉಟ್ಟಿದು ನೆರಿಯೆ ಎಂಬ ಸಾಲು ಬರುತ್ತದೆ. ಇಲ್ಲಿ ನೆರಿಯೆ (ನೆರಿಗೆ) ಎಂದರೆ ಸೀರೆ ಎಂಬ ಅರ್ಥ. ಇಂದಿಗೂ ಇದು ಪ್ರಚಲಿತವಿದೆ.

ಅಪ್ಪಳಿಸದಿರು : ರಾವಣೋದ್ಭವದಲ್ಲಿ ಮಂಡೋದರಿ 'ತಪ್ಪಾಡಿದಳೆಂದು ಅಪ್ಪಳಿಸದಿರು' ಎನ್ನುವಲ್ಲಿ ಅಪ್ಪಳಿಸು ಎಂದರೆ ಹೊಡೆ ಎಂದರ್ಥ ಬಳಕೆಯಾಗಿದೆ.

ನೆಲೆಯಾದ ಮಾತನಾಡು: 'ಅಂಗದ ಸಂಧಾನ'ದಲ್ಲಿ ಬೇಹುಗಾರರಾಗಿ ಬಂದು ರಾಮನಿಗೆ ಸಿಕ್ಕಿಬಿದ್ದ ರಾಕ್ಷಸರಿಗೆ ರಾಮನು ಹೇಳುವ ಮಾತು. ಇಲ್ಲಿ ಸರಿಯಾದ ಮಾತನಾಡು ಎಂದರ್ಥ.

ಬಾಯಿಕಳೆಯುವುದು: ಬಾಯನ್ನು ಆಗಲಿಸುವುದಕ್ಕೆ ಬಾಯಿಕಳೆ ಎಂದು ಇಂದಿಗೂ ಹೇಳುತ್ತಾರೆ. ಇದು ತುಳುವಿನ ಪ್ರಭಾವದಿಂದ ಬಂದಿರಬೇಕು.

ನುಡಿಕಟ್ಟುಗಳ ಬಳಕೆ :

ಇದೇ ರೀತಿಯಲ್ಲಿ ಅನೇಕ ನುಡಿಕಟ್ಟುಗಳನ್ನು ಪ್ರಸಂಗಗಳಲ್ಲಿ ಯಕ್ಷಗಾನ ಕವಿಗಳು ಬಳಸಿದ್ದಾರೆ. ಕವಿ ಔಚಿತ್ಯವರಿತು ಬಳಸಿದ್ದರಿಂದ ಅವುಗಳಿಗೆ ಹೊಸದೊಂದು ಅರ್ಥ ಬಂದು ಅವು ಇನ್ನಷ್ಟು ಸ್ಥಿರಗೊಂಡಿತು. ಮಂಡೋದರಿ ರಾವಣನಿಗೆ "ಮಾರಿ ಬಡಿವ ವೇಳ್ಯಕಾರೂ ಬಾರರು ಕಾಂತ" ಎನ್ನುವುದು ಸೊಗಸಾದ ಹೋಲಿಕೆಯಾಗಿದೆ. ಇಲ್ಲಿ ಆಕೆ ಬಳಸುವ ಉಪಮಾನ 'ಮಾರಿ ಬಡಿಯುವುದು' ಎನ್ನುವುದು ಎಲ್ಲೆಡೆ ಬಳಸುವ ಮಾತಾಗಿದೆ. ಹಳ್ಳಿಗರ ಪಾಲಿಗೆ ಮಾರಿಬಡಿಯುವುದಕ್ಕಿಂತ ದೊಡ್ಡ ಆಪತ್ತು ಯಾವುದೂ ಇಲ್ಲ. ರಾಮನು ಸೀತೆಗೆ 'ಸೆರಗಿನಲಿ ಗಂಟ ಕಟ್ಟಿಕೊ' ಎಂದು ಹೇಳುವ ಮಾತು ಕೂಡ ತುಂಬಾ ಚಾಲ್ತಿಯಲ್ಲಿರುವ ಮಾತಾಗಿದೆ.

ಲಕ್ಷ್ಮಣ ಮರವನ್ನೇರಿ ಭರತನ ಪರಿವಾರವನ್ನು ಕಂಡು ಯುದ್ಧಕ್ಕೆ ಬಂದರೆಂದು ಭ್ರಮಿಸಿ "ಮಿಣ್ಣಗಿರಿ ನೀವೇ ನೇರಳೆಹಣ್ಣ ಕುರಿಕಿದಂತೆ ಬಲವ ಬನ್ನ ಬಡಿಸಿ ಬಿಡುವೆ"

ಎನ್ನುತ್ತಾನೆ. ರಾಮನಿಗೆ ಗಿಡಮರ ಕಲ್ಲೆಲ್ಲಾ ಅರಸಿನದ ಪುಡಿಯಂತೆ ಕಂಡಿತಂತೆ. ಕಣ್ಣು ಕತ್ತಲೆ ಕಟ್ಟಿದಾಗ ಸುತ್ತಲೂ ಹಳದಿ ಕಟ್ಟಿದಂತಾಗುವುದು. ಅದನ್ನೇ ಜನ ಅರಸಿನದ ಪುಡಿಗೆ ಹೋಲಿಸುತ್ತಾರೆ.

ಇದೇ ರೀತಿಯಾಗಿ "ಹೇನನ್ನೂರಸಿದಂತೆ ಕೊಲುವೆ" (ಹೇನನ್ನು ಕೊಲ್ಲುವ ಹಾಗೆ ಕೊಲ್ಲುವೆ ಎಂದರ್ಥ) "ಸಾಸವೆಗೆ ಎಡೆಯಿಲ್ಲ ಎಂಬಂತೆ ಕಪಿಗಳು" (ಸಾಸಿವೆ ಹಾಕಲು ಕೂಡ ಸ್ಥಳವಿಲ್ಲದಷ್ಟು ಕಪಿಗಳು ಎಂಬರ್ಥ) 'ಉಳಿಸೆನ್ನೆಯವಾಲೆ ಭಾಗ್ಯವ' ತನ್ನ ಮುತ್ತೈದೆ ಭಾಗ್ಯವ ಉಳಿಸು ಎಂಬರ್ಥ – ವಾಲೆ ಭಾಗ್ಯವ ಕಳೆಯುವುದು ಎನ್ನುವುದಕ್ಕೆ ವಾಲೆಕಳೆಯ ಎಂಬ ಬೈಗುಳ ದಕ್ಷಿಣ ಕನ್ನಡದಲ್ಲಿ ಪ್ರಚಲಿತವಿದೆ.[21]

"ನಾಯಿಮರಿಗಳ ಹಾಗೊಂದೊಂದು ಬಾಯಿಬಗುಳಿ ಪೆಟ್ಟು ತಿಂದು ಸಾಯಬೇಡ ಅತ್ತತೊಲಗೆ ಹೇಯ ರಾಕ್ಷಸಿ...." ಇಲ್ಲಿ ಬೈಗುಳವೇ ಪದ್ಯರೂಪದಲ್ಲಿ ಬಂದಿದೆ. ಕಪಿಗಳಿಗೆ ಚೇಷ್ಟೆ ಮಾಡಬೇಡಿ ಎನ್ನುವುದಕ್ಕೆ "ಅಲ್ಲಿ ಕಂಡದನ್ನು ಮುಟ್ಟದಿರೊಂದು ಹುಲ್ಲು ಕಡ್ಡಿಯನು" ಎಂದು ಎಚ್ಚರಿಕೆ ಕೊಡಲಾಗಿದೆ.

ಸಮೀಕ್ಷೆ :

ವಿಪುಲ ಸಂಖ್ಯೆಯಲ್ಲಿ ಸೃಷ್ಟಿಗೊಂಡ ಯಕ್ಷಗಾನ ಪ್ರಸಂಗಗಳು ಹಿಂದೆ ಅಚ್ಚಿನಲ್ಲಿ ಇರುವುದಕ್ಕಿಂತ ಜನತೆಯ ಬಾಯಿಯಲ್ಲೇ ಇರುತ್ತಿದ್ದವು. ಭಾಗವತರು ಓಲೆಯ ಪ್ರತಿಯನ್ನು ಅಥವಾ ಕಾಗದದ ಪ್ರತಿಯನ್ನು ಇಟ್ಟುಕೊಂಡು ವಾಚನ ಮಾಡುವುದಕ್ಕಿಂತ ಹೆಚ್ಚಾಗಿ ಕಂಠಪಾಠ ಮಾಡಿಕೊಂಡು ಭಾವಭರಿತವಾಗಿ ಹಾಡುತ್ತಿದ್ದರು. ಅವರ ಭಾವನಾ ವೈಭವಕ್ಕೆ ಹಾಗೂ ಕಲಾವಿದರ ಪ್ರದರ್ಶನದ ವೈಭವಕ್ಕೆ ಪ್ರಭಾವಿತಗೊಂಡು ಜನ ವಿರಾಮದ ವೇಳೆಯಲ್ಲಿ ಅದರ ಗುಂಗಿನಲ್ಲೇ ಇರುತ್ತಿದ್ದರು. ಅಲ್ಲಿ ಸಾರಿದ ನೀತಿಯನ್ನು ಅರಿತು ಬದುಕಿನ ಆದರ್ಶ ವಾಕ್ಯಗಳನ್ನು ತಮ್ಮ ಜೀವನದಲ್ಲಿ ತಿಳಿದೊ ತಿಳಿಯದೆಯೇನೊ ಅಳವಡಿಸಿಕೊಳ್ಳುತ್ತಿದ್ದರು.

ಜನಪದ ಕಲೆಯಾದ ಯಕ್ಷಗಾನ ಕಲೆಯ ಸಾಹಿತ್ಯದ ಮೂಲ ಜಾನಪದವೇ. ಅಂತೆಯೇ ಇದು ಜನಪದದಿಂದ ಹೀರಿಕೊಂಡದಷ್ಟನ್ನೇ ಜನಪದಕ್ಕೆ ತಿರುಗಿ ಕೊಟ್ಟಿದೆ. ಜನಜೀವನದ ಮೇಲೆ ಯಕ್ಷಗಾನ ಪ್ರಸಂಗ ಸಾಹಿತ್ಯ ವಿಪುಲ ಪ್ರಭಾವ ಬೀರಿದೆ ಎನ್ನುವುದು ನಿಸ್ಸಂಶಯ. ಇಂದಿಗೂ ಅದು ಎಲ್ಲಾ ವರ್ಗದ ಜನತೆಯಲ್ಲೂ ಧಾರ್ಮಿಕ ಭಾವನೆಯನ್ನು ಉಳಿಸಿಕೊಂಡು ಬರುವಲ್ಲಿ ಸಹಕಾರಿಯಾಗಿದೆ. ಹಾಗೆಯೇ ಸಾಮಾಜಿಕ ಅಂಶಗಳಿಂದ ಮುಗ್ಧ ಜನರಿಗೆ ತೀರ ಹತ್ತಿರವಾಗಿದೆ. ಅವರ ಕಲ್ಪನಾ ಮಿತಿಯಲ್ಲೇ ರಚಿಸಿರುವ ಇಲ್ಲಿನ ಪಾತ್ರಗಳು, ನುಡಿಕಟ್ಟುಗಳು, ಘಟನೆಗಳು ಇಲ್ಲಿ ಕಾಣಿಸಿಕೊಂಡಿದ್ದು ಅವರದೇ ಆದ ಕಲಾಸಾಹಿತ್ಯವಾಗಿ ಉಳಿಯಲು ಕಾರಣವಾಗಿದೆ. ಸಮಾಜದಲ್ಲಿನ ಸಾಂಸ್ಕೃತಿಕ ಪುನರುತ್ಥಾನವಂತೂ ಯಕ್ಷಗಾನ ಕವಿಗಳ ಅಮೋಘ ಕೊಡುಗೆ. ಇದು ಪ್ರಾಯಶಃ ಅವರಿಗೆ ತಿಳಿದಿರಲಿಕ್ಕಿಲ್ಲ. ಸಂಸ್ಕೃತಿಯನ್ನು ಕಟ್ಟುವಲ್ಲಿ ಈ ಬಗೆಯ ಸಾಹಿತ್ಯದ ಪಾತ್ರ ಮಹತ್ತರವಾದುದು. ಜನತೆಯ ಮನಸ್ಸನ್ನು ತಿದ್ದಿ ಭಾವನೆಗಳನ್ನು ಪಕ್ವಗೊಳಿಸಿ ಬದುಕಿನಲ್ಲಿ ಮೂಡುವಂತೆ ಮಾಡುವುದನ್ನು ಪ್ರಸಂಗಗಳು ನಡೆಸಿವೆ. ತಮ್ಮ ಬದುಕಿನಲ್ಲಿ ಉಟಾದ ಹಿಗ್ಗು ತಗ್ಗುಗಳನ್ನು ತಾವು ಕಂಡ ಪ್ರಸಂಗಗಳಿಗೆ ಹೋಲಿಸಿ, ಅರಕ್ಕೆ ಹಿಗ್ಗದೆ

ಮೂರಕ್ಕೆ ಕುಗ್ಗದೆ ತಮ್ಮ ನಡೆ ನುಡಿಗಳಲ್ಲಿ ಅಲ್ಲಿ ಉಕ್ತವಾದ ಉದಾತ್ತ ಅಂಶಗಳನ್ನು ಈ ಜನ ತಮ್ಮ ಬಾಳಲ್ಲಿ ಸೇರಿಸಿ ಕೊಂಡಿದ್ದಾರೆ. ತಮ್ಮ ನಡುವೆ ಬಾಳುತ್ತಿರುವವರಲ್ಲಿ ಒಳ್ಳೆಯವರನ್ನು ರಾಮನ ಗುಂಪಿಗೂ, ದುಷ್ಟರನ್ನು ರಾವಣನ ಗುಂಪಿಗೂ ಸೇರಿಸಿ ಗ್ರಾಮಗಳಲ್ಲೇ 'ಗ್ರಾಮಾಯಣ'ವನ್ನು ಕಂಡವರು ನಮ್ಮ ಜನ. ಹೀಗೆ ಪ್ರಸಂಗ ಸಾಹಿತ್ಯ ಸಾಮಾಜಿಕವಾಗಿ ಮಹತ್ತರವಾದ ಕೊಳುಕೊಡೆಯನ್ನು ನಿರ್ಮಿಸಿಕೊಂಡಿದೆ.

ಅಡಿಟಿಪ್ಪಣಿ :

1. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ ಪುಟ 23
2. ಯಕ್ಷಗಾನ ಕುಶಲವರ ಕಾಳಗ – ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಪುಟ 17
3. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ, ಪುಟ 56.
4. ಪಾರ್ತಿಸುಬ್ಬನ ಯಕ್ಷಗಾನಗಳು – ಪುಟ 72 ಮತ್ತು ಪುಟ 202ರ ಪದ್ಯಗಳು.
5. ಅತಿಕಾಯದ ಕಾಳಗ – ಹಟ್ಟಿಯಂಗಡಿ ರಾಮಭಟ್ಟ, ಪುಟ 10
   ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್.
6. ಸೇತು ಬಂಧನ ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್ ಪುಟ 13.
7. ಕುಶಲವರ ಕಾಳಗ – ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಉಡುಪಿ.
8. ಪಾರ್ತಿಸುಬ್ಬನ ಯಕ್ಷಗಾನಗಳು – ಪಟ್ಟಾಭಿಷೇಕ ಪಂಚವಟಿ ಪುಟ 103
   ಸಂ. ಕುಕ್ಕಿಲ ಕೃಷ್ಣಭಟ್ಟ.
9. ಅದೇ ಪುಟ 106 ಮತ್ತು 105
10. ಪಾರ್ತಿಸುಬ್ಬನ ಯಕ್ಷಗಾನಗಳು : (ಸಂ) ಕುಕ್ಕಿಲ ಕೃಷ್ಣಭಟ್ ಪುಟ 105.
11. Andre Beteile : Family and Social change in India and South Asian Countries - Economic Weekly Annual XVI 194. p. p237
12. ಯಕ್ಷಗಾನ ಪಂಚವಟಿ ರಾಮಾಯಣ ಪ್ರ. ಎಂ. ವೆಂಕಟರಾವ್, ಮಂಗಳೂರು, ಪುಟ 12
13. ಅದೇ ಪುಟ 13
14. ಅದೇ ಪುಟ 13
15. ಋಗ್ವೇದ – 4–57 ಮತ್ತು 6–7 ಅಥರ್ವ ವೇದ 3–17 ಪದ್ಯ 8ನೇ ಪದ್ಯ
    (ರಾಮಾಯಣ ಕಥಾ ವಸ್ತುವಿನ ಉಗಮ ಮತ್ತು ಬೆಳವಣಿಗೆ – ಉ.ಕಾ.ಸುಬ್ಬ ರಾಯಾಚಾರ್)
16. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ ಪುಟ 150
17. ಈ ಬಗ್ಗೆ ನನ್ನ ಗಮನ ಸೆಳೆದವರು ಡಾ. ಶಿವರಾಮ ಕಾರಂತರು. (ಸಾಲಿಗ್ರಾಮದ 'ಸುಹಾಸ'ದಲ್ಲಿ 9–4–77ರಂದು ನಡೆಸಿದ ಸಂದರ್ಶನ).
18. ಯಕ್ಷಗಾನ ಲಂಕಾದಹನ ಅಥವಾ ಚೂಡಾಮಣಿ –
    ಪ್ರ. ಪಾವಂಜೆ ಗುರುರಾವ್ ಅಂಡ್ ಸನ್ಸ್, ಪುಟ 5
19. ಅದೇ ಪುಟ 5
20. ಪಾರ್ತಿಸುಬ್ಬನ ಯಕ್ಷಗಾನಗಳು – ಕುಶಲವರ ಕಾಳಗ –
    ಸಂ. ಕುಕ್ಕಿಲ ಕೃಷ್ಣಭಟ್ಟ ಪುಟ 401.
21. ಈ ಬಗ್ಗೆ ಗಮನ ಸೆಳೆದವರು – ಎ. ಸದಾನಂದ ಹೆಬ್ಬಾರರು.
    ('ಚೇತನಾ ಹೈಸ್ಕೂಲ್'ನಲ್ಲಿ ಅವರೊಂದಿಗೆ 17–477 ರಂದು ನಡೆಸಿದ ಸಂದರ್ಶನ)


* * * * *

ಪ್ರಸಂಗ ಮತ್ತು ಕನ್ನಡ ಕಾವ್ಯ

ಜೈಮಿನಿ ಭಾರತ, ತೊರವೇ ರಾಮಾಯಣಗಳನ್ನು ಓದಿ ಪ್ರಸಂಗಗಳನ್ನು ಕೈಗೆತ್ತಿಕೊಂಡರೆ ಹಲವು ಬಾರಿ ಅಲ್ಲಿ ಬಳಸಲಾದ ಕೆಲವು ಪದ್ಯಗಳ ಮೂಲದ ಬಗ್ಗೆ ತಕ್ಷಣ ಸುಳಿವು ಸಿಕ್ಕುತ್ತದೆ. ಕೆಲವು ಶೈಲಿಗಳಲ್ಲಿ, ಕೆಲವು ಅಲಂಕಾರಗಳಲ್ಲಿ ಪ್ರಭಾವಗೊಂಡಿರುವುದರ ಸ್ಪಷ್ಟ ಅರಿವಾಗುತ್ತದೆ. ನಮ್ಮ ಯಕ್ಷಗಾನ ಪ್ರಸಂಗಗಳಿಗೆ ಕನ್ನಡ ಕಾವ್ಯಗಳ ಪ್ರಭಾವ ಅಪಾರ. ವಸ್ತು, ಶೈಲಿ, ವರ್ಣನೆಗಳೆಲ್ಲಾ ಕನ್ನಡ ಕವಿಗಳ ಪ್ರಭಾವ ಮುದ್ರೆಗೆ ಹಲವು ಬಾರಿ ಒಳಗಾಗಿವೆ. ಪರಿಪುಷ್ಟಗೊಂಡ ಒಂದು ಸಾಹಿತ್ಯ ಪ್ರಬುದ್ಧ ಮಾನಕ್ಕೆ ಬರುತ್ತಿರುವ ಇನ್ನೊಂದು ಸಾಹಿತ್ಯದ ಮೇಲೆ ಪ್ರಭಾವ ಬೀರುವುದು ಸಹಜ. ಹಾಗೆಯೇ ಇದೇ ಮಾತನ್ನು ಸಾಹಿತ್ಯ ಪ್ರಕಾರಗಳಿಗೂ ಹೋಲಿಸಬಹುದು. ಯಕ್ಷಗಾನ ಸಾಹಿತ್ಯ ಹುಟ್ಟುವಷ್ಟರಲ್ಲೇ ಒಂದು ಪ್ರೌಢಾವಸ್ಥೆಯನ್ನು ತಲುಪಿದ್ದ ಕನ್ನಡ ಸಾಹಿತ್ಯದ ಪ್ರಭಾವ ಅದರ ಮೇಲೆ ಆಗುವುದು ಅನಿರೀಕ್ಷಿತವೇನಲ್ಲ. ಯಕ್ಷಗಾನ ಕವಿಗಳು ಓದಿದ್ದು ಹೆಚ್ಚಾಗಿ ಕನ್ನಡ ಕಾವ್ಯಕಥೆಗಳನ್ನು ಸಾಮಾನ್ಯರಾದ ಅವರಿಗೆ ಸಂಸ್ಕೃತ ಪಾಂಡಿತ್ಯವಾಗಲೀ, ವಿಶೇಷ ವಿದ್ವತ್ ಆಗಲೀ ಇರಲಿಲ್ಲ. ತಮ್ಮ ಸುತ್ತಲಿದ್ದ ಗದುಗುಭಾರತ, ತೊರವೇ ರಾಮಾಯಣ, ಜೈಮಿನಿ ಭಾರತ, ಕೌಶಿಕ ರಾಮಾಯಣ ಮತ್ತು ಹನುಮದ್ ರಾಮಾಯಣವನ್ನು ಓದಿಕೊಂಡಿದ್ದರು. ಓದದ ಹಳ್ಳಿಗರಿಗೆ ಮಳೆಗಾಲದಲ್ಲಿ ಅವುಗಳಲ್ಲಿರುವ ಸ್ವಾರಸ್ಯವನ್ನು 'ವಾಚನ'ಗಳ ಮೂಲಕ ಬಣ್ಣಿಸುತ್ತಿದ್ದರು. ಕವಿ ಪ್ರತಿಭೆಯುಳ್ಳ ಜನ ಪ್ರಸಂಗಗಳನ್ನು ಕಟ್ಟುವಾಗ ಈ ವಾಚನಗಳು ಒಂದಲ್ಲೊಂದು ರೀತಿಯಲ್ಲಿ ಅವರಿಗೆ ಸಹಕಾರಿಯಾಗಿವೆ. ಇದನ್ನು ಕೃತಿ ಚೌರ್ಯ ಎನ್ನುವಂತಿಲ್ಲ. ತಮ್ಮ ಮುಂದಿರುವ ಜನತೆಗೆ ಆದಷ್ಟು ಸುಂದರವಾಗಿ ತಿಳಿಸಬೇಕೆನ್ನುವುದು ಅವರ ಗುರಿಯಾಗಿತ್ತು. ಅವುಗಳನ್ನು ನಿರ್ಮಿಸುವಾಗ ಸಹಜ ಸ್ಫೂರ್ತಿ ಹಾಡುಗಳ ಜೊತೆಯಲ್ಲೇ ಇಂತಹ ಘಟನೆಗಳು ಬಂದಿರಬೇಕು. ಹೆಚ್ಚಾಗಿ ಹಾಡುಗಬ್ಬಗಳೇ ಯಕ್ಷಗಾನ ಕವಿಗಳ ಮೇಲೆ ಪ್ರಭಾವವನ್ನು ಉಂಟು ಮಾಡಿವೆ.

ವಸ್ತು ದೃಷ್ಟಿಯಿಂದ ರಾಮಾಯಣ ಪ್ರಸಂಗಗಳು ಮೂರು ಕನ್ನಡ ರಾಮಾಯಣಗಳ ಪ್ರಭಾವಕ್ಕೆ ಒಂದಿಲ್ಲೊಂದು ರೀತಿಯಲ್ಲಿ ಒಳಗಾಗಿವೆ. ಅವುಗಳೆಂದರೆ ತೊರವೇ ರಾಮಾಯಣ, ಕೌಶಿಕ ರಾಮಾಯಣ, ಹಾಗೂ ಹನುಮದ್ ರಾಮಾಯಣ ಪಾರ್ತಿಸುಬ್ಬನ ಪ್ರಸಂಗಗಳಲ್ಲಿ ತೊರವೇ ರಾಮಾಯಣ ಪ್ರಭಾವ ಮೂಡಿಸಿದ್ದರೆ, ಮೈರಾವಣ ಕಾಳಗದಲ್ಲಿ ಕೌಶಿಕ ರಾಮಾಯಣದ ಅನುಸರಣೆ ಕಂಡು ಬರುತ್ತದೆ. ಕುಶಲವರ ಕಾಳಗವಂತೂ ವಸ್ತುವಿಚಾರದಲ್ಲಿ ಜೈಮಿನಿ ಭಾರತವನ್ನು ನೆರಳಿನಂತೆ ಅನುಸರಿಸಿದೆ. ಕಥಾವಸ್ತುವಿನ

ಕುರಿತಾಗಿ ಯೋಚಿಸಿದರೆ ವಾಲ್ಮೀಕಿ ರಾಮಾಯಣವು ಇವೆಲ್ಲವಕ್ಕೂ ಮೂಲ. ಕೆಲವು ಕಥೆಗಳನ್ನು ಹೊಸದಾಗಿ ನೇಯ್ದು ಕೌಶಿಕ ಹಾಗೂ ತೊರವೇ ರಾಮಾಯಣಗಳು ಮೂಲಕ್ಕಿಂತ ಭಿನ್ನವಾಗುತ್ತವೆ. ಯಕ್ಷಗಾನ ರಾಮಾಯಣ ಪ್ರಸಂಗಗಳ ಮೇಲೆ ವಸ್ತು ವಿಚಾರದ ಪ್ರಭಾವವನ್ನು ಹೀಗೆ ಗುರುತಿಸಬಹುದು.



ಡಾ. ಸೀತಾರಾಮ್ ಆಚಾರರು ಕುಮಾರ ವಾಲ್ಮೀಕಿಯನ್ನು "ಯಕ್ಷಗಾನ ಕವಿಗಳ ಗುರು, ಅವರ ಪಾಲಿಗೆ ಆದಿಕವಿ" ಎಂದು ಕರೆದು ಯಕ್ಷಗಾನ ಪ್ರಸಂಗಗಳು ತೊರವೆ ರಾಮಾಯಣದ ಸ್ಪಷ್ಟ ಪ್ರಭಾವಕ್ಕೆ ಒಳಗಾದುದನ್ನು ಸಾಕ್ಷ್ಯಾಧಾರದೊಂದಿಗೆ ತೋರಿಸಿಕೊಟ್ಟಿದ್ದಾರೆ. ಮೂಲ ವಾಲ್ಮೀಕಿ ರಾಮಾಯಣದಲ್ಲಿ ಇಲ್ಲದ ತೊರವೇ ರಾಮಾಯಣಕ್ಕೆ ವಿಶೇಷವಾದ ಅನೇಕ ಅಂಶಗಳನ್ನು ಯಕ್ಷಗಾನ ಕವಿಗಳು ಬಳಸಿಕೊಂಡಿರುವುದನ್ನು ಅವರು ಗುರುತಿಸಿದ್ದಾರೆ. ಕೆಲವೆಡೆಯಂತೂ ಹಲವು ಷಟ್ಪದಿಗಳು ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಬಳಸಲಾಗಿದೆ. ಇವೆಲ್ಲವನ್ನು ಪರಿಶೀಲಿಸಿದ ಡಾ. ಆಚಾರ್‌ರವರು "ಹೀಗೆ 'ರಾಮಾಯಣ ಕಥಾನಕ'ವುಳ್ಳ ಪ್ರಸಿದ್ಧ ಯಕ್ಷಗಾನ ಪ್ರಸಂಗಗಳನ್ನು ತೊರವೇ ರಾಮಾಯಣದೊಂದಿಗೆ ಹೊಂದಿಸಿ ಪರಿಶೀಲಿಸಿದಾಗ ಪ್ರತಿಯೊಂದು ಕೃತಿಯಲ್ಲೂ ಕುಮಾರ ವಾಲ್ಮೀಕಿಯ 'ಕೈ' ಇರುವುದು ವಿದಿತವಾಗುತ್ತದೆ" ಎಂಬ ಸಮರ್ಪಕ ನಿಲುವಿಗೆ ಬಂದಿದ್ದಾರೆ. ಅವರು ತಮ್ಮ ಸಮರ್ಥನೆಗೆ ಆರಿಸಿಕೊಂಡ ಹದಿನೈದು ಪ್ರಸಂಗಗಳು ವಸ್ತು ವಿಚಾರದಲ್ಲಿ ಕುಮಾರ ವಾಲ್ಮೀಕಿಯ ರಾಮಾಯಣಕ್ಕೆ ಋಣಿಯಾಗಿರುವುದನ್ನು ಹೀಗೆ ಪಟ್ಟಿ ಮಾಡಬಹುದು.[1]

1. ಪುತ್ರಕಾಮೇಷ್ಟಿ ಮತ್ತು ಸೀತಾಕಲ್ಯಾಣ (ಶರವು ಗಣಪತಿ ಭಕ್ತನಿಂದ ರಚಿತವಾದದ್ದು) – ಒಂಬತ್ತು ಅಂಶಗಳು.
2. ಪಾದುಕಾ ಪಟ್ಟಾಭಿಷೇಕ (ಕಡಂದಲೆ ರಾಮರಾವ್) – ಎರಡು ಅಂಶಗಳು.
3. ಪಂಚವಟಿ ವಾಲಿಸುಗ್ರೀವ ಕಾಳಗ – ಐದು ಅಂಶಗಳು
4. ಯಕ್ಷಗಾನ ವಾಲಿಸುಗ್ರೀವ (ಕವಿಭೂಷಣ ವೆಂಕಪ್ಪ ಶೆಟ್ಟಿ) – ಹಲವು ಪದ್ಯಗಳು ನೇರವಾಗಿ ಬಂದಿವೆ.
5. ಖರದೂಷಣರ ಕಾಳಗ – ಹನ್ನೆರಡು ಅಂಶಗಳು
6. ಚೂಡಾಮಣಿ – ಹದಿನಾರು ಅಂಶಗಳು
7. ಸೇತು ಬಂಧನ – ಹತ್ತು ಅಂಶಗಳು

8. ಅಂಗದ ಸಂಧಾನ – ಏಳು ಅಂಶಗಳು

9. ನಾಗಾಸ್ತ್ರ ಕುಂಭಕರ್ಣ ಕಾಳಗ (ನರಸಿಂಹನ ಭಕ್ತ) – ಎರಡು ಅಂಶಗಳು

10. ಕುಂಭಕರ್ಣಾದಿ ಕಾಳಗ – ಎಂಟು ಅಂಶಗಳು

11. ಅತಿಕಾಯ ಕಾಳಗ (ಹಟ್ಟಿಯಂಗಡಿ ರಾಮಭಟ್ಟ) – ಮೂರು ಅಂಶಗಳು – (ಹದಿನೆಂಟು ಷಟ್ಪದಿಗಳು ಹಾಗೆ ಬಳಕೆಯಾಗಿವೆ)

12. ಕಾಲನೇಮಿ ಕಾಳಗ (ಶ್ರೀಪತಿ) – ಮೂರು ಅಂಶಗಳು

13. ಇಂದ್ರಜಿತು ಕಾಳಗ (ಕಾಂತೇಶನಮಿತ್ರ) ಮೂರು ಅಂಶಗಳು ಹಾಗೂ ಹಲವು ಪದ್ಯಗಳು.

14. ರಾವಣ ವಧೆ (ಕೃಷ್ಣಯ್ಯನ ಮಗ ಸುಬ್ರಾಯ) – ಇಪ್ಪತ್ನಾಲ್ಕು ಷಟ್ಪದಿಗಳು ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಬಂದಿವೆ.

15. ರಾಮಪಟ್ಟಾಭಿಷೇಕ (ರಾಮಕೃಷ್ಣ ಭಾಗವತ) – ಎರಡು ಅಂಶಗಳು.

ಇಲ್ಲಿ ಡಾ. ಸೀತಾರಾಮ್ ಆಚಾರ್‌ರವರು ಕೊಟ್ಟ ಎಲ್ಲಾ ಉದಾಹರಣೆಗಳು ಕುಮಾರ ವಾಲ್ಮೀಕಿಯ ಹಿರಿಯ ಪ್ರಭಾವವು ಯಕ್ಷಗಾನ ಕವಿಗಳ ಮೇಲಿರುವುದನ್ನು ಸೂಚಿಸುತ್ತದೆ. ಮಲೆನಾಡಿನ ಹಾಗೂ ಕರಾವಳಿಯ ಈ ಪ್ರಸಂಗಕಾರರಿಗೆ ಅಂದು ಪ್ರಚಲಿತವಿದ್ದ ಈ ರಾಮಾಯಣ ಕಾವ್ಯದ ಪ್ರಭಾವಕ್ಕೆ ಒಳಗಾಗುವುದು ಅನಿವಾರ್ಯವಾಗಿತ್ತು. ಕಥಾವಿಚಾರದಲ್ಲಂತೂ ಅದೇ ಅವರ ಪಾಲಿಗೆ ಮುಖ್ಯ ಆಕರ.

ವೆಂಕಟ ಕವಿಯ ಯಕ್ಷಗಾನ ಮೈರಾವಣ ಕಾಳಗದಲ್ಲಿ ತೊರವೇ ರಾಮಾಯಣಕ್ಕಿಂತ ಕೌಶಿಕ ರಾಮಾಯಣದ ಪ್ರಭಾವ ಹೆಚ್ಚಾಗಿದೆ. ಅಲ್ಲಿನ ಘಟನೆಗಳೆಲ್ಲಾ ಕೌಶಿಕ ರಾಮಾಯಣವನ್ನೇ ಅನುಸರಿಸಿಯೇ ಬಂದಿವೆ. ಹನುಮಂತನು ಮತ್ಸ್ಯವಾನರನನ್ನು ಭೇಟಿ ಮಾಡಿದ ಪ್ರಸಂಗ ಹಾಗೂ ತನ್ನ ಮಗನೆಂದು ಹನುಮಂತನಿಗೆ ತಿಳಿದು ಬಂದ ವಿಚಾರ ಅಲ್ಲಿ ಉಕ್ತವಾಗಿದೆ. ಕಾಳಗಗಳಲ್ಲೂ ಕೂಡ ಕೌಶಿಕ ರಾಮಾಯಣದಲ್ಲಿ ಉಕ್ತವಾದ ರೀತಿಯಲ್ಲೇ ವರ್ಣನೆ ಬಂದಿದೆ. ಹನುಮದ್ ರಾಮಾಯಣವು ಕೂಡ ಈ ಭಾಗದಲ್ಲಿ ಪ್ರಚಲಿತವಿದ್ದು ಕೆಲವು ಪ್ರಸಂಗಗಳ ಮೇಲೆ ಪ್ರಭಾವ ಬೀರಿದೆ. ವಿಷ್ಣು ಸಭಾಹಿತನ ಶತಾಸ್ಯರಾವಣ ಕಾಳಗದ ಮೇಲೆ ಈ ಹನುಮದ್ ರಾಮಾಯಣದ ಪ್ರಭಾವವನ್ನು ಗುರುತಿಸಬಹುದು. ಶೈಲಿ ವಿಚಾರದಲ್ಲೂ ಈ ಯಕ್ಷಗಾನ ಕವಿಗಳು ಕನ್ನಡ ಕವಿಗಳನ್ನು ಅನುಸರಿಸಿರುವುದನ್ನು ಕಾಣಬಹುದು. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಈ ಪದ್ಯವನ್ನು ಉದಾಹರಣೆಗೆ ಕೊಡಬಹುದು.

ಹರಿಶ್ಚಂದ್ರ ಕಾವ್ಯ :

ಏವೇನೇವನೆಲೆ ಮಗನೇ ಮಗನೇ
ಸಾವೇಕಾಯಿತ್ತೆಲೆ ಚೆನ್ನಿಗನೇ
....

ಹೆತ್ತ ಹೊಟ್ಟೆ ಯುರಿಯುತ್ತಿದೆ ಮಗನೆ
ಎತ್ತಿದ ತೋಳನು ಕೆತ್ತಿದೆ ಮಗನೆ
....
ನೋಡುವ ಕಣ್ಣಲಿ ಸುಣ್ಣವ ಹೊಯ್ದೆ
....
ಬಾರೈ ಬಹಳ ಸಿರಿಯ ಸಿಂಗಾರ
ಬಾರೈ ಸುಜನ ಜನಕಾಧಾರ[2]

ಎಂಬ ಈ ಚಂದ್ರಮತಿಯ ಪುತ್ರಶೋಕವನ್ನು ಅತಿಕಾಯ ಕಾಳಗದ ರಾಮ ಭಟ್ಟ ಅನುಸರಿಸಿದ್ದಾನೆ. ಅತಿಕಾಯ ಕಾಳಗದಲ್ಲಿ ಧಾನ್ಯಮಾಲಿನಿ ಪಡುವ ಶೋಕ ಈ ರೀತಿ ಇದೆ.

ಅತಿಕಾಯ ಕಾಳಗ :

ಹಾ ಮಗನೆ ಗುಣವೃಂದ ಅಯ್ಯೊ ಮಗನೆ ಮನದಂದ
ಹೇ ಮಗನೆ ರಣಧೀರ ಬಾ ಮಗನೆ ಮೊಗದೋರ
ನೋಡುವ ಕಣ್ಣಿಗೆ ಮಣ್ಣ ಮಾಡಿದೆಯಲ್ಲವೆ ಚಿಣ್ಣ
ಆಡಿಸಿದೀ ಕೈಗಳಿಗೆ ಕೆಡನು ಕೊಟ್ಟೆಯೊ ಹೀಗೆ[3]

ಕುಮಾರವ್ಯಾಸನ ಗದುಗು ಭಾರತದ ಪ್ರಭಾವವು ಪ್ರಸಂಗಗಳ ಮೇಲೆ ಸಾಕಷ್ಟು ಇದೆ. ವಾಲಿ ಸುಗ್ರೀವ ಕಾಳಗದಲ್ಲಿ ಬರುವ ಒಂದು ಪದ್ಯವನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ.

ಗದುಗು ಭಾರತ :

ಜನನವೇ ಪಾಂಚಾಲ ರಾಯನ
ಮನೆ ಮನೋವಲ್ಲಭರ ದಾರೆನೆ
ಮನುಜ ಗಿನುಜರು ಗಣ್ಯವೇ ಗೀರ್ವಾಣರಿಂ ಮಿಗಿಲು
ಎನಗೆ ಬಂದೆಡರೀ ವಿರಾಟನ
ವನಿತೆಯರುಗಳ ಮುಡಿಯ ಕಟ್ಟುವ
ತನುವ ತಿರುಗುವಾ ಕಾಲನೊತ್ತುವ ಕೆಲಸದುತ್ಸಾಹ [4]

ವಾಲಿಸುಗ್ರೀವ ಕಾಳಗ :

ಜನಕ ರಾಯನಿಗೆ ಮಗಳಾಗಿ ನಾ ಜನಿಸಿದೆ ರಾಮಾರಾಮ
ವರ ವನಜಾಕ್ಷಿಗೆ ಭೂಮಿದೇವಿಗೆ ಮಗಳಾಗಿಹೆ ರಾಮ ರಾಮ
ಪುಡವಿಯೊಳುವೆನೆಂದು ದೃಢವಾಗಿ ನಂಬಿದೆ ರಾಮ ರಾಮ
ಕಾರಡವಿಯೆ ಗತಿಯೆಂದು ಬರೆದನಬುಜಭವ ರಾಮ ರಾಮ[5]

ಕುಶಲವರ ಕಾಳಗದಲ್ಲಿ ದಾಸರ ಕೀರ್ತನೆಯ ಪ್ರಭಾವವನ್ನು ಗುರುತಿಸಬಹುದು.

ದಾಸರ ಪದ್ಯ :

ಕೃಷ್ಣ ಮೂರ್ತಿ ಕಣ್ಣ ಮುಂದೆ ನಿಂತಿದ್ದಂತಿದೆ
ಮುಸ್ತಕದಲಿ ಮಾಣಿಕದ ಕಿರೀಟ
ಕಸ್ತೂರಿ ತಿಲಕದಿ ಹೊಳೆವ ಲಲಾಟ
ಶಿಸ್ತಿಲಿ ಕೊಳಲನೂದವ ಓರೆನೋಟ
ಕೌಸ್ತುಭ ಎಡಬಲದಲ್ಲಿ ಓಲ್ಯಾಟ
ಮಘ ಮಘಿಸುವ ಸೊಬಗಿನ ಸುಳಿಗುರುಳು
ಚಿಗುರು ತುಲಸಿ ವನಮಾಲೆಯ ಕೊರಳು
ಬಗೆಬಗೆ ಹೊನ್ನ ಮುದ್ರಿಕೆಯಿಟ್ಟ ಬೆರಳು
ಸೊಬಗಿನ ನಾಭಿಯ ತಾವರೆ ಯರಳು
ಉಡುದಾರ ವಡ್ಯಾಣ ಸಕಲಾಭರಣ
ಬೆಡಗು ಪೀತಾಂಬರ ಶತರವಿ ಕಿರಣ....[6]

ಕುಶಲವರ ಕಾಳಗ :

ಕಾಲಲಂದುಗೆ ಗೆಜ್ಜೆ ಕಡಗ ಕೈಬೆರಳ
ಸಾಲಾದ ಉಂಗುರವು ಸರಪಣಿಯು ಕೊರಳ
ಹುಲಿಯುಗುರು ಒಡ್ಯಾಣ ಹೂವಿನಂಗಿಗಳ
ಬಲು ಪ್ರಕಾಶದೊಳಿರುವ ಬಹು ಭೂಷಣಗಳ[7]

ಎನ್ನುವ ಅಲಂಕಾರದ ವರ್ಣನೆಯಲ್ಲಿ ಪುರಂದರ ದಾಸರ ಕೀರ್ತನೆಯ ವರ್ಣನೆ ಬಂದಿರುವುದನ್ನು ಗಮನಿಸಬಹುದು.

ಇದೇ ರೀತಿ ಲಕ್ಷ್ಮೀಶನ ಜೈಮಿನಿ ಭಾರತದ ಪ್ರಭಾವವನ್ನು ಕಾಣಬಹುದು.

ಜೈಮಿನಿ ಭಾರತ :

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಥ್ಯನಿಲ್ಲಿ ತಳುವಿದೊಡೆ ನೆರವುಂಟು ತನ
ಗೀ ಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು[8]

ಕುಶಲವರ ಕಾಳಗ :

ಏಕೆ ನಿಂತಿರುವೆ ಲಕ್ಷ್ಮಣ ಕೋಪಿಸುವನು
ಕಾಕುತಸ್ಥ ನಿನ್ನ ಮೇಲೆ
ಸಾಕು ತಾನಾದರೂ ರಾಮ ಒಳ್ಳಿತಾಗಿರಲಿ
ರಾಕೇಂದು ನಿಭವದನ[9]

ಈ ರೀತಿಯಲ್ಲದೇ ನೇರ ಅನುಸರಣೆಯನ್ನು ಯಕ್ಷಗಾನ ಕವಿಗಳು ಮಾಡಿದ್ದಾರೆ.

ಕನ್ನಡ ಕಾವ್ಯಗಳಲ್ಲಿರುವ ಉತ್ತಮ ಪದ್ಯವನ್ನು ಹಾಗೇ ಎತ್ತಿಕೊಂಡು ತಮ್ಮ ಪ್ರಸಂಗದಲ್ಲಿ ಬಳಸಿದ್ದು ಸಾಕಷ್ಟಿವೆ. ಉದಾಹರಣೆಗೆ ಕೆಲವನ್ನು ಇಲ್ಲಿ ನೋಡಬಹುದು.

ಜೈಮಿನಿ ಭಾರತ :

ಕೈಯ್ಯಾರೆ ಖಡ್ಗಮಂ ಕೊಟ್ಟು ತನ್ನರಸಿಯಂ
ಹೊಯ್ಯೆಂದು ಪೇಳದಡವಿಗೆ ಕಳುಹಿ ಬಾಯೆಂದ
ನಯ್ಯೊಯ್ಯೊ ರಾಘವಂ ಕಾರುಣ್ಯ ನಿಧಿಯೆಂದಳಲ್ದಳಂಭೋಜನೇತ್ರೆ[10]

ಕುಶಲವರ ಕಾಳಗ :

ಕಯ್ಯಾರೆ ಖಡ್ಗವ ಕೊಟ್ಟು ತನ್ನರಸಿಯ
ಹೊಯ್ಯೊಂದು ಪೇಳದೆ ಬರಿದೆ
ಒಯ್ಯನೆ ಕಾಡೊಳು ಬಿಟ್ಟು ಬಾರೆಂದನೆ
ಅಯ್ಯಯ್ಯೊ ರಾಮ ಕರುಣಾಳು[11]

ಜೈಮಿನಿ ಭಾರತ :

ಎತ್ತಣ ತುರಂಗಮಿಂದು ಪೊಕ್ಕು ಪೂದೋಟಮಂ
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತೂ ಮಾರ್ವೆವುದೆಂದನಗೆ ನೇಮಿಸಿ ಪೋದನಿಬ್ಧಿಪಂ ಕರೆಸಲಾಗಿ[12]

ಕುಶಲವರ ಕಾಳಗ :

ಎತ್ತಣ ತುರಂಗಮಿದು ಪೊಕ್ಕು ಪೂದೋಟಗಳ
ಕತ್ತರಿಸಿ ಕೆಡಿಸಿತೆಂದೆನುತ[13]

ತೊರವೇ ರಾಮಾಯಣದ ಅನೇಕ ಷಟ್ಪದಿಗಳು ಯಾವ ಅಡೆತಡೆಯಿಲ್ಲದೆ ಯಕ್ಷಗಾನ ಪ್ರಸಂಗಗಳಲ್ಲಿ ಬಳಕೆಯಾಗಿವೆ.

ತೊರವೇ ರಾಮಾಯಣ :

ಇಂದಿನಾಹವದೊಳಗೆ ನೊಂದುದು
ಮಂದಿನಮ್ಮದು ದೇವಿ ಕೇಳ್ ರಘು
ನಂದನನ ಮುಂದಾರು ನಿಂದಿರಬಹುದು ಭವರದಲಿ
ಕೊಂದನಗುಣಿತ ರಾಕ್ಷಸರ ಬಳಿ
ಕೊಂದು ಮಾಯಾ ರೂಪಿನಲಿ
ಸಂದಿಸಿದನಾಜಿಯಲಿ ತಂದೆನು ತಲೆಯ ತಾನೆಂದ[14]

ನಾಗಾಸ್ತ್ರ ಕುಂಭಕರ್ಣ ಕಾಳಗ :

ಇಂದಿನಾಹವದಿ ನೊಂದೆವು ನಾವು ರಘುವರನ

ಮುಂದೆ ನಿಲ್ಲುವರಾರು ರಣದಿ
ಕೊಂದನಗಣಿತ ರಾಕ್ಷಸರ ಬಳಿಕ ಮಾಯೆಯಲಿ
ತಂದೆ ವೀ ರಾಮ ಮಸ್ತಕವ[15]

ತೊರವೇ ರಾಮಾಯಣ :

ಹೇಳಲಮ್ಮೆನು ಹೇಳಿದರೆ ನೀ
ಕೇಳುವೆಯೊ ಕೇಳೆಯೊ ಮಹಾಮು
ಟ್ಠಾಳವಾಗಿದೆ ನಿನ್ನ ಮಹದೈಶ್ವರ್ಯದಾಯುಷಕೆ
ಹೇಳದಿಹುದನುಚಿತವು ಮಾತನು
ಕೇಳು, ಕೇಳದೆ ಮಾಣ ರಾಮನ
ಕಾಲಹಿಡಿ ಬಿಡು ಜಾನಕಿಯ ನಿಹ ಪದವ ಬಯಸುವಡೆ[16]

ಯಕ್ಷಗಾನ ರಾವಣವಧೆ :

ಹೇಳಲಮ್ಮೆನು ನಿನಗೆ ನೀತಿಯ
ಪೇಳಿದರೆ ನೀ ಕೇಳುವೆಯೊ ಮು
ಟ್ಠಾಳುತನದಲಿ ನಡೆದ ನಿನಗಿದು ತಿಳಿದಿಹರೆ ಮುಂದೆ
ಹಾಳುಮಾಡದೆ ಕರ್ಬುರಾನ್ವಯ
ದೇಳಿಗೆಗೆ ನೀನೊಂದು ಮಾತನು
ಕೇಳು ಬಿಡು ಸೀತೆಯನು ಕೊಡಿಸಾದಾಶರಥಿಗಿನ್ನು[17]

ತೊರವೇ ರಾಮಾಯಣ :

ಆಳದಿರೆನ್ನಯ ಕಂದ ಜೋ ಮ
ಕ್ಕಳ ಮಹಾ ಮಾಣಿಕವೆ ಜೋ ಮೂ
ಗಳಿದವಳ ಕಡು ಮುದ್ದೆ ಸಿತಗರ ಶಿಶುವೆ ಜೋಯೆಂದ[18]

ಯಕ್ಷಗಾನ ಕಾಲನೇಮಿ ಕಾಳಗ :

ಆಳದಿರೆನ್ನಯ ಕಂದ ದುಶ್ಶೀಲ ಜೋ
ಕಳ್ಳರ ಕುಲಶಿರೋಮಣಿಯೆ ಜೋ...[19]

ಹೀಗೆ ಅನೇಕ ರೀತಿಯಲ್ಲಿ ಷಟ್ಪದಿಗಳು ಬಳಕೆಯಾಗಿವೆ. ಇಲ್ಲಿ ಮುಖ್ಯವಾಗುವುದು ಅವುಗಳ ಭಾವ ಸ್ಫುರಣಕ್ಕೆ, ಆ ಸಂದರ್ಭದಲ್ಲಿ ಈ ಷಟ್ಪದಿಗಳು ಎಷ್ಟು ಉಚಿತವಾಗುತ್ತವೆ ಎಂಬುದು. ಇದನ್ನು ಕೇವಲ ಕೃತಿ ಚೌರ್ಯವೆಂದು ಗಮನಿಸದೆ ಪ್ರಸಂಗಕಾರರು ಅವುಗಳಿಗೆ ಕೊಟ್ಟ ಮಹತ್ವವನ್ನು ಮತ್ತು ಅದರ ಔಚಿತ್ಯ ಜ್ಞಾನವನ್ನು ಗಮನಿಸಬೇಕಾಗುತ್ತದೆ.

ಕನ್ನಡ ಕಾವ್ಯಗಳು ಮತ್ತು ಯಕ್ಷಗಾನ ಪ್ರಸಂಗ ಸಾಹಿತ್ಯಗಳ ಸಂಬಂಧ ಅಚಲವಾದದ್ದು, ಪ್ರೌಢ ಸಾಹಿತ್ಯದ ಸಾರವನ್ನು ಹೀರಿ ಇದು ಬೆಳೆದು ನಿಂತ ಬಗೆ

ಮೆಚ್ಚಬೇಕಾಗುತ್ತದೆ. ಅದರ ನೆರಳಲ್ಲಿದ್ದರೂ ಗಟ್ಟಿಯಾಗಿ ಬೇರೂರಿ ಜನಸಾಮಾನ್ಯರಿಗೆ ಅಗತ್ಯವಾದ ಜ್ಞಾನವನ್ನು ನೀಡಿದುದಲ್ಲದೆ ಯಕ್ಷಗಾನ ಕಲೆಯು ಜೀವಂತ ಉಳಿಯಲು ಕಾರಣವಾಯಿತು. ಒಂದು ಜಾನಪದ ಸಾಹಿತ್ಯ ಪ್ರಕಾರವು ಪ್ರೌಢಸಾಹಿತ್ಯದೊಂದಿಗೆ ಹೆಗಲೆಣೆಯಾಗದಿದ್ದರೂ ತಲೆಯೆತ್ತಿ ನಿಲ್ಲುವಂತಹ ಸಾಮರ್ಥ್ಯವನ್ನು ಯಕ್ಷಗಾನ ಕವಿಗಳು ಕೊಟ್ಟಿದ್ದಾರೆ. ಅವರಲ್ಲಿ ಕೆಲವರಂತೂ ಕವಿ ಹೃದಯವುಳ್ಳವರಾಗಿದ್ದು ಅವಕಾಶ ಸಿಕ್ಕಿದ್ದರೆ ಪ್ರೌಢಕಾವ್ಯಗಳನ್ನು ರಚಿಸುತ್ತಿದ್ದರು ಎಂಬುದರಲ್ಲಿ ಸಂದೇಹವಿಲ್ಲ. ಒಂದು ಗಮನಿಸಬೇಕಾದ ಮಹತ್ವದ ಅಂಶವೆಂದರೆ ಯಕ್ಷಗಾನ ಪ್ರಸಂಗ ಸಾಹಿತ್ಯ ಮುದ್ದಣನಂತಹ ಕವಿಯನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ಕೊಟ್ಟಿದೆ.

ಅಡಿಟಿಪ್ಪಣಿಗಳು :

1. ಕುಮಾರ ವಾಲ್ಮೀಕಿ–ಒಂದು ಅಧ್ಯಯನ – ಡಾ. ಹೊಸಬೆಟ್ಟು ಸೀತಾರಾಮಾಚಾರ್, ಪ್ರ. ಮೈಸೂರು ವಿಶ್ವವಿದ್ಯಾಲಯ, ಮೈಸೂರು.
2. ಹರಿಶ್ಚಂದ್ರ ಕಾವ್ಯ ಸಂಗ್ರಹ – ಪುಟ 91
3. ಅತಿಕಾಯ ಕಾಳಗ – ಪುಟ 14.
4. ಗದುಗು ಭಾರತ – ವಿರಾಟಪರ್ವ – ಮೂರನೇ ಸಂಧಿ, ಪದ್ಯ 60, ಪುಟ 260.
5. ವಾಲಿಸುಗ್ರೀವ ಕಾಳಗ – ಪುಟ 21
6. ಪುರಂದರ ದಾಸರ ಕೀರ್ತನೆಗಳು – ಪ್ರ. ಸುಬೋಧ ಪ್ರಕಟಣಾಲಯ ಪುಟ 36
7. ಕುಶಲವರ ಕಾಳಗ – ಪುಟ 404
8. ಜೈಮಿನಿ ಭಾರತ – ರಾಮಾಶ್ವಮೇಧ
9. ಕುಶಲವರ ಕಾಳಗ – ಪುಟ 395
10. ಜೈಮಿನಿ ಭಾರತ – ಸಂ. 19 ಪದ್ಯ 17
11. ಕುಶಲವರ ಕಾಳಗ – ಪುಟ 394
12. ಜೈಮಿನಿ ಭಾರತ – ರಾಮಾಶ್ವಮೇಧ
13. ಕುಶಲವರ ಕಾಳಗ – ಪುಟ 410.
14. ತೊರವೇ ರಾಮಾಯಣ – ಕಾಂಡ 6, ಸಂಧಿ 12, ಪದ್ಯ 22,
15. ಯಕ್ಷಗಾನ ನಾಗಾಸ್ತ್ರ ಕುಂಭಕರ್ಣ ಕಾಳಗ – ಪುಟ 5.
16. ತೊರವೇ ರಾಮಾಯಣ – ಕಾಂಡ 6, ಸಂಧಿ 49, ಪದ್ಯ 10.
17. ಯಕ್ಷಗಾನ ರಾವಣವಧೆ – ಸುಬ್ರಾಯ ಪುಟ 7
18. ತೊರವೇ ರಾಮಾಯಣ – ಕಾಂಡ 6, ಸಂಧಿ 22, ಪದ್ಯ 11
19. ಕಾಲನೇಮಿ ಕಾಳಗ – ಪುಟ 20

* * * * *

ಪ್ರಮುಖ ಪ್ರಸಂಗಕಾರರು

ಪಾರ್ತಿಸುಬ್ಬ :

ವಿದ್ವಾಂಸರ ಗಮನದಿಂದ ದೂರ ಸರಿದಿದ್ದ ಯಕ್ಷಗಾನ ಸಾಹಿತ್ಯಕ್ಕೆ ಪಾರ್ತಿಸುಬ್ಬನ ಸಮಸ್ಯೆಯು ಆಸಕ್ತಿಯನ್ನು ಉಂಟು ಮಾಡಿತು. ಮುಳಿಯ, ಕಾರಂತ, ಪೈ, ಕೃಷ್ಣಭಟ್ಟ ಮುಂತಾದ ಹಿರಿಯರ ವಾದವಿವಾದಗಳಿಂದ ಈ ಒಂದು ಸಮಸ್ಯೆಗೆ ಕಳೆಯೇರಿತು. ಇದು ಎಲ್ಲಿಯವರೆಗೆ ಹೋಯಿತೆಂದರೆ ಯಕ್ಷಗಾನ ಪ್ರಸಂಗಗಳ ವಿಚಾರ ಎತ್ತಿದೊಡನೆ ಓ ಪಾರ್ತಿಸುಬ್ಬನ ವಿಚಾರವೇ ಎನ್ನುವಷ್ಟರ ಮಟ್ಟಿಗೆ ಬೆಳೆಯಿತು. 1945ರಲ್ಲಿ ಮುಳಿಯರ 'ಪಾರ್ತಿಸುಬ್ಬ' ರಚಿತವಾಗಿದ್ದು ಹಲಕೆಲವು ಲೇಖನಗಳು ಬಂದಿದ್ದವು. 1957 ರಲ್ಲಿ ಬಂದ ಕಾರಂತರ "ಯಕ್ಷಗಾನ ಬಯಲಾಟ" ಈ ಸಮಸ್ಯೆಗೆ ಇನ್ನಷ್ಟು ಬಿಸಿಯನ್ನುಂಟು ಮಾಡಿತು. ಈ ಹಿರಿಯರ ವಾದವಿವಾದಗಳನ್ನು ಸಮಗ್ರವಾಗಿ ಅಲ್ಲವಾದರೂ ಸಂಕ್ಷಿಪ್ತವಾಗಿ ಅರಿತುಕೊಳ್ಳುವುದು ಉತ್ತಮ.

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲೇ ಉತ್ಕೃಷ್ಟ ಸಾಹಿತ್ಯದಿಂದ ಕೂಡಿರುವ ರಾಮಾಯಣ ಪ್ರಸಂಗಗಳೆಂದರೆ ಪುತ್ರಕಾಮೇಷ್ಟಿ, ಪಟ್ಟಾಭಿಷೇಕ, ಪಂಚವಟಿ ವಾಲಿ ಸಂಹಾರ, ಚೂಡಾಮಣಿ, ಸೇತು ಬಂಧನ, ಅಂಗದ ಸಂಧಾನ, ಕುಂಭಕರ್ಣ ಕಾಳಗ, ಹಾಗೂ ಕುಶಲವರ ಕಾಳಗಗಗಳು. ಇವಲ್ಲದೆ, ಮಹಾಭಾರತದ ಐರಾವತ ಮತ್ತು ಕೃಷ್ಣ ಚರಿತ್ರೆಗಳೂ ಕೂಡ ಉತ್ತಮವಾಗಿದ್ದು ಏಕ ಕವಿ ಕೃತದಂತಿವೆ. ಇವುಗಳಲ್ಲಿ ಪಟ್ಟಾಭಿಷೇಕ ಪ್ರಸಂಗದ ಪ್ರಾರಂಭದಲ್ಲಿ ಸ್ತುತಿರೂಪವಾಗಿ ಈ ಪದ್ಯ ಬಂದಿದೆ.

> ಧಾತ್ರೀ ಗುತ್ತಮ ಕಣ್ವನಾಮ ಪುರದೀ ನಿಂತಿರ್ದ ಶ್ರೀಕೃಷ್ಣನಾ
> ತತ್ಪಾದಾಂಬುಜ ದಿವ್ಯನಾಮವರದಿಂದೀ ಪಾರ್ವತೀ ನಂದನಂ
> ಬತ್ತೀಸಾಕೃತಿ ತಾಳರಾಗವಿಧದಿಂ ರಾಮಾಯಣಂ ಪೇಳ್ವುದಾ
> ಭಕ್ತಿಧ್ಯಾನದಿ ಕೇಳ್ದು ಪುಣ್ಯಕಥೆಯಂ ಸಂತೋಷಮಂ ಮಾಳ್ಪುದು[1]

ಈ ಅಂಶ ಒಂದನ್ನು ಬಿಟ್ಟರೆ ಕವಿ ಎಲ್ಲೂ ತನ್ನ ದೇಶ, ಕಾಲದ ವಿಚಾರವನ್ನು ಹೇಳಿಕೊಂಡಿಲ್ಲ. ಇದರಿಂದಾಗಿ ಸಮಸ್ಯೆ ಪ್ರಾರಂಭವಾಯಿತು.

ಮೊದಲಿಗೆ ಪಾರ್ತಿಸುಬ್ಬನ ಕುರಿತು ಸಮಸ್ತ ವಿಮರ್ಶೆಯೊಂದಿಗೆ ಗ್ರಂಥ ರೂಪದಲ್ಲಿ ಪ್ರಕಟವಾದುದು ಹಿರಿಯರಾದ ಮುಳಿಯ ತಿಮ್ಮಪ್ಪಯ್ಯನವರಿಂದ. ಅವರ 'ಪಾರ್ತಿಸುಬ್ಬ' ಕವಿಯ ದೇಶ, ಕಾಲ, ಕೃತಿ ವಿಮರ್ಶೆಗಳಿಂದ ಕೂಡಿದೆ. ಮುಳಿಯರು ಆತನ ಸ್ಥಳವನ್ನು

ಕಾಸರಗೋಡಿನಿಂದ 8–10 ಮೈಲಿಗಳ ದೂರದ ಬಡಗು ದಿಕ್ಕಿನಲ್ಲಿ ನೆಲೆಗೊಂಡಿರುವ 'ಕುಂಬಳೆ' ಎಂದು ನಿರ್ಧರಿಸುತ್ತಾರೆ.[2] ಇದಕ್ಕೆ ಅವರು ಕೊಡುವ ಸಮರ್ಥನೆ :

(1) ಕಣ್ವಪುರ ಅಥವಾ ಕಣ್ವಾರ ಎಂದೇ ಕುಂಬಳೆಯನ್ನು ಕರೆಯುತ್ತಾರೆ.

(2) ಪುರಾತನವಾದ ಗೋಪಾಲಕೃಷ್ಣ ದೇವಸ್ಥಾನವಿದೆ.

(3) ಕುಂಬಳೆಯ ಹೆಸರು ಚಾರಿತ್ರಿಕ ಕಾವ್ಯಗಳಲ್ಲಿ ಬಂದಿವೆ.

(4) ರಾಮಾಯಣ ಪ್ರಸಂಗದ ಅಂತ್ಯದ ಮಂಗಳ ಪದ್ಯಗಳಲ್ಲಿಯೂ ಪುರಪತಿ ಎಂಬ ಮುದ್ರೆ ತೋರುತ್ತಿದೆ.

ಇವುಗಳಿಂದ ಆತ ಕುಂಬಳೆಯ ಗೋಪಾಲಕೃಷ್ಣ ದೇವರ ಭಕ್ತ ಎಂದಿದ್ದಾರೆ. ಮುಳಿಯರು ಹೇಳಿದ ಆತನ ಮತ ವಿಚಾರದಲ್ಲಿ ಅಂತಹ ವಿರೋಧದ ಅಂಶವೇನೂ ಹೊರಟಿಲ್ಲ. ಅವನು ಸ್ಥಾನಿಕ ಬ್ರಾಹ್ಮಣ ವರ್ಗದವನೆಂದು ಸ್ಥಿರವಾಗಿದೆ.

ಆತನ ಹೆಸರಿನ ಬಗ್ಗೆ ಮುಳಿಯರು ಈ ರೀತಿಯಲ್ಲಿ ನಿರ್ಧಾರಕ್ಕೆ ಬಂದಿದ್ದಾರೆ. ಆತನಿಗೆ ಬಾಲ್ಯದಿಂದಲೂ ಪಾರ್ವತಿಯ ಮಗ ಎನ್ನುವ ಅರ್ಥದಲ್ಲಿ ಪಾರ್ತಿಸುಬ್ಬ ಬಂದಿರಬೇಕು. ಆತನ ತಂದೆ ಬೇಗ ತೀರಿಕೊಂಡಿದ್ದು ತಾಯಿಯ ಹೆಸರೇ ಮುಂದೆ ಸೇರಿಸಿಕೊಂಡು ಜನ ಕರೆಯುತ್ತಿದ್ದಿರಬೇಕು. ಆತನೂ ಕೂಡ 'ಪಾರ್ವತೀ ನಂದನಂ' ಎಂಬುದನ್ನು ಮೊದಲ ಪುಟದಲ್ಲಿ ತಂದು ತಾಯಿಯನ್ನು ಹೆಸರಿಸಿದ್ದಾನೆ. ಆತನ ಕಾಲದ ವಿಚಾರದಲ್ಲಿ ಮುಳಿಯರು ಬೇಕಲದ ಒಂದು ಕೋರ್ಟು ದಾಖಲೆಯನ್ನು ಪರಾಂಬರಿಸಲು ಕೊಟ್ಟಿದ್ದಾರೆ. ಅದರಲ್ಲಿ ಪಾಟಾಳೀ ಸುಬ್ಬರಾಯನ ಮಗ ಪಾಟಾಳೀ ಕೃಷ್ಣಯ್ಯ ಇದ್ದನೆಂದೂ ಆತನ ತಂದೆಯೇ ಪಾರ್ತಿಸುಬ್ಬನೆಂದೂ, ಅನೇಕ ಜನರ ಜನ ಬಳಕೆಯ ಮಾತಿನಿಂದ ನಿರ್ಧಾರಕ್ಕೆ ಬಂದಿದ್ದಾರೆ. ಕೊನೆಯಲ್ಲಿ 'ಸುಬ್ಬನು 18–19ನೇ ಶತಮಾನಗಳ ಕವಿ' ಎಂದು ನಿರ್ಧರಿಸಿದ್ದಾರೆ.[3] ಹೀಗೆ ಪ್ರಾರಂಭದಲ್ಲಿ ಮುಳಿಯರು ಯಕ್ಷಗಾನಕ್ಕೆ ನಾಡೋಜನೆಂದು ಪಾರ್ತಿಸುಬ್ಬನನ್ನು ಪರಿಚಯಿಸಿ ಕೊಟ್ಟಿದ್ದಾರೆ. ಇದಕ್ಕೆ ಪೂರಕವಾಗಿಯೆ ಗೋವಿಂದ ಪೈಗಳು ಹಲವು ಲೇಖನಗಳನ್ನು ಬರೆದರು. ಕೇವಲ ಕರ್ಣಾಕರ್ಣಿಕೆಯಾಗಿ ಒದಗಿದ ಅಂಶಗಳನ್ನು ಇಟ್ಟುಕೊಂಡು ನಿರ್ಧಾರಕ್ಕೆ ಬರುವುದು ಸರಿಹೊಂದುವುದಿಲ್ಲ. ಆದರೆ ಅವರ ಹಲವು ಊಹೆಗಳು ಮುಂದಿನವರ ಸಂಶೋಧನೆಯಿಂದ ಇತ್ಯಾತ್ಮಕವಾಗಿರುವುದನ್ನು ಗಮನಿಸಿದಾಗ ಮುಳಿಯರ ಆ ಪ್ರಾರಂಭಿಕ ಮಾತುಗಳಿಗೆ ಬೆಲೆ ಬರುತ್ತದೆ. ಆ ಊಹೆಗಳೆಂದರೆ ಆತ ಕುಂಬಳೆಯ ಮೇಳದಲ್ಲಿದ್ದ ವಿಚಾರ. ರಾಮಾಯಣ ಪ್ರಸಂಗಗಳ ಸೃಷ್ಟಿಕರ್ತ ಎಂಬ ವಿಚಾರಗಳು ಮುಂದಿನವರ ಸಂಶೋಧನೆಗೆ ವಸ್ತುವಾಯಿತು.

ಕವಿ ಚರಿತ್ರೆ ಕಾರರಾದ ರಾ. ನರಸಿಂಹಾಚಾರ್ಯರು ಈತನ ಬಗ್ಗೆ ಪ್ರಸ್ತಾಪಿಸುತ್ತಾ ಈತ ಶಿವ ಬ್ರಾಹ್ಮಣನಾಗಿದ್ದು ಕುಂಬಳೆಯ ಸಮೀಪದಲ್ಲಿ ಕ್ರಿ.ಶ. 1862ರ ಹಾಗೆ ವಾಸಿಸುತ್ತಿದ್ದನೆಂದು ತಮ್ಮ ಕವಿಚರಿತ್ರೆಯ ಮೂರನೇ ಸಂಪುಟದಲ್ಲಿ ತಿಳಿಸಿದ್ದಾರೆ. ಪಾರ್ತಿಸುಬ್ಬನನ್ನು ಯಕ್ಷಗಾನ ವಾಲ್ಮೀಕಿ ಎಂದ ಕವಿಭೂಷಣ ವೆಂಕಪ್ಪ ಶೆಟ್ಟರು

ಆತನೇ ದಕ್ಷಿಣ ಕನ್ನಡದಲ್ಲಿ ಕಥಕಳ್ಳಿಯ ರೀತಿಯ ಯಕ್ಷಗಾನವನ್ನು ಬಳಕೆಗೆ ತಂದ ಎಂದಿದ್ದಾರೆ. ಹೀಗೆ ರೂಪುಗೊಂಡ ಒಂದು ಬಗೆಯ ನಿರ್ಧಾರಾತ್ಮಕ ವಾತಾವರಣ ನಿರ್ಮಾಣವಾಗಿತ್ತು.

ಇದನ್ನು ಮೊದಲು ವಿರೋಧಿಸಿ ಈ ಸಮಸ್ಯೆಗೆ ಒಂದು ಹೊಸ ಆಯಾಮವನ್ನು ಒದಗಿಸಿದವರು ಡಾ. ಶಿವರಾಮಕಾರಂತರು. ತಮ್ಮ ಯಕ್ಷಗಾನ ಬಯಲಾಟದ ಮೊದಲ ಮುದ್ರಣದಲ್ಲಿ ಈ ಪ್ರಸಂಗಗಳ ಸೃಷ್ಟಿ ಕರ್ತ ಅಜಪುರದ ಸುಬ್ಬನೇ ವಿನಾ ಮೇಲಿನವರು ಹೇಳುವ ಪಾರ್ತಿಸುಬ್ಬನಲ್ಲ ಎಂದರು. ಕಾಲ ವಿಚಾರದಲ್ಲಿ ಮೇಲಿನವರ ಎಲ್ಲಾ ಊಹೆಗಳನ್ನು ತಳ್ಳಿ ಹಾಕಿ ಇನ್ನಷ್ಟು ಹಿಂದಕ್ಕೆ ಕೊಂಡೊಯ್ದರು. ಈ ರಾಮಾಯಣ ಪ್ರಸಂಗಗಳ ಕವಿ ಮತ್ತು ಅಜಪುರದ ಸುಬ್ಬನು ಏಕವ್ಯಕ್ತಿ ಎಂದು ಮೊದಲ ಮುದ್ರಣದಲ್ಲಿ ದೊರೆತ ಸಾಮಗ್ರಿಯಿಂದ ವಾದಿಸಿದರೂ ಎರಡನೇ ಮುದ್ರಣದಲ್ಲಿ ಇವರಿಬ್ಬರೂ ಭಿನ್ನರೆಂಬ ಅಂಶವನ್ನು ತೋರಿಸಿಕೊಟ್ಟಿದ್ದಾರೆ. ಇದಕ್ಕೆ ಕಾರಂತರು ಬಳಸಿದ ಸಾಕ್ಷಿ ತಾಡವಾಲೆಗಳ ರಚನೆಯ ಕಾಲ. ಹಳೆಯ ಪ್ರಸಂಗಗಳನ್ನು ಸಂಗ್ರಹಿಸುತ್ತಿರುವಾಗ ಶಿರೂರೂ ಪಣಿಯಪ್ಪಯ್ಯ ನವರಿಂದ ದೊರೆತ ಒಂದೆರಡು ಪ್ರಸಂಗಗಳು 17ನೇ ಶತಮಾನವಾಗಿದ್ದುದು ಶ್ರೀಯುತರಿಗೆ ಅಚ್ಚರಿ ಉಂಟು ಮಾಡಿತು. ಆ ಪ್ರಸಂಗಗಳನ್ನು ಬರೆದವನು ಪಾರ್ತಿಸುಬ್ಬನೆಂದೂ ಆತನ ಕಾಲ 18-19ನೇ ಶತಮಾನದ ನಡುವಣದವನೆಂದೂ ಮುಳಿಯ, ಪೈ ಮುಂತಾದವರು ಹೇಳಿದ್ದರಿಂದ ಇದನ್ನು ವಿರೋಧಿಸಬೇಕಾಯಿತು. ಮೊದಲಿಗೆ ಸುಬ್ಬ ಎಂದಿರುವುದರಿಂದ ಮೈರಾವಣ ಕಾಳಗ ಬರೆದ ಅಜಪುರದ ವೆಂಕಟನ ತಂದೆ ಸುಬ್ಬನೇ ಬರದಿರಬೇಕು ಎಂದರು. ಆದರೆ ಇನ್ನಷ್ಟು ಹಳೇ ಹಸ್ತಪ್ರತಿಗಳು ಸಿಕ್ಕಿದಾಗ ಆತನಾಗಿರದೇ ಬೇರೊಬ್ಬ ಕವಿ ಬರೆದಿರಬೇಕು ಎಂಬ ನಿಲವಿಗೆ ಬಂದರು. ಇದರಿಂದಾಗಿ ಈ ರಾಮಾಯಣ ಪ್ರಸಂಗಗಳ ಕವಿ 17ನೇ ಶತಮಾನದ ಆರಂಭದಲ್ಲಿದ್ದ ಒಬ್ಬ ಅಜ್ಞಾತ ಕವಿ ಎಂದಿದ್ದಾರೆ.[4]

ಶ್ರೀ ಕಾರಂತರು ಈ ಅಜ್ಞಾತ ಕವಿಯ ದೇಶ ವಿಚಾರವಾಗಿ ಚರ್ಚಿಸುತ್ತಾ ಮೊದಲಿನವರ ವಾದಗಳನ್ನು ಖಂಡಿಸಿದರು – ಕಣ್ವಪುರ ಎಂಬುದು ಆಗುಂಬೆಯ ಸಮೀಪದಲ್ಲಿರಬೇಕು. ಅದಲ್ಲದೆ ಕವಿ ಸ್ತುತಿಸಿದ ಉಳಿದ ದೇವರಾದ ಕೊಲ್ಲೂರಿನ ಮೂಕಾಂಬಿಕೆ ಅಜಪುರದ ಈಶ್ವರ ಮುಂತಾದ ದೇವಸ್ಥಾನಗಳೆಲ್ಲಾ ಆಗುಂಬೆಯ ಸಮೀಪದಲ್ಲೇ ಇರುವುದರಿಂದ ಮತ್ತು ಯಕ್ಷಗಾನ ಮೇಳಗಳಿಗೆ ಆಗುಂಬೆಯ ಗೋಪಾಲಕೃಷ್ಣ ದೇವಸ್ಥಾನವು ಮುಖ್ಯಸ್ಥಳವಾದುದರಿಂದ ಈ ಭಾಗದಲ್ಲೇ ವಾಸಿಸುತ್ತಿದ್ದ ಕವಿಯಾಗಿರಬೇಕು ಎಂದಿದ್ದಾರೆ. ಅದುವರೆಗೆ ಪ್ರಚಲಿತವಿದ್ದ ಕೋರ್ಟು ದಾಖಲೆ ವಿಚಾರದ ಸತ್ಯಾಸತ್ಯತೆಯನ್ನು ಮತ್ತು ಆತನು ಬರೆದ ಎಂದು ವೆಂಕಪ್ಪ ಶೆಟ್ಟರು ತಿಳಿಸುವ ಪದ್ಯದ ಯಥಾರ್ಥತೆಯನ್ನು ಪ್ರಶ್ನಿಸಿದ್ದಾರೆ. ಕೋರ್ಟು ದಾಖಲೆಯು 19ನೇ ಶತಮಾನಕ್ಕೆ ಸೇರಿದ್ದು ಕವಿಯು 19ನೇ ಶತಮಾನದವನೆಂದು ನಿರ್ಧಾರವಾಗುತ್ತದೆ. ಅಲ್ಲದೆ ಪಾರ್ತಿಸುಬ್ಬನದೆಂದು ಹೇಳುವ ಒಂದು ಚರಮಗೀತೆಯಲ್ಲಿ ಬಳಸಲಾದ **'ಸಾಹಿತಿ'** ಎಂಬ ಪದ ಆ ಪದ್ಯದ ಕಾಲವನ್ನು ಈಚಿನ ಕಾಲಕ್ಕೆ ತರುತ್ತದೆ. ತಾಡವಾಲೆಗಳ ಆಧಾರದಿಂದ ರಾಮಾಯಣ ಪ್ರಸಂಗಗಳ ಕಾಲ 16ನೇ ಶತಮಾನ. ಆದುದರಿಂದ ಇವರೆಲ್ಲರೂ ಹೇಳುವ ಪಾರ್ತಿಸುಬ್ಬ ರಾಮಾಯಣ ಪ್ರಸಂಗಗಳ ಸೃಷ್ಟಿಕರ್ತನಲ್ಲ ಎಂದು

ಸಾರಿದರು. ಇಲ್ಲಿ ಕಾರಂತರು ಸತ್ಯವನ್ನು ಮುಟ್ಟದೇ ಇದ್ದರೂ ಸತ್ಯದ ಕಡೆಗೆ ದಾರಿ ತೋರಿಸಿದ್ದಾರೆ.

ಕುಕ್ಕಿಲ ಕೃಷ್ಣಭಟ್ಟರು ರಾಮಾಯಣ ಪ್ರಸಂಗಗಳ ಕವಿ ಕುಂಬಳೆಯ ಪಾರ್ತಿಸುಬ್ಬನೇ ಎಂದು ನಿರ್ಧರಿಸುವಲ್ಲಿ ಕೆಲವು ಹೊಸ ಅಂಶಗಳನ್ನು ಹೇಳಿದ್ದಾರೆ. ಇದಕ್ಕೆ ಸಾಕ್ಷಿಯಾಗಿ

(1) ಮದವೂರು ವಿಘ್ನೇಶ್ವರ ದೇವಸ್ಥಾನದ ಒಂದು ಜಲದ್ರೋಣಿಯಲ್ಲಿ 'ಪಾರ್ತಿಸುಬ್ಬನು ಕೊಟ್ಟ ಕಾಣಿಕೆ' ಎಂದು ಕೊರೆದ ಬರಹವನ್ನು ಸಮರ್ಥನೆಗಾಗಿ ಕೊಟ್ಟಿದ್ದಾರೆ.

(2) ಪಾರ್ತಿಸುಬ್ಬನು ಸಭಾಲಕ್ಷಣವನ್ನು ಬರೆದಿರುವನು ಎನ್ನುವುದಕ್ಕೆ ಅಲ್ಲಿರುವ ರಾಮನ ಸ್ತುತಿ ಪದ್ಯದಲ್ಲಿ 'ವರದ ರಘುಕುಲ ಕಾಲವಾರಣ ಧ್ವಂಸಿ ವರವಂಚಿ ಬಾಲಕ ವೀರ ಕೇರಳ ವಿಭುಸ್ತುತ' ಎಂಬ ಉಕ್ತಿ ಬಂದಿದ್ದು ಪಾರ್ತಿಸುಬ್ಬನಿಗೆ ಕೇರಳದೊಂದಿಗಿರುವ ಸಂಬಂಧವನ್ನು ಸೂಚಿಸುತ್ತದೆ ಎಂದಿದ್ದಾರೆ.

(3) ರಾಮಾಯಣ ಪ್ರಸಂಗಗಳಂತೂ ಕಥಕ್ಕಳಿಯ ಮೂಲ ಪ್ರವೃತ್ತಕನಾದ ಬಾಲಕೇರಳ ವರ್ಮನೆಂಬ ಕೊಟ್ಟಾರಕ ರಾಜನಿಂದ ರಚಿಸಲ್ಪಟ್ಟ ಮಲೆಯಾಳ ರಾಮಾಯಣ ಕೃತಿಗಳನ್ನು ಅನುಸರಿಸುವುದನ್ನು ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಅವರು ಕನ್ನಡಕ್ಕೆ ಅಪೂರ್ವವಾದ ಪದ್ಯ ರೂಪ ಹಾಗೂ ವೃತ್ತಗಳು ಮಲೆಯಾಳಂ ನಿಂದಲೇ ಪ್ರಸಂಗ ಸಾಹಿತ್ಯಕ್ಕೆ ಬಂತು ಎಂಬುದಕ್ಕೆ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಇಲ್ಲಿ ಗಮನಿಸಬಹುದು.[5]

ಕಥಕ್ಕಳಿ :

ನೃಪತೇ ಮಹಾಭಾಗ ದಶರಥ ಸುಮತೇ
ಪುತ್ರಕಾಮೇಷ್ಟಿ ಚೆಯ್ದು ಕೊಯ್ದು ಕೊಂಡಿದಾನೀಂ
ಅತ್ರ ನಿನ್ಮನೋರಥಂ ಸಾಧಿಕುಮಲ್ಲೊ (ಪುಟ 103)

ಯಕ್ಷಗಾನ ಪುತ್ರಕಾಮೇಷ್ಟಿ :

ನೃಪತೇ ಮಹಾರಾಜ ದಶರಥ ಸುಮತೇ
ಪುತ್ರಕಾಮೇಷ್ಟಿಯು ಮಾಡಿದ್ದರಿಂದಲೆ
ಅತ್ತ ನಿನ್ನ ಮನೋರಥ ಸಿದ್ಧಿಯಾಯ್ತು (ಪುಟ 16)

ಕಥಕ್ಕಳಿ – ಖರವಧಂ :

ರಾತ್ರಿಂಚರನಾಥನಾಯೋರುತ್ತನುಂಡವನ್ನು ತನ್ನೆ
ಹಸ್ತಂಗಳಿರುಪತ್ತುಂಡು ಪೋಲ್ (ಪುಟ 135)

ಯಕ್ಷಗಾನ ಪಂಚವಟಿ :

ರಾತ್ರಿ ಚರನಾಥನಾಗಿ ಮತ್ತೊಬ್ಬ ಖಳನಿರುವಂತೆ....

ಹಸ್ತಂಗಳಿಪ್ಪತ್ತು ಉಂಟಂತೆ.... (ಪುಟ 115)

(4) ಶೂರ್ಪನಖಿಯ ಮೊಲೆ ಕೊಯ್ದ ವಿಚಾರ ಪ್ರಸಂಗಕಾರನಿಗೆ ಬಂದಿರುವುದು ಕಥಕ್ಕಳಿ ರಾಮಾಯಣದಿಂದಲೇ.

(5) ಯಕ್ಷಗಾನ ಕವಿಯು ಕಥಕ್ಕಳಿ ರಾಮಾಯಣದಂತೆ ರಾವಣ ವಧೆಯನ್ನು ತಿಳಿಸದೇ ಕುಂಭಕರ್ಣಾದಿ ಕಾಳಗಕ್ಕೆ ಪ್ರಸಂಗವನ್ನು ನಿಲ್ಲಿಸುತ್ತಾನೆ. ಇದೂ ಕೂಡ ಮಲೆಯಾಳಂನ ಅನುಸರಣೆಯಾಗಿದೆ ಎಂದಿದ್ದಾರೆ. ಇನ್ನೂ ಈ ಬಗೆಯ ಅನೇಕ ಆಂತರಿಕ ಉದಾಹರಣೆಗಳನ್ನು ಕೊಟ್ಟು ಮಲೆಯಾಳಂ ಕಥಕ್ಕಳಿ ರಾಮಾಯಣ ಹಾಗೂ ಕನ್ನಡ ಯಕ್ಷಗಾನ ರಾಮಾಯಣ ಪ್ರಸಂಗಗಳಿಗೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸಿದ್ದಾರೆ. ಇವುಗಳ ಜೊತೆಯಲ್ಲಿ ಸುಬ್ಬನಿಗೆ ಕೇರಳದ ಸಂಬಂಧವಿತ್ತು ಎನ್ನುವುದನ್ನು ಹೇಳಿದ್ದಾರೆ. ಅಲ್ಲದೆ ಪರಸ್ಪರ ಈ ಪ್ರಸಂಗಗಳಲ್ಲೇ ಸಂಬಂಧವಿರುವುದನ್ನು ಪದ್ಯಗಳ ಉದಾಹರಣೆಯೊಂದಿಗೆ ತಿಳಿಸಿ, ಈ ಪ್ರಸಂಗಗಳು ಏಕ ಕವಿಕೃತವೆಂದು ಸಾರಿದ್ದಾರೆ. ಕಾಲದ ವಿಚಾರದಲ್ಲಿ ಈತ ಮುಳಿಯ, ಪೈ ತಿಳಿಸುವ ಪಾರ್ತಿಸುಬ್ಬನಲ್ಲ. ಈತ ಅವನಿಗಿಂತ ಮೊದಲಿದ್ದವನೆಂದು ಹೇಳಿ 16ನೇ ಶತಮಾನಕ್ಕೆ ಕೊಂಡೊಯ್ಯುತ್ತಾರೆ. ಕಾಲದ ವಿಚಾರದಲ್ಲಿ ಕಾರಂತರು ಕೊಡುವ ಗಡುವಿಗೆ ಇದು ಹತ್ತರವಾಗುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಎಂಟು ರಾಮಾಯಣ ಪ್ರಸಂಗಗಳ ರಚನೆ ಮಾಡಿದವನಾರು ಎಂಬುದನ್ನು ನಿರ್ಧರಿಸಬೇಕಾಗಿದೆ. ಕಾರಂತರೇನೋ ಕುಕ್ಕಿಲರು ಕೊಡುವ ಅಂಶಗಳೆಲ್ಲಾ ಯಕ್ಷಗಾನದಿಂದಲೇ ಮಲೆಯಾಳಂ ರಾಮನಾಟ್ಟಂಗೆ ಹೋಯಿತು ಎಂದರೂ ಒಪ್ಪುವುದು ಕಷ್ಟವಾಗುತ್ತದೆ. ಯಕ್ಷಗಾನ ಪ್ರಸಂಗಗಳ ಮೇಲೆ ಕಥಕ್ಕಳಿ ರಾಮಾಯಣದ ಪ್ರಭಾವ ಇದೆ ಎನ್ನುವುದನ್ನು ತಳ್ಳಿಹಾಕುವಂತಿಲ್ಲ. ಹಾಗೆಂದು ಮುಳಿಯರೇ ಮುಂತಾದವರು ವಾದ ಮಾಡಿದ ಸುಬ್ಬನು 18ನೇ ಶತಮಾನದಲ್ಲಿದ್ದ ಎಂಬುವುದನ್ನು ಒಪ್ಪುವಂತಿಲ್ಲ. ಕೋರ್ಟು ದಾಖಲೆ ಹಾಗೂ ಮೂಡುಗಣಪತಿ ವಂತಿಗೆ ವಿಚಾರ ಇವುಗಳೆಲ್ಲಾ ಈ ಕವಿಗೆ ಸಂಬಂಧಿಸಿರದೆ ಮುಂದೆ ಬಂದ ಯಾವನೋ ಪಾರ್ತಿಸುಬ್ಬ ಎಂಬ ಹೆಸರಿನ ಬೇರೊಬ್ಬನ ಕುರಿತಾಗಿರಬೇಕು. ಇದುವರೆಗೂ ತಿಳಿದ ಅಂಶಗಳಿಂದ ಹೆಚ್ಚಿನ ವಿವರ ತಿಳಿಯಲಾಗದ್ದರಿಂದ ಸದ್ಯಕ್ಕೆ 16ನೇ ಶತಮಾನದಲ್ಲಿದ್ದ ಪಾರ್ತಿಸುಬ್ಬನೆಂಬುವನಿಂದ ಈ ಪ್ರಸಂಗಗಳು ರಚನೆಗೊಂಡಿವೆ ಎಂಬ ಕುಕ್ಕಿಲರ ವಾದದ ಕೆಲವು ಅಂಶಗಳನ್ನು ಸದ್ಯಕ್ಕೆ ಒಪ್ಪಿಕೊಳ್ಳಬಹುದು. ಇಷ್ಟು ಪುರಾವೆಗಳಿದ್ದೂ "ಪಾರ್ತಿಸುಬ್ಬನು 18ನೇ ಶತಮಾನದ ಕೊನೆಯಿಂದ 19ನೇ ಶತಮಾನದ ಮಧ್ಯದವರೆಗೆ ಜೀವಿಸಿದ್ದನೆಂದು ನಂಬಬಹುದಾಗಿದೆ."[6] ಎಂದು ಈಚಿಚೆಗೂ ಆಡುವ ಮಾತುಗಳು ಹುರುಳಿಲ್ಲದ್ದು. ಏಕೆಂದರೆ ಒಬ್ಬ ಕವಿ ಜನಿಸಬೇಕಾದರೆ ಮೊದಲೇ ಹಸ್ತ ಪ್ರತಿ ಬಂದಿರಲು ಸಾಧ್ಯವಿಲ್ಲ. ಅಲ್ಲವೇ? ಇನ್ನೂ ಕೂಡ ಅಭಿಮಾನದಿಂದ ಸತ್ಯಕ್ಕೆ ಮುಖ ತಿರುಗಿಸುವುದು ಆರೋಗ್ಯದ ಲಕ್ಷಣವಲ್ಲ. ಚರ್ಚೆ ಮಾಡಿದೊಡನೆ ಈತ ಯಾರಕಡೆ ಎಂದು ಲೆಕ್ಕ ಹಾಕುವ ಪ್ರವೃತ್ತಿ ಈ ಸಮಸ್ಯೆ ಆರಂಭವಾದಂದಿನಿಂದ ಬಂದದು. ಇದು ಹೀಗೆ ವೈಯಕ್ತಿಕ ಅಂಶಗಳನ್ನು ಒಳಗೊಂಡಿರುವುದು ದುರ್ದೈವದ ಸಂಗತಿ ಕ್ರಿ.ಶ. 1620ರ

ಸುಮಾರಿಗೆ ಪ್ರಸಂಗಗಳ ಪ್ರತಿ ದೊರೆಯುವುದರಿಂದ ಈ ಕಾಲಕ್ಕಾಗಲೀ ಈ ಕವಿ ಬಾಳಿ ಬದುಕಿದ್ದ ಎಂಬ ತೀರ್ಮಾನಕ್ಕೆ ಬರಬಹುದು. ಕೇರಳ ದೊಂದಿಗಿರುವ ಸಂಬಂಧವಂತೂ ಅವನ ಪ್ರಸಂಗಗಳಿಂದ ಸ್ಪಷ್ಟವಾಗುತ್ತದೆ. ಬಾಹ್ಯ ಆಧಾರಗಳು ದೊರೆಯದೇ ಹೋದಾಗ ಆಂತರಿಕ ಆಧಾರವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಕವಿತಾ ಶಕ್ತಿ :

ಪಾರ್ತಿಸುಬ್ಬನು ಯಕ್ಷಗಾನಕ್ಕೆಲ್ಲಾ ನಾಡೋಜ ಎಂಬ ಮುಳಿಯರ ಮಾತಿನಲ್ಲಿ ಸತ್ಯವಿಲ್ಲದೆ ಇಲ್ಲ. ಕಾವ್ಯ ಪ್ರತಿಭೆ ಅವನ ಎಲ್ಲಾ ಪ್ರಸಂಗಗಳಲ್ಲಿ ಕಾಣಿಸಿಕೊಂಡಿದೆ. ಕವಿ ಹೃದಯವುಳ್ಳ ಆತನು ಸೂಕ್ಷ್ಮಭಾವನೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಸೆರೆಹಿಡಿಯಬಲ್ಲ ಶಕ್ತಿಉಳ್ಳವನಾಗಿದ್ದಾನೆ. ವರ್ಣನೆಗಳಲ್ಲಾಗಲೀ ಸಂಭಾಷಣಾ ಚಾತುರ್ಯದಲ್ಲಾಗಲೀ ಬಂಧ ಸಡಿಲಗೊಳ್ಳದಂತೆ ಅಷ್ಟೇ ಸಹಜ ಸ್ಫೂರ್ತವಾಗುವಂತೆ ಹಾಡಿದ್ದಾನೆ. ಉಂಗುರಸಂಧಿಯ ಒಂದು ಸಂದರ್ಭವನ್ನು ಈ ಮಾತಿಗೆ ಸಾಕ್ಷಿಯಾಗಿ ನೀಡಬಹುದು.

ಸೀತೆಯನ್ನು ಹುಡುಕಿ ಕೊಂಡ ಜಾಂಬವಂತನ ಹಿರಿಯತನದಲ್ಲಿ ಹೊರಟ ಕಪಿತಂಡ ತಮ್ಮ ಕಾರ್ಯದಲ್ಲಿ ವಿಫಲರಾಗಿ 'ಒಂದೇ ಬುದ್ಧಿಯೊಳೆಲ್ಲಾ ಕುಳಿತು ಯೋಚಿಸಿದರು'. ಅಂಗದ 'ಸುಗ್ರೀವನ ಮೂಲಕ ರಾಮನ ಕೈಯಲ್ಲಿ ಕೊಲಿಸಿಕೊಂಬುದಕ್ಕಿಂತ ಇಲ್ಲಿಯೆ ಉಪವಾಸ ತಾಳಿ ಮೆಲ್ಲನೆ ಪ್ರಾಣವ ತ್ಯಜಿಪುದೆ ಲೇಸೆಂದು' ಹೇಳುತ್ತಾನೆ. ಅದನ್ನು ವಿರೋಧಿಸಿದ ಕಪಿಗಳು 'ಕೊಂದರೆ ಕೊಲಲಿ ಕಾಯ್ದರೆ ಕಾಯಲಿ ಆ ಜಟಾಯುವಿನ ರೀತಿ ಆತನ ಪದದಡಿ ಪ್ರಾಣ ಬಿಟ್ಟರೆ ಸ್ವರ್ಗಸೇರಬಹುದು' ಎನ್ನುತ್ತಾರೆ. ಇದನ್ನೆಲ್ಲಾ ಕೇಳಿಸಿಕೊಂಡ ಜಟಾಯುವಿನ ಅಣ್ಣ ಸಂಪಾತಿ–

'ಯಾರಯ್ಯ ನೀವು ಯಾರಯ್ಯಾ
ಯಾರಯ್ಯಾ ಕಪಿಗಳೆ ಎಲ್ಲರೊಟ್ಟಿಗಾಗಿ
ಘೋರಕಾನನದೊಳು ಸುಮ್ಮನೆ ಕುಳಿತಿಪ್ಪುದ್ಯಾರಯ್ಯಾ
ತಮ್ಮನು ಯನಗೆ ಜಟಾಯು ಎಂಬಾತ
ನಿರ್ಮಲದೊಳು ಸತ್ತನೆಂದರೀ ಮಾತಾ
ಒಮ್ಮೆ ಎನ್ನೊಡನೆ ವಿಸ್ತರಿಸಬೇಕಿಲ್ಲಿ....'[7]

ಎನ್ನುತ್ತಾನೆ. ಮುಂದೆ ಆತನೇ ಕಪಿಗಳಿಗೆ ಲಂಕಾದ್ವೀಪದ ಹಾಗೂ ರಾವಣನ ವಿಚಾರ ತಿಳಿಸಿ ಅವರನ್ನು ಹೊತ್ತುಕೊಂಡು ಬಂದು ಸಾಗರದ ತಡಿಯಲ್ಲಿ ಬಿಟ್ಟು ಲಂಕಾದ್ವೀಪವನ್ನು ಬೆರಳ ಸನ್ನೆಯಲ್ಲಿ ತೋರಿಸುತ್ತಾನೆ. ಬೋರ್ಗರೆವ ಶರಧಿಯನ್ನು ನೋಡಿ ಜಾಂಬವಂತ

ಕಂಡಿರೇ ನೀವು ಕಂಡಿರೇ
ಕಂಡಿರೇ ಸಮುದ್ರರಾಜ ಕೆಂಡದಂತುಚ್ಚರಿಸುವುದು ॥ ಕಂಡಿರೇ ॥
ಅಂಬರಕೆ ಹಾರಿ ಮಗುಚಿ
ಬಿಂಬಿಸುವುದು ಭಯವ ನಿಂತು ನೊರೆಗಳಾ ಬಹತೆರೆಗಳಾ

ಹ್ಯಾಗೆ ದಾಟಬೇಕಿದನ್ನು
ನಾಗ ಶಯನ ಬಲ್ಲ ಹೊರತು ತಿಳಿಯದು ಪ್ರಾಣ ಉಳಿಯದು[8]

ಎಂದಾಗ, ಕಪಿನಾಯಕರು ಅಸಮ ಸಾಹಸದಿಂದ ಹೀಗೆ ಅಬ್ಬರಿಸುತ್ತಾರೆ–

ಹಾರುವೆನು ಶರಧಿಯನು
ಸಾರುವೆನು ಲಂಕೆಯನು
ನಾರಿಯನು ಕಂಡು ಕೈತೋರುವೆನು ಖಳಗೆ
ಕುಂಭಿನಿಯ ಕದಡುವೆವು
ಅಂಬುಧಿಯೊಳ್ ರವಿಚಂದ್ರ
ಬಿಂಬ ಸಂಚಾರ ನಿಲಿಸುವೆವು[9]

ಆದರೆ ಜಾಂಬವಂತ ಯೋಚಿಸಿ,

ನೀನೆ ಕಲಿ ಹನುಮ ನಮ್ಮವರೊಳು
ನೀನೆ ಕಲಿ ಹನುಮ
ಕೆಟ್ಟರಕ್ಕಸರಡ್ಡ ಗಟ್ಟಿ ಬಂದವರನ್ನು
ಕುಟ್ಟಿ ಲಂಕಾದ್ವೀಪ ಸುಟ್ಟು ಬರುವುದಕ್ಕೆ । ನೀನೇ ಕಲಿ ಹನುಮ ॥
ಕೊಂಕದೆ ಕೊನರದೆ ಲಂಕೆಯೊಳ್ ಸಿಲುಕದೆ
ಪಂಕಜ ಮುಖಿ ಸೀತೆಯ ಕಂಡು ಬರಲಿಕ್ಕೆ । ನೀನೇ ಕಲಿ ಹನುಮ॥[10]

ಎಂದು ಹೇಳಿ ಅವನನ್ನು ಸೀತಾನ್ವೇಷಣೆಗೆ ಕಳಿಸುತ್ತಾನೆ.

ಈ ಭಾಗ ಉಂಗುರಸಂಧಿ ಪ್ರಸಂಗದ ಒಂದು ಸ್ವಾರಸ್ಯಮಯ ಭಾಗವಾಗಿದೆ. ಇಲ್ಲಿನ ಸಂಭಾಷಣೆಯಂತು ಸಹಜವಾಗಿ ಬಂದಿದೆ. ಹಾಡುವಾಗಲಂತೂ ಈ ಪದ್ಯಗಳು ಜೀವಂತವಾಗುತ್ತದೆ. ಪಲ್ಲವಿ ಅನುಪಲ್ಲವಿಗಳೂ ಪೂರಕವಾಗಿ ಬಂದಿದ್ದು ಪಲ್ಲವಿಯಲ್ಲಿ ಬಂದ ಭಾವವನ್ನು ಅನುಪಲ್ಲವಿ ಇನ್ನಷ್ಟು ಸಮರ್ಥಿಸುತ್ತದೆ. ಸಮುದ್ರ ವರ್ಣನೆ 'ಕವಿಸಮಯ'ಗಳಿಂದ ಮುಕ್ತವಾಗಿದ್ದು ಕಣ್ಣಾರೆ ಕಂಡು ಅನುಭವಿಸಿದ್ದನ್ನು ಕವಿವರ್ಣಿಸಿದ್ದಾನೆ. ಕಪಿನಾಯಕರ ಅಬ್ಬರದ ಪದ್ಯ ಹಾಗೂ ಹನುಮನನ್ನು ಹೊಗಳಿದ ಹಾಡು ವೀರರಸ ಪ್ರಧಾನವಾಗಿದೆ. ಹೀಗೆ ಈ ಚಿಕ್ಕಭಾಗದಿಂದಲೇ ಆತನ ಕವಿತಾ ಶಕ್ತಿಯನ್ನು ಗಮನಿಸಬಹುದು.

ಯಕ್ಷಗಾನ ಪ್ರಸಂಗಗಳ ಕವಿಗಳು ದೂತ, ಚೌರಕ, ಬ್ರಾಹ್ಮಣ ಮುಂತಾದ ಪಾತ್ರಗಳ ಮೂಲಕ ಹಾಸ್ಯವನ್ನು ಹೊರಡಿಸಲು ಪ್ರಯತ್ನಿಸುತ್ತಾರೆ. ಆದರೆ ರಾಮಾಯಣದ ಪ್ರಸಂಗಗಳಲ್ಲಿ ಇವಕ್ಕೆ ಅವಕಾಶ ಕಡಿಮೆ. ಆದರೆ ಪಾರ್ತಿಸುಬ್ಬ 'ಅಂಗದ ಸಂಧಾನ'ದಲ್ಲಿ ಅಂಗದನನ್ನು ನೋಡಿ ಹಿಂದೆ ಹನುಮಂತನು ಮಾಡಿದ ಅವಾಂತರಗಳನ್ನು ನೆನೆದು ಭಯಪಟ್ಟು ಓಡುತ್ತಿರುವ ವಿಚಾರವನ್ನು ಹಾಸ್ಯಮಯವಾಗಿ ವರ್ಣಿಸಿದ್ದಾನೆ.

ಸೀರೆಗಳಡಗಿಸಿದರೆಣೆದು

ದೂರದಲ್ಲಿ ಬಚ್ಚಿಟ್ಟು ಬಂದರು ।
ನೀರ ಚಿಮ್ಮಿದರೊಲೆಗೆ ಹಿಂದಣ
ಮಾರಿಗಂಜಿ ॥

ಬೆದಬೆದರಿ ವಾನರನ ಬಾಲದ
ತುದಿಯ ನೀಕ್ಷಿಸಿ ಕಿವಿಯೊಳೇಕಾಂ ।
ತದಲಿ ಮಾತಾಡಿದರು ಕೆಲವರು
ಬದಲಿದೆಂದು ॥

ಸಣ್ಣವರು ನೋಡಿದರೆ ಬಾಳೆಯ
ಹಣ್ಣುಗಳ ಕರಕರೆದು ಕೊಡುವರು
ಪುಣ್ಯವುಳ್ಳದ್ದೆನುತ ಕೆಲವರು
ಮನ್ನಿಸಿದರು ॥

ಇಕ್ಕೆಲದ ಅಂಗಡಿಯ ಬಾಗಿಲ
ನಿಕ್ಕಿದವರನು ಜರೆದು ಭರಣಿಯ
ಸಕ್ಕರೆಯ ಮೆಲುತರಮನೆಯ ಒಳ
ಹೊಕ್ಕನಾಗ ॥[11]

ಈ ಪದ್ಯಗಳಲ್ಲೆಲ್ಲ ಹಾಸ್ಯರಸ ಉಕ್ಕಿ ಹರಿಯುತ್ತದೆ.

ಪ್ರಸಂಗ ಸಾಹಿತ್ಯದ ಚೌಕಟ್ಟಿನಲ್ಲಿ ಶೃಂಗಾರ ರಸದ ನಿರೂಪಣೆಯನ್ನು ಪಾರ್ತಿಸುಬ್ಬನು ಸಮರ್ಪಕವಾಗಿ ನಿರ್ವಹಿಸಿರುವುದಕ್ಕೆ ಅನೇಕ ನಿದರ್ಶನಗಳಿವೆ. ಲಕ್ಷ್ಮಣನನ್ನು ಕಾಮಿಸಲು ಬರುತ್ತಿರುವ ಶೂರ್ಪನಖಿಯ ವರ್ಣನೆಯಲ್ಲಿ ವಿಪ್ರಲಂಭ ಶೃಂಗಾರವನ್ನು ಕಾಣಬಹುದು.

ಚಂದದಿಂದ ಬಂದಳಬ್ಜ ಲೋಚನೆ ರಾಮ ।
ಚಂದ್ರನೆಂದ ಮಾತಿನ ಆನಂದವನ್ನೆ ನೆನೆಯುತಾಗ ॥
ಕನ್ನಡಿಯನು ಹಿಡಿದು ಮುಂದೆ ನೋಡುತ ಮೊಗವು ।
ಚೆನ್ನಾಗಿ ಹುದೆಂದು ನಗೆಯ ಮಾಡುತ ತನಗೆ ॥
ಕನ್ನೆಯರೊಳು ಜೋಡಿಲ್ಲೆಂದು ಪಾಡುತ ಅಸುರೆ
ತನ್ನೊಳಗೆ ತಾನೇ ನಲಿದಾಡುತ ॥

ಕರುಳ ಕೈಯ್ಯ ಬೆರಳಿಂದೊಡನೆ ತಿದ್ದುತ ಹೂವಿನ ।
ಪರಿಮಳ ದೊಳು ಮೆಯ್ಯನಲವಿಂದದ್ದುತ ಮೂಗಿಂ ।
ಗರಿವ ತಿಲಕವನ್ನು ಬೆರಳಿಂದುದ್ದತ ಬೇಗ ।
ತರಳ ಲಕ್ಷ್ಮಣನ್ನ ಬಳಿಯ ಹೊದ್ದುತ ॥[12]

ಇಲ್ಲಿ ಶೂರ್ಪನಖಿಯ ಮನಸ್ಸಿನ ಹೊಯ್ದಾಟವನ್ನು, ಕಾತರವನ್ನು, ಕಾಮಾತುರಳಾಗಿ ಹೊರಹೊಮ್ಮಿಸುವ ವಿಲಾಸವನ್ನು ಪಾರ್ತಿಸುಬ್ಬ ಸೊಗಸಾಗಿ ವಿವರಿಸಿರುತ್ತಾನೆ.

ಸಂಭಾಷಣೆಯನ್ನು ತರುವುದರಲ್ಲಂತೂ ಪಾರ್ತಿಸುಬ್ಬನು ಎತ್ತಿದಕೈ. ಪರಸ್ಪರ ಆರೋಪ ಪ್ರತ್ಯಾರೋಪಗಳನ್ನು ಮಾಡಿಕೊಳ್ಳುವುದು, ಮಾತಿಗೆ ಬಿದ್ದರೆ ತಕ್ಕೆ ಹೋಲಿಕೆಗಳನ್ನು ಕೊಟ್ಟು ಸಮರ್ಥಿಸಿಕೊಳ್ಳುವುದು, ಮುಂತಾದುವುಗಳೆಲ್ಲಾ ಆತನ ಪಾತ್ರಗಳ ಶಕ್ತಿಯಾಗಿವೆ. ರಾಮ-ರಾವಣ, ಅಂಗದ-ಪ್ರಹಸ್ತ, ಇಂದ್ರಜಿತು-ಲಕ್ಷ್ಮಣ, ರಾವಣ-ವಿಭೀಷಣ ಮುಂತಾದವರ ಸಂಭಾಷಣೆ ಈ ಮಾತಿಗೆ ಸಾಕ್ಷಿ.

ಪಾರ್ತಿಸುಬ್ಬನು ಹಲವಾರು ಗಾದೆ ಮಾತುಗಳನ್ನು ತನ್ನ ಪ್ರಸಂಗದುದ್ದಕ್ಕೂ ತಂದಿದ್ದಾನೆ. ಒಂದೆರಡನ್ನು ಇಲ್ಲಿ ಕಾಣಬಹುದು.

(1) ಸಾರಿ ಕೊಂದರೆ ಪಾಪವಿಲ್ಲ.

(2) ಹುಲಿಯ ಮಕ್ಕಳು ಹೊಲ ಹುಲ್ಲ ಮೇಯುವುದೇ.

(3) ಕಳವು ಹಾದರವೂ ಮುದ್ದಲ್ಲ.

(4) ನೆಟ್ಟ ಪರರ ಹೆಣ್ಣಿಗೆ ಮನ ಮೆಟ್ಟಿದಾತಗಮೃತ ವಿಷವು.

(5) ಸ್ವಾಮಿ ಕಾರ್ಯದ ಮೇಲೆ ಸತ್ತರೆ ಕಾಮಿತ ಕೈಗೂಡುವುದು ಇತ್ಯಾದಿ.

ಪಾತ್ರಗಳಂತೂ ಸಹಜ ಸುಂದರವಾಗುವಂತೆ ಕಡೆದಿರಿಸಿದ ಕೀರ್ತಿ ಸುಬ್ಬನಿಗೆ ಸಲ್ಲುತ್ತದೆ. ಯಕ್ಷಗಾನ ಕವಿಗಳಿಗೆ ಈತ ಗುರು ಎನ್ನುವ ಮಾತು ಸುಳ್ಳಲ್ಲ. ಮುಂದಿನ ಅನೇಕ ಜನ ಪ್ರಸಂಗಕಾರರ ಮೇಲೆ ಈತನ ಪ್ರಭಾವ ಬಿದ್ದಿರುವುದು ಸ್ಪಷ್ಟವಾಗಿದೆ.

ಹಟ್ಟಿಯಂಗಡಿ ರಾಮಭಟ್ಟ :

ಹಟ್ಟಿಯಂಗಡಿ ರಾಮಭಟ್ಟನು ಇನ್ನೊಬ್ಬ ಪ್ರಸಿದ್ಧ ಕವಿಯಾಗಿದ್ದಾನೆ. ಹಳೆಮಕ್ಕಿ ರಾಮನ ಸಮಕಾಲೀನನಾದ ಈತ ಕುಂದಾಪುರ ತಾಲ್ಲೂಕು ಹಟ್ಟಿಯಂಗಡಿ ಗ್ರಾಮದವನು. ಆತನ ಬಗ್ಗೆ ಕ್ರಿ.ಶ. 1929ರ 'ಸುವಾಸಿನಿ' ಪತ್ರಿಕೆಯಲ್ಲಿ ಲೇಖನ ಬರೆದ ದಿ॥ ಶಿವರಾಮಯ್ಯನವರು ಅವನ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟಿದ್ದಾರೆ. ಸೂರಭಟ್ಟನ ಮಗನಾದ ಈತ ತನ್ನ ಗ್ರಾಮ ದೇವತೆಯಾದ ಲೋಕನಾಥನನ್ನು ಸ್ತುತಿಸಿದ್ದಾನೆ. ಯೋಗಿಯ ರೀತಿ ಜೀವನ ಮಾಡುತ್ತ ಯಶಸ್ವೀ ಪ್ರಸಂಗಗಳಾದ ಲವಕುಶರ ಕಾಳಗ. ದ್ರೌಪದಿ ಸ್ವಯಂವರ, ಅತಿಕಾಯ ಕಾಳಗ, ಇಂದ್ರಜಿತು ಕಾಳಗ, ರತಿಕಲ್ಯಾಣ, ಸುಭದ್ರ ಕಲ್ಯಾಣ ಮುಂತಾದುವುಗಳನ್ನು ಬರೆದಿದ್ದಾನೆ. ಅತಿಕಾಯ ಕಾಳಗ ಒಂದು ಸುಂದರ ಪ್ರಸಂಗವಾಗಿದ್ದು ಅಲ್ಲಿನ ಸಂಭಾಷಣೆ ಮತ್ತು ವರ್ಣನಾಶಕ್ತಿ ಮೆಚ್ಚುವಂಥದಾಗಿದೆ. ಧ್ಯಾನಮಾಲಿನಿಯು ಮಗನ ಸಾವಿಂದ ದುಃಖಿಸುತ್ತಾಳೆ- ಕಾಮಿನಿಯು ಮಹಾಂತ ದುಃಖದಿಂದ ಮಿಡು ಮಿಡುಕುತ್ತಾ, ನೆಲದಿ ಹೊಡುಕುತ್ತಾ "ಮರುಗುಲೆತಕ್ಕವ್ವ ಎಂದು ಸುರಿದ ಕಣ್ಣೀರನ್ನು ಬಂದು – ತೊಡೆಯದೆ ಬಂದು ನುಡಿಯದೆ – ಹೊಟ್ಟೆಯ ಮೇಲೆ ಕಲ್ಲಿಟ್ಟು ಬಿಟ್ಟುಹೋದೆಯಲ್ಲ ಕಂದ ಎಂದಳು ಹಲುಬಿ ನೊಂದಳು."[13] ಎಂಬಲ್ಲಿ ದೇಶೀಯ ಪ್ರಾಚುರ್ಯವನ್ನು ಗಮನಿಸಬೇಕು. ರಾಮಭಟ್ಟನಿಗೆ ಯಕ್ಷಗಾನ ಕವಿಗಳಲ್ಲಿ ಇದರಿಂದಾಗಿ ಉತ್ತಮ ಸ್ಥಾನ ದೊರೆತಿದೆ. ಇನ್ನೊಂದು ಸ್ವಾರಸ್ಯಕರವಾದ ಭಾಗವೆಂದರೆ

ಹನುಮಂತನು ತಂದ ಸಂಜೀವನದಿಂದ ಲಕ್ಷ್ಮಣ ಮತ್ತು ಸೈನ್ಯವು ಮೈಮುರಿದು ಏಳುವ ರೀತಿ, ಕವಿಯು ಆಗ ಲಕ್ಷ್ಮಣನ ಸ್ಥಿತಿಯನ್ನು ಕುರಿತು ಹೀಗೆ ವರ್ಣಿಸಿದ್ದಾನೆ- ಅರಿವು ತಲೆದೋರ್ದೊಡನೆ ಲಕ್ಷ್ಮಣನ ರರೆಫಡ ದಶಕಂಠ ಹಿಂದಕೆ ಸರಿಯದಿರು ನಿಲ್ಲೆನುತಲೆದ್ದನು ಕೊಂಡು ಧನುಶರವ."[14] ಎಂಬಲ್ಲಿ ಕವಿ ಮನುಷ್ಯ ಸ್ವಭಾವದ ಸಹಜ ಸ್ಪಂದನೆಗಳನ್ನು ಚೆನ್ನಾಗಿ ಚಿತ್ರಿಸಿದ್ದಾನೆ. ಹನುಮಂತನನ್ನು "ಎಲೆ ಹನುಮ ನಿನ್ನಯ ಸಮರ್ಥದ ನೆಲೆಯ ಬಲ್ಲವರಾರು. ತಮ್ಮನ ಉಳಿಹಿಕೊಟ್ಟುಪಕಾರಿ ನೀನೈ....[15] ಎಂದು ಹೊಗಳುವಲ್ಲಿ ಭಾಷೆಯ ಬಳಕೆ ಆಕರ್ಷಕವಾಗಿದೆ.

ಲವಕುಶರ ಕಾಳಗದಲ್ಲಿ ರಾಮಭಟ್ಟನು ಸಾಕಷ್ಟು ಬದಲಾವಣೆಗಳನ್ನು ಮಾಡಿ ಕೊಂಡಿದ್ದಾನೆ. ಸೀತೆ ಕಾಡಿಗೆ ಹೋಗುವುದು ಶೂರ್ಪನಖಿಯ ನಂದದ ಸೇಡಿನ ಕಿಡಿಯಿಂದಾಗಿಯೇ ಎಂಬ ರೀತಿಯಲ್ಲಿ ಚಿತ್ರಿಸಲಾಗಿದೆ. ಆಕೆ ಯೋಗಿನಿಯಂತೆ ಸೀತೆಯ ಆಶ್ರಯ ಪಡೆದು ರಾವಣ ಉಂಗುಷ್ಟದ ಚಿತ್ರವನ್ನು ಬರೆಸಿ ಸೀತೆಯ ಮೂಲಕ ಜೀವಕಳೆ ಕೊಡಿಸುತ್ತಾಳೆ. ರಾಮ ಬಂದಾಗ ಅಡಗಿಸಿಟ್ಟಿದ್ದರಿಂದ ಸಂಶಯಗೊಂಡ ರಾಮ ಸೀತೆಯನ್ನು ಕಡಿದು ಬರುವಂತೆ ಲಕ್ಷ್ಮಣನಿಗೆ ಅಜ್ಞಾಪಿಸಿ ಅರಣ್ಯಕ್ಕೆ ಕಳುಹಿಸುತ್ತಾನೆ. ಗರ್ಭಹತ್ಯೆ ಮಾಡಲಾರದ ಲಕ್ಷ್ಮಣ ಕೊಂದೆನೆಂದು ಸುಳ್ಳು ಹೇಳಿ ಕಾಡಿನಲ್ಲಿ ಬಿಟ್ಟು ಬರುತ್ತಾನೆ. ಕವಿ ಇಲ್ಲಿ ಹೀಗೆ ಹೊಸ ಅಂಶವನ್ನು ಸೇರಿಸಿದ್ದಾನೆ. ಪಾರ್ತಿಸುಬ್ಬನ ಕುಶಲವರ ಕಾಳಗದಲ್ಲಿ ಈ ಅಂಶವಿಲ್ಲ. ಈ ರೀತಿ "ಪ್ರಸಂಗ ರಚನಾ ಕೌಶಲ್ಯದ ದೃಷ್ಟಿಯಿಂದಲೂ ಈತ ಒಬ್ಬ ಪ್ರಾಮುಖ್ಯ ಕವಿ."[16] ಹಟ್ಟಿಯಂಗಡಿ ರಾಮಭಟ್ಟನ ಲವಕುಶರ ಕಾಳಗ ಮತ್ತು ಅತಿಕಾಯ ಕಾಳಗದಲ್ಲಿ ಬಂದಿರುವ ವರ್ಣನೆಗಳು, ಬಳಸಿರುವ ಸಂಭಾಷಣೆಗಳು ಈತನ ಕವಿತಾ ಶಕ್ತಿಯನ್ನು ಸಾರುತ್ತವೆ. ಇಲ್ಲಿನ ಪಾತ್ರಗಳು ಆಕರ್ಷಕವಾಗಿದ್ದು ಹೆಚ್ಚು ಕಾಲ ಮನಃ ಪಟಲದ ಮೇಲೆ ನಿಲ್ಲಬಲ್ಲವು.

ಹಟ್ಟಿಯಂಗಡಿ ರಾಮಭಟ್ಟನ ಕವಿತಾಶಕ್ತಿ ಮೆಚ್ಚುವಂತಹದು. ವೀರ, ಶೋಕ, ಹಾಸ್ಯ ರಸಗಳನ್ನು ಪ್ರಸಂಗದಲ್ಲಿ ಬಹುಸಮರ್ಪಕವಾಗಿ ತರುತ್ತಾನೆ. ಅತಿಕಾಯ ಕಾಳಗದಲ್ಲಿ ಬರುವ ಪದ್ಯ ಒಂದರಲ್ಲಿ ಶೋಕರಸ ಮಡುಗಟ್ಟಿರುವುದನ್ನು ನೋಡಬಹುದು. ಮಗನನ್ನು ಕಳೆದು ಕೊಂಡ ತಾಯಿಯ ಹೆಪ್ಪುಗಟ್ಟಿದ ಶೋಕ ಹೀಗಿದೆ.

ಹಾಮಗನೇ ಗುಣವೃಂದ । ಅಯ್ಯೊ ಮಗನೇ ಮನದಂದ ।
ಹೇ ಮಗನೇ ರಣಧೀರ । ಬಾಮಗನೇ ಮೊಗದೋರ ॥
ನೋಡುವ ಕಣ್ಣಿಗೆ ಮಣ್ಣ । ಮಾಡಿದೆಯಲ್ಲವೆ ಚಿಣ್ಣ ।
ಆಡಿಸಿದೀ ಕೈಗಳಿಗೆ । ಕೊಡನು ಕೊಟ್ಟೆಯಾ ಹೀಗೆ ॥
ಶೋಕ ಮಹಾಬ್ಧಿಯೊಳೆನ್ನ । ನೂರೆಕಿದೆಯಾ ಗುಣರನ್ನ ।
ಸಾಕಿದಕ್ಕು ಪಕಾರ । ಸಾಕಯ್ಯ ಸುಕುಮಾರ ॥[17]

ರಾಮಭಟ್ಟನ ವರ್ಣನೆಗಳೆಲ್ಲ ಸಹಜವಾಗಿದ್ದು ದುಃಖಪೂರಿತವಾಗಿದೆ. ಲಕ್ಷ್ಮೀಶನ ಜೈಮಿನಿಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುವ ನಾದಮಯತೆಯನ್ನು ಈತನು ತನ್ನ ಕಾಲನೇಮಿಕಾಳಗದ ತಪೋವನದ ವರ್ಣನೆಯಲ್ಲಿ ತಂದಿದ್ದಾನೆ.

ಕೆಲಬರುತ್ತಮ ಶಿವಧ್ಯಾನದಿಂ ಮೌನದಿಂ ।
ಕೆಲಬರಿದೆ ದೇವತಾರ್ಚನೆಗಳಿಂ ಘನಗಳಿಂ ।
ಕೆಲಬರತಿ ಡಂಭಕದ ಹೋಮದಿಂನೇಮದಿಂ ।
ಕೆಲಬರು ದೃಢಯೋಗದಿಂ
ಕೆಲರಯ್ದು ವೇದಾಂತ ಘೋಷದಿಂ ತೋಷದಿಂ
ಕೆಲರೆಣಿಕೆಯಿಂಗೆಯ್ದು ಜಪಗಳಿಂ ತಪಗಳಿಂ
ಕೆಲಬಲದಿ ಕಪಟ ಮುನಿನಿಕರಮಂ ಸಕಲಮಂ ಕಂಡ
ಪವಮಾನಸೂನು[18]

ಅನೇಕ ಉತ್ತಮ ಪ್ರಸಂಗಗಳನ್ನು ನೀಡಿರುವ ಹಟ್ಟಿಯಂಗಡಿ ರಾಮಭಟ್ಟನು ರಾಮಾಯಣವನ್ನು ಆಧರಿಸಿ ಬರೆದ ಪ್ರಸಂಗಗಳು ಕೂಡ ಅವನ ಕಾವ್ಯ ಪ್ರತಿಭೆಯ ಶ್ರೇಷ್ಠ ಮಾದರಿಯಾಗಿದ್ದು ಪ್ರದರ್ಶನಗಳಲ್ಲೂ ಜನಾದರಣೆಯನ್ನು ಗಳಿಸಿಕೊಂಡಿವೆ.

ಗೇರಸೊಪ್ಪೆ ಶಾಂತಪ್ಪಯ್ಯ :

19ನೇ ಶತಮಾನದಲ್ಲಿ ಹೆಸರು ಪಡೆದ ಯಕ್ಷಗಾನ ಕವಿಗಳಲ್ಲಿ ಗೇರುಸೊಪ್ಪೆ ಶಾಂತಪ್ಪಯ್ಯ ಮುಖ್ಯರು ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪೆ ಇವರ ಜನ್ಮ ಸ್ಥಳವಾದರೂ ಇವರು ಬಾಳಿನ ಹೆಚ್ಚು ಕಾಲ ಕಳೆದದ್ದು ಮಂಗಳೂರಿನಲ್ಲಿ. ರೈಸ್ ಸಾಹೇಬರು ಇವರ ಕಾಲವನ್ನು ಕ್ರಿ.ಶ. 1840–70 ಎಂದು ನಿರ್ಣಯಿಸಿದ್ದಾರೆ. ಇದು ಅವರ ಅಧಿಕಾರಾವಧಿಯ ಕಾಲವಾಗಿರಬಹುದು. ಮಂಗಳೂರು ಜಿಲ್ಲಾ 'ಸದರ್ ಅಮೀನ್' ಆಗಿದ್ದ ಇವರು ಯಕ್ಷಗಾನದ ಹವ್ಯಾಸಿ ಕಲಾವಿದರಾಗಿದ್ದರು. ಕೇವಲ ಪ್ರಸಂಗ ರಚನೆ ಮಾತ್ರವಲ್ಲದೆ ಅದರ ಕುಣಿತ ಮಾತು ಮುಂತಾದುವುಗಳ ಅಭ್ಯಾಸವನ್ನು ಎಳೆಯರಿಗೆ ಮಾಡಿಸುತ್ತಿದ್ದರು. ಇವರು ಬರೆದ ಪ್ರಸಂಗಗಳು ಎರಡು – ಕರ್ಣಪರ್ವ ಮತ್ತು ಪುತ್ರಕಾಮೇಷ್ಟಿ. ಸಾರಸ್ವತ ಕುಟಂಬಕ್ಕೆ ಸೇರಿದ ಶಾಂತಪ್ಪಯ್ಯನವರು ಕರ್ಣಪರ್ವದಲ್ಲಿ ಕ್ಷೇಮ ನಗರಾಪತಿಯನ್ನು ಮತ್ತು ಮಂಗಳೂರಿನ ವೆಂಕಟರಮಣ ದೇವರನ್ನು ನೆನೆದಿದ್ದಾರೆ.

ಪುತ್ರಕಾವೇಷ್ಟಿ ಪ್ರಸಂಗವು ರಾಮಾಯಣದ ಮೊದಲ ಕಥಾಭಾಗವಾಗಿದೆ. ಈ ಶಾಂತಪ್ಪಯ್ಯನವರು ದಶರಥನು ಕೈಕೆಗೆ ವರಕೊಡುವಲ್ಲಿಂದ ಕತೆಯನ್ನು ಪ್ರಾರಂಭಿಸಿದ್ದಾರೆ. ಮತ್ತೆಲ್ಲವೂ ಮೂಲಕಥೆಯನ್ನು ಅನುಸರಿಸಿಕೊಂಡು ಬಂದಿದೆ. ಕಥಾ ಓಟವು ಸೊಗಸಾಗಿಯೂ ಪ್ರದರ್ಶನಕ್ಕೆ ಉತ್ತಮವಾಗಿದೆ. ಸಂಸ್ಕೃತಮಯ ಶೈಲಿ, ಬಿಗುವಾದ ಬಂಧ ಶಾಂತಪ್ಪಯ್ಯನವರಿಗೆ ಸಿದ್ಧಿಸಿದೆ. ಕೆಲವೆಡೆ ಪಾರ್ತಿಸುಬ್ಬನನ್ನು ಅನುಕರಿಸಿರುವುದೂ ಉಂಟು. ಹಿರಿಯ ಹುದ್ದೆಯಲ್ಲಿದ್ದೂ ಜಾನಪದ ಕಲೆಯೊಂದಿಗೆ ಅವರಿಟ್ಟುಕೊಂಡ ಸಂಬಂಧ ಮೆಚ್ಚುವಂತಾದ್ದಾಗಿದೆ.

ನಗರದ ಸುಬ್ಬ :

ಕ್ರಿ.ಶ. 1840ರ ಸುಮಾರಿಗೆ ಇದ್ದಿರಬಹುದಾದ ಈತನು ನಗರ ಸೀಮೆಗೆ ಸೇರಿದವನು. ಕವಿ ಚರಿತ್ರೆಕಾರರು ಇದೇ ಅಭಿಪ್ರಾಯಕ್ಕೆ ಬಂದಿದ್ದಾರೆ. ರಾವಣೋದ್ಭವ ಪ್ರಸಂಗದಲ್ಲಿ

"ನಗರಾಖ್ಯ ಪಟ್ಟಣದಿ ಭೂಸುರ ಕುಲದೋನೆ ನೇಮದಿಂದೆಸವ ವಿಠಲನ ಸತಿ ಗೌರಿ ಪಡೆದಸುತ ಸುಬ್ಬಯ್ಯ" ಎಂದು ಕರೆದುಕೊಂಡಿದ್ದಾನೆ. ಈತ ಶಂಭರಾಸುರ ಕಾಳಗ ಮತ್ತು ರಾವಣೋದ್ಭವ ಎಂಬೆರಡು ಪ್ರಸಂಗಗಳನ್ನು ಬರೆದಿದ್ದಾನೆ. ದೊರೆತ ಹಸ್ತ ಪ್ರತಿಗಳಲ್ಲಿ ಬಹಳ ಪೂರ್ವದ್ದೆಂದರೆ ಕ್ರಿ.ಶ. 1863ರದ್ದಾಗಿದೆ. ಆದ್ದರಿಂದ ಈತ ಕ್ರಿ.ಶ. 1800–50ರ ಹಾಗೆ ಬಾಳಿದ ವ್ಯಕ್ತಿಯಾಗಿರಬೇಕು. ಜೀವನ ಚರಿತ್ರೆಯ ಬಗ್ಗೆ ಹೆಚ್ಚು ವಿಚಾರವೇನೂ ತಿಳಿಯುತ್ತಿಲ್ಲ.

ರಾವಣೋದ್ಭವ ಪ್ರಸಂಗವು ರಾಮಾಯಣ ಉತ್ತರ ಕಾಂಡದಿಂದ ಆರಿಸಿದ ಕಥಾವಸ್ತುವಿನಿಂದ ಕೂಡಿದೆ. ಮೂಲದಿಂದ ಹೆಚ್ಚು ಬದಲಾವಣೆ ಮಾಡಿಕೊಳ್ಳದೆ, ಸೊಗಸಾದ ನಿರೂಪಣೆಯೊಂದಿಗೆ, ಬಿಗಿ ಬಂಧದಲ್ಲಿ ಬರೆದಿದ್ದಾನೆ. ಶೈಲಿ ಒಮ್ಮೆ ಸಂಸ್ಕೃತಮಯವಾದರೆ ಮತ್ತೊಮ್ಮೆ ಅಷ್ಟೇ ಸರಳವಾಗಬಲ್ಲದು. ಕೈಕಸಿಗೆ ಮಕ್ಕಳು ಹುಟ್ಟಿದಾಗ

ತುಳುಕಿತ್ತೈ ಜಲಧಿ ಮತ್ತಳುಕಿದಂ ಪಣಿಫ ಭೂ
ತಳ ಕಂಪಿಸಿತು ಕೂರ್ಮನಳವಳಿದ ದಿಗ್ಗಂತ
ಕುಲವದುರೆ ತಾರೆಗಳ್ಕಳೆಯಂತೆ ನೆಲಕುದುರೆ ಫಳಿಲನೆ ಸಹಸ್ರ
ಸಿಡಿಲು.....[19]

ಎಂಬಲ್ಲಿ ಸಂಸ್ಕೃತಮಯವಾಗಿದ್ದರೆ ಮಂಡೋದರಿಯು ತಂದೆಯೊಡನೆ ಆಡುವ ಮಾತುಗಳಲ್ಲಿ ಅಷ್ಟೇ ಸರಳತೆ ಇಣಕಿದೆ.

ಅಪ್ಪಯ್ಯ ನೀಕೇಳು ನಾನೊಪ್ಪು ವಂದದಿ ಪೇಳು
ತಪ್ಪಾಡಿದಳೆಂದಪ್ಪಳಿಸದಿರು ಸ
ಮರ್ಪಕವಾಹಂತೊಪ್ಪಿಸಿಕೊಡುವೆನು [20]

ನಗರದ ಸುಬ್ಬನು ಎರಡೇ ಪ್ರಸಂಗ ಬರೆದಿದ್ದರೂ ಇವು ಜನಪ್ರಿಯ ಪ್ರಸಂಗಗಳಾಗಿ ಅವನಿಗೆ ಕೀರ್ತಿ ತಂದಿವೆ.

ಮೈರಾವಣ ಕಾಳಗದ ವೆಂಕಟ :

ವೆಂಕಟನು ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರಕ್ಕೆ ಸೇರಿದವನು. ತಂದೆ ಸುಬ್ಬ, ತಾಯಿ ಲಕ್ಷ್ಮಿ. ಕೊಲ್ಲೂರು ಮೂಕಾಂಬಿಕೆಯ ಭಕ್ತನಾಗಿದ್ದ ಈತನ ತಂದೆಯು ಅಜಪುರದ ಸುಬ್ಬನಾಗಿದ್ದು ಪಾರಿಜಾತ ಮತ್ತು ರುಕ್ಮಿಣಿ ಸ್ವಯಂವರಗಳನ್ನು ಬರೆದಿದ್ದಾನೆ. ತಂದೆಯಿಂದಲೂ ಆತನಿಗೆ ಯಕ್ಷಗಾನ ಪ್ರಸಂಗ ರಚನಾಶಕ್ತಿ ಒದಗಿ ಬಂದಿರಬೇಕು.

ವೆಂಕಟನು ಬರೆದ ಪ್ರಸಂಗ ಮೈರಾವಣ ಕಾಳಗ ಒಂದೇ ಆದರೂ ಅದು ಯಶಸ್ವೀ ಪ್ರಸಂಗವಾಗಿದ್ದು ಜನಪ್ರಿಯತೆಗಳಿಸಿದೆ. ಈತನ ಕಾಲ ಕ್ರಿ.ಶ. 1720–70 ರವರೆಗೆ ಇರಬೇಕು. ಏಕೆಂದರೆ ಈತನ ತಂದೆ ಕೆಳದಿಯ ಹಿರಿಯ ಬಸಪ್ಪ ನಾಯಕನ ಕಾಲದವನಾಗಿದ್ದು 1720ರವರೆಗೆ ಇದ್ದಿರಬೇಕು. ಇವನು ಬರೆದ ಮೈರಾವಣ ಕಾಳಗದ

ವಸ್ತುವನ್ನು ಬತ್ತಲೇಶ್ವರ ಕವಿಯ 'ಕೌಶಿಕ ರಾಮಾಯಣ'ದಿಂದ ಆರಿಸಿಕೊಂಡಿದ್ದಾನೆ. ಅಲ್ಲಿ ಬಂದ ಕಥಾ ಭಾಗವನ್ನು ಇನ್ನಷ್ಟು ರಂಜನೀಯವಾಗುವಂತೆ, ಪ್ರದರ್ಶನ ಯೋಗ್ಯವಾಗುವಂತೆ ಮಾಡಿದ್ದಾನೆ. ಇಂದಿಗೂ ಜನಪ್ರಿಯ ಪ್ರಸಂಗವಾಗಿರುವ ಮೈರಾವಣ ಕಾಳಗ ವೆಂಕಟನ ಕವಿತಾಶಕ್ತಿಯನ್ನು ಬಿಂಬಿಸುತ್ತದೆ.

ವಿಷ್ಣುಸಭಾಹಿತ :

ಕನ್ನಡದಲ್ಲಿ ಅಪೂರ್ವವಾದ ವಾಸಿಷ್ಠ ರಾಮಾಯಣವನ್ನು ಆಧರಿಸಿ ಈ ವಿಷ್ಣು ಸಭಾಹಿತನು "ಶತಾಸ್ಯ ರಾವಣ ಕಾಳಗ"ವನ್ನು ಬರೆದಿರುವನು. ಇಂದಿಗೂ ಉತ್ತರ ಕನ್ನಡದ ಹೊನ್ನಾವರ ತಾಲ್ಲೂಕಿನ ಹಳದೀಪುರ ಎಂಬ ಗ್ರಾಮದಲ್ಲಿ ಸಭಾಹಿತರ ಮನೆಯಲ್ಲಿ ಪ್ರಸಂಗಗಳ ಪ್ರತಿಗಳನ್ನು ಇರಿಸಿ ಇಂದಿಗೂ ಅದನ್ನು ಸಭಾಹಿತ ಪ್ರತಿ ಎಂದು ಕರೆದು ಗೌರವಿಸುತ್ತಾರೆ. ಇವನು ಬಸವರಾಜಪುರ ಅಗ್ರಹಾರದಲ್ಲಿ (ಹಳದೀಪುರ) ನಾರಾಯಣ ಸಭಾಹಿತರಿಗೆ ಆರನೇ ಮಗನಾಗಿ ಹುಟ್ಟಿದನು. ಈತ ಹತ್ತೊಂಬತ್ತನೇ ಶತಮಾನಕ್ಕೆ ಸೇರಿದವನಾಗಿದ್ದು ಪ್ರಾರಂಭದಲ್ಲಿ ಇಡಗುಂಜಿಯ ಗಣಪತಿಯನ್ನು ಸ್ಮರಿಸಿದ್ದಾನೆ. ಕಣ್ಣಿಗೆ ಕಟ್ಟುವಂತೆ ಚಿತ್ರಮಾಲೆಯನ್ನು ಕಟ್ಟಬಲ್ಲ ಶಕ್ತಿ ವಿಷ್ಣು ಸಭಾಹಿತನಿಗೆ ಇದೆ. ಶ್ರೀರಾಮನು ಸಭಾಲೋಲನಾಗಿರುವುದನ್ನು ಹೀಗೆ ವರ್ಣಿಸಿದ್ದಾನೆ.

ಸಭೆಯೊಳ ರಂಜಿಸಿದ ರಾಮ ಶ್ರೀ ಘನಶ್ಯಾಮ
ಸಭೆಯೊಳ ರಂಜಿಸಿದ ರಾಮಾ
ವಾಮದ ತೊಡೆಯನೇರಿ ಕುಳ್ಳಿರಲಂದು
ಭೂಮಿಜೆ ಸಮೂಹದಿ ರಾಮನ ಬಲದ ಭಾಗದಿನಿಂತು ಚವರಿಯ
ಸೌಮಿತ್ರಿಯೊಲಿದು ಬೀಸುತ ಭಜಿಸುತಲಿರೆ ಸಭೆ
ಹನುಮ ಪಾದುಕೆಯ ಪೊತ್ತು ನಿಂದಿರೆ ಮುಂದೆ[21]

ಎನ್ನುವಲ್ಲಿ ಚಿತ್ರವತ್ತಾದ ವರ್ಣನೆ ಬಂದಿದೆ. ಈ ಪ್ರಸಂಗವನ್ನು ಇಪ್ಪತ್ತು ಮೂವತ್ತು ವರ್ಷಗಳ ಕೆಳಗೆ ಮೇಳದವರು ಆಡುತ್ತಿದ್ದರಂತೆ. ಆದರೆ ಈಗ ಅಷ್ಟಾಗಿ ಪ್ರಯೋಗದಲ್ಲಿ ಕಂಡು ಬರುತ್ತಿಲ್ಲ.

ಆಧುನಿಕ ಕಾಲದ ಯಕ್ಷಗಾನ ಕವಿಗಳು (ಇಪ್ಪತ್ತನೆಯ ಶತಮಾನ)

ರಾಮಾಯಣ ಪ್ರಸಂಗಗಳು ಆಧುನಿಕ ಕಾಲದಲ್ಲೂ ರಚಿತವಾಗುತ್ತಿವೆ. ಕಳೆದ 100–120 ವರ್ಷಗಳ ಈಚೆಗೆ ರಚನೆಗೊಂಡ ರಾಮಾಯಣ ಪ್ರಸಂಗಗಳ ಕೃತಿಕಾರರ ಸಂಖ್ಯೆ ಅಧಿಕವಿರುವುದರಿಂದ ಒಟ್ಟಾಗಿ ಅವರ ಕೊಡುಗೆಯನ್ನು ಸಮೀಕ್ಷಿಸಬಹುದು. ಈಚಿನ ಅಸಂಖ್ಯ ಯಕ್ಷಗಾನ ಕವಿಗಳಲ್ಲಿ ಕೆಳಕಂಡ ಯಕ್ಷಗಾನ ಕವಿಗಳು ಮುಖ್ಯರಾಗಿದ್ದಾರೆ.

ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ :

ಮಲೆನಾಡಿನವರಾದ ಹಲಸಿನಹಳ್ಳಿ ನರಸಿಂಹ ಶಾಸ್ತ್ರೀಯವರು ಸುಮಾರು ಮುವತ್ತಕ್ಕೂ ಮಿಕ್ಕಿದ ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಹಲವು ಅಚ್ಚುಗೊಂಡಿವೆ.

ಇವರ ಕಾಲ 1870–1930 ಎಂದು ತಿಳಿದು ಬರುತ್ತದೆ. ತೀರ್ಥಹಳ್ಳಿ ತಾಲೂಕಿನ ಹಲಸಿನ ಹಳ್ಳಿ ಗ್ರಾಮದಲ್ಲಿ ಹವ್ಯಕರಾಗಿದ್ದ ನಾಗೇಂದ್ರ ಶಾಸ್ತ್ರಿಯರ ಮಗನಾಗಿದ್ದನೆಂಬ ಅಂಶ ಅವರ ಪ್ರಸಂಗದ ಮೂಲಕ ತಿಳಿಯುತ್ತದೆ. ಇವರು ರಚಿಸಿರುವ ಪ್ರಸಂಗಗಳಲ್ಲಿ ಶಶಿಕಲಾ ಪರಿಣಯ, ಭೀಷ್ಮೋತ್ಪತ್ತಿ ವಿದ್ಯುನ್ಮತಿ ಕಲ್ಯಾಣ, ಚಂದ್ರಹಾಸ ಚರಿತೆ, ಭೀಷ್ಮವಿಜಯ, ಭೀಷ್ಮಾರ್ಜುನ ಕಾಳಗ, ವಾಮನ ಚರಿತ್ರೆ, ಶಲ್ಯ ಪರ್ವ, ವೀರಮಣಿ ಕಾಳಗ, ಕೌಶಿಕ ಚರಿತ್ರೆ ಮುಖ್ಯವಾದವುಗಳು. ಇವುಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಪ್ರಸಂಗವೆಂದರೆ 'ಕೌಶಿಕ ಚರಿತ್ರೆ' ಮಾತ್ರ. ಇವರ ಕಾವ್ಯಶೈಲಿಯ ಮೇಲೆ ಕುಮಾರವ್ಯಾಸನ ಹಾಗೂ ಲಕ್ಷ್ಮೀಶನ ಪ್ರಭಾವವಿದೆ. ಪ್ರಸಂಗದಲ್ಲಿ ಮಿಂಚುವ ಗುಣ 'ಕೌಶಿಕ ಚರಿತ್ರೆ'ಯಲ್ಲಿದೆ. ಸಂವಾದಕ್ಕೆ ಒಗ್ಗುವ, ಕುಣಿತಕ್ಕೆ ಹಿಡಿಸುವ ಅನೇಕ ಪದ್ಯಗಳು 'ಕೌಶಿಕ ಚರಿತ್ರೆಯಲ್ಲಿ' ಕಾಣಸಿಗುತ್ತವೆ.

ಅಲೆಟ್ಟಿರಾಮಣ್ಣ ಶಗ್ರಿತ್ತಾಯ :

ಅವೆಟ್ಟ ರಾಮಣ್ಣ ಶಗ್ರಿತ್ತಾಯರ ಪ್ರಸಂಗಗಳು ತೆಂಕು ತಿಟ್ಟಿನ ಪ್ರದರ್ಶನಗಳಲ್ಲಿ ಯಶಸ್ಸು ಕಂಡಿವೆ. ರಾಮಾಯಣಕ್ಕೆ ಸಂಬಂಧಿಸಿದಂತೆ ಅವರು ಅಹಲ್ಯೊದ್ಧಾರ, ರಾಮನಿಜ ಪಟ್ಟಾಭಿಷೇಕ, ಮಕರಾಕ್ಷ ಕಾಳಗಗಳು ಜನಪ್ರಿಯವಾಗಿವೆ. ಇವಲ್ಲದೆ ಚಂದ್ರ ಹಾಸ ಚರಿತ್ರೆ ಲಕ್ಷಣ ಸ್ವಯಂವರ ಮುಂತಾದ ಪ್ರಸಂಗಗಳನ್ನು ರಚಿಸಿದ್ದಾರೆ. ಅವರ ಪ್ರಸಂಗಗಳಲ್ಲಿ ಸ್ವಾರಸ್ಯಮಯವಾದ ಸಂಭಾಷಣೆಗೆ ಒದಗಿಬರುವ ಹಾಡುಗಳಿವೆ. ಮನಮುಟ್ಟುವ ವಿವರಣೆಗಳನ್ನು ನಾದಮಯವಾದ ಹಾಡುಗಳಲ್ಲಿ ಕಟ್ಟಿಕೊಡುತ್ತಾರೆ. ಕವಿತ್ವದ ದೃಷ್ಟಿಯಿಂದ ಅವರ ರಾಮನಿಜ ಪಟ್ಟಾಭಿಷೇಕ ಉಳಿದೆಲ್ಲ ಪ್ರಸಂಗಗಳಿಗಿಂತ ಉತ್ತಮವಾಗಿದೆ.

ಕವಿಭೂಷಣ ವೆಂಕಪ್ಪಶೆಟ್ಟಿ (1885–1957)

ಕಾಸರಗೋಡು ಜಿಲ್ಲೆಯ ವರ್ಕಾಡಿ ಸಮೀಪದ ಕುತ್ಯಾರುಗುತ್ತು ಇವರ ಜನ್ಮಸ್ಥಳ. ತಂದೆ ಸಂಕಪ್ಪ ಶೆಟ್ಟಿ. ತಾಯಿ ಮುಂಡ್ರಪ್ಪ ಶೆಡ್ತಿ. ಬಾಲ್ಯದಲ್ಲಿಯೇ ವಿದ್ಯೆಯಲ್ಲಿ ಆಸಕ್ತಿ ಹೊಂದಿದ್ದ ಇವರು ಸಂಸ್ಕೃತವನ್ನು ಆಯುರ್ವೇದವನ್ನು, ಪುರಾಣ ಪ್ರವಚನವನ್ನು ಕರಗತ ಮಾಡಿಕೊಂಡರು. ಯಕ್ಷಗಾನದಲ್ಲಿ ವಿಶೇಷ ಆಸಕ್ತಿ ಹೊಂದಿದ್ದು ಇವರು ಹಾಡುಗಾರಿಕೆ ಕಲಿತದ್ದಲ್ಲದೆ ತಾಳಮದ್ದಳೆಯ ಅರ್ಥಗಾರಿಕೆಯಲ್ಲೂ ಮಿಂಚಿದರು. ಆಕಾಲದ ಅಗ್ರಶ್ರೇಣಿಯ ಅರ್ಥಧಾರಿಗಳಲ್ಲಿ ಇವರು ಒಬ್ಬರಾಗಿದ್ದಾರೆ. ಇವರು ಭರತೇಶ ದಿಗ್ವಿಜಯ ಯಶೋಧರ ಚರಿತ್ರೆ, ಯಕ್ಷಗಾನ ವಾಲಿಸಂಹಾರ ಲತ್ತೆಪಗಡೆ, ರಾಣಾರಾಜಸಿಂಹ, ಭಾರತದ ಕುರುಕುಲ ಮುಂತಾದ ಪ್ರಸಂಗಗಳನ್ನು ರಚಿಸಿದ್ದಾರೆ. ವಾಲಿಸಂಹಾರದ ವಸ್ತು ರಾಮಾಯಣದಿಂದ ಆರಿಸಿದ್ದು ಇವರಿಗೆ ಬಹುಪ್ರಸಿದ್ಧಿಯನ್ನು ತಂದುಕೊಟ್ಟಿದೆ. ಕಥೆ ರಾಮಾಯಣದ್ದಾದರೂ ಆರ್ಯದ್ರಾವಿಡ ಸಂಘರ್ಷವನ್ನು ಇಲ್ಲಿ ಕವಿ ಭೂಷಣರು ಕಡೆದಿರಿಸಿದ್ದಾರೆ. ರಾಮ ಮತ್ತು ವಾಲಿಯರ ಸಂವಾದದಲ್ಲಿ ಅನೇಕ ತಾತ್ವಿಕ ಅಂಶಗಳು ಬಂದಿವೆ. ಪ್ರಸಂಗವು ತೊರವೆ ರಾಮಾಯಣಕ್ಕೆ ಸಾಕಷ್ಟು ಋಣಿಯಾಗಿದೆ. ಇಪ್ಪತ್ತನೇ ಶತಮಾನದ ಮೊದಲ ದಶಕಗಳ ಸಾಂಸ್ಕೃತಿಕ, ಸಾಹಿತ್ಯಕ ವಕ್ತಾರರಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಿಸಿಕೊಂಡ ಇವರಿಗೆ ಕವಿಭೂಷಣರೆಂಬ ಬಿರುದು ಬಂದಿದ್ದು ಯಕ್ಷಗಾನದ ಕಾಯಕಲ್ಪಕ್ಕೆ ಶ್ರಮಿಸಿದವರು.

ಕಡಂದಲೆ ರಾಮರಾವ್

ಇವರು ಇಪ್ಪತ್ತನೆಯ ಶತಮಾನದ ಉತ್ತಮ ಯಕ್ಷಗಾನ ಕವಿಗಳಲ್ಲಿ ಒಬ್ಬರು. ಇವರ ಪಾದುಕಾ ಪಟ್ಟಾಭಿಷೇಕ ರಾಮಾಯಣವನ್ನು ಆಧರಿಸಿ ಬರೆದದ್ದಾಗಿದೆ. ಭರತ ಹಾಗೂ ರಾಮರ ಶೀಲ ಸ್ವಭಾವವನ್ನು ಬಹು ಆದರ್ಶಮಯವಾಗಿ ನಿರೂಪಿಸಿದ್ದಾರೆ. ಹಾಗೇ ನೋಡ ಹೋದರೆ ರಾಮಾಯಣದ ಸಾರ ಇರುವುದೇ ಉತ್ತಮ ಜೀವನ ಮೌಲ್ಯವನ್ನು ಸಾರಲು. ರಾಮಾಯಣದ ಹೆಚ್ಚಿನ ಪಾತ್ರಗಳು ಒಂದಿಲ್ಲೊಂದು ರೀತಿಯಿಂದ ಈ ಬಗೆಯ ಮೌಲ್ಯ ಪ್ರತಿಪಾದಕರೇ ಆಗಿದ್ದಾರೆ. ಕಡಂದಲೆಯವರು ಈ ನಿಟ್ಟಿನಿಂದಲೇ ಪ್ರಸಂಗ ರಚಿಸಿದ್ದಾರೆ.

ಮೂರೂರು ದೇವರ ಹೆಗಡೆ

ಶ್ರೀ ಮೂರೂರು ದೇವರ ಹೆಗಡೆಯವರು ಯಕ್ಷಗಾನ ಪಾತ್ರಧಾರಿಗಳು ಹಾಗೂ ಪ್ರಸಂಗಕಾರರು. ಉತ್ತರ ಕನ್ನಡ ಜಿಲ್ಲೆಯ ಮೂರೂರು ಕಲ್ಲಬ್ಬೆ ಮೇಳಗಳ ನೇತಾರರಾಗಿ ಪ್ರಸಿದ್ಧಿ ಪಡೆದವರು. ಕೆರೆಮನೆ ಶಿವರಮ ಹೆಗಡೆಯವರ ಸಮಕಾಲೀನರಾದ ಇವರು ತಮ್ಮ ಪಾತ್ರಗಾರಿಕೆಯ ಛಾಪನ್ನು ಅನೇಕ ಎಳೆಯ ಕಲಾವಿದರ ಮೇಲೆ ಮೂಡಿಸಿದ್ದರಿಂದ ಇಂದಿಗೂ ಕಲಾಭಿಮಾನಿಗಳು ನೆನೆಯುತ್ತಾರೆ. ರಾಮಾಯಣಕ್ಕೆ ಸಂಬಂಧಿಸಿದಂತೆ ಇವರು ಬರೆದ 'ಪ್ರಚಂಡಲಂಕೇಶ್ವರ' ಪ್ರಸಂಗವು ಪ್ರಯೋಗದಲ್ಲಿ ಜಯಭೇರಿ ಬಾರಿಸಿದೆ. ರಾವಣನ ವೈಭವೋಪೇತವಾದ ಬದುಕನ್ನು ಆಕರ್ಷಕವಾಗಿ ಚಿತ್ರಿಸಿದ್ದಾರೆ.

ಜಾನಕೈ ತಿಮ್ಮಪ್ಪ ಹೆಗ್ಗಡೆ

ಉತ್ತರಕನ್ನಡದ ಇನ್ನೊಬ್ಬ ಜನಪ್ರಿಯ ಯಕ್ಷಗಾನ ಪ್ರಸಂಗಕಾರರೆಂದರೆ ಜಾನಕೈ ತಿಮ್ಮಪ್ಪ ಹೆಗಡೆಯವರು. ಸಂಪೂರ್ಣ ರಾಮಾಯಣದ ಕಥೆಯನ್ನು ಪ್ರಸಂಗ ರೂಪದಲ್ಲಿ ಬರೆದಿರುವುದು ಇವರ ಹೆಚ್ಚುಗಾರಿಕೆಯಾಗಿದೆ. ಇವರ ಸಂಪೂರ್ಣ ರಾಮಾಯಣದಲ್ಲಿ ಕಥೆಯ ಓಟ ಬಿರುಸಾಗಿದೆ. ಅನೇಕ ಹಾಡುಗಳು ಆಕರ್ಷಕವಾಗಿ, ಪದ್ಯದ ಬಂಧ ಕೂಡ ಸೊಗಸಾಗಿದೆ. ಪ್ರದರ್ಶನಕ್ಕೆ ಯೋಗ್ಯವಾಗುವ ಘಟನೆಗಳಿಗೆ ಮಾತ್ರ ಒತ್ತು ಕೊಡಲಾಗಿದೆ. ಆದ್ದರಿಂದ ಅನಗತ್ಯ ವಿವರಗಳು ಕಡಿಮೆಯಾಗಿವೆ.

ಪುತ್ತಿಗೆ ರಾಮಕೃಷ್ಣ ಭಾಗವತರು

ಇವರು ಈ ಶತಮಾನದ ಹಿರಿಯ ಯಕ್ಷಗಾನ ಭಾಗವತರು ಮತ್ತು ಕವಿಗಳು. ಶ್ರೀರಾಮ ಪಟ್ಟಾಭಿಷೇಕ ಮತ್ತು ಲವಣಾಸುರ ಕಾಳಗ ಎಂಬ ಎರಡು ಪ್ರಸಂಗಗಳು ರಾಮಾಯಣ ವಸ್ತುವನ್ನು ಆಧರಿಸಿದ್ದ ಪ್ರಸಂಗಗಳಾಗಿವೆ. ಪಟ್ಟಾಭಿಷೇಕವು ರಾವಣ ವಧೆಯ ನಂತರದ ಕಥಾನಕವನ್ನು ಹೊಂದಿದೆ. ಲಾಲಿತ್ಯ ಪೂರ್ಣವಾದ ಭಾಷೆಯಿಂದ ಕೂಡಿದ ಈ ಪ್ರಸಂಗ ಉತ್ತಮ ರಾಮಾಯಣ ಪ್ರಸಂಗಗಳಲ್ಲಿ ಒಂದಾಗಿದೆ.

ಸೀತಾನದಿ ಗಣಪಯ್ಯ ಶೆಟ್ಟಿ

ಕಾರ್ಕಳ ತಾಲೂಕಿನ ಸೀತಾನದಿಯವರಾದ ಗಣಪಯ್ಯ ಶೆಟ್ಟಿಯವರು ಕ್ರಿ.ಶ. 1909ರಲ್ಲಿ ಜನಿಸಿದರು. ಪ್ರಾಥಮಿಕ ಶಾಲಾ ಅಧ್ಯಾಪಕರಾಗಿದ್ದು ಕೊಂಡು ಐವತ್ತಕ್ಕೂ

ಹೆಚ್ಚು ಪ್ರಸಂಗಗಳನ್ನು ರಚಿಸಿದ್ದಾರೆ. ಪ್ರಸಂಗ ರಚನೆಯೊಂದಿಗೆ ಕನ್ನಡದಲ್ಲಿ ನಾಟಕ, ಕಾವ್ಯ ಅನುವಾದ ಮುಂತಾದವುಗಳನ್ನು ಮಾಡಿ ಪ್ರಸಿದ್ಧರಾಗಿದ್ದಾರೆ. ಯಕ್ಷಗಾನ ಅರ್ಥಧಾರಿಯಾಗಿಯೂ ಹೆಸರುಗಳಿಸಿದ್ದಾರೆ. ಇವರು ರಚಿಸಿರುವ ಪ್ರಸಂಗಗಳಲ್ಲಿ ಮುಖ್ಯವಾದವುಗಳೆಂದರೆ ಕುಂತಿಸ್ವಯಂವರ, ಕರ್ಣಪಟ್ಟಾಭಿಷೇಕ, ಚಿತ್ರಾಂಗದಾ, ಚವನೋಪಾಖ್ಯಾನ ಕಾಂತಾಬಾರೆ ಬುದಬಾರೆ ತುಳುನಾಡ ಸಿರಿದೇವಿ, ಪಂಜುಲಿರ್ತಿ ಪ್ರತಾಪ, ಸತ್ಯಾಶ್ರಯ ಪುಲಿಕೇಶಿ, ಮಂದವಳಕ್ಷೇತ್ರ ಮಹಾತ್ಮೆ, ಸಾಧ್ವಿಸದಾರಮಾ, ಸತಿಮಹಾಶ್ವೇತೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ ಮುಂತಾದವು. ರಾಮಾಯಣಕ್ಕೆ ಸಂಬಂಧಿಸಿದಂತೆ ಇವರು ಬರೆದ ವಾಲಿವಿಜಯ ಬಹುಖ್ಯಾತವಾಗಿದೆ. ಅನೇಕ ರಾಮಾಯಣ ಪ್ರಸಂಗಗಳಿಗೆ ಅರ್ಥಗಳನ್ನು ಬರೆದಿದ್ದಾರೆ. ಸೀತಾನದಿ ಗಣಪಯ್ಯ ಶೆಟ್ಟಿಯವರು ತುಳು ಪ್ರಸಂಗಗಳನ್ನು ರಚಿಸಿ ಖ್ಯಾತರಾಗಿದ್ದಾರೆ. ಇವರ ಅಭಿಮಾನಿಗಳೆಲ್ಲಾ ಸೇರಿ ಇವರಿಗೆ 'ಸೀತಾನದಿ' ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಿದ್ದಾರೆ. ಆಧುನಿಕ ಯಕ್ಷಗಾನ ಕವಿಗಳಲ್ಲಿ ಸೀತಾನದಿಯವರಿಗೆ ಹಿರಿಯಸ್ಥಾನವಿದೆ.

ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್

ಕಾಸರಗೋಡಿನ ಕೀರಿಕ್ಕಾಡಿನವರಾದ ಶ್ರೀ ವಿಷ್ಣುಭಟ್‌ರು ಜನಿಸಿದ್ದು 1913ರಲ್ಲಿ ಅಧ್ಯಾಪಕರಾಗಿ ಯಕ್ಷಗಾನ ಪ್ರಸಂಗಕಾರರಾಗಿ, ಅರ್ಥಧಾರಿಗಳಾಗಿ ಭಟ್‌ರು ಖ್ಯಾತಿಪಡೆದಿದ್ದಾರೆ. ಬನಾರಿಯಲ್ಲಿ ಶ್ರೀ ಗೋಪಾಲಕೃಷ್ಣಯಕ್ಷಗಾನ ಸಂಘವನ್ನು ಸ್ಥಾಪಿಸಿದ ಇವರು ಅನೇಕ ಕಿರಿಯ ಕಲಾವಿದರಿಗೆ ಆದರ್ಶಪ್ರಾಯರಾಗಿದ್ದರು. ಇವರು 90ಕ್ಕೂ ಹೆಚ್ಚು ಪ್ರಸಂಗಗಳನ್ನು ಬರೆದಿದ್ದಾರೆ. ಕಚೋಪಖ್ಯಾನ, ಗಜಾಸುರ ಮೋಕ್ಷ, ರಾಜಾಸುದರ್ಶನ, ಕಾಲಯವನ ಕಾಳಗ, ಚಂದ್ರಹಾಸ, ವೀರಅಭಿಮನ್ಯು, ಶಿವ ಪಂಚಾಕ್ಷರಿ ಮಹಿಮೆ, ಸಹಸ್ರಕಂಠ ರಾವಣ, ಸೀಮಂತಿನಿ ಕಲ್ಯಾಣ ಮುಂತಾದವು ಇವರಿಗೆ ಹೆಸರುಗಳಿಸಿಕೊಟ್ಟ ಮುಖ್ಯ ಪ್ರಸಂಗಗಳಾಗಿವೆ. ಇವರ ಕಾಲನೇಮಿಕಾಳಗ ರಾಮಾಯಣವನ್ನು ಆಧರಿಸಿ ಬರೆದ ಪ್ರಸಂಗವಾಗಿದೆ. ಯಕ್ಷಗಾನ ಪ್ರಸಂಗರಚನೆ ಅಲ್ಲದೆ ಕಾವ್ಯ, ಕಾದಂಬರಿ, ಆತ್ಮಕಥನಗಳನ್ನು ಬರೆದಿದ್ದಾರೆ. ರಾಮಾಯಣದ ಪಂಚವಟಿ, ಅಂಗದ ಸಂಧಾನ, ವಿಭೀಷಣ ನೀತಿ ಮುಂತಾದ ಪ್ರಸಂಗಗಳಿಗೆ ಅರ್ಥಗಳನ್ನು ಬರೆದಿದ್ದಾರೆ. ಇವರ ರಚನೆಗಳು ಪಾಂಡಿತ್ಯ ಪೂರ್ಣವಾಗಿದ್ದು ಕಾವ್ಯಾತ್ಮಕವಾಗಿವೆ. ಯಕ್ಷಗಾನದ ಮೇರುಕಲಾವಿದ ಶೇಣಿ ಗೋಪಾಲಕೃಷ್ಣ ಭಟ್‌ರು ಯಕ್ಷಗಾನರಂಗಕ್ಕೆ ಬರುವಲ್ಲಿ ಕೀರಿಕ್ಕಾಡು ಅವರ ಪಾತ್ರದೊಡ್ಡದು. ಭಟ್‌ರ ಪುತ್ರರಾದ ಡಾ॥ ರಮಾನಂದ ಬನಾರಿಯವರು ಒಬ್ಬ ಉತ್ತಮ ಅರ್ಥಧಾರಿಗಳಾಗಿದ್ದಾರೆ.

ಬೆಳಸಲಿಗೆ ಗಣಪತಿ ಹೆಗಡೆ.

ಉತ್ತರ ಕನ್ನಡ ಜಿಲ್ಲೆಯವರಾದ ಶ್ರೀ ಗಣಪತಿ ಹೆಗಡೆಯವರು ಸಿದ್ಧಾಪುರ ತಾಲೂಕಿನವರು. ಇವರು ಕೂಡ ಜನ್ಮ ತಳೆದದ್ದು 1913ರಲ್ಲಿ ಇಪ್ಪತ್ತಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಬರೆದಿರುವ ಬೆಳಸಲಿಗೆಯವರು ಭಾವನಾತ್ಮಕವಾದ ಅರ್ಥಗಾರಿಕೆಗೆ ಹೆಸರಾದವರು. ಸಮಗ್ರಭಾರತ, ಕೌಂತೇಯಕರ್ಣ, ವಸಂತ ಸೇನಾ, ಆಂಜನೇಯ ಪರಾಜಯ, ಭಾನು ತೇಜಸ್ವಿ, ಗಂಗಾವತರಣ, ಕಲಿಗರ್ವಭಂಗ, ಪುತ್ರಬಲಿದಾನ,

ಮುಂತಾದವು ಇವರ ಪ್ರಸಿದ್ಧ ಪ್ರಸಂಗಗಳಾಗಿವೆ. ರಾಮಾಯಣಕ್ಕೆ ಸಂಬಂಧಿಸಿದಂತೆ ಇವರು ಬರೆದ ಮಹಾಸತಿ ಮಂಡೋದರಿ, ಅಹಲ್ಯೋದ್ಧಾರ, ಸಂಪೂರ್ಣ ರಾಮಾಯಣ ಇವರಿಗೆ ಹೆಸರು ತಂದ ಪ್ರಸಂಗಗಳಾಗಿವೆ. ಇವರ ಹೆಚ್ಚಿನ ಪ್ರಸಂಗಗಳಲ್ಲಿ ಸಂವಾದಕ್ಕೆ ಒಳ್ಳೆಯ ಅವಕಾಶವಿದ್ದು, ಭಾಷೆಯ ಬಳಕೆಯಲ್ಲಿ ಲಾಲಿತ್ಯವನ್ನು ಕಾಣಬಹುದು.

ಹೊಸ್ತೋಟ ಮಂಜುನಾಥ ಭಾಗವತ

ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಸಮೀಪದ ಹೊಸ್ತೋಟದಲ್ಲಿ 1938ರಲ್ಲಿ ಗಣಪತಿಭಟ್ ಮತ್ತು ಮಹಾದೇವಿಯವರ ಪುತ್ರನಾಗಿ ಜನಿಸಿದ ಇವರ ಸಾಧನೆ ಅಪ್ರತಿಮ ವಾದದ್ದು. ಅನೇಕ ಹಿರಿಯ ಕಲಾವಿದರ ಒಡನಾಟದಲ್ಲಿ ಯಕ್ಷಗಾನವನ್ನು ಅಭ್ಯಸಿಸಿದ ಇವರು ಮೇಳದಲ್ಲೂ ತಿರುಗಾಡಿ ಅನುಭವ ಹೊಂದಿದವರು. ಆದರೆ ಯಕ್ಷಗಾನ ಶಿಕ್ಷಕರಾಗಿ, ತರಬೇತುದಾರರಾಗಿ ಇವರು ಮಾಡಿದ ಸೇವೆ ಉಲ್ಲೇಖನಾರ್ಹ. ಇವರು ನೂರಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. ಭೀಷ್ಮಪ್ರತಿಜ್ಞೆ, ಗುರುದ್ರೋಣ, ವಿಷಪ್ರಾಶನ, ಯಕ್ಷಪ್ರಶ್ನೆ, ಕೀಚಕವಧೆ, ಗದಾಪರ್ವ, ರುಕ್ಮಿಣಿ ಹರಣ, ಲಕ್ಷಣಾಸ್ವಯಂವರ, ಕೃಷ್ಣ ನಿರ್ಯಾಣ, ಅಕ್ಷರವಿಜಯ, ಜೀಮೂತವಾಹನ, ನಹುಷ ವಿಜಯ, ಮೂಲಕಾಸುರ ಕಾಳಗ, ಸತೀಸೀಮಂತಿನಿ ಶನಿಮಹಾತ್ಮೆ ಮುಂತಾದವು ಪ್ರಸಿದ್ಧ ಪ್ರಸಂಗಗಳಾಗಿವೆ. ರಾಮಾಯಣವನ್ನು ಆಧರಿಸಿ ಇವರು ಬರೆದ ಪುತ್ರಕಾಮೇಷ್ಠಿ, ಸೀತಾ ಪರಿಣಯ, ಅಂಗದ ಸಂಧಾನ, ಶ್ರೀರಾಮ ನಿರ್ಯಾಣ, ಸೀತಾ ಪರಿತ್ಯಾಗ ಮುಂತಾದವುಗಳು ಯಕ್ಷಗಾನ ಸಾಹಿತ್ಯದಲ್ಲಿ ಚಿರ ಕಾಲ ಉಳಿಯುವಂತಹವು. ಇವರ ಪ್ರಸಂಗಗಳಲ್ಲಿನ ಪಾತ್ರ ವೈಭವ, ಸನ್ನಿವೇಶಗಳನ್ನು ತರುವ ಬಗೆ ವಿನೂತನವಾಗಿದೆ. ಸರಳ ರಚನೆಗಳಿಂದ ಕೂಡಿದ ಇವರ ಕವಿತ್ವ ಆಕರ್ಷಕವಾಗಿದೆ ಹಾಗೂ ಸಂಭಾಷಣೆಗೆ ಒದಗಿ ಬರುತ್ತವೆ. ಅಂಧಬಾಲಕರಿಗೆ ಯಕ್ಷಗಾನ ಕಲಿಸಿ ಪ್ರದರ್ಶಿಸಿದ ಹಿರಿಮೆ ಕೂಡ ಇವರದ್ದಾಗಿದೆ. ಯಕ್ಷಗಾನ ರಂಗದ ಬಗ್ಗೆ ಅಥೆಂಟಿಕ್ ಆಗಿ ಮಾತನಾಡಬಲ್ಲ ಕೆಲವೇ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಇವರ ಅಭಿಮಾನಿಗಳು ಇವರಿಗೆ "ಪಷ್ಟ್ಯಬ್ಧ" ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಿದ್ದಾರೆ.

ಡಿ.ಎಸ್. ಶ್ರೀಧರ

ಕ್ರಿ.ಶ. 1950ರಲ್ಲಿ ಜನಿಸಿರುವ ಶ್ರೀ ಡಿ.ಎಸ್. ಶ್ರೀಧರ್ ಅವರು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ನಿಟ್ಟು ರಿನವರು. ಇವರ ತಂದೆಯ ಹೆಸರು ಶ್ರೀಪಾದ ಹಾಗೂ ತಾಯಿಯ ಹೆಸರು ಸರಸ್ವತಿ. ಪ್ರಕೃತ ದಕ್ಷಿಣ ಕನ್ನಡದ ಕಿನ್ನಿಗೋಳಿಯಲ್ಲಿ ನೆಲೆಸಿದ್ದಾರೆ. ಶ್ರೀಯುತರು ಕನ್ನಡ ಉಪನ್ಯಾಸಕರಾಗಿಯೂ ಖ್ಯಾತಿ ಹೊಂದಿದ್ದಾರೆ. ಬಾಲ ಭಾರತ, ಮಹಾಪ್ರಸ್ಥಾನ, ಇವರ ಪ್ರಸಿದ್ಧ ಪ್ರಸಂಗಗಳಾಗಿವೆ. ಕಿನ್ನಿಗೋಳೀಯ 'ಯಕ್ಷಲಹರಿ'ಯ ಸಂಸ್ಥಾಪಕರಲ್ಲಿ ಒಬ್ಬರಾದ ಇವರು ಯಕ್ಷಗಾನದಲ್ಲಿ ಹಾಗೂ ತಾಳ ಮದ್ದಲೆಗಳೆರಡರಲ್ಲೂ ಭಾಗವಹಿಸಿ ಅನುಭವ ಉಳ್ಳವರು. ರಾಮಾಯಣವನ್ನು ಆಧರಿಸಿ ಇವರು ಬರೆದ ಕಬಂಧ ಮೋಕ್ಷ ಒಂದು ಉತ್ತಮ ಪ್ರಸಂಗವಾಗಿದೆ. ಇವರ ರಚನೆಗಳಲ್ಲಿ ಅಭಿನಯಕ್ಕೆ ಅಗತ್ಯವಾಗುವ ಹಾಡುಗಳಿದ್ದು ರಂಜನೆಗೆ ಒದಗಿಬರುತ್ತದೆ. ಡಿ.ಎಸ್. ಶ್ರೀಧರ್ ಅವರು ಲೇಖಕರಾಗಿ, ವಾಗ್ಮಿಗಳಾಗಿ, ಅರ್ಥಧಾರಿಗಳಾಗಿಯೂ ಹೆಸರು ಮಾಡಿದ್ದಾರೆ.

ಹೀಗೆ ಐನೂರು ವರ್ಷಗಳಲ್ಲಿ ಐವತ್ತಕ್ಕೂ ಹೆಚ್ಚಿನ ಯಕ್ಷಗಾನ ಕವಿಗಳು ರಾಮಾಯಣವನ್ನು ಆಧರಿಸಿ ಪ್ರಸಂಗಗಳನ್ನು ರಚಿಸಿದ್ದಾರೆ. ಇವರಲ್ಲಿ ಹೆಚ್ಚು ಬಳಕೆಯಲ್ಲಿರುವ ಪ್ರಸಂಗಗಳನ್ನು ಬರೆದಿರುವ, ಅದರಲ್ಲೂ ಪಡುವಲಪಾಯ ಸಂಪ್ರದಾಯದ ಯಕ್ಷಗಾನ ಪ್ರಸಂಗಗಳನ್ನು ಬರೆದವರನ್ನು ಇಲ್ಲಿ ಪರಿಚಯಿಸಲಾಗಿದೆ. ಸಾಕಷ್ಟು ಬೇರೆ ಪ್ರಸಂಗಕಾರರಿದ್ದು ರಾಮಾಯಣವನ್ನು ಆಧರಿಸಿ ಪ್ರಸಂಗಗಳನ್ನು ಬರೆದಿದ್ದರೂ ಕೂಡ ಮಾಹಿತಿ ಹಾಗೂ ವಿವರಗಳು ದೊರೆಯದ ಕಾರಣ ಇಲ್ಲಿ ಚರ್ಚಿಸಲಾಗಿಲ್ಲ. ಚರ್ಚಿತರಾದ ಮೇಲ್ಕಂಡ ಯಕ್ಷಗಾನ ಕವಿಗಳ ಕವಿತ್ವ ಹಾಗೂ ರಚನಾಶಕ್ತಿ ಸರ್ವಮಾನ್ಯವಾದದ್ದು. ಇವರುಗಳು ತಮ್ಮ ಪ್ರಸಂಗಗಳ ಮೂಲಕ ಕಟ್ಟಿಕೊಟ್ಟ ಜೀವನ ಮೌಲ್ಯವನ್ನು ಕಾವ್ಯ ಶಕ್ತಿಯ ಸಾರವನ್ನು, ಸಂವಾದಕ್ಕೆ ಒದಗಿಬರುವ ಸೊಬಗನ್ನು ಮೆಚ್ಚಲೇಬೇಕು. ಕನ್ನಡ ಸಾಹಿತ್ಯ ಸರಸ್ವತಿಯ ಮಡಿಲಿಗೆ ಈ ಕವಿಗಳು ತಮ್ಮ ಸಹಜಸೊಬಗಿನ ಪುಷ್ಪಗಳನ್ನು ಅರ್ಪಿಸಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯ ಕೊಂಡಿಯಾಗಿ ಉಳಿದಿದ್ದಾರೆ.

ಅಡಿಟಿಪ್ಪಣಿಗಳು :

1. ಯಕ್ಷಗಾನ ಪಂಚವಟಿ ರಾಮಾಯಣ – ಪುಟ 2 (ಪಾರ್ತಿಸುಬ್ಬನ ಯಕ್ಷಗಾನಗಳು ಪು 64)
2. ಪಾರ್ತಿಸುಬ್ಬ – ಮುಳಿಯ ತಿಮ್ಮಪ್ಪಯ್ಯ, ಪ್ರ ಬಾಳಿಗ ಅಂಡ್ ಸನ್ಸ್, ಮಂಗಳೂರು.
3. ಪಾರ್ತಿಸುಬ್ಬ – ಮುಳಿಯ ತಿಮ್ಮಪ್ಪಯ್ಯ, ಪ್ರ ಬಾಳಿಗ ಅಂಡ್ ಸನ್ಸ್, ಮಂಗಳೂರು. ಪುಟ 14.
4. ಯಕ್ಷಗಾನ – ಡಾ. ಶಿವರಾಮ ಕಾರಂತ, ಪ್ರ ಮೈಸೂರು ವಿಶ್ವವಿದ್ಯಾಲಯ.
5. ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣಭಟ್ಟ, ಪೀಠಿಕೆ – ಪುಟ 24
6. ಯಕ್ಷಗಾನ ವಿಶ್ವದರ್ಶನ – ಪಾರ್ತಿಸುಬ್ಬ – ಕಂಬಣೂರು ಬಾಲಕೃಷ್ಣರಾವ್ – 1978, ಪುಟ 173
7. ಚೂಡಾಮಣಿ – ಪಾರ್ತಿಸುಬ್ಬ – ಪುಟ 9
8. ಅದೇ – ಪುಟ 10
9. ಅದೇ – ಪುಟ 11
10. ಚೂಡಾಮಣಿ – ಪಾರ್ತಿಸುಬ್ಬ ಪುಟ 11
11. ಅಂಗರಸಂಧಾನ ಪುಟ 13
12. ಪಂಚವಟಿ – ಪುಟ 17
13. ಅತಿಅಯ ಕಾಳಗ – ರಾಮಭಟ್ಟ ಪುಟ 14
14. ಯಕ್ಷಗಾನ ಅತಿಕಾಯ ಕಾಳಗ – ರಾಮಭಟ್ಟ ಪುಟ 35
15. ಯಕ್ಷಗಾನ ಅತಿಕಾಯ ಕಾಳಗ – ರಾಮಭಟ್ಟ ಪುಟ 35
16. ಯಕ್ಷಗಾನ – ಡಾ. ಶಿವರಾಮ ಕಾರಂತ ಪುಟ 150
17. ಅತಿಕಾಯ ಕಾಳಗ ಪುಟ – 14
18. ಕಾಲನೇಮಿ ಕಾಳಗ ಪುಟ–37
19. ರಾವಣೋದ್ಭವ – ನಗರದ ಸುಬ್ಬ
20. ರಾವಣೋದ್ಭವ – ನಗರದ ಸುಬ್ಬ.
21. ಶತಾಸ್ಯ ರಾವಣನ ಕಾಳಗ – ವಿಷ್ಣು ಸಭಾಹಿತ.

* * * * *

ಅಧ್ಯಯನದ ನೆಲೆ – ನಿಲುವು

ಸಾಹಿತ್ಯ ಪ್ರಸಂಗಗಳಲ್ಲಿ ನಾಟಕಕ್ಕೆ ವಿಶಿಷ್ಟವಾದ ಸ್ಥಾನವಿದೆ. ಜನ ಸಮೂಹದ ಮೇಲೆ ನಾಟಕ ಪರಿಣಾಮಕಾರಿ ಪ್ರಭಾವವನ್ನು ಬೀರುತ್ತದೆ. ಪ್ರೇಕ್ಷಕನ ಕಣ್ಣ ಮುಂದೆ ಬಿಚ್ಚಿಡುವ ಜೀವನ ವ್ಯಾಪಾರ ಮನಸ್ಸಿನಲ್ಲಿ ಹಾಗೇ ಅಚ್ಚೊತ್ತುತ್ತದೆ. ಸಮುದಾಯವನ್ನು ತಾಗಬೇಕಾದರೆ ಈ ಮಾಧ್ಯಮ ಹೆಚ್ಚು ಪರಿಣಾಮಕಾರಿ. ಆದುದರಿಂದಲೇ ಕಮ್ಯೂನಿಸ್ಟ ರಾಷ್ಟ್ರಗಳಲ್ಲಿ ಸಮೂಹದೊಂದಿಗಿನ ಸಂಬಂಧಕ್ಕೆ ನಾಟಕವನ್ನೇ ಹೆಚ್ಚು ಅವಲಂಬಿಸುತ್ತಾರೆ. ಈ ಪ್ರಭಾವೀ ಮಾಧ್ಯಮದ ಮೂಲಕ ಶೋಷಣೆಯ ನಾನಾ ಮುಖಗಳನ್ನು ಪ್ರದರ್ಶಿಸಿದಾಗ ಜನತೆ ಅದಕ್ಕೆ ಬೇಗ ಸ್ಪಂದಿಸುತ್ತಾರೆ. ಇಂದು ಬ್ರೆಕ್ಟ ಮುಂತಾದವರ ನಾಟಕಗಳಿಗೆ ಹೆಚ್ಚು ಒತ್ತು ಬಂದಿರುವುದು ಇದರಿಂದಾಗಿಯೇ. ಅಲ್ಲದೆ ನಾಟಕದ ರಚನೆ ಹಾಗೂ ಪ್ರಯೋಗ ಹಲವು ಪ್ರತಿಭೆಗಳ ಸಮ್ಮಿಲನದಿಂದ ಉಂಟಾಗಿರುತ್ತದೆ. ಇಲ್ಲಿ ಸಂಗೀತ, ಸಾಹಿತ್ಯ, ಅಭಿನಯಗಳೆಲ್ಲಾ ಇರುವುದರಿಂದಲೇ ಪ್ರಾಚೀನರು ಇದನ್ನು 'ಬಹುಧಾಪ್ಯೆಕ ಸಮಾರಾಧನಂ' ಎಂದು ಕರೆದರು.

ನಮ್ಮ ನಾಡಿನಲ್ಲಿ ಚಿಕ್ಕ ದೇವರಾಜರ ಕಾಲದವರೆಗೆ ಕನ್ನಡದಲ್ಲಿ ನಾಟಕ ರಚನೆ ಗೊಂಡಿರುವುದಕ್ಕೆ ಯಾವ ಪುರಾವೆಯೂ ದೊರೆಯುವುದಿಲ್ಲ. 17ನೇ ಶತಮಾನದ ಸಿಂಗರಾರ್ಯನ 'ಮಿತ್ರ ವಿಂದಗೋವಿಂದ'ವೇ ದೊರೆತಿರುವ ನಾಟಕಗಳಲ್ಲಿ ಮೊದಲನೇದ್ದಾಗಿದೆ. ಕನ್ನಡ ನಾಟಕ ರಚನೆಯ ಸ್ಥಿತಿಯೇ ಹೀಗಿರುವಾಗ ಇಲ್ಲಿನ ಶಿಷ್ಟ ರಂಗ ಭೂಮಿಯ ಬಗ್ಗೆ ಪ್ರಶ್ನೆ ಏಳುತ್ತದೆ. ಯಾವ ಮಾಹಿತಿಯೂ ದೊರೆಯದೇ ಇರುವುದರಿಂದ ಈ ಅರಕೆಯನ್ನು ಒಪ್ಪಿಕೊಳ್ಳುವುದು ಅನಿವಾರ್ಯ. ಕನ್ನಡ ಸಂದರ್ಭದಲ್ಲಿ ಶಿಷ್ಟರಂಗಭೂಮಿಯ ಈ ಅರಕೆಯನ್ನು ಜನಪದ ರಂಗಭೂಮಿ ತುಂಬಿಕೊಟ್ಟದ್ದು ಒಂದು ಸಮಾಧಾನದ ಸಂಗತಿ.

ಜಾನಪದ ರಂಗಭೂಮಿಯ ಸ್ಪಷ್ಟ ಚಿತ್ರ ನಮಗೆ ದೊರೆಯದೇ ಇದ್ದರೂ ಅದು ಕ್ರಿಯಾಶೀಲವಾಗಿತ್ತೆಂದು ತಿಳಿಯುತ್ತದೆ. ಜಾನಪದ ರಂಗಭೂಮಿಯಲ್ಲಿ ಯಕ್ಷಗಾನದ ಸ್ಥಾನ ಮಹತ್ತರವಾದುದು. ಯಕ್ಷಗಾನ ಪ್ರಸಂಗಗಳು ಅಂದಿನ ರಂಗ ಭೂಮಿಗೆ ಅಗತ್ಯವಿದ್ದ ಸಾಹಿತ್ಯವನ್ನು ಒದಗಿಸಿದವು. ಈ ಸಹಜ ಸ್ಫೂರ್ತ ಸಾಹಿತ್ಯ ಮೋಹಕ ಹಾಡುಗಾರಿಕೆ ಹಾಗೂ ಭಾವಪ್ರದಕುಣಿತದಿಂದ ತನ್ನದೇ ಆದ ಸ್ವಂತಿಕೆಯನ್ನು ಹೊಂದಿ ಯಕ್ಷಗಾನ ಕಲೆ ಜೀವಂತ ಕಲೆಯಾಯಿತು.

ಈ ಉದ್ದೇಶಕ್ಕಾಗಿಯೇ ಸೃಷ್ಟಿಗೊಂಡ ಪ್ರಸಂಗ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ತೀರ ಅಗತ್ಯವಾದ ಕಾರ್ಯವನ್ನು ಮಾಡಿದೆ. ನಮ್ಮ ಶಿಷ್ಟ ಸಾಹಿತ್ಯದ ಮೌಲಿಕ ಕೃತಿಗಳನ್ನು ಜನತೆಗೆ ತಲುಪಿಸಿದವರು ಯಕ್ಷಗಾನ ಕವಿಗಳು. ಗದಗು ಭಾರತ, ತೊರವೇ ರಾಮಾಯಣ, ಕೌಶಿಕ ರಾಮಾಯಣ, ಜೈಮಿನಿ ಭಾರತ ಮುಂತಾದ ಪ್ರಧಾನ ಕೃತಿಗಳ ಜೀವನ ಮೌಲ್ಯವನ್ನು ತಾವು ಹೀರಿಕೊಂಡು ತಮ್ಮ ಪ್ರಸಂಗಗಳ ಮೂಲಕ ಅದರ ಸಾರವನ್ನು ಜನತೆಗೆ ಕೊಟ್ಟರು. ಈ ಬಗೆಯ ಸಾಹಿತ್ಯದ ಅಂತಃ ಪ್ರವಾಹಕ್ರಿಯೆ (Reaspiration)ಯನ್ನು ತಮಗೆ ಅರಿವಿಲ್ಲದಂತೆ ಈ ಕವಿಗಳು ನಡೆಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 15ನೇ ಶತಮಾನದ ಈಚಿನ ಕಾಲವನ್ನು ಭಕ್ತಿ ಸಾಹಿತ್ಯದ ಯುಗವೆಂದು ಗುರುತಿಸಲಾಗಿದೆ. ಈ ಕಾಲದ ಹೆಚ್ಚಿನ ಸಾಹಿತ್ಯ ಕೃತಿಗಳಲ್ಲಿ ಭಕ್ತಿಯ ಪಾರಮ್ಯವೇ ವಿಶೇಷವಾಗಿದೆ. ನಮಗೆ ದೊರೆತಿರುವ ಯಕ್ಷಗಾನ ಪ್ರಸಂಗಗಳು ಈ ಕಾಲದ ಅನಂತರವೇ ಬಂದಂತಹವುಗಳು. ಇವುಗಳಲ್ಲಿಯೂ ಇದೇ ಧ್ವನಿಯು ಪ್ರತಿಧ್ವನಿತವಾಗಿದೆ. ರಾಮಾಯಣ ಪ್ರಸಂಗಗಳೂ ಕೂಡ ಭಕ್ತಿ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿರುವುದು ಸ್ಪಷ್ಟ. ಇದಕ್ಕೆ ಕೊಡಬಹುದಾದ ಖಚಿತ ಉದಾಹರಣೆ ಎಂದರೆ ಅತಿಕಾಯ ಕಾಳಗದ ಅತಿಕಾಯ. ಶ್ರೀಮದ್ ರಾಮಾಯಣದಲ್ಲಿ ಕೇವಲ ಒಬ್ಬ ರಾಕ್ಷಸ ಪುತ್ರನಾದ ಈತ ತೊರವೇ ರಾಮಾಯಣದಲ್ಲಿ ಭಾಗವತ ಮಸ್ತಕ ಮಣಿಯಾಗಿ ಬೆಳಗಿದ್ದಾನೆ. ಆದರೆ ಅದು ಕೇವಲ ಪಂಡಿತರಿಗಷ್ಟೇ ಅರಿವಿಗೆ ಬರಬಹುದಾದ ಸಂಗತಿಯಾಗಿತ್ತು. ಆದರೆ ಇಂದು ಪಾಮರರಿಗೂ ಕೂಡ ಅತಿಕಾಯ ಪಾತ್ರ ವೈಭವದ ದರ್ಶನವಾಗುವುದು ಈ ನಮ್ಮ ಪ್ರಸಂಗ ಸಾಹಿತ್ಯದ ಮೂಲಕ. ಇಷ್ಟು ಮಾತ್ರವಲ್ಲದೆ ಕನ್ನಡದ ಅನೇಕ ಉತ್ತಮ ಸಾಹಿತ್ಯ ಪೂರ್ಣ ಭಾಗಗಳು ಈ ನಮ್ಮ ಕವಿಗಳಿಂದ ಜನ ಸಾಮಾನ್ಯರಿಗೆ ಹರಿದು ಬಂದಿವೆ. ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಹೃದಯಂಗಮ ಭಾಗವಾದ ರಾಮಾಶ್ವಮೇಧ ಪ್ರಸಂಗವು ಜನತೆಯ ಹೃದಯವನ್ನು ಸೂರೆಗೊಂಡಿದೆ. ಹೀಗೆ ಪ್ರಸಂಗಗಳು ಕನ್ನಡ ಸಾಹಿತ್ಯದ ಅಂತಃ ಪ್ರವಾಹ ಕ್ರಿಯೆಯಲ್ಲಿ ಪಾಲುಗೊಂಡಿರುವುದನ್ನು ಗುರುತಿಸಬಹುದು. ಕನ್ನಡ ಸಾಹಿತ್ಯದಲ್ಲಿ ಯಕ್ಷಗಾನ ಪ್ರಸಂಗಗಳ ಸ್ಥಾನ ನಿರ್ದೇಶನ ಮಾಡುವಾಗ ಈ ಅಂಶ ಗಮನೀಯ.

ಇಂದು ನಮ್ಮ ಸಂಸ್ಕೃತಿಯ ಬೇರುಗಳು ಅಡಗಿರುವುದು ನಮ್ಮ ಹಳ್ಳಿಗಳಲ್ಲಿ. ನಮ್ಮ ಪರಂಪರೆಯ ಎಲ್ಲಾ ಅಂಶಗಳು ಆ ಮುಗ್ಧ ಜನತೆಯಲ್ಲಿ ಜೀವಂತವಾಗಿವೆ. ಹಳ್ಳಿಗರ ಜೀವನ ವಿವೇಕ, ಸತ್‌ಸದ್ ವಿಚಾರ, ಧರ್ಮಪೂರಕವಾದ ನಡೆನುಡಿಗಳ ಹಿಂದೆ ಈ ನಾಡಿನ ಮಹಾಕಾವ್ಯಗಳು, ದರ್ಶನ ಗ್ರಂಥಗಳು ಇವೆ. ಅಂತೆಯೇ ಇಲ್ಲಿನ ಎಲ್ಲಾ ವೀರಗಾಥೆಗಳ ಹಿನ್ನಲೆಯಲ್ಲಿ ಪೂರ್ವಿಕರ ಪೌರುಷಯುಕ್ತವಾದ ಬಾಳಿನ ರಹಸ್ಯಗಳು ತುಂಬಿವೆ. ಈ ದೇಶದ ಎಲ್ಲಾ ಹಳೆಯ ನೆನಪುಗಳು ಇಲ್ಲಿ ಹುದುಗಿವೆ. ಇಂತಹ ಸಾರಭೂತವಾದ ಸಂಸ್ಕೃತಿಯ ನಿರ್ಮಾಣ ಕಾರ್ಯದಲ್ಲಿ ಜಾನಪದ ಕಲೆಗಳ ಪಾತ್ರ ಬಹು ಹಿರಿದು. ಯಕ್ಷಗಾನ ಈ ಬಗೆಯ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಈ ನಾಡಿನ ಹಿರಿಮೆಯನ್ನು ಎತ್ತಿ ಹಿಡಿಯಿತು.

ಕನ್ನಡಿಗರು ವೀರ ಪರಂಪರೆಗೆ ಹೆಸರಾದವರು. ಇಲ್ಲಿನ ವೀರಗಲ್ಲುಗಳು ಜನತೆಯ ತ್ಯಾಗ ಬಲಿದಾನ ಕತೆಗಳನ್ನು ಚಿತ್ತರಿಸುತ್ತವೆ. ಪ್ರಸಂಗಗಳು ಇಂತಹ ಬದುಕನ್ನು ಬದುಕಲು ಜನತೆಗೆ ಸ್ಫೂರ್ತಿಯನ್ನು ನೀಡಿದವು. ವಿಜಯ ನಗರದ ಅರಸರ ಕಾಲದಲ್ಲಿ ಯುದ್ಧಕ್ಕೆ ಹೊರಡಲಿರುವ ಸೈನಿಕರ ಶಿಬಿರಗಳಲ್ಲಿ ಜನಪದ ನೃತ್ಯ ನಾಟಕಗಳನ್ನು ಮನರಂಜನೆಗೋಸ್ಕರ ನಡೆಸುತ್ತಿದ್ದರೆಂಬ ಹೇಳಿಕೆ ಇದೆ. ಈ ನೃತ್ಯ ನಾಟಕಗಳು ಯಕ್ಷಗಾನದ ಮಾದರಿಯವು ಆಗಿರಬೇಕು. ರಾಮಾಯಣ ಪ್ರಸಂಗಗಳ ದೃಷ್ಟಿಯಿಂದ ಯೋಚಿಸುವುದಾದರೆ ಕನ್ನಡ ನೆಲದ ಸಂಸ್ಕೃತಿಯ ಪ್ರತಿಮಾ ರೂಪವೋ ಎನ್ನುವಂತೆ ಹನುಮಂತನ ಸಾಹಸಗಾಥೆ ಇಲ್ಲಿ ಬಂದಿದೆ. ಸೇವೆಗೆ ಹನುಮನ ಸಮಾನ ಯಾರೂ ಇಲ್ಲ. ಇಂದಿಗೂ ಕನ್ನಡಿಗರ ಕುಲದೈವ ಹನುಮ ಎಂದೇ ಹೇಳಬಹುದು. ಪ್ರತಿಹಳ್ಳಿಯಲ್ಲೂ ಹನುಮನ ಗುಡಿ ಇದೆ. ಆತನ ಅಸಮ ಸಾಹಸವನ್ನು ರಾಮಾಯಣ ಪ್ರಸಂಗಕಾರರು ವರ್ಣಿಸಿದ್ದಾರೆ. ಹಾಗೆಂದು ಹನುಮಂತ ಆತ್ಮ ಪ್ರತ್ಯಯ ಇಲ್ಲದವನೇನಲ್ಲ. ತನ್ನ ಗೌರವಕ್ಕೆ ಚ್ಯುತಿ ಬಂದಾಗ ರಾಮನನ್ನು ಇದಿರಿಸುತ್ತಾನೆ. ಹೀಗೆ ಈ ಬಗೆಯ ಕಥಾ ವಿಚಾರಗಳಲ್ಲಿ ಪ್ರಸಂಗಕಾರರು ಹೆಚ್ಚು ಒತ್ತು ಕೊಟ್ಟಿರುವುದರಿಂದ ವಿಶಿಷ್ಟ ಸಂಸ್ಕೃತಿಯೊಂದರ ನಿರ್ಮಾಣಕ್ಕೆ ಪೂರಕವಾಯಿತು.

ಕರ್ನಾಟಕ ರಂಗಭೂಮಿಯನ್ನು ಜೀವಂತವಾಗಿರಿಸಿದ್ದು ಯಕ್ಷಗಾನದ ಇನ್ನೊಂದು ಹಿರಿಯ ಸಾಧನೆ. ಯಕ್ಷಗಾನದ ಪ್ರಯೋಗ ಹಲವು ವೈಶಿಷ್ಟ್ಯಗಳಿಂದ ಕೂಡಿದ್ದು ಕಲಾವಿದರ ಪರಂಪರೆಯೊಂದನ್ನೇ ಸೃಷ್ಟಿಸಿತು. ಪ್ರಸಂಗ ಕೇವಲ ಪುಸ್ತಕ ರೂಪದಲ್ಲೇ ಉಳಿದಿದ್ದರೇ ಮಹಾನ್ ಕಲಾವಿದರ ಸುಪ್ತ ಪ್ರತಿಭೆಯ ಪರಿಚಯವೇ ನಾಡಿನ ಜನಕ್ಕೆ ಆಗುತ್ತಿರಲಿಲ್ಲ. ರಂಗಭೂಮಿಯ ಮೇಲೆ ಹೆಚ್ಚು ಆಕರ್ಷಕವಾಗಬಲ್ಲ ಯಕ್ಷಗಾನ, ಕಾಲದಿಂದ ಕಾಲಕ್ಕೆ ಹಲವು ಪ್ರತಿಭಾಪೂರ್ಣ ಕಲಾವಿದರ ಉದಯಕ್ಕೆ ಕಾರಣವಾಯಿತು.

ಕೆಲವು ಪಾತ್ರಗಳು ಕೆಲವು ವೇಷಧಾರಿಗಳಿಗೆ ಮೀಸಲೋ ಎಂಬಷ್ಟು ಜನ ಮನಕ್ಕೆ ರಂಜಿಸಿವೆ. ರಾಮಾಯಣ ಪ್ರಸಂಗಗಳ ದೃಷ್ಟಿಯಿಂದ ಉದಾಹರಿಸುವುದಾದರೆ ಚೂಡಾಮಣಿ ಪ್ರಸಂಗದಲ್ಲಿ ಬರುವ ಹನುಮಂತನ ಪಾತ್ರವು ಮಾರ್ವಿ ಹೆಬ್ಬಾರರಂತಹ ಶ್ರೇಷ್ಠ ಕಲಾವಿದರ ಸೃಷ್ಟಿಗೆ ಕಾರಣವಾಯಿತು. ಪಂಚವಟಿ ವಾಲಿಸಂಹಾರ ಪ್ರಸಂಗದಿಂದ ವಾಲಿ ಮತ್ತು ಸುಗ್ರೀವನ ಪಾತ್ರವನ್ನು ಧರಿಸುವ ಕೊಂಡದಕುಳಿ ರಾಮ ಹೆಗ್ಗಡೆ ಮತ್ತು ಲಕ್ಷ್ಮಣ ಹೆಗ್ಗಡೆಯವರು ಉತ್ತರ ಕನ್ನಡದಲ್ಲಿ ಪ್ರಖ್ಯಾತರಾದರು. ಲಂಕಾದಹನದ ಹನುಮಂತನು ಪಾತ್ರದಿಂದ ಚಿಟ್ಟಾಣಿ ರಾಮಚಂದ್ರ ಹೆಗ್ಗಡೆಯವರು ಜನಾದರ ಗಳಿಸಿದ್ದಾರೆ. ಹೀಗೆ ನಮ್ಮ ಪ್ರಸಂಗ ಸಾಹಿತ್ಯ ಕಲಾವಿದರ ಪರಂಪರೆಯೊಂದನ್ನು ನಿರ್ಮಾಣ ಮಾಡಿದೆ.

ಪ್ರಸಂಗ ಸಾಹಿತ್ಯದಲ್ಲಿ ಯಕ್ಷಗಾನ ರಾಮಾಯಣ ಪ್ರಸಂಗಗಳಿಗೆ ಹಿರಿಯ ಪಟ್ಟ ಸಂದಿದೆ. ಇದಕ್ಕೆ ರಾಮಾಯಣ ಪ್ರಸಂಗಗಳ ಅಂತಃಸತ್ವವೇ ಕಾರಣ. ಇಲ್ಲಿ ನಿರೂಪಿತವಾದ ಜೀವನ ಮೌಲ್ಯ ಬಹು ಮೇಲ್ ಮಟ್ಟದ್ದಾಗಿದೆ. ಗಂಡನಿಂದ ದೂರಾದ ಸೀತೆಯ ಪತಿಪ್ರೇಮ ಹಾಗೂ ದೃಢ ಪತಿವ್ರತಾನಿಷ್ಠೆ ಇಲ್ಲಿದೆ. ಅದೇ ರೀತಿ ಪತಿಯಾದ ರಾಮ ತನ್ನ ಹೆಂಡತಿಗಾಗಿ ಗೋಳಾಡುವುದು; ಕಪಿಗಳೊಂದಿಗೆ ಸ್ನೇಹ ಬೆಳೆಸುವುದು ಎಲ್ಲಾ ಆತನ ಪತ್ನಿ ಪ್ರೇಮವನ್ನು ಬಿಂಬಿಸುತ್ತದೆ. ತಂದೆ ಮಾತನ್ನು ನಡೆಸುವುದು ಕರ್ತವ್ಯ

ಎಂದು ನಂಬಿದ ರಾಮ ಆತನ ಯಾವ ಆಗ್ರಹಕ್ಕೂ ಸೊಪ್ಪು ಹಾಕುವುದಿಲ್ಲ. ರಾಜ್ಯ ಅನಾಯಾಸವಾಗಿ ದೊರೆತರೂ ಅಣ್ಣನ ಮೇಲಿನ ಪ್ರೀತಿಯಿಂದ ಅವೆಲ್ಲವನ್ನೂ ತೃಣ ಸದೃಶವೆಂದು ಭಾವಿಸಿ ಅಣ್ಣನಿಗಾಗಿ ಹಲಬುತ್ತಾ ಹೊರಟ ಭರತನ ಆದರ್ಶ ಬಹು ದೊಡ್ಡದು. ಅಣ್ಣನ್ನು ನೆರಳಿನಂತೆ ಹಿಂಬಾಲಿಸಿ ಹನ್ನೆರಡು ವರ್ಷಗಳವರೆಗೆ ಬಹು ಕಷ್ಟದ ಜೀವನವನ್ನು ನಡೆಸಿದ ಲಕ್ಷ್ಮಣನ ಭ್ರಾತೃ ಪ್ರೇಮದ ಬದುಕು ಮಾದರಿಯಾಗುವಂತಹದು. ಒಮ್ಮೆ ಮಾತು ಕೊಟ್ಟ ನಂತರ ತನ್ನೆಲ್ಲವನ್ನೂ ಸ್ನೇಹಕ್ಕಾಗಿ ಮುಡಿಪಾಗಿಡುವ ಸ್ನೇಹ ಭಾವನೆ ಸುಗ್ರೀವನ ಹಿರಿಯ ಅಂಶವಾಗಿದೆ. ಸೇವೆಯೇ ಬದುಕಿನಲ್ಲಿ ಬಹು ದೊಡ್ಡ ಕಾಯಕ. ಅದಕ್ಕಾಗಿಯೇ ಜೀವನವನ್ನು ಮುಡಿಪಾಗಿಡುವುದು ಎಲ್ಲರಿಂದಲೂ ಸಾಧ್ಯವಲ್ಲದ್ದು. ಆದರೆ ಇಲ್ಲಿ ಆ ಬಗೆಯ ಸೇವಾ ಮನೋಭಾವನೆಯಿಂದಲೇ ದೇವತ್ವವನ್ನು ಪಡೆದು ಇಂದಿಗೂ ಪೂಜಾರ್ಹನಾದ ವ್ಯಕ್ತಿಯೆಂದರೆ ಹನುಮಂತ. ಆತನ ಸೇವೆಯ ಹಿರಿಯ ಫಲವನ್ನು ಅದು ಸೂಚಿಸುತ್ತದೆ. ಇಷ್ಟೆಲ್ಲಾ ಇದ್ದು ಧರ್ಮ ಬಹು ದೊಡ್ಡದು ಎಂದು ಈ ಪ್ರಸಂಗಗಳಲ್ಲಿ ಸಾರಲಾಗಿದೆ. ಅಣ್ಣನ ಮೇಲಿನ ಪ್ರೀತಿ ದೊಡ್ಡದಾದರೆ ಧರ್ಮಮಾರ್ಗದಲ್ಲಿ ನಡೆಯುವುದು ಅದಕ್ಕಿಂತಲೂ ದೊಡ್ಡದು. ವಿಭೀಷಣ ಹಿಡಿದ ಹಾದಿ ಇದೆ. ಅಣ್ಣ ಧರ್ಮ ಮಾರ್ಗದಲ್ಲಿ ನಡೆಯದೇ ಇದ್ದಾಗ ಅಣ್ಣನನ್ನೇ ತ್ಯಜಿಸಿ ಧರ್ಮದ ಪಕ್ಷವನ್ನು ಹಿಡಿಯುತ್ತಾನೆ. ಇವುಗಳಲ್ಲೆಲ್ಲಾ ಇಲ್ಲಿ ಸಾರಲಾದ ಜೀವನದ ಆದರ್ಶಗಳಾಗಿವೆ. ನಮ್ಮ ಕವಿಗಳು ಈ ಜೀವನ ಮೌಲ್ಯವನ್ನು ಪ್ರಸಂಗಗಳ ಮೂಲಕ ಪ್ರಚುರಗೊಳಿಸಿದರು. ಅವು ಜೀವನಕ್ಕೊಂದು ಕೈ ದೀವಿಗೆ ಆಗುವಂತೆ ಮಾಡಿದರು.

ಯಕ್ಷಗಾನ ರಾಮಾಯಣ ಪ್ರಸಂಗಗಳಲ್ಲಿನ ಪಾತ್ರಗಳು ಮೂಲ ರಾಮಾಯಣದ ಇಲ್ಲವೇ ತೊರವೇ ರಾಮಾಯಣದ ನೆರಳುಗಳಾಗಿಲ್ಲ. ಪಾತ್ರ ಸೃಷ್ಟಿಯಲ್ಲೂ ಯಕ್ಷಗಾನ ಕವಿಗಳು ತಮ್ಮ ಸ್ವಂತಿಕೆಯನ್ನು ತೋರಿಸಿದ್ದಾರೆ. ಇಲ್ಲಿನ ಪಾತ್ರಗಳು ತಮ್ಮ ಅಮಾನುಷ ವ್ಯಕ್ತಿತ್ವಕ್ಕಿಂತ ಸಹಜ ವಾಸ್ತವಿಕತೆಗೆ ಬದ್ಧರಾಗಿದ್ದಾರೆ. ಯಕ್ಷಗಾನ ರಾಮಾಯಣ ಪ್ರಸಂಗಗಳ ರಾಮ, ಸೀತೆ, ವಾಲ್ಮೀಕಿ, ಹನುಮಂತ, ವಾಲಿ ಇವರೆಲ್ಲರ ಪಾತ್ರ ಸೃಷ್ಟಿಯ ಹಿನ್ನೆಲೆಯಲ್ಲೂ ಮಾನವೀಯ ಅಂಶಗಳು ನೆಲೆ ನಿಂತಿವೆ. ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧಗಳಲ್ಲೂ ಕವಿ ಈ ಸಹಜತೆಯನ್ನು ಮರೆತಿಲ್ಲ. ಸೀತೆಯ ಪ್ರಸವ ವೇದನೆಯ ಸಮಯದಲ್ಲಿ ಗಾಬರಿಯಿಂದ ಓಡಾಡುವ ವಾಲ್ಮೀಕಿ (ಕುಶಲವರ ಕಾಳಗ), ಮಾವ ಸತ್ತ ವಿಚಾರ ತಿಳಿದು ಹಿಂದಿನದೆಲ್ಲಾ ನೆನೆಸಿಕೊಂಡು ಅಳುವ ಸೀತೆ (ಪಂಚವಟಿ ಪಟ್ಟಾಭಿಷೇಕ), ಅಣ್ಣನೊಡನೆ ಪ್ರೀತಿಯಿಂದ ಜಗಳವಾಡುವ ಭರತ (ವಾದುಕ ಪಟ್ಟಾಭಿಷೇಕ), ಹೆಂಡತಿಯನ್ನು ಕಳೆದುಕೊಂಡು ದುಃಖ ಪಡುವ ರಾಮ (ಪಂಚವಟಿ ವಾಲಿಸಂಹಾರ) ಇವರೆಲ್ಲ ಈ ಮಣ್ಣಿನ ಮಕ್ಕಳಂತೆ ಕಾಣುತ್ತಾರೆ. ಈ ಬಗೆಯ ನೂತನ ಅಂಶಗಳಿಂದ ಕೂಡಿದ ಪಾತ್ರಗಳನ್ನು ಸಾಹಿತ್ಯ ಪ್ರಪಂಚಕ್ಕೆ ನೀಡಿದ್ದು ಯಕ್ಷಗಾನ ಕವಿಗಳ ಕಾಣಿಕೆಯಾಗಿದೆ.

ರಂಗಭೂಮಿಯ ದೃಷ್ಟಿಯಿಂದಲೂ ಯಕ್ಷಗಾನ ರಾಮಾಯಣ ಪ್ರಸಂಗಗಳು ಭಿನ್ನವಾಗಿವೆ. ಇವು ಉಳಿದೆಲ್ಲಾ ಪ್ರಸಂಗಗಳಿಗಿಂತ ರಂಗಭೂಮಿಯನ್ನು ಹೆಚ್ಚು ಜೀವಂತವಾಗಿಸಬಲ್ಲವು. ವೈವಿಧ್ಯಮಯವಾಗಿ ಬರುವ ಪಾತ್ರಗಳು ಇಲ್ಲಿನ ವೈಶಿಷ್ಟ್ಯವಾಗಿದೆ.

ರಾಕ್ಷಸ ಪಾತ್ರ, ಮುನಿವೇಷ, ಕಪಿಗಳು ಮುಂತಾದುವುಗಳು ಪ್ರೇಕ್ಷಕನಿಗೆ ಸಂತೋಷವನ್ನುಂಟು ಮಾಡುತ್ತವೆ. ಇಲ್ಲಿ ಬರುವ ರಾಕ್ಷಸ ಪಾತ್ರಗಳಾದ ಶೂರ್ಪನಖಿ ಮತ್ತು ಅಧೋಮುಖಿಯ ಪಾತ್ರಗಳು ಬಣ್ಣದ ವೇಷಗಳಾಗಿವೆ. ಈ ಪಾತ್ರಗಳ ಪ್ರವೇಶ ಹಾಗೂ ಕುಣಿತ ಧಿಮುಗುಟ್ಟುವಂತಿದ್ದು ಎಲ್ಲಾ ವರ್ಗದ ಪ್ರೇಕ್ಷಕರ ಆಕರ್ಷಣೆಗೆ ಕಾರಣವಾಗಿದೆ. ಇದೇ ಬಗೆಯಲ್ಲಿ ಕಪಿಗಳು, ಮುನಿಗಳು, ರಾಕ್ಷಸರು ತುಂಬಿಕೊಂಡಿದ್ದಾರೆ. ಆದುದರಿಂದಲೇ ರಾಮಾಯಣ ಪ್ರಸಂಗಗಳು ಪ್ರಯೋಗ ದೃಷ್ಟಿಯಿಂದಲೂ ಗೆಲುವನ್ನು ಸಾಧಿಸಿವೆ.

ಯಕ್ಷಗಾನ ರಾಮಾಯಣ ಪ್ರಸಂಗಗಳು ಕಾವ್ಯದೃಷ್ಟಿಯಿಂದಲೂ ಮಹತ್ವ ಪೂರ್ಣವಾಗಿವೆ. ಪಾರ್ತಿಸುಬ್ಬ, ರಾಮಭಟ್ಟ, ಶಾಂತಪ್ಪಯ್ಯ, ನಗರದ ಸುಬ್ಬ, ವೆಂಕಟ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮುಂತಾದ ಪ್ರತಿಭೆಯುಳ್ಳ ಕವಿಗಳು ಇಲ್ಲಿ ಪ್ರಸಂಗ ರಚಿಸಿರುವುದರಿಂದ ಉತ್ತಮ ಕಿರು ಸಾಹಿತ್ಯ ಕೃತಿಗಳ ನಿರ್ಮಾಣವಾಗಿವೆ. ಪಾರ್ತಿಸುಬ್ಬನಂತೂ "ಯಕ್ಷಗಾನದ ನಾಡೋಜ"ನೆಂದು ಗುರುತಿಸಲ್ಪಟ್ಟಿದ್ದಾನೆ. ಈತನ ಕವಿತಾ ಶಕ್ತಿಯ ಪ್ರಭಾವ ಹಲವು ಪ್ರಸಂಗಗಳ ಮೇಲೆ ಇದೆ. ಕಾಲಕ್ಕೆ ಅನುಗುಣವಾಗಿ ಹಾಡುಗಳ ರಾಗಗಳನ್ನು ಬಳಸಿರುವುದು ಈತನ ಇನ್ನೊಂದು ವೈಶಿಷ್ಟ್ಯ. ಈತನ ಪ್ರಸಂಗಗಳು ಬಹು ಜನಾದರವನ್ನು ಗಳಿಸಿವೆ.

ಜಾನಪದ ಸಾಹಿತ್ಯದಲ್ಲಿ ಯಕ್ಷಗಾನ ಪ್ರಸಂಗ ಸಾಹಿತ್ಯವು ವಿಪುಲವಾಗಿದ್ದು ಅಷ್ಟೇ ಮಹತ್ವಪೂರ್ಣವಾಗಿದೆ. ಈ ಪ್ರಸಂಗ ಸಾಹಿತ್ಯವು ವಸ್ತುದೃಷ್ಟಿಯಿಂದ ಒಂದು ಕಥಾನಕವನ್ನು ಹೊಂದಿರುತ್ತದೆ. ಜೀವನ ಮೌಲ್ಯ ಒಂದರ ಪ್ರತಿಪಾದನೆಯನ್ನು ಅಲ್ಲಿ ಕಾಣಬಹುದು. ರಾಮಾಯಣವನ್ನೇ ಆಧರಿಸಿದ ಪ್ರಸಂಗಗಳು ಸುಮಾರು ಅರವತ್ತೆಂಟರಷ್ಟಿವೆ. ಅವುಗಳಲ್ಲಿ ಇಪ್ಪತ್ತೈದು ಪ್ರಸಂಗಗಳು ಅಚ್ಚಾಗಿದ್ದು ದೊರೆಯುತ್ತಿವೆ. ಇವುಗಳಲ್ಲಿ ಚೂಡಾಮಣಿ, ಪಂಚವಟಿ, ಅತಿಕಾಯಕಾಳಗ, ಇಂದ್ರಜಿತು ಕಾಳಗ ಸಾಹಿತ್ಯ ದೃಷ್ಟಿಯಿಂದ ಅಪೂರ್ವವಾದವು. ಮೈರಾವಣ ಕಾಳಗ, ಕುಶಲವರ ಕಾಳಗ, ರಾವಣಾಸುರ ಕಾಳಗ ಆಡಲು ಬಹು ಸೊಗಸಾದವು. ಪಂಚವಟಿ, ವಾಲಿಸಂಹಾರ, ಅಂಗದ ಸಂಧಾನಗಳು ತಾಳಮದ್ದಲೆಗೆ ಯೋಗ್ಯವಾದ ಪ್ರಸಂಗಗಳು. ಹೀಗೆ ಯಕ್ಷಗಾನ ರಾಮಾಯಣ ಪ್ರಸಂಗಗಳು ವೈವಿಧ್ಯವನ್ನು ಸಾಧಿಸಿವೆ. ರಾಮಾಯಣ ಪ್ರಸಂಗಗಳು ಕವಿ ಹೃದಯವುಳ್ಳ, ಅಷ್ಟೇ ರಾಗ, ತಾಳ, ಜ್ಞಾನವಿರುವ ಕವಿಗಳಿಂದ ರಚಿತವಾಗಿವೆ. ದೇಸಿಪ್ರಚುರ ಶುದ್ಧ ಹಾಡುಗಬ್ಬಗಳಾದ ಈ ಪ್ರಸಂಗ ಸಾಹಿತ್ಯ ಓದುಗರಿಗೆ ಅಷ್ಟು ಹತ್ತಿರವಾಗಿಲ್ಲ. ಹದಿನೈದನೇ ಶತಮಾನದ ನಂತರ ಬಂದ ಅಸಂಖ್ಯ ಸಾಹಿತ್ಯ ಕೃತಿಗಳಲ್ಲಿ ಯಕ್ಷಗಾನ ಸಾಹಿತ್ಯವು ಅತ್ಯಂತ ಮಹತ್ವದ ಸ್ಥಾನಕ್ಕೆ ಏರದಿದ್ದರೂ, ಅವಗಣನೆಗೆ ಗುರಿಯಾಗದಂತಹ, ಎಲ್ಲರೂ ಗಮನಿಸಬೇಕಾದಂತಹ ಸಾಹಿತ್ಯ ಎನ್ನಬಹುದು.

* * * * *

ಗ್ರಂಥ ಸಹಾಯ

ಅಣ್ಣರಾಯ ಮಿರ್ಜಿ	– ರವಿಷೇಣ ರಾಮಾಯಣ
ಕೃಷ್ಣರಾವ್ ಕೆ.ಎಂ.	– ಯಕ್ಷಗಾನ ಸಾಹಿತ್ಯ ಪ್ರ. ಮಿಂಚಿನ ಬಳ್ಳಿ ಪ್ರಕಟಣೆ
ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ	– ಕರ್ನಾಟಕದ ಇತಿಹಾಸ ದರ್ಶನ ಪ್ರ. ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.
ಕೃಷ್ಣಭಟ್ಟ ತಾಲ್ತಜೆ	– ಯಕ್ಷಗಾನ ಪ್ರಭ ಪ್ರ. ಅಭ್ಯುದಯ ಪ್ರಕಾಶನ, ಉಪ್ಪಿನಂಗಡಿ.
ಕೃಷ್ಣಭಟ್ಟ ಕುಕ್ಕಿಲ	– ಪಾರ್ತಿಸುಬ್ಬನ ಯಕ್ಷಗಾನಗಳು ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
ಗಣಪಯ್ಯ ಅಲ್ಸೆ (ಸಂ)	– ಯಕ್ಷಗಾನ ವಿಶ್ವದರ್ಶನ ಪ್ರ. ಕಲಾಮಯೂರಿ, ಬೆಂಗಳೂರು.
ಚಿದಾನಂದ ಮೂರ್ತಿ	– ಸಂಶೋಧನಾ ತರಂಗ ಪ್ರ. ಸರಸ ಸಾಹಿತ್ಯ ಪ್ರಕಾಶನ, ಮೈಸೂರು.
ತಿಮ್ಮಪ್ಪಯ್ಯ ಮುಳಿಯ	– ಪಾರ್ತಿಸುಬ್ಬ ಪ್ರ. ಬಾಳಿಗಾ ಅಂಡ್ ಸನ್ಸ್, ಮಂಗಳೂರು.
ನರಸಿಂಹಾಚಾರ್ ಆರ್.	– ಕವಿಚರಿತ್ರೆ ಭಾಗ-3
ನಾರಣಪ್ಪ ಉಪ್ಪೂರ್	– ಯಕ್ಷಗಾನ ಅಧ್ಯಯನ ಪ್ರ.ಯಕ್ಷಗಾನ ಕಲಾಕೇಂದ್ರ, ಹಂಗಾರಕಟ್ಟೆ. ಯಕ್ಷಗಾನ ಶಿಕ್ಷಕ ಪ್ರ. ಮೂಕಾಂಬಿಕಾ ಯಕ್ಷಗಾನ ಸಂಘ, ನಿಟ್ಟೂರು.
ಪರಮಶಿವಯ್ಯ ಜಿ.ಶಂ.(ಸಂ)	– ಜಾನಪದ ಸಮಾವೇಶ ಪ್ರ.ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಭೀಮರಾವ್ ಚಿಟಗುಪ್ಪಿ	– ಸಂಶೋಧನಾ ಪಂಚದಶಿ
ಬಾಲಕೃಷ್ಣರಾವ್ ಕುಬಣುರ್	– ಯಕ್ಷಗಾನ

ವೆಂಕಟೇಶ ಅಯ್ಯಂಗಾರ್ ಮಾಸ್ತಿ - ಆದಿಕವಿ ವಾಲ್ಮೀಕಿ
ಪ್ರ. ಜೀವನ ಕಾರ್ಯಾಲಯ, ಬೆಂಗಳೂರು.

ಶಾಮರಾವ್ ತ.ಸು. - ಕನ್ನಡ ನಾಟಕಗಳು
ಪ್ರ.ಗೀತಾ ಬುಕ್ ಹೌಸ್, ಮೈಸೂರು.

ಶಿವರಾಮ ಕಾರಂತ ಕೋಟ - ಯಕ್ಷಗಾನ ಬಯಲಾಟ
ಪ್ರ. ಹರ್ಷ ಪ್ರಕಟಣಾಲಯ, ಪುತ್ತೂರು.
ಯಕ್ಷಗಾನ
ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಶಿವರಾಮಕಾರಂತ ಕೋಟ (ಸಂ) - ಯಕ್ಷಗಾನ ವಿವೇಚನೆ
ಪ್ರ.ಸಾಹಿತ್ಯ ನಾಟಕ ಅಕಾಡೆಮಿ, ಬೆಂಗಳೂರು

(ಸಂ) - ಕೌಶಿಕ ರಾಮಾಯಣ
ಪ್ರ. ಹರ್ಷ ಪ್ರಕಟಣಾಲಯ

ಶ್ರೀನಿವಾಸ ಹಾವನೂರ್ - ಹೊಸಗನ್ನಡ ಅರುಣೋದಯ
ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ಸಣಯ್ಯ ಬಿಎಸ್. (ಸಂ) - ತೊರವೆ ರಾಮಾಯಣ
ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಸೀತಾರಾಮಯ್ಯ ವಿ. (ಸಂ) - ಯಕ್ಷಗಾನ
ಪ್ರ.ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ಸೀತಾರಾಮಾಚಾರ್ ಹೊಸಬೆಟ್ಟು - ಕುಮಾರ ವಾಲ್ಮೀಕಿ
ಪ್ರ.ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
ವಿಶ್ವವಿದ್ಯಾಲಯ

ಸೀತಾರಾಮಯ್ಯ ಚೊಕ್ಕಾಡಿ - ಯಕ್ಷಗಾನ ವಿವೇಚನೆ
ಪ್ರ. ಕುರಿಯ ವಿಠಲಶಾಸ್ತ್ರಿ, ಕರೋಪಾಡಿ.

ಸುಂಕಾಪುರ ಎಂ.ಎಸ್. - ಕನ್ನಡ ಸಾಹಿತ್ಯದಲ್ಲಿ ಹಾಸ್ಯ
ಪ್ರ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹರಿದಾಸಭಟ್ಟ ಕು.ಶಿ. (ಸಂ) - ಯಕ್ಷಗಾನ ಪರಂಪರೆ ಮತ್ತು ಪ್ರಯೋಗ

ಹೆಗಡೆ ಎಲ್. ಆರ್. - ಕನ್ನಡ ಜನಪದ ಸಾಹಿತ್ಯ
ಪ್ರ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಅಭಿನಂದನ ಗ್ರಂಥಗಳು ಮತ್ತು ಸ್ಮರಣಸಂಚಿಕೆ - ಶ್ರೀಕಂಠ ತೀರ್ಥ, ಮಧುಪುರ,
ಪಂಚಕಜ್ಜಾಯ ಮತ್ತು ರಸಋಷಿ

ಪಾವಂಜೆ ಗುರುರಾವ್ (ಸಂ) - ಯಕ್ಷಗಾನ ಸಭಾಲಕ್ಷಣ ಮತ್ತು ಹಲವು ಪ್ರಸಂಗಗಳು.

Hopkkins E.W - The Great Epic of India.

* * * * *

ಅನುಬಂಧಗಳು

ಒಂದು – ಯಕ್ಷಗಾನ ರಾಮಾಯಣ ಪ್ರಸಂಗಗಳು

ಅಂಗದ ಸಂಧಾನ	– ಅಳಿಯ ಲಿಂಗರಾಜ
	– ಪಾರ್ತಿಸುಬ್ಬ
ಅತಿಕಾಯ ಕಾಳಗ	– ರಾಮಭಟ್ಟ
ಅಹಲ್ಯೋದ್ಧಾರ	– ಅಲೆಟ್ಟಿ ರಾಮಣ್ಣ ಶಗ್ರಿತ್ತಾಯ
ಇಂದ್ರಜಿತು ಕಾಳಗ	– ರಾಮಭಟ್ಟ
ಕಾಲನೇಮಿ ಕಾಳಗ	– ಶ್ರೀಪತಿ
ಕುಂಭಕರ್ಣ ಕಾಳಗ	– ಪಾರ್ತಿಸುಬ್ಬ
ಕುಶಲವರ ಕಾಳಗ	– ಪಾರ್ತಿಸುಬ್ಬ
	– ಅಳಿಯ ಲಿಂಗರಾಜ
	– ತಿಪ್ಪಣಾರ್ಯ
ಚೂಡಾಮಣಿ	– ಅಳಿಯ ಲಿಂಗರಾಜ
	– ಪಾರ್ತಿಸುಬ್ಬ
ನಾಗಾಸ್ತ್ರ ಕುಂಭಕರ್ಣ ಕಾಳಗ	– ಮಧುಪುರೇಶನ ಭಕ್ತ
ಖರದೂಷಣರ ಕಾಳಗ	– ನರಸಿಂಹನ ಭಕ್ತ
ಪಟ್ಟಾಭಿಷೇಕ	– ಪಾರ್ತಿಸುಬ್ಬ
ಪಂಚವಟಿ ರಾಮಾಯಣ	– ವಿ. ಪುಟ್ಟಣ್ಣ
ಪಂಚವಟಿ ವಾಲಿ ಸಂಹಾರ	– ಪಾರ್ತಿಸುಬ್ಬ
	– ಅಳಿಯ ಲಿಂಗರಾಜ
ಪಾದುಕಾ ಪಟ್ಟಾಭಿಷೇಕ	– ಕ. ರಾಮರಾವ್
ಪ್ರಚಂಡ ಲಂಕೇಶ್ವರ	– ಮೂರೂರು ದೇವರು ಹೆಗಡೆ
ಪುತ್ರಕಾಮೇಷ್ಠಿ	– ಲಕ್ಷ್ಮೀನರಸಿಂಹ
	– ಅನಾಮಧೇಯ
	– ಅಳಿಯ ಲಿಂಗರಾಜ

	– ಪಾರ್ತಿಸುಬ್ಬ
ಮಕರಾಕ್ಷ ಕಾಳಗ	– ಅಲೆಟ್ಟಿ ರಾಮಣ್ಣ ಶಗ್ರಿತ್ತಾಯ
ಮಾರೀಮುಖನ ಕಾಳಗ	– ಸೋಮೇಶ್ವರನ ಭಕ್ತ
ಮೈರಾವಣ ಕಾಳಗ	– ವೆಂಕಟ
ಭೂಕೈಲಾಸ	– ಮುದ್ರಾಡಿ ವೆಂಕಪ್ಪಯ್ಯ
ರಾವಣೇಶ್ವರ ಕಾಳಗ	– ಕಾಸರಗೋಡು ಸುಬ್ರಾಯ
ರಾವಣಾಸುರ ಕಾಳಗ	– ಕೊರ್ಡೆಲ್ ವೆಂಕಟರಾವ್
ರಾವಣೋದ್ಭವ	– ಸುಬ್ಬ
ರಾವಣವೇದವತಿ	– ಶಾಂತಕವಿ
ರಾಮಾಶ್ವಮೇಧ	– ವಿ. ಪುಟ್ಟಣ್ಣ
ರಾಮೋದಯ	– ಅಳಿಯ ಲಿಂಗರಾಜ
ರಾಮಕಥಾ ಪ್ರಸಂಗ	– ರಾಮಕೃಷ್ಣಯ್ಯ
ರಾಮಪಟ್ಟಾಭಿಷೇಕ	– ರಾಮಕೃಷ್ಣ ಭಾಗವತ
ರಾಮಾಂಜನೇಯ ಯುದ್ಧ	– ಅಜ್ಞಾತಕವಿ
ರಾಮ ನಿಜಪಟ್ಟಾಭಿಷೇಕ	– ಅಲೆಟ್ಟಿ ರಾಮಣ್ಣ ಶಗ್ರಿತ್ತಾಯ್
ಲವಕುಶರ ಕಾಳಗ	– ರಾಮಭಟ್ಟ
	– ಭಾಳಾಕ್ಷ
	– ಗಿರಿಯಮ್ಮ
ವಾಲಿಸುಗ್ರೀವ	– ವೆಂಕಪ್ಪ ಶೆಟ್ಟಿ
ವಾಲ್ಮೀಕಿ ವಿಜಯ	– ವಾಸುದೇವಾಚಾರ್
ಶತಾಸ್ಯರಾವಣ ಕಾಳಗ	– ವಿಷ್ಣು ಸಭಾಹಿತ
ಸಂಪೂರ್ಣ ರಾಮಾಯಣ	– ಜಾನಕೈ ತಿಮ್ಮಪ್ಪ ಹೆಗ್ಗಡೆ
	– ಗುಂಡು ಸೀತಾರಾಮಯ್ಯ
	– ಬೆಳಸಲಿಗೆ ಗಣಪತಿ ಹೆಗಡೆ
ಸೀತಾಪಹಾರ	– ಅಳಿಯ ಲಿಂಗರಾಜ
ಸೀತಾಕಲ್ಯಾಣ	– ಗಿರಿಯಮ್ಮ
ಸೇತುಬಂಧನ	– ಪಾರ್ತಿಸುಬ್ಬ
	– ಅಳಿಯ ಲಿಂಗರಾಜ
ಹನುಮದ್ವಿಲಾಸ	– ಸುಬ್ಬಣ್ಣ
	– ತಿಪ್ಪಣಾರ್ಯ

* * * * *





ಡಾ. ಸಿ. ಆನಂದರಾಮ ಉಪಾಧ್ಯ ಅವರು ಕರ್ಣಾಟಕ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಮುಖ್ಯಸ್ಥರು ಹಾಗೂ ಸಹಾಯಕ ಮಹಾಪ್ರಬಂಧಕರು ಹಾಗೂ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತ ಜೀವನ ಸಾಗಿಸುತ್ತಿದ್ದಾರೆ. ಬ್ಯಾಂಕ್ ಉದ್ಯೋಗಕ್ಕೂ ಮುನ್ನ ಮಳವಳ್ಳಿಯ ಶಾಂತಿ ಕಾಲೇಜು, ಸೇಂಟ್ ಜೋಸೆಫ್ ಕಾಲೇಜು ಹಾಗೂ ಶೇಷಾದ್ರಿಪುರಂ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದವರು. ಇವರ ಪ್ರೌಢ ಪ್ರಬಂಧ "ಯಕ್ಷಗಾನ ಮಹಾಭಾರತ ಪ್ರಸಂಗಗಳು" ಎಂಬ ಈ ಕೃತಿಗೆ, ಉಸ್ಮಾನಿಯ ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪದವಿ ಲಭಿಸಿದೆ. 1990ರಲ್ಲಿ ಈ ಕೃತಿ ಪ್ರಕಟಗೊಂಡಿದೆ. ಇದಲ್ಲದೆ, "ಯಕ್ಷ ದರ್ಶನ" ಹಾಗೂ "ಯಕ್ಷಗಾನ ರಾಮಾಯಣ ಪ್ರಸಂಗಗಳು" ಇವರ ಪ್ರಕಟಿತ ಕೃತಿಗಳಾಗಿವೆ. "ಆರ್ಯಭಟ" ಪ್ರಶಸ್ತಿ ಹಾಗೂ "ನರಸಿಂಹ" ಪ್ರಶಸ್ತಿಗಳು ಸಂದಿರುತ್ತವೆ. ಇವರು ಹದಿನಾಲ್ಕು ವರ್ಷಗಳ ಕಾಲ ಬೇರೆ ಬೇರೆ ರೋಟರಿ ಕ್ಲಬ್‌ಗಳಲ್ಲಿ ಸದಸ್ಯರಾಗಿ, ಅನೇಕ ರೋಟರಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲುಗೊಂಡಿರುತ್ತಾರೆ.

ಬರಹ ಕೃತಿಮಾಲೆ-54

baraha publishing house

ಬರಹ ಪಬ್ಲಿಷಿಂಗ್ ಹೌಸ್-ಬೆಂಗಳೂರು

ISBN 93-81821-27-5

9789381821275

₹ 100/-